ಭಾನುವಾರ, ಅಕ್ಟೋಬರ್ 26, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 295 | ಪುಟ 16

www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸಾಂಸ್ಕೃತಿಕ ವೈಭವ
ಮೈತ್ರಿ ಸಮೂಹ ಸಮಗ್ರ ಕೋಟೇಶ್ವರ ಮಾಗಣೆ ಬಂಧುಗಳ ಸಾಮಾಜಿಕ ಸಾಂಸ್ಕೃತಿಕ ವೇದಿಕೆಯ ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮವು ಬೆಂಗಳೂರಿನಲ್ಲಿ ನಡೆದಿದ್ದು, ಮಹಿಳೆಯರು ನೃತ್ಯ ಪ್ರದರ್ಶಿಸಿದರು



ಕಡುಬಡತನ ಮುಕ್ತ ಕೇರಳ
ಕೇರಳವನ್ನು ದೇಶದ ಮೊದಲ ಕಡುಬಡತನ ಮುಕ್ತ ರಾಜ್ಯವೆಂದು ನವೆಂಬರ್ 1ರಂದು (ಕೇರಳ ರಾಜ್ಯೋತ್ಸವ) ಘೋಷಣೆ ಮಾಡುವುದಾಗಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ

ಎಚ್‌ಡಿಕೆ– ಡಿಕೆಶಿ ಜಟಾಪಟಿ 7 | ಕಾನ್‌ಸ್ಟೆಬಲ್‌ಗಳಿಗೆ ಅ.28ರಿಂದ 'ಪೀಕ್ ಕ್ಯಾಪ್' 7

ಬುಡಕಟ್ಟು ಜನರಿಗೆ 'ಕಳಪೆ' ಆಹಾರ

ಪೌಷ್ಟಿಕ ಆಹಾರ: ಯೋಜನೆಗೆ 'ಅಪೌಷ್ಟಿಕತೆ', ಮುಗ್ಗಲು ಬೇಳೆ, ಕಡಲೆಬೀಜ ಪೂರೈಕೆ

ಅಂಕಿ ಅಂಶಗಳು

₹2,252	ಪೌಷ್ಟಿಕ ಆಹಾರದ ಒಂದು ಕಿಟ್‌ಗೆ ವ್ಯಯವಾಗುವ ವೆಚ್ಚ
47,859	ರಾಜ್ಯದಲ್ಲಿರುವ ಬುಡಕಟ್ಟು ಸಮುದಾಯಗಳ ಕುಟುಂಬಗಳು
2,48,097	ಯೋಜನೆಯ ಒಟ್ಟು ಫಲಾನುಭವಿಗಳು

ಒಳನೋಟ

● ಬಾಲಚಂದ್ರ ಎಚ್.

ಚಾಮರಾಜನಗರ: ಒಲೆ ಮೇಲೆ ಬೇಳೆ ಬೇಯಲು ಹಾಕಿದರೆ ಅರ್ಧ ಬೆಂದಿರುತ್ತವೆ, ಉಳಿದರ್ಧ ಬೇಯುವುದಿಲ್ಲ, ಅಡುಗೆ ಎಣ್ಣೆ ದುರ್ವಾಸನೆ ಬೀರುತ್ತದೆ, ಕಾಳುಗಳು ಮುಗ್ಗಲು ಹಿಡಿದು ಹುಳು ಬಿದ್ದಿರುತ್ತವೆ, ಬಹುಪಾಲು ಮೊಟ್ಟೆಗಳು ಕೊಳೆತು ಹೋಗಿರುತ್ತವೆ, ಬೆಲ್ಲ ಜಿನುಗುತ್ತಿರುತ್ತದೆ..

ಹೀಗೆ ಬುಡಕಟ್ಟು ಸಮುದಾಯಗಳಿಗೆ ರಾಜ್ಯ ಸರ್ಕಾರ ಪೂರೈಕೆ ಮಾಡುತ್ತಿರುವ ಪೌಷ್ಟಿಕ ಆಹಾರದ ಕಳಪೆ ಗುಣಮಟ್ಟವನ್ನು ತೆರೆದಿಟ್ಟರು ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನಬೆಟ್ಟದ ಸೋಲಿಗ ಮಹಿಳೆ ಮಹದೇವಮ್ಮ.

ಅಪೌಷ್ಟಿಕತೆ ಹಾಗೂ ರಕ್ತಹೀನತೆ ಸಮಸ್ಯೆಯಿಂದ ಬಳಲುತ್ತಿರುವ ಬುಡಕಟ್ಟು ಸಮುದಾಯಗಳಿಗೆ ಪೌಷ್ಟಿಕ ಆಹಾರ ಪೂರೈಕೆ ಮಾಡುವ ಉದ್ದೇಶದಿಂದ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕಾರ್ಯಕ್ರಮವೇ 'ಅಪೌಷ್ಟಿಕತೆ'ಯಿಂದ ಬಳಲುತ್ತಿದೆ. ಯೋಜನೆಯ ಮೂಲ ಆಶಯವೇ 'ಮಣ್ಣು'ಪಾಲಾಗುತ್ತಿದೆ ಎಂಬ ದೂರುಗಳು ರಾಜ್ಯದಾದ್ಯಂತ ವ್ಯಾಪಕವಾಗಿವೆ. ಪೌಷ್ಟಿಕ ಆಹಾರ ಪೂರೈಕೆ ಯೋಜನೆಯಡಿ ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ರಾಮನಗರ ಜಿಲ್ಲೆಗಳಲ್ಲಿ ನೆಲಸಿರುವ ಬುಡಕಟ್ಟು ಸಮುದಾಯಗಳ ಕುಟುಂಬಗಳಿಗೆ ಪ್ರತಿ ತಿಂಗಳು ಅಕ್ಕಿ, ರಾಗಿ, ತೊಗರಿಬೇಳೆ, ಹುರುಳಿಕಾಳು, ಕಡಲೆಕಾಳು, ಅಲಸಂದೆ, ಹೆಸರುಕಾಳು, ಕಡಲೆಬೀಜ, ಬೆಲ್ಲ, ಸಕ್ಕರೆ, ತುಪ್ಪ, ಮೊಟ್ಟೆಗಳನ್ನೊಳಗೊಂಡ ಪೌಷ್ಟಿಕ ಆಹಾರದ ಕಿಟ್ ವಿತರಿಸಲಾಗುತ್ತಿದೆ.



ಚಾಮರಾಜನಗರ ಜಿಲ್ಲೆಯ ಕುಣಗಳ್ಳಿಯಲ್ಲಿ ಬುಡಕಟ್ಟು ಸಮುದಾಯದವರಿಗೆ ಪೌಷ್ಟಿಕ ಆಹಾರದ ಕಿಟ್ ವಿತರಣೆ

ರಾಜ್ಯದ ವಿವಿಧ ಭಾಗಗಳಲ್ಲಿ ನೆಲೆಸಿರುವ ನಾಯಕ, ಜೇನು ಕುರುಬ, ಕಾಡು ಕುರುಬ, ಬೆಟ್ಟ ಕುರುಬ, ಮೇದ, ಯರವ, ಗೌಡಲು, ಸಿದ್ದಿ, ಕೊರಗ, ಇರುಳಿಗ, ಗೊಂಡ, ಕುಡಿಯ, ಮಲೆಕುಡಿಯ, ಹಸಲರು, ಹಕ್ಕಿಪಿಕ್ಕಿ, ಡೋಂಗ್ರಿ ಗೆರಾಸಿಯ, ಮರಾಠಿ ನಾಯಕ ಸಮುದಾಯದವರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಪೌಷ್ಟಿಕ ಆಹಾರ ಪೂರೈಕೆಗೆ ರಾಜ್ಯ ಸರ್ಕಾರ ವಾರ್ಷಿಕ ₹ 120 ಕೋಟಿ ವ್ಯಯಿಸುತ್ತಿದ್ದರೂ ಆದಿವಾಸಿಗಳಿಗೆ ಗುಣಮಟ್ಟದ ಆಹಾರ ಪೂರೈಕೆಯಾಗುತ್ತಿಲ್ಲ. ಆಹಾರದ ಕಳಪೆ ಕಿಟ್ ನೀಡುತ್ತಿದ್ದಾರೆ ಎಂದು ದೂರುತ್ತಾರೆ ಚಾಮರಾಜನಗರದ ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಕಾರ್ಯದರ್ಶಿ ಸಿ.ಮಾದೇಗೌಡ.

ನಿಯಮಗಳ ಪ್ರಕಾರ ಆಹಾರ ಸುರಕ್ಷತಾ ಪ್ರಾಧಿಕಾರದಿಂದ ಅನುಮೋದನೆ ಪಡೆದ ಗುಣಮಟ್ಟದ ಆಹಾರ ಪದಾರ್ಥಗಳನ್ನು ವಿತರಿಸಬೇಕು. ಪ್ಯಾಕಿಂಗ್ ಮೇಲೆ ತಯಾರಿಕಾ ದಿನಾಂಕ, ಬಾಳಿಕೆಯ ಅವಧಿ, ಗುಣಮಟ್ಟ ಪರೀಕ್ಷೆ ಸಹಿತ ಇತರ ಮಾಹಿತಿಗಳು ನಮೂದಿಸಿರಬೇಕು. ಆದರೆ, ಹಾಡಿಗಳಿಗೆ ಪೂರೈಕೆಯಾಗುತ್ತಿರುವ ಆಹಾರ ಪದಾರ್ಥಗಳ ಪ್ಯಾಕ್ ಮೇಲೆ ಯಾವುದೇ ಮಾಹಿತಿ ಕಾಣಸಿಗುವುದಿಲ್ಲ. ವಿತರಣೆಗೂ ಮುನ್ನ ಆಹಾರದ ಗುಣಮಟ್ಟ ಪರೀಕ್ಷೆ ನಡೆಯುತ್ತಿದೆಯೇ ಎಂಬ ಪ್ರಶ್ನೆಗೆ ಹಿರಿಯ ಅಧಿಕಾರಿಗಳ ಬಳಿಯೂ ಉತ್ತರ ಇಲ್ಲ.

ಹಲವು ಬಾರಿ ರಾಗಿಯಲ್ಲಿ ದೂಳು, ಕಲಬೆರಕೆ ಬೇಳೆ, ಹುಳು ಹಿಡಿದ ಕಾಳುಗಳು, ದುರ್ವಾಸನೆ ಬೀರುವ ಅಡುಗೆ ಎಣ್ಣೆ ಹಂಚಿಕೆ ಮಾಡಲಾಗುತ್ತಿದೆ. ಈ ವರ್ಷದ ಆಗಸ್ಟ್‌ನಲ್ಲಿ ವಿತರಿಸಿದ ಕಡಲೆಬೀಜದ ಗುಣಮಟ್ಟ ಹೇಗಿದೆ ನೋಡಿ ಎಂದು ಹುಳುಬಿದ್ದ ಕಾಳುಗಳನ್ನು ಮುಂದಿಟ್ಟರು ಮಾದೇಗೌಡ.

▶6

'ದೂರು ಬಂದರೆ ಕ್ರಮ'

ರಾಜ್ಯದ 8 ಜಿಲ್ಲೆಗಳಲ್ಲಿರುವ ಬುಡಕಟ್ಟು ಸಮುದಾಯಗಳಿಗೆ ಪ್ರತಿ ತಿಂಗಳು ಪೌಷ್ಟಿಕ ಆಹಾರದ ಕಿಟ್‌ಗಳನ್ನು ವಿತರಿಸಲು ಮಾರ್ಚ್‌ನಲ್ಲಿ ಆರ್‌ಆರ್ ಎಂಟರ್‌ಪ್ರೈಸಸ್ ಸಂಸ್ಥೆಗೆ ₹ 120 ಕೋಟಿ ವೆಚ್ಚದ ಟೆಂಡರ್ ನೀಡಲಾಗಿದೆ. ನಿಯಮಿತವಾಗಿ ಆಹಾರ ಪದಾರ್ಥಗಳು ವಿತರಣೆಯಾಗದ ಹಾಗೂ ಕಳಪೆ ಆಹಾರ ಪೂರೈಕೆ ಮಾಡಿರುವ ಬಗ್ಗೆ ದೂರುಗಳು ಬಂದಲ್ಲಿ ಪರಿಶೀಲಿಸಲಾಗುವುದು.

ಸುರೇಶ್, ರಾಜ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ

ಕಳಪೆಯಾಗಿದ್ದರೆ ಬದಲಿ ಆಹಾರ ಪೂರೈಕೆ

ಗುಣಮಟ್ಟ ಕಳಪೆಯಾಗಿದ್ದರೆ ಬದಲಿ ಆಹಾರ ಪೂರೈಕೆ ಮಾಡಲಾಗುವುದು, ಫಲಾನುಭವಿಗಳ ಬೇಡಿಕೆಯಂತೆ ಸಫಲ್ ಅಡುಗೆ ಎಣ್ಣೆ ಪೂರೈಕೆ ಮಾಡಲಾಗುತ್ತಿದೆ. ವಿತರಣೆಗೆ ಬಾಕಿ ಇರುವ ಆಹಾರ ಪದಾರ್ಥಗಳನ್ನು ಶೀಘ್ರ ಹಂಚಿಕೆ ಮಾಡಲಾಗುವುದು.

ಮುನಿರಾಜು, ಆರ್‌ಆರ್ ಎಂಟರ್‌ಪ್ರೈಸಸ್ ಆಹಾರ ಪೂರೈಕೆದಾರರು

ಡಿಕ್ಕಿ ಮುನ್ನವೇ ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್: ಹೈದರಾಬಾದ್‌ನಿಂದ ಬೆಂಗಳೂರಿಗೆ ಹೊರಟಿದ್ದ ಖಾಸಗಿ ಸಂಸ್ಥೆಯ ಸ್ಲೀಪರ್ ಎಸಿ ಬಸ್ ಬೆಂಕಿ ಹೊತ್ತಿಕೊಂಡು 19 ಪ್ರಯಾಣಿಕರ ಸಜೀವ ದಹನಕ್ಕೆ ಕಾರಣವಾಗಿದ್ದ ಬೈಕ್ ಸವಾರ, ಈ ಅಪಘಾತಕ್ಕೂ ಮೊದಲೇ 'ಸ್ಕಿಡ್' ಆಗಿ, ಮೃತಪಟ್ಟಿದ್ದ ಎಂಬುದು ಗೊತ್ತಾಗಿದೆ.

ಆ ನಂತರ ಬಸ್ ಈ ಬೈಕಿಗೆ ಡಿಕ್ಕಿ ಹೊಡೆದು, ಕೆಲ ದೂರ ಎಳೆದೊಯ್ದಿದೆ. ಅದೇ ವೇಳೆ ಬೈಕ್‌ನ ಪೆಟ್ರೋಲ್ ಟ್ಯಾಂಕ್ ಸೋರಿಕೆಯಾಗಿದೆ. ಈ ಸಂದರ್ಭದಲ್ಲಿ ಆದ ಘರ್ಷಣೆಯಿಂದ ಬೆಂಕಿ ಹೊತ್ತಿಕೊಂಡಿದೆ ಎಂದು ಪೊಲೀಸರು ವಿವರಿಸಿದ್ದಾರೆ.

ವಿಭಜಕಕ್ಕೆ ಡಿಕ್ಕಿ: ಪಲ್ಸರ್ ಬೈಕ್‌ನಲ್ಲಿ ಹಿಂಬದಿ ಸವಾರನ ಜತೆಗೆ ಹೋಗುತ್ತಿದ್ದ ಬಿ. ಶಿವಶಂಕರ್ (22), ಕರ್ನೂಲ್ ಜಿಲ್ಲೆಯ ಚಿನ್ನತೇಕೂರು ಬಳಿ ಹೆದ್ದಾರಿಯಲ್ಲಿ 'ಸ್ಕಿಡ್' ಆಗಿ, ಹೆದ್ದಾರಿಯ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಹಿಂಬದಿ ಸವಾರ ಯರ್ರಿಸ್ವಾಮಿ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು ಎಂದು ಪೊಲೀಸರು ತಿಳಿಸಿದ್ದಾರೆ.

'ದುರಂತದ ಬಳಿಕ ಆತಂಕಗೊಂಡ ಯರ್ರಿಸ್ವಾಮಿ ತಮ್ಮ ಗ್ರಾಮವಾದ ತುಗ್ಗಲಿಗೆ ಓಡಿಹೋಗಿದ್ದರು. ಪೆಟ್ರೋಲ್ ಬಂಕ್ ಒಂದರ ಸಿ.ಸಿ.ಟಿ.ವಿ ದೃಶ್ಯಗಳನ್ನು ಆಧರಿಸಿ, ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೆಲ ವಿಷಯಗಳು ಗೊತ್ತಾಗಿವೆ' ಎಂದು ಕರ್ನೂಲ್ ಎಸ್‌ಪಿ ವಿಕ್ರಾಂತ್ ಪಾಟೀಲ್ ತಿಳಿಸಿದ್ದಾರೆ.

'ಶುಕ್ರವಾರ ಬೆಳಿಗ್ಗೆ 2.24ರ ಸುಮಾರಿಗೆ ಬಂಕ್‌ನಲ್ಲಿ ಪೆಟ್ರೋಲ್ ತುಂಬಿಸಿಕೊಳ್ಳಲು ಬೈಕ್ ಅನ್ನು ಅವರು ನಿಲ್ಲಿಸಿದ್ದರು. ಅಲ್ಲಿಂದ ಹೊರಟ ಸ್ವಲ್ಪ ಸಮಯದಲ್ಲಿಯೇ ಚಿನ್ನತೇಕೂರು ಬಳಿ ಶಿವಶಂಕರ್ ಸ್ಕಿಡ್ ಆಗಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದರು. ಸಣ್ಣಪುಟ್ಟ ಗಾಯಗಳಾಗಿದ್ದ ಯರ್ರಿಸ್ವಾಮಿ ಅವರು, ಶಿವಶಂಕರ್ ದೇಹವನ್ನು ಸ್ವಲ್ಪ ದೂರ ಎಳೆದು ಉಸಿರಾಟ ಪರಿಶೀಲಿಸಿದರು. ಉಸಿರಾಟ ನಿಂತಿರುವುದನ್ನು ಖಚಿತಪಡಿಸಿಕೊಂಡ ಅವರು, ಬೈಕ್ ಅನ್ನು ಪಕ್ಕಕ್ಕೆ ಎಳೆಯಲು ಪ್ರಯತ್ನಿಸುತ್ತಿದ್ದಾಗ ದಿಢೀರನೆ ಬಸ್ ಬಂದು ಡಿಕ್ಕಿ ಹೊಡೆದಿದೆ. ಅದು ಬೈಕ್ ಅನ್ನು ಸ್ವಲ್ಪ ದೂರ ಎಳೆದೊಯ್ದಿದೆ' ಎಂದು ಎಸ್‌ಪಿ ಮಾಹಿತಿ ನೀಡಿದ್ದಾರೆ.

▶6

ತೀವ್ರತೆ ಹೆಚ್ಚಿಸಿದ ಮೊಬೈಲ್ ಬ್ಯಾಟರಿಗಳು



ಬಸ್ಸಿನ ಲಗೇಜ್ ರ್‍ಯಾಕಿನ ಪೆಟ್ಟಿಗೆಯಲ್ಲಿದ್ದ ಹಲವು ಸ್ಮಾರ್ಟ್ ಫೋನ್‌ಗಳು ಬೆಂಕಿಗೆ ಆಹುತಿಯಾಗಿವೆ. ಅವುಗಳ ಲೀಥಿಯಂ–ಅಯಾನ್ ಬ್ಯಾಟರಿಗಳೂ ಸ್ಫೋಟಿಸಿರುವುದರಿಂದ ದುರಂತದ ತೀವ್ರತೆ ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹46 ಲಕ್ಷ ಮೌಲ್ಯದ 234 ಸ್ಮಾರ್ಟ್ ಫೋನ್‌ಗಳನ್ನು ಹೈದರಾಬಾದ್ ಮೂಲದ ಉದ್ಯಮಿ ಮಂಗನಾಥ್ ಎಂಬುವರು ಪಾರ್ಸೆಲ್ ಕಳುಹಿಸಿದ್ದರು. ಅದನ್ನು ಬೆಂಗಳೂರಿನ ಇ–ಕಾಮರ್ಸ್ ಕಂಪನಿಗೆ ಕಳುಹಿಸಲಾಗುತ್ತಿತ್ತು. ಅಲ್ಲಿಂದ ಅದು ಗ್ರಾಹಕರಿಗೆ ಸರಬರಾಜು ಆಗಬೇಕಿತ್ತು ಎಂದು ಮೂಲಗಳು ತಿಳಿಸಿವೆ.

ರೋ–ಕೊ ಆಟದ ಗತ್ತು–ಗಮ್ಮತ್ತು..



ರೋಹಿತ್ ಶರ್ಮಾ: 121* ರನ್, 125 ಎಸೆತ
ವಿರಾಟ್ ಕೊಹ್ಲಿ: 74* ರನ್, 81 ಎಸೆತ

ಪಂದ್ಯದ ಸ್ಕೋರ್

ಆಸ್ಟ್ರೇಲಿಯಾ	ಭಾರತ
236 (46.4 ಓವರ್‌ಗಳಲ್ಲಿ)	1 ವಿಕೆಟ್‌ಗೆ 237 (38.3 ಓವರ್‌ಗಳಲ್ಲಿ)

ಫಲಿತಾಂಶ: ಭಾರತ ತಂಡಕ್ಕೆ 9 ವಿಕೆಟ್‌ಗಳ ಜಯ
ಪಂದ್ಯ ಹಾಗೂ ಸರಣಿಶ್ರೇಷ್ಠ: ರೋಹಿತ್ ಶರ್ಮಾ
ಆಸ್ಟ್ರೇಲಿಯಾಕ್ಕೆ 2-1ರಿಂದ ಸರಣಿ ಜಯ

'ಹೊರಗಿದ್ದವರಿಗೆ ಮಂತ್ರಿಗಿರಿ: ಮೊದಲೇ ನಿರ್ಧಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ, ಉತ್ತರಾಧಿಕಾರಿ ಯಾರೆಂಬ ಚರ್ಚೆ ಬಿರುಸಾಗಿರುವ ಹೊತ್ತಿನಲ್ಲೇ, 'ಮಂತ್ರಿ ಮಂಡಲದಿಂದ ಹೊರಗಿರುವವರಿಗೆ ಅವಕಾಶ ಕೊಡಲೇಬೇಕೆಂಬ ವಿಚಾರವನ್ನು ಪಕ್ಷದ ವರಿಷ್ಠರು ಆರಂಭದಲ್ಲಿ ಹೇಳಿದ್ದಾರೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿರುವುದು ಚರ್ಚೆಗೆ ಗ್ರಾಸವಾಗಿದೆ.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಕೃಷ್ಣ ಬೈರೇಗೌಡ ಅವರು, 'ಹೊರಗಿರುವವರಿಗೆ ಅವಕಾಶ ಕಲ್ಪಿಸುವ ವಿಷಯವನ್ನು ವರಿಷ್ಠರು ಎಲ್ಲರಿಗೂ ಸ್ಪಷ್ಟಪಡಿಸಿದ್ದರು. ಇದೇನೂ ಹೊಸ ವಿಚಾರ ಅಲ್ಲ. ಯಾರಿಗೆ ಅವಕಾಶ ನೀಡಬೇಕು ಎನ್ನುವುದನ್ನು ಸೂಕ್ತ ಸಂದರ್ಭದಲ್ಲಿ ಅವರು ನಿರ್ಧರಿಸುತ್ತಾರೆ' ಎಂದರು.

ಆದರೆ, ನಾಯಕತ್ವ ಬದಲಾವಣೆ ಮತ್ತು ಈ ಅವಕಾಶ ಒಟ್ಟಿಗೆ ಆಗಲಿದೆಯೇ ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡಲು ಅವರು ನಿರಾಕರಿಸಿದರು.

'ಅರ್ಹತೆ ಇರುವವರಿಗೆ ಸಂಪುಟದಲ್ಲಿ ಅವಕಾಶ ಸಿಗಬೇಕು. ಆದರೆ, ನಾಯಕತ್ವ ಬದಲಾವಣೆ ಹೈಕಮಾಂಡ್‌ಗೆ ಬಿಟ್ಟಿದ್ದು. ಸಂಪುಟ ಪುನರ್‌ರಚನೆಗೂ ನಾಯಕತ್ವ ಬದಲಾವಣೆಗೂ ಸಂಬಂಧವಿಲ್ಲ' ಎಂದರು.

'ಪಕ್ಷ ನನಗೆ ಮೂರು ಬಾರಿ ಸಚಿವ ಸ್ಥಾನ ನೀಡಿದೆ. ಅರ್ಹತೆ ಮೀರಿ ಅವಕಾಶ ಕೊಟ್ಟಿದೆ. ಸಚಿವ ಸ್ಥಾನದಿಂದ ಕ್ಷೇತ್ರದಲ್ಲಿ ಕೆಲಸ ಮಾಡಲು ಆಗುತ್ತಿಲ್ಲ. ಅವಕಾಶದ ವಿಚಾರದಲ್ಲಿ ನನಗೆ ಸಂತೃಪ್ತಿ ಇದೆ. ಆದರೆ, ಕೆಲಸದಲ್ಲಿ ಅಲ್ಲ. ಇನ್ನೂ ಮಾಡುವ ಕೆಲಸ ಬಾಕಿ ಇದೆ' ಎಂದು ಹೇಳಿದರು.

▶2

'ನಾಯಕತ್ವ ಹೈಕಮಾಂಡ್ ನಿರ್ಧಾರ'

ಪ್ರಜಾವಾಣಿ ವಾರ್ತೆ



ಚನ್ನಮ್ಮನ ಕಿತ್ತೂರು (ಬೆಳಗಾವಿ): 'ನಾನು ಈಗ ಅಹಿಂದ ಸಂಘಟಿಸುತ್ತಿದ್ದೇನೆ. ಮುಂದೆ ಸತೀಶ ಜಾರಕಿಹೊಳಿ ಮಾಡ್ತಾರೆ ಎಂದಷ್ಟೇ ಯತೀಂದ್ರ ಹೇಳಿದ್ದಾರೆ. ನಾಯಕತ್ವವನ್ನು ಹೈಕಮಾಂಡ್ ತೀರ್ಮಾನಿಸುತ್ತದೆ, ನಾವಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, 'ಯತೀಂದ್ರ ಹೇಳಿಕೆಯನ್ನು ಮಾಧ್ಯಮದವರೇ ತಿರುಚಿದ್ದೀರಿ. ಅವರು ಸೈದ್ಧಾಂತಿಕವಾಗಿ ಹೇಳಿಕೆ ಕೊಟ್ಟಿದ್ದಾರೆ' ಎಂದರು.

'ಎರಡೂವರೆ ವರ್ಷದ ಸಂಪುಟ ಪುನರ್ ರಚನೆ ಮಾಡುತ್ತೇವೆ ಎಂದು ಹೇಳಿದ್ದೇವೆ. ಹೈಕಮಾಂಡ್ 4–5 ತಿಂಗಳ ಹಿಂದೆಯೇ ಅನುಮತಿ ನೀಡಿದೆ. ಮಾಡುತ್ತೇವೆ' ಎಂದು ಹೇಳಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸೂರ್ಯೋದಯ: 6:12 ಸೂರ್ಯಾಸ್ತ : 5:56 ಚಂದ್ರೋದಯ: ಬೆ. 9:10 ಚಂದ್ರಾಸ್ತ: ರಾ. 10:37 | ಶನಿವಾರದ ಉಷ್ಣಾಂಶ : ಗರಿಷ್ಠ 26° ಕನಿಷ್ಠ 21°

ಭಾನುವಾರದ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ | ಸೋಮವಾರ 30° : 20° | ಮಂಗಳವಾರ 30° : 20° | ಬುಧವಾರ 30° : 20°

ಭಾನುವಾರ ● ಅಕ್ಟೋಬರ್ 26, 2025
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ

‘ಸುರಂಗ ರಸ್ತೆ: ಕರ್ತವ್ಯ ನಿರ್ವಹಿಸುವೆ’

ಬೆಂಗಳೂರಿನ ಅಭಿವೃದ್ಧಿ ಕಾರ್ಯಗಳಿಗೆ ಬಿಜೆಪಿಯವರಿಂದ ಅಡ್ಡಿ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುರಂಗ ರಸ್ತೆ ಯೋಜನೆ ಸೇರಿದಂತೆ ಬೆಂಗಳೂರಿನ ಅಭಿವೃದ್ಧಿ ಕಾರ್ಯಗಳಿಗೆ ಬಿಜೆಪಿಯವರು ಅಡಚಣೆ ಮಾಡುತ್ತಿದ್ದಾರೆ. ಯಾರು ಏನೇ ಮಾಡಿಕೊಳ್ಳಲಿ, ನಾನು ನನ್ನ ಕರ್ತವ್ಯ ಮಾಡುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಯಶವಂತಪುರ ವಿಧಾನಸಭೆ ಕ್ಷೇತ್ರದ ಹೇರೋಹಳ್ಳಿಯ ಭರತ್ ನಗರ ಗಾಂಧಿ ಉದ್ಯಾನದಲ್ಲಿ ಸುದ್ದಿಗಾರರೊಂದಿಗೆ ಅವರು ಶನಿವಾರ ಮಾತನಾಡಿದರು.

‘ಸುರಂಗ ರಸ್ತೆ ಯೋಜನೆಗೆ ಯಾವುದೇ ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತಿಲ್ಲ. ಒಂದು ಸಣ್ಣ ಭಾಗದಲ್ಲಿ ರಸ್ತೆ ಹಾದುಹೋಗುತ್ತದೆ. ಇದನ್ನು ಪರಿಶೀಲನೆ ಮಾಡುತ್ತೇನೆ. ಲಾಲ್‌ಬಾಗ್‌ಗೆ ಯಾವುದೇ ರೀತಿ ತೊಂದರೆ ಆಗುವುದಿಲ್ಲ. ಸ್ವಲ್ಪ ಜಾಗವನ್ನು ಈ ಯೋಜನೆ ಕಾಮಗಾರಿ ನಡೆಯುವವರೆಗೂ ಬಳಸಿಕೊಳ್ಳುತ್ತೇವೆ. ನಂತರ ಅದನ್ನು ತೆರವುಗೊಳಿಸಿ, ಲಾಲ್‌ಬಾಗ್ ಉದ್ಯಾನಕ್ಕೆ ಹಿಂತಿರುಗಿಸುತ್ತೇವೆ’ ಎಂದು ತಿಳಿಸಿದರು.

‘ಸುರಂಗ ರಸ್ತೆಯನ್ನು ಭೂಮಿಯ ಒಳಗೆ ಕೊರೆಯಲಾಗುವುದು. ಹೊರಗೆ ಮಾಡಲು ಆಗುವುದಿಲ್ಲ. ಮುಂಬೈ, ದೆಹಲಿಯಲ್ಲಿ ಏಕೆ ಭೂಮಿ ಕೊರೆದು ಸುರಂಗ ರಸ್ತೆ ಮಾಡುತ್ತಿದ್ದಾರೆ. ಯಾವುದೇ ಸಂದರ್ಭದಲ್ಲಿ ನಾನು ಆತನ ಮಾತಿಗೆ ಬಾಗುವುದಿಲ್ಲ. ಹೋರಾಟ ಮಾಡುವವರು ಮಾಡುತ್ತಾರೆ. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ. ನಾವು ಜನರಿಗಾಗಿ ಕೆಲಸ ಮಾಡುತ್ತಿದ್ದೇವೆ’ ಎಂದರು.

ನೂರಾರು ಅಹವಾಲು: ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಹೇರೋಹಳ್ಳಿಯ ಭರತ್ ನಗರದ ಗಾಂಧಿ ಉದ್ಯಾನದಲ್ಲಿ ಶನಿವಾರ ಆಯೋಜಿಸಿದ್ದ ‘ಬೆಂಗಳೂರು ನಡಿಗೆ ಅಭಿಯಾನ’ದಲ್ಲಿ ಡಿ.ಕೆ. ಶಿವಕುಮಾರ್ ಅವರಿಗೆ ನೂರಕ್ಕೂ ಹೆಚ್ಚು ಮಂದಿ ಅಹವಾಲು ಸಲ್ಲಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳ ಬವಣೆಗಳನ್ನು ಜನ ಹೇಳಿಕೊಂಡರು. ಬಡಾವಣೆ ಸಂಘಗಳ ಪ್ರತಿನಿಧಿಗಳೂ ಭಾಗಿಯಾಗಿದ್ದರು.

ರಸ್ತೆ ಅವ್ಯವಸ್ಥೆ, ದೊಡ್ಡ ಮೋರಿಗಳು, ಕುಡಿಯುವ ನೀರು, ಉದ್ಯಾನಗಳ ಸ್ಥಿತಿ, ಬಿಎಂಟಿಸಿ ಬಸ್ ಸಂಚಾರ ಸುಧಾರಣೆ, ಸಿ.ಸಿ.ಟಿ.ವಿ ಕ್ಯಾಮೆರಾಗಳ ಅಳವಡಿಕೆ, ಚಿತಾಗಾರದ ಸಮಸ್ಯೆ, ಬಿಡಿಎ ಫ್ಲ್ಯಾಟ್‌ಗಳ ಹಸ್ತಾಂತರ, ಕೆರೆಗಳ ಅಭಿವೃದ್ಧಿ, ಜಿಂಕೆ ಉದ್ಯಾನ ನಿರ್ಮಾಣ, ಕ್ರೀಡಾಂಗಣ ವ್ಯವಸ್ಥೆ ಸೇರಿದಂತೆ ಹಲವು ವಿಚಾರಗಳನ್ನು ಪ್ರಸ್ತಾಪಿಸಿದರು.

ಬೀದಿ ವ್ಯಾಪಾರಿಗಳಿಂದ ಮುಖ್ಯ ರಸ್ತೆಗಳು ಒತ್ತುವರಿಯಾಗಿ ಸುಗಮ ಸಂಚಾರಕ್ಕೆ ಅವಕಾಶ ಇಲ್ಲದಾಗಿದೆ. ಕೆಲವು ಭಾಗಗಳಲ್ಲಿ ಸಂಚಾರ ದಟ್ಟಣೆಯೂ ಅಧಿಕವಾಗಿದೆ. ಇವುಗಳಿಗೂ ಪರಿಹಾರ ನೀಡಿ ಎಂದು ಕೆಲವರು ಮನವಿ ಮಾಡಿದರು.

ಒಂದು ಗಂಟೆಗೂ ಹೆಚ್ಚು ಕಾಲ ಸಮಸ್ಯೆಗಳನ್ನು ಆಲಿಸಿದ ಬಳಿಕ ಉತ್ತರಿಸಿದ ಡಿ.ಕೆ. ಶಿವಕುಮಾರ್, ‘ಕಸ ಸಮಸ್ಯೆ, ರಸ್ತೆ, ಪಾರ್ಕ್, ಜಿಮ್, ಶೌಚಾಲಯ, ಪೊಲೀಸ್ ವಿಚಾರ, ಎಲ್‌ಇಡಿ ದೀಪ, ಬಸ್ ನಿಲ್ದಾಣ, ರಸ್ತೆ ವಿಸ್ತರಣೆ, ಮೆಟ್ರೊ, ಕಲುಷಿತ ನೀರು, ಪಾರ್ಕ್ ಒತ್ತುವರಿ, ನೀರಿನ ಸಂಪರ್ಕ, ಬಿಡಿಎ ಅಧಿಸೂಚನೆ, ಕ್ಲಬ್, ಕೌಶಲ ಅಭಿವೃದ್ಧಿ ಕೇಂದ್ರ, ಆಸ್ಪತ್ರೆ ವಿಚಾರವಾಗಿ ಪ್ರಸ್ತಾಪ ಮಾಡಿದ್ದೀರಿ. ಕಾಲಮಿತಿ ಒಳಗೆ ಪರಿಹಾರ ನೀಡಲು ಪ್ರಯತ್ನಿಸುತ್ತೇವೆ’ ಎಂದು ಹೇಳಿದರು.

‘ತೊರೆಕಾಡನಹಳ್ಳಿಯಿಂದ ಕಾವೇರಿ ನೀರು ಒದಗಿಸಿದ್ದರೂ ಅನೇಕರು ಸಂಪರ್ಕ ಪಡೆದಿಲ್ಲ. ಈ ಭಾಗದ ಜನರು ಸಂಪರ್ಕ ತೆಗೆದುಕೊಳ್ಳಿ. ಸಂಪರ್ಕಕ್ಕೆ ಕಂತುಗಳಲ್ಲಿ ಹಣ ಪಾವತಿಗೂ ಅವಕಾಶ ಕಲ್ಪಿಸಿದ್ದೇವೆ’ ಎಂದರು.

ಶಾಸಕ ಎಸ್.ಟಿ. ಸೋಮಶೇಖರ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್, ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ, ಹೆಚ್ಚುವರಿ ಆಯುಕ್ತ ದಿಗ್ವಿಜಯ್ ಬೋಡ್ಕೆ ಹಾಜರಿದ್ದರು.

ಜಿಬಿಎ ರದ್ದುಗೊಳಿಸಲಿ: ಸವಾಲು

‘ಬಿಜೆಪಿಯವರು ಅಧಿಕಾರಕ್ಕೆ ಬಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು (ಜಿಬಿಎ) ರದ್ದುಗೊಳಿಸಲಿ’ ಎಂದು ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

‘ಬಿಜೆಪಿಯವರು ಅಧಿಕಾರಕ್ಕೆ ಬಂದಾಗ, ಏನು ಬೇಕಾದರೂ ಮಾಡಲಿ. ಅಧಿಕಾರಕ್ಕೆ ಬರುವುದು, ಜಿಬಿಎ ರದ್ದುಗೊಳಿಸುವುದು ಅವರ ಹಣೆಯಲ್ಲಿ ಬರೆದಿಲ್ಲ. ಇದು ಹೀಗೆ ಮುಂದುವರಿಯಲಿದೆ. ಅವರಿಗೆ ಜಿಬಿಎ ಬೇಡವಾದರೆ ಮುಂಬರುವ ನಗರ ಪಾಲಿಕೆಗಳ ಚುನಾವಣೆ ಬಹಿಷ್ಕರಿಸಲಿ. ಚುನಾವಣೆಯಿಂದ ಹಿಂದೆ ಸರಿಯಲಿ ನೋಡೋಣ. ಅವರ ಕಾರ್ಯಕರ್ತರೆಲ್ಲರೂ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧರಾಗುತ್ತಿದ್ದಾರೆ’ ಎಂದು ಹೇಳಿದರು.

> **ನ್ಯಾಯಾಲಯದಲ್ಲಿ ತಡೆಯಾಜ್ಞೆ ತರುವುದಕ್ಕೇ ಒಂದು ತಂಡವಿದೆ. ಬಿಜೆಪಿಯವರಿಗೆ ಅಭಿವೃದ್ಧಿಗಿಂತ ರಾಜಕೀಯವೇ ಹೆಚ್ಚು**
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ



ಹೇರೋಹಳ್ಳಿಯಲ್ಲಿ ಶನಿವಾರ ನಡೆದ ಸಂವಾದದಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರು

ಬಿಜೆಪಿಗೆ ಡಿಸಿಎಂ ಪ್ರಶ್ನೆ...

- ಬಿಜೆಪಿ ಸರ್ಕಾರವಿದ್ದಾಗ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳೇನು? ಸಮಸ್ಯೆ ಬಗೆಹರಿಸಲಿಲ್ಲ ಏಕೆ?
- ಅವರ ಕಾಲದಲ್ಲಿ ಕಸದ ಟೆಂಡರ್ ಕರೆಯಲು ಸಾಧ್ಯವಾಗಲಿಲ್ಲ ಏಕೆ?
- ರಸ್ತೆ ವಿಸ್ತರಣೆ, ಮೇಲ್ಸೇತುವೆ ಏಕೆ ಮಾಡಲಿಲ್ಲ? ಅವರು ಬೆಂಗಳೂರಿಗಾಗಿ ಏನೂ ಮಾಡಲಿಲ್ಲ.
- ಬೆಂಗಳೂರಿನ ಬೀದಿಗಳಲ್ಲಿ ನೇತಾಡುತ್ತಿರುವ ಕೇಬಲ್ ವೈಯರ್‌ಗಳನ್ನು ಏಕೆ ತೆರವುಗೊಳಿಸಲಿಲ್ಲ? ಮಾಫಿಯಾ ಜೊತೆ ಕೈಜೋಡಿಸಿ, ಬೆಂಗಳೂರನ್ನು ಹದಗೆಡಿಸಿದ್ದಾರೆ.

‘ತೇಜಸ್ವಿ ಸೂರ್ಯ ಖಾಲಿ ಟ್ರಂಕ್’

‘ನಾವು ಜನರಿಗಾಗಿ ಕೆಲಸ ಮಾಡುತ್ತಿದ್ದೇವೆ. ಬಿಜೆಪಿಯವರು ಅಧಿಕಾರದಲ್ಲಿ ಇದ್ದಾಗ ಬೆಂಗಳೂರಿಗಾಗಿ ಯಾವುದೇ ಒಳ್ಳೆಯ ಕೆಲಸ ಮಾಡಲು ಆಗಲಿಲ್ಲ. ತೇಜಸ್ವಿ ಸೂರ್ಯ ಎಂದರೆ ಖಾಲಿ ಟ್ರಂಕ್’ ಎಂದು ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

ಸುರಂಗ ರಸ್ತೆಗೆ ಸಂಸದ ತೇಜಸ್ವಿ ಸೂರ್ಯ ಅವರ ವಿರೋಧದ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, ‘ಯಾರೂ ಏನಾದರೂ ವಿರೋಧ ಮಾಡಿಕೊಳ್ಳಲಿ. ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಅವರು ನ್ಯಾಯಾಲಯದಲ್ಲಿ ಅರ್ಜಿ ಹಾಕಿದ್ದಾರೆ. ಸರ್ಕಾರ ಉತ್ತಮ ಕೆಲಸ ಮಾಡಿ ಹೆಸರು ಮಾಡಬಾರದು ಎಂಬುದು ಅವರ ಉದ್ದೇಶ’ ಎಂದರು.

ಸುದ್ದಿ 2 ನಿಮಿಷ

ಸುರಂಗ ರಸ್ತೆ ಟೆಂಡರ್ ಪ್ರಶ್ನಿಸಿ ಪಿಐಎಲ್: ನೋಟಿಸ್

ಬೆಂಗಳೂರು: ‘ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೂ ಸುರಂಗ ರಸ್ತೆ ನಿರ್ಮಾಣದ ಟೆಂಡರ್ ಅಧಿಸೂಚನೆ ರದ್ದುಪಡಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ, ರಾಜ್ಯ ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, ಚಲನಚಿತ್ರ ನಟ ಪ್ರಕಾಶ್ ಬೆಳವಾಡಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಸಂಸದರೂ ಆದ ವಕೀಲ ತೇಜಸ್ವಿ ಸೂರ್ಯ ವಾದ ಮಂಡಿಸಿ, ‘ಉದ್ದೇಶಿತ ಸುರಂಗ ರಸ್ತೆಗಾಗಿ ನಗರದ ಶ್ವಾಸಕೋಶದಂತಿರುವ ಲಾಲ್‌ಬಾಗ್ ಪ್ರದೇಶದಲ್ಲಿ 6.5 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ. ಯೋಜನೆಗೆ ಸಂಬಂಧಿಸಿದಂತೆ ಹೊರಡಿಸಿರುವ ಡಿಪಿಆರ್ ಪ್ರಕಾರ 3 ಸಾವಿರ ವರ್ಷಗಳಿಂದ ನೈಸರ್ಗಿಕವಾಗಿ ರೂಪುಗೊಂಡಿರುವ ಇಲ್ಲಿನ ಬೃಹದಾಕಾರದ ಬಂಡೆಗೆ ಹಾನಿಯಾಗುವ ಸಂಭವವಿದೆ. ಯೋಜನೆಗಾಗಿ ಮರಗಳನ್ನು ಕಡಿಯುವ ಉದ್ದೇಶವೂ ಒಳಗೊಂಡಿದೆ’ ಎಂದು ಆತಂಕ ವ್ಯಕ್ತಪಡಿಸಿದರು.



ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಸರ್ಕಾರದ ಪರ ವಕೀಲರಿಗೆ, ‘ಮರಗಳನ್ನು ಕಡಿಯಲಾಗುತ್ತಿದೆಯೇ ಹೇಗೆ ಎಂಬುದನ್ನು ನ್ಯಾಯಾಲಯಕ್ಕೆ ದೃಢಪಡಿಸಿ’ ಎಂದು ತಾಕೀತು ಮಾಡಿ ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಅನಿರುದ್ಧ ಎ.ಕುಲಕರ್ಣಿ ವಕಾಲತ್ತು ವಹಿಸಿದ್ದಾರೆ.

ಜಿಬಿಎ: ಜೆಡಿಎಸ್ ಉಸ್ತುವಾರಿ ಸಮಿತಿ ರಚನೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಿಗೆ ನಡೆಯಬೇಕಿರುವ ಚುನಾವಣೆಗಳ ಸಿದ್ಧತೆಗಾಗಿ ಉನ್ನತ ಮಟ್ಟದ ಉಸ್ತುವಾರಿ ಸಮಿತಿಯನ್ನು ಜೆಡಿಎಸ್ ರಚಿಸಿದೆ.

ಇದೇ 16ರಂದು ನಡೆದಿದ್ದ ಪಕ್ಷದ ಪ್ರಮುಖರ ಸಭೆಯಲ್ಲಿ ಉಸ್ತುವಾರಿ ಸಮಿತಿ ರಚನೆಗೆ ನಿರ್ಧಾರ ಮಾಡಲಾಗಿತ್ತು. ಅದರಂತೆ ಸಮಿತಿಯನ್ನು ರಚಿಸಿ, ಪಕ್ಷದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರು ಆದೇಶ ಹೊರಡಿಸಿದ್ದಾರೆ.

ಪಕ್ಷದ ಒಂಬತ್ತು ಹಿರಿಯ ನಾಯಕರನ್ನು ಈ ಸಮಿತಿಯು ಹೊಂದಿದೆ. ಶಾಸಕರಾದ ಎ.ಮಂಜು, ಎಂ.ಟಿ.ಕೃಷ್ಣಪ್ಪ, ವಿಧಾನ ಪರಿಷತ್ತಿನ ಸದಸ್ಯರಾದ ಟಿ.ಎ.ಶರವಣ, ಟಿ.ಎನ್.ಜವರಾಯಿಗೌಡ, ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಪಕ್ಷದ ನಾಯಕರಾದ ಎಂ.ಕೃಷ್ಣಾರೆಡ್ಡಿ, ಸುರೇಶ್ ಗೌಡ, ಎ.ಮಂಜುನಾಥ್ ಮತ್ತು ಕೆ.ಎ.ತಿಪ್ಪೇಸ್ವಾಮಿ ಅವರು ಈ ಸಮಿತಿಯಲ್ಲಿ ಇದ್ದಾರೆ.

ಜಿಬಿಎಯ ಐದೂ ಪಾಲಿಕೆಗಳಲ್ಲಿ ವಾರ್ಡ್‌ವಾರು ಉಸ್ತುವಾರಿ ಸಮಿತಿಗಳನ್ನು ರಚಿಸುವ, ಸದಸ್ಯತ್ವ ನೋಂದಣಿ ಅಭಿಯಾನ ನಡೆಸುವ, ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸುವ, ಉಪಸಮಿತಿಗಳ ಮೇಲ್ವಿಚಾರಣೆ ಮತ್ತು ಬಿಜೆಪಿ ಜತೆಗೆ ಸಮನ್ವಯ ಸಾಧಿಸುವ ಹೊಣೆಗಾರಿಕೆಯನ್ನು ಈ ಸಮಿತಿಗೆ ನೀಡಲಾಗಿದೆ ಎಂದು ಜೆಡಿಎಸ್‌ನ ಪ್ರಕಟಣೆ ತಿಳಿಸಿದೆ.

ಪಿಆರ್‌ಕೆ ಆ್ಯಪ್‌ಗೆ ಚಾಲನೆ ನೀಡಿದ ಡಿಕೆಶಿ

ಪುನೀತ್ ಅವರು ಬದುಕಿನಲ್ಲಿ ಮನುಷ್ಯತ್ವಕ್ಕೆ ಹೆಚ್ಚಿನ ಬೆಲೆ ಕೊಟ್ಟವರು. ಇವುಗಳೆಲ್ಲವನ್ನೂ ಜನರಿಗೆ ಪರಿಚಯಿಸಲು ಈ ಆ್ಯಪ್ ಸಹಕಾರಿಯಾಗಲಿದೆ– ಉಪ ಮುಖ್ಯಮಂತ್ರಿ

‘ಅಪ್ಪುವನ್ನು ರಾಜಕೀಯಕ್ಕೆ ಕರೆದಿದ್ದೆ’

ಬೆಂಗಳೂರು: ‘ಪುನೀತ್ ರಾಜ್‌ಕುಮಾರ್ ಅವರನ್ನು ರಾಜಕೀಯಕ್ಕೆ ಕರೆತರಬೇಕು ಎಂದು ಸಾಕಷ್ಟು ಪ್ರಯತ್ನಪಟ್ಟಿದ್ದೆ. ಆದರೆ ಅವರು ಒಪ್ಪಲಿಲ್ಲ. ಇದನ್ನು ಇಲ್ಲಿಯವರೆಗೂ ಎಲ್ಲೂ ಹೇಳಿಕೊಂಡಿರಲಿಲ್ಲ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಶನಿವಾರ(ಅ.25) ಸ್ಟಾರ್ ಫ್ಯಾನ್‌ಡಮ್‌ನ ಪಿಆರ್‌ಕೆ ಆ್ಯಪ್ ಅನಾವರಣಗೊಳಿಸಿ ಮಾತನಾಡಿದ ಅವರು, ‘ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರನ್ನೂ ರಾಜಕೀಯಕ್ಕೆ ಕರೆದಿದ್ದೆ. ಅವರೂ ಒಪ್ಪಿರಲಿಲ್ಲ. ಕುಟುಂಬದ ಹೆಜ್ಜೆಯಂತೆ ನಡೆಯುತ್ತೇನೆ ಎಂದಿದ್ದರು’ ಎಂದು ನೆನಪಿಸಿಕೊಂಡರು.



ಅಪ್ಪು ಆ್ಯಪ್

‘ಪುನೀತ್ ಅವರು ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ಚಿಕ್ಕ ವಯಸ್ಸಿನಲ್ಲೇ ಕೊಟ್ಟು ಹೋಗಿದ್ದಾರೆ. ನಾನೂ ಅಪ್ಪು ಒಂದೇ ಜಿಮ್‌ಗೆ ಹೋಗುತ್ತಿದ್ದೆವು. ಸುಮಾರು ಹದಿನೈದು ವರ್ಷಗಳ ಪರಿಚಯ. ಅವರು ನನ್ನ ಒಳ್ಳೆಯ ಸ್ನೇಹಿತರಾಗಿದ್ದರು. ಅಪ್ಪು ಅವರನ್ನು ಮುಂದಿನ ಪೀಳಿಗೆಯೂ ನೆನಪಿಸಿಕೊಳ್ಳಬೇಕು. ಅಪ್ಪು ಹೆಸರಿನಲ್ಲಿ ಬಂದಿರುವ ಈ ಆ್ಯಪ್ ರಾಮಾಯಣ, ಮಹಾಭಾರತ ಗ್ರಂಥದಂತೆ ಶಾಶ್ವತವಾಗಿ ಇರಲಿದೆ. ತಾಯಿಯಂತೆ ಅಪ್ಪು ಅವರನ್ನು ಅನೇಕರು ಇಂದಿಗೂ ನೆನಪಿಸಿಕೊಳ್ಳುತ್ತಿದ್ದಾರೆ. ಪುನೀತ್ ಅವರು ಬದುಕಿನಲ್ಲಿ ಮನುಷ್ಯತ್ವಕ್ಕೆ ಹೆಚ್ಚಿನ ಬೆಲೆ ಕೊಟ್ಟವರು. ಎಲ್ಲರ ಹೃದಯವನ್ನು ಈ ಮೂಲಕ ಗೆದ್ದಿದ್ದಾರೆ. ಇವುಗಳೆಲ್ಲವನ್ನೂ ಜನರಿಗೆ ಪರಿಚಯಿಸಲು ಈ ಆ್ಯಪ್ ಸಹಕಾರಿಯಾಗಲಿದೆ’ ಎಂದರು.

ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಸ್ಟಾರ್ ಫ್ಯಾನ್‌ಡಮ್ ಸ್ಥಾಪಕ ಸಮರ್ಥ ನಾಗಭೂಷಣಂ ಉಪಸ್ಥಿತರಿದ್ದರು.

ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲಿ ಡಿಸಿಎಂ ಪ್ರಶ್ನೆ

‘ಎಲ್ಲದಕ್ಕೂ ತಡೆಯಾಜ್ಞೆ ತಂದರೆ ಹೇಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಎಂಟು ವರ್ಷಗಳಿಂದ ಸರಿಯಾಗಿ ಕಸ ಎತ್ತುವುದಕ್ಕೆ ಆಗುತ್ತಿಲ್ಲ. ಏನನ್ನಾದರೂ ಮಾಡಲು ಹೊರಟರೆ ಎಲ್ಲದಕ್ಕೂ ಕೋರ್ಟ್‌ನಿಂದ ತಡೆಯಾಜ್ಞೆ ತರುತ್ತಾರೆ. ಅನುಷ್ಠಾನಗೊಳಿಸಬೇಕಾದ ಯೋಜನೆಗಳ ಮೊತ್ತದಲ್ಲಿ ವರ್ಷವೊಂದಕ್ಕೆ ₹2 ಸಾವಿರ ಕೋಟಿ ನಷ್ಟವಾಗುತ್ತಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಸಹಾಯಕತೆ ವ್ಯಕ್ತಪಡಿಸಿದರು.

ಸಿಟಿ ಸಿವಿಲ್ ಸೆಷನ್ಸ್ ಕೋರ್ಟ್ ಆವರಣದಲ್ಲಿನ ಪ್ರಧಾನ ಕಚೇರಿಯಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ‘ನ್ಯಾಯ ಮಿತ್ರ ಸಹಕಾರಿ ಬ್ಯಾಂಕ್’ ಬೆಳ್ಳಿಹಬ್ಬದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ವಕೀಲರು ಕೂಡಾ ಅಭಿವೃದ್ಧಿಯ ದೃಷ್ಟಿಯಿಂದ ಯೋಚನೆ ಮಾಡಬೇಕು. ಇಂತಹ ವಿಷಯಗಳನ್ನು ಹೊತ್ತು ತಮ್ಮ ಬಳಿ ಬರುವ ಕಕ್ಷಿದಾರರನ್ನು ತಿದ್ದಬೇಕು’ ಎಂದು ಅವರು ವಕೀಲರಿಗೆ ಮನವಿ ಮಾಡಿದರು.

‘ವೇಗವಾಗಿ ಬೆಳೆಯುತ್ತಿರುವ ಬೆಂಗಳೂರಿನ ಅಭಿವೃದ್ಧಿಗೆ ನಾವೇನಾದರೂ ಬೃಹತ್ ಯೋಜನೆಗಳನ್ನು ಜಾರಿಗೆ ತರಲು ಮುಂದಾದರೆ, ದುಡ್ಡು ಬಾಚೋಕೆ ಮಾಡುತ್ತಿದ್ದಾರೆ ಎಂದು ಟೀಕಿಸಲಾಗುತ್ತಿದೆ. ಹಾಗಿದ್ದರೆ, ನಿಮಗೆ ಅವಕಾಶ ಇದ್ದಾಗ ಯಾಕೆ ಇಂತಹ ಅಭಿವೃದ್ಧಿ ಕೆಲಸ ಮಾಡಲು ಮುಂದಾಗಲಿಲ್ಲ’ ಎಂದು ವಿರೋಧ ಪಕ್ಷಗಳು ಮತ್ತು ಟೀಕಾಕಾರರನ್ನು ಪ್ರಶ್ನಿಸಿದರು.

‘ನಾನು ಬೆಂಗಳೂರು ಮಂತ್ರಿ ಇದ್ದೇನೆ. ಇಲ್ಲಿನ ಸಮಸ್ಯೆ ನನಗೆ ಗೊತ್ತಿದೆ. ಸದ್ಯದ ನಗರದ ಜನಸಂಖ್ಯೆ 1.40 ಕೋಟಿ ಇದೆ. 1.30 ಕೋಟಿ ವಾಹನಗಳಿವೆ. ದಿನಾಲೂ 70 ಲಕ್ಷ ಜನರು ಇಲ್ಲಿಗೆ ಬಂದು ಹೋಗುತ್ತಾರೆ. ಹೀಗಿರುವಾಗ ನಗರದಲ್ಲಿ ಜಾಗ ಎಲ್ಲಿದೆ’ ಎಂದು ಕೇಳಿದರು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ಮಾತನಾಡಿ, ‘ಹೈಕೋರ್ಟ್ ಮತ್ತು ವಿಚಾರಣಾ ನ್ಯಾಯಾಲಯಗಳಿಗೆ ಕಾಲಮಿತಿ ವಿಧಿಸಿ ಪ್ರಕರಣಗಳನ್ನು ವಿಲೇವಾರಿ ಮಾಡಲು ನಿರ್ದೇಶಿಸುವ ಸುಪ್ರೀಂ ಕೋರ್ಟ್ ನಿರ್ದೇಶನದಿಂದ ಇತರೆ ತುರ್ತು ಪ್ರಕರಣಗಳು ಸೊರಗುತ್ತವೆ’ ಎಂದರು.

‘ನಾನು ಈ ಕೋರ್ಟ್‌ನಿಂದಲೇ ನನ್ನ ವೃತ್ತಿ ಆರಂಭಿಸಿದ್ದು ಎಂಬ ಹೆಗ್ಗಳಿಕೆ ನನ್ನದು. ವಕೀಲರು ತಮ್ಮ ಸಂಪಾದನೆಯ ಒಂದು ಭಾಗವನ್ನು ನಿಶ್ಚಿತ ಠೇವಣಿ ಇರಿಸುವ ಮೂಲಕ ಆರ್ಥಿಕ ಶಿಸ್ತನ್ನು ರೂಢಿಸಿಕೊಳ್ಳಬೇಕು’ ಎಂದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ ಮಾತನಾಡಿ, ‘ಹೈಕೋರ್ಟ್‌ನಲ್ಲಿ ಜಾಗದ ಕೊರತೆಯಿದ್ದು ಆಧುನಿಕ ಹೈಕೋರ್ಟ್ ನಿರ್ಮಾಣಕ್ಕಾಗಿ 20 ಎಕರೆ ಜಮೀನನ್ನು ಟರ್ಫ್ ಕ್ಲಬ್ ಅಥವಾ ಇನ್ನಾವುದಾದರೂ ಸೂಕ್ತ ಜಾಗದಲ್ಲಿ ಒದಗಿಸಬೇಕು. ಅಂತೆಯೇ, ಸಿಟಿ ಸಿವಿಲ್ ಕೋರ್ಟ್‌ಗೆ 10 ಅಂತಸ್ತುಗಳ ಹೊಸ ಕಟ್ಟಡ ಮಾಡಿಸಿಕೊಡಬೇಕು’ ಎಂದು ಶಿವಕುಮಾರ್‌ಗೆ ಮನವಿ ಮಾಡಿದರು.



ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಆರವಿಂದ ಕುಮಾರ್ ಮತ್ತು ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಮುಂದಿನ ಮುಖ್ಯಮಂತ್ರಿಗೆ ಜೈ...

ಡಿ.ಕೆ.ಶಿವಕುಮಾರ್ ತಮ್ಮ ಭಾಷಣ ಮುಗಿಸುತ್ತಿದ್ದಂತೆ, ಕಾರ್ಯಕ್ರಮದಲ್ಲಿದ್ದ ಸಭಿಕರ ಮಧ್ಯದಿಂದ ‘ಮುಂದಿನ ಮುಖ್ಯಮಂತ್ರಿ ಶಿವಕುಮಾರ್‌ಗೆ ಜೈ’ ಎಂಬ ಜೈಕಾರಗಳು ಮೊಳಗಿದವು. ವೇದಿಕೆಯಿಂದ ಕೆಳಗಿಳಿಯುವ ವೇಳೆ ಬೆಂಗಳೂರು ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಅವರೂ ‘ಮುಂದಿನ ಮುಖ್ಯಮಂತ್ರಿ ಶಿವಕುಮಾರ್‌ಗೆ ಜೈ’ ಎಂದು ಕೂಗಿದರು.



ಪ್ರಜಾವಾಣಿ ಚಿತ್ರ

‘ಧರ್ಮಾಂಗದ’

ಮನೋಜ್ ಭಟ್ ಹೆಗ್ಗಾರಳ್ಳಿ ಅವರ ಸಂಯೋಜನೆಯಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಯಕ್ಷ ಷಡಾನನ’ ಐದು ಪೌರಾಣಿಕ ಪ್ರಸಂಗಗಳಲ್ಲಿ ಪ್ರಥಮ ಪ್ರಸಂಗ ‘ಧರ್ಮಾಂಗದ’ವು ಪ್ರೇಕ್ಷಕರನ್ನು ರಂಜಿಸಿತು

‘ಹೊರಗಿದ್ದವರಿಗೆ ಮಂತ್ರಿಗಿರಿ: ಮೊದಲೇ ನಿರ್ಧಾರ’

ಒಂದನೇ ಪುಟದಿಂದ...


ಯತೀಂದ್ರ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಕೃಷ್ಣ ಬೈರೇಗೌಡ, ‘ಇಂತಹ ವಿಷಯಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಮುಖ್ಯಮಂತ್ರಿ ನನಗೆ ಜವಾಬ್ದಾರಿ, ಕೆಲಸ ಕೊಟ್ಟಿದ್ದಾರೆ. ರಾಜಕೀಯ ಮಾತನಾಡಲು ಪಕ್ಷದ ಚೌಕಟ್ಟಿದೆ. ಹೈಕಮಾಂಡ್ ಇದೆ. ಅಲ್ಲಿ ಏನು ಹೇಳಬೇಕು ಹೇಳುತ್ತೇನೆ. ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತದೆ’ ಎಂದರು.

> **ಪಕ್ಷದ ವರಿಷ್ಠರ ಮಾತಿಗೆ ನಾವೆಲ್ಲರೂ (ಸಚಿವರು) ಅವತ್ತು ಒಪ್ಪಿದ್ದೇವೆ. ನಾನು ಆ ಮಾತಿಗೆ ಈಗಲೂ ಬದ್ಧನಾಗಿದ್ದೇನೆ**
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

‘ಯತೀಂದ್ರಗೆ ನೋಟಿಸ್ ಕೊಡದಷ್ಟು ಡಿಕೆಶಿ ದುರ್ಬಲರೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಲನಚಿತ್ರ ಕಲಾವಿದರಿಗೆ, ಪಕ್ಷದ ಶಾಸಕರಿಗೆ, ಕಾರ್ಯಕರ್ತರಿಗೆ ಧಮಕಿ ಹಾಕುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರಿಗೆ ನೋಟಿಸ್ ಕೊಡುವಷ್ಟು ಧೈರ್ಯ ಇಲ್ಲವಾ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದ್ದಾರೆ.



ಆರ್. ಅಶೋಕ

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು ಅವರು, ‘ಚಲನಚಿತ್ರ ಕಲಾವಿದರಿಗೆ ನಟ್ಟುಬೋಲ್ಟ್ ಟೈಟ್ ಮಾಡ್ತೀನಿ ಅಂದಿದ್ದರು. ಅಧಿಕಾರ ಹಂಚಿಕೆ ಹಾಗೂ ಮುಖ್ಯಮಂತ್ರಿ ಬದಲಾವಣೆ ಕುರಿತು ಹೇಳಿಕೆ ನೀಡಿದ್ದ ಶಾಸಕರಿಗೆ ತಗ್ಗಿ-ಬಗ್ಗಿ ನಡೀಬೇಕು ಎಂದು ತಾಕೀತು ಮಾಡಿದ್ದರು. ನಿಮ್ಮ ಛತ್ರಿ ಬುದ್ಧಿ ಗೊತ್ತು ಎಂದು ಕಾರ್ಯಕರ್ತರಿಗೆ ಆವಾಜ್ ಹಾಕಿದ್ದರು. ಆದರೆ, ಕೆಪಿಸಿಸಿ ಅಧ್ಯಕ್ಷರಾಗಿ ಯತೀಂದ್ರ ಅವರಿಗೆ ಒಂದು ನೋಟಿಸ್ ಕೊಡುವ ಧೈರ್ಯ ಇಲ್ಲವಾಗಿದೆ’ ಎಂದಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್ ಎಲ್ಲಿದೆ?

‘ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆ ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದರೂ ಕ್ರಮಕೈಗೊಳ್ಳದ ಹೈಕಮಾಂಡ್ ಎಲ್ಲಿದೆ ಎನ್ನುವ ಪ್ರಶ್ನೆ ಮೂಡಿದೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಯತೀಂದ್ರ ಹೇಳಿಕೆ ಕುರಿತು ಸಿದ್ದರಾಮಯ್ಯ ಸ್ಪಷ್ಟೀಕರಣ ನೀಡಿದ್ದಾರೆ. ಎಲ್ಲ ವಿಚಾರಕ್ಕೂ ಹೈಕಮಾಂಡ್ ನಿರ್ಧಾರವೇ ಅಂತಿಮ ಎನ್ನುತ್ತಿದ್ದರು. ಯತೀಂದ್ರ ಹೇಳಿಕೆ ಗಮನಿಸಿದರೆ ಹೈಕಮಾಂಡ್ ಎಲ್ಲಿದೆ ಅನ್ನುವ ಪ್ರಶ್ನೆಯನ್ನು ಕಾಂಗ್ರೆಸಿಗರೇ ಕೇಳುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ನಾಯಕರು ದೆಹಲಿಯಲ್ಲಿ ಇದ್ದಾರಾ? ಮುಖ್ಯಮಂತ್ರಿ ಕುಟುಂಬದವರ ಸುತ್ತ ಇದ್ದಾರಾ’ ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರ ಆರ್ಥಿಕ ದುಸ್ಥಿತಿ ಮುಚ್ಚಿಕೊಳ್ಳಲು ಬಿಜೆಪಿ ಸಂಸದರ ಮೇಲೆ ಸಿದ್ದರಾಮಯ್ಯ ಆರೋಪ ಮಾಡುತ್ತಿದ್ದಾರೆ. ಕೋವಿಡ್ ವೇಳೆ ರಾಜ್ಯಕ್ಕೆ ಕೇಂದ್ರದಿಂದ ನಿರೀಕ್ಷೆಯಷ್ಟು ಹಣ ಬಂದಿದೆ. ರಾಜ್ಯದ ರೈಲ್ವೆ ಯೋಜನೆಗಳಿಗೂ ಹೆಚ್ಚು ಹಣ ಬಂದಿದೆ ಎಂದರು.

ರುದ್ರಾಕ್ಷಿ ಮೇಳ: ನಾಳೆ ಕೊನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಸ್-ನೇಪಾಳ ರುದ್ರಾಕ್ಷ ಸಂಸ್ಥೆ ಆಯೋಜಿಸಿರುವ ನೇಪಾಳದ ರುದ್ರಾಕ್ಷಿಗಳ ಪ್ರದರ್ಶನ ಮತ್ತು ಮಾರಾಟ ಮೇಳ ಅ.27ರಂದು ಮುಕ್ತಾಯವಾಗಲಿದೆ.

ಜೆ.ಪಿ ನಗರ 1ನೇ ಹಂತದ ಸಂಗಮ ಸರ್ಕಲ್ ಬಸ್ ನಿಲ್ದಾಣದ ಬಳಿ ಇರುವ ಹೋಟೆಲ್ ಲಿ ಫೋಲಿಗ್‌ನಲ್ಲಿ ಕಾರ್ತಿಕ ಮಾಸ ನಿಮಿತ್ತ ಮಹಾ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟವನ್ನು ಆಯೋಜಿಸಲಾಗಿದೆ.

‘ದುಂಡುಮುಖದ ಒಂದು ಮುಖಿ ರುದ್ರಾಕ್ಷಿಗಳೂ (ಸುಮಾರು ₹4.5 ಲಕ್ಷ) ಸೇರಿ ಹಲವು ರೀತಿಯ ರುದ್ರಾಕ್ಷಿಗಳು ಲಭ್ಯವಿವೆ. ಅಸಲಿ ಹಾಗೂ ನಕಲಿ ರುದ್ರಾಕ್ಷಿಗಳ ಭಿನ್ನತೆ ತಿಳಿಸಲಾಗುವುದು. ಗುಣಮಟ್ಟದ ರುದ್ರಾಕ್ಷಿಗಳನ್ನು ಮಾರಾಟ ಮಾಡುವುದರಲ್ಲಿ ರುದ್ರಾಕ್ಷ ಸಂಸ್ಥೆ ವಿಶ್ವಾಸಾರ್ಹತೆ ಹೊಂದಿದೆ. ಆಸಕ್ತರಿಗೆ ಇತರ ಮುಖಗಳ ರುದ್ರಾಕ್ಷಿಗಳನ್ನು ತರಿಸಿ ಕೊಡಲಾಗುವುದು’ ಎಂದು ಇಂಡಸ್-ನೇಪಾಳ ಸಂಸ್ಥೆಯ ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ ತಿಳಿಸಿದ್ದಾರೆ. **ಮಾಹಿತಿಗೆ:** 70973 96666.

ಮತ ಕಳ್ಳತನ: ಸಹಿ ಸಂಗ್ರಹ ಅಭಿಯಾನಕ್ಕೆ ಸಚಿವ ಕೃಷ್ಣ ಬೈರೇಗೌಡ ಚಾಲನೆ

‘ಬಿಜೆಪಿ– ಆಯೋಗ ಶಾಮೀಲು’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಮತ ಕಳ್ಳತನ ದೇಶದಾದ್ಯಂತ ನಡೆಯುತ್ತಿದ್ದು, ಇದರಲ್ಲಿ ಬಿಜೆಪಿ ಹಾಗೂ ಚುನಾವಣಾ ಆಯೋಗ ಶಾಮೀಲಾಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಆರೋಪಿಸಿದರು.

ಮತ ಕಳ್ಳತನದ ವಿರುದ್ಧ ಶನಿವಾರ ಸಹಕಾರನಗರದಲ್ಲಿರುವ ತಮ್ಮ ಗೃಹ ಕಚೇರಿಯಿಂದ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಚುನಾವಣಾ ಆಯೋಗ ಬಿಜೆಪಿಯ ಅಂಗಸಂಸ್ಥೆಯಂತೆ ಕೆಲಸ ಮಾಡುತ್ತಿದೆ. ಪರಿಣಾಮ ಇಡೀ ದೇಶದ ಚುನಾವಣಾ ಪ್ರಕ್ರಿಯೆಯೇ ಬುಡಮೇಲಾಗಿದೆ. ಚುನಾವಣಾ ವ್ಯವಸ್ಥೆಯಲ್ಲೇ ಅಕ್ರಮ ಎಸಗಿಬಿಟ್ಟರೆ ಬಿಜೆಪಿಯ ಗೆಲುವು ಸುಲಭ. ಹೀಗಾಗಿ ಚುನಾವಣಾ ಆಯೋಗ ಮತ್ತು ಬಿಜೆಪಿ ಜಂಟಿಯಾಗಿಯೇ ಈ ಅಕ್ರಮದಲ್ಲಿ ಶಾಮೀಲಾಗಿವೆ’ ಎಂದು ಕಿಡಿಕಾರಿದರು.



ತಮ್ಮ ಗೃಹ ಕಚೇರಿಯಲ್ಲಿ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿ, ಸಚಿವ ಕೃಷ್ಣಬೈರೇಗೌಡ ಮಾತನಾಡಿದರು

ಮತದಾರರ ಪಟ್ಟಿ ನಿರ್ವಹಣೆಯಲ್ಲಿ ಅಕ್ರಮವಾಗದಂತೆ ನೋಡಿಕೊಳ್ಳುವುದು ಆಯೋಗದ ಮೊದಲ ಕರ್ತವ್ಯ. ಆದರೆ, ಕಲಬುರಗಿಯ ಆಳಂದ ಕ್ಷೇತ್ರದಿಂದ ಬೆಂಗಳೂರಿನ ಮಹದೇವಪುರ ಕ್ಷೇತ್ರದವರೆಗೆ ಮತದಾರರ ಪಟ್ಟಿಯಲ್ಲೇ ಚುನಾವಣಾ ಆಯೋಗ ಎಷ್ಟು ಅಕ್ರಮ ಎಸಗಿದೆ ಎಂಬ ವಿಚಾರ ಕಣ್ಣ ಮುಂದಿದೆ ಎಂದು ವಿಷಾದಿಸಿದರು.

ಮಹದೇವಪುರದಲ್ಲಿ 35 ಸಾವಿರ ಅಕ್ರಮ ಮತಗಳನ್ನು ಪಟ್ಟಿಗೆ ಸೇರಿಸಿದ್ದಾರೆ ಎಂಬುದನ್ನು ಸಾಕ್ಷಿ ಸಮೇತ ನಿರೂಪಿಸಲಾಗಿದೆ. ಆಳಂದ ಕ್ಷೇತ್ರದಲ್ಲಿ 6 ಸಾವಿರ ನೈಜ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಈ ಅಕ್ರಮದ ಮಾಹಿತಿ ಸೂಕ್ತ ಸಮಯಕ್ಕೆ ಶಾಸಕ ಬಿ.ಆರ್.ಪಾಟೀಲ ಗಮನಕ್ಕೆ ಬಂದ ಕಾರಣಕ್ಕೆ ಇದನ್ನು ತಡೆಯಲಾಯಿತು. ಇಲ್ಲದಿದ್ದರೆ ಅಷ್ಟೂ ಹೆಸರುಗಳನ್ನು ಪಟ್ಟಿಯಿಂದ ತೆಗೆಯಲಾಗುತ್ತಿತ್ತು. ಇದು ಚುನಾವಣೆಯೊಂದರ ಫಲಿತಾಂಶದ ಮೇಲೂ ಪರಿಣಾಮ ಬೀರುತ್ತಿತ್ತು ಎಂದು ಅಭಿಪ್ರಾಯಪಟ್ಟರು.

ಆಳಂದ ಕ್ಷೇತ್ರದಲ್ಲಿ ಸೈಬರ್ ಸೆಂಟರ್ ಬಳಸಿ ಹತ್ತಾರು ಫೋನ್ ನಂಬರ್ ಮೂಲಕ ಮತದಾರರ ಪಟ್ಟಿಯಿಂದ ಯಾರದ್ದೋ ಹೆಸರನ್ನು ತೆಗೆಯಲು ಇನ್ಯಾರದ್ದೋ ಹೆಸರಿನಿಂದ ಅರ್ಜಿ ಹಾಕಲಾಗಿದೆ. ಸುಮಾರು 70ಕ್ಕೂ ಹೆಚ್ಚು ನಕಲಿ ಫೋನ್ ನಂಬರ್‌ಗಳನ್ನು ಬಳಸಿರುವ ಮಾಹಿತಿ ಈಗಾಗಲೇ ತನಿಖೆಯಿಂದ ಹೊರಬಂದಿದೆ. ಈ ಸಂಖ್ಯೆಗಳು ಯಾರ ಹೆಸರಿನಲ್ಲಿ ಖರೀದಿಸಲಾಯಿತು? ಇವುಗಳ ಲೊಕೇಷನ್ ಎಲ್ಲಿದೆ? ಮತ ಕಳ್ಳತನಕ್ಕೆ ಬಳಸಿದ ಲ್ಯಾಪ್‌ಟಾಪ್‌ಗಳ ಐಪಿ ವಿಳಾಸದ ಮಾಹಿತಿ ಸೇರಿದಂತೆ ತನಿಖೆಗೆ ಅಗತ್ಯವಿರುವ ಎಲ್ಲಾ ಮಾಹಿತಿಗಳನ್ನು ನೀಡಲು ಚುನಾವಣಾ ಆಯೋಗ ಹಿಂದೇಟು ಹಾಕುತ್ತಿರುವುದು ಏಕೆ? ಮತ ಕಳ್ಳತನ ಅಕ್ರಮದಲ್ಲಿ ಅವರೂ ಶಾಮೀಲಾಗಿರುವುದು ಸ್ಪಷ್ಟವಾಗುವುದಿಲ್ಲವೇ?’ ಎಂದರು.

ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ವಾಜಿದ್ ಸೇರಿ ಅನೇಕರು ಉಪಸ್ಥಿತರಿದ್ದರು.

‘ಎ’ ಖಾತೆಗೆ ಹಣ ಕಟ್ಟಬೇಡಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿ’ ಖಾತೆಯಿಂದ ‘ಎ’ ಖಾತೆ ಮಾಡಿಕೊಡುತ್ತೇವೆ ಎಂದು ಜನರಿಂದ ಲಕ್ಷ ಲಕ್ಷ ರೂಪಾಯಿ ಲೂಟಿ ಮಾಡಲು ಸರ್ಕಾರ ಮುಂದಾಗಿದೆ. ಈ ಸರ್ಕಾರಕ್ಕೆ ಹಣ ನೀಡಬೇಡಿ. ನಾವು ಅತ್ಯಂತ ಕಡಿಮೆ ಶುಲ್ಕಕ್ಕೆ ಈ ಕೆಲಸ ಮಾಡಿಕೊಡುತ್ತೇವೆ’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಿವೇಶನದ ಮಾರ್ಗದರ್ಶಿ ದರದ ಶೇ 10ರಷ್ಟನ್ನು ಪಾವತಿಸಿ ಎಂದು ಸರ್ಕಾರ ಹೇಳುತ್ತಿದೆ. ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ ಪ್ರತಿ ಚದರ ಅಡಿಗೆ ₹110 ನಿಗದಿ ಮಾಡಿದ್ದರು. ನಾನು ಮುಖ್ಯಮಂತ್ರಿ ಆಗಿದ್ದಾಗ ₹200ರಿಂದ ₹600 ನಿಗದಿ ಮಾಡಿದ್ದೆ. ಈ ಸರ್ಕಾರ ಪ್ರತಿ ಚದರ ಅಡಿಗೆ ಹತ್ತಾರು ಸಾವಿರ ರೂಪಾಯಿ ನಿಗದಿ ಮಾಡಿದೆ’ ಎಂದರು.

‘ಇವರು ಈಗ ನಿಗದಿ ಮಾಡಿರುವ ಪ್ರಮಾಣದಲ್ಲಿ ಪ್ರತಿ ನಿವೇಶನದವರು ಕನಿಷ್ಠ ₹5 ಲಕ್ಷದಿಂದ ₹25 ಲಕ್ಷದವರೆಗೂ ಶುಲ್ಕ ನೀಡಬೇಕಾಗುತ್ತದೆ. ಹದಿನೈದು–ಇಪ್ಪತ್ತು ವರ್ಷಗಳ ಹಿಂದೆ ₹15,000 ಕೊಟ್ಟು ನಿವೇಶನ ಖರೀದಿಸಿದ್ದವರು ಈಗ ಐದಾರು ಲಕ್ಷ ರೂಪಾಯಿ ಕಟ್ಟಬೇಕಿದೆ. ಬೆಂಗಳೂರಿನ ಕಾಮಾಕ್ಷಿಪಾಳ್ಯದ ನಿವಾಸಿಯೊಬ್ಬರು, ಅವರ ನಿವೇಶನದ ಖಾತೆಯನ್ನು ‘ಎ’ ಪರಿವರ್ತಿಸಿಕೊಳ್ಳಲು ₹25 ಲಕ್ಷ ಪಾವತಿಸಬೇಕಿದೆ. ಅವರು ಈಗ ಎಲ್ಲಿಗೆ ಹೋಗಬೇಕು’ ಎಂದು ಪ್ರಶ್ನಿಸಿದರು.

‘ಕಾಂಗ್ರೆಸ್ ಸರ್ಕಾರ ಹಗಲು ದರೋಡೆ ಮಾಡುತ್ತಿದೆ. ಜನರನ್ನು ಸುಲಿಗೆಯ ಸರಕನ್ನಾಗಿ ಮಾಡಿಕೊಂಡಿದೆ. ಯಾವುದೇ ಕಾರಣಕ್ಕೂ ಒಂದು ನಯಾಪೈಸೆ ಕಟ್ಟಬೇಡಿ ಮತ್ತು ಯಾವುದೇ ಕಾರಣಕ್ಕೂ ಎರಡು ವರ್ಷ ಖಾತೆ ಮಾಡಿಸಿಕೊಳ್ಳಬೇಡಿ ಎಂದು ಬೆಂಗಳೂರಿನ ಜನರಿಗೆ ಹೇಳಲು ಬಯಸುತ್ತೇನೆ. ಇವರ ಮಾತಿಗೆ ಮರುಳಾಗಬೇಡಿ. ನಿಮ್ಮನ್ನು ಉಳಿಸುವ, ನಿಮ್ಮ ಹಿತ ಕಾಯುವ ಜವಾಬ್ದಾರಿ ನಮ್ಮದು’ ಎಂದರು.

ಮಕ್ಕಳ ವಚನ ಮೇಳಕ್ಕೆ ಆಹ್ವಾನ

ಬೆಂಗಳೂರು: ವಚನಜ್ಯೋತಿ ಬಳಗವು ನವೆಂಬರ್ 18ರಿಂದ 27ರವರೆಗೆ ನಾಗರಬಾವಿ ಸಮೀಪದ ಮಲ್ಲತ್ತಳ್ಳಿಯ ಕಲಾಗ್ರಾಮದಲ್ಲಿ ಮಕ್ಕಳ ವಚನ ಮೇಳವನ್ನು ಆಯೋಜಿಸಿದೆ.

ಶಿಶುವಿಹಾರ–ಮಾಂಟೆಸರಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳು ಮಕ್ಕಳ ವಚನ ಮೇಳದಲ್ಲಿ ಪಾಲ್ಗೊಳ್ಳಬಹುದು. ವಚನ ಗಾಯನ, ವಚನ ಪ್ರಬಂಧ, ವಚನ ವಿವೇಚನ, ವಚನ ಚಿತ್ರ, ವಚನ ನೃತ್ಯ, ವಚನ ಅಂತ್ಯಾಕ್ಷರಿ, ವಚನ ರಸಪ್ರಶ್ನೆ, ವಚನ ರೂಪಕ, ವಚನ ವೇಷಭೂಷಣ, ವಚನ ಕಥೆ, ವಚನ ಕಂಠಪಾಠ ಮತ್ತು ಸಮೂಹ ವಚನ ಗಾಯನ ಸ್ಪರ್ಧೆಗಳು ನಡೆಯಲಿವೆ. ಆಸಕ್ತ ವಿದ್ಯಾರ್ಥಿಗಳು ಅಕ್ಟೋಬರ್ 31ರೊಳಗೆ ನೋಂದಾಯಿಸಿಕೊಳ್ಳಬೇಕು. ಶಾಲೆಗಳಿಂದ ಅಥವಾ ವೈಯಕ್ತಿಕವಾಗಿಯೂ ಭಾಗವಹಿಸಬಹುದಾಗಿದೆ ಎಂದು ವಚನ ಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ತಿಳಿಸಿದ್ದಾರೆ. **ವಿವರಕ್ಕೆ:** 9845184367 ಅಥವಾ 9945964727.

ಪದಾಧಿಕಾರಿಗಳ ಆಯ್ಕೆ



ನವೀನ ತೀರ್ಥಹಳ್ಳಿ

ಬೆಂಗಳೂರು: ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ (ಇಂಡಿಯಾ) ಬೆಂಗಳೂರು ಕೇಂದ್ರದ ಅಧ್ಯಕ್ಷರಾಗಿ ನವೀನ ತೀರ್ಥಹಳ್ಳಿ, ಕಾರ್ಯದರ್ಶಿಯಾಗಿ ಎಸ್‌.ಬಿ. ಅನಿರುದ್ಧ್, ಖಜಾಂಚಿಯಾಗಿ ಆರ್‌.ವೆಂಕಟೇಶ್ ಬಾಬು ಆಯ್ಕೆಯಾಗಿದ್ದಾರೆ.



ಪಿಂಕ್ ಆಟೊರಿಕ್ಷಾ ಚಾಲಕಿಯರು ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿದರು

ಸ್ತನ ಕ್ಯಾನ್ಸರ್ ಜಾಗೃತಿಗೆ ಬೈಕ್ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ತನ ಕ್ಯಾನ್ಸರ್ ಜಾಗೃತಿ ಮಾಸ’ದ ಅಂಗವಾಗಿ ಯಶವಂತಪುರದ ಮಣಿಪಾಲ್ ಆಸ್ಪತ್ರೆಯು ನಗರದಲ್ಲಿ ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಹಾಗೂ ಚಿಕಿತ್ಸೆ ಬಗ್ಗೆ ಜಾಗೃತಿ ಮೂಡಿಸಿತು.

‘ರೈಡ್ ಫಾರ್ ಎ ಕಾಸ್, ರ‍್ಯಾಲಿ ಫಾರ್ ಎ ಕ್ಯೂರ್’ ಶೀರ್ಷಿಕೆಯಡಿ ಜಾಗೃತಿ ರ‍್ಯಾಲಿ ನಡೆಸಿತು. ಆಸ್ಪತ್ರೆಯ ಆವರಣದಿಂದ ಪ್ರಾರಂಭವಾದ ಈ ರ‍್ಯಾಲಿಯಲ್ಲಿ, ಮಹಿಳಾ ಬೈಕ್ ಸವಾರರು ಮತ್ತು ಪಿಂಕ್ ಆಟೊ ರಿಕ್ಷಾ ಚಾಲಕಿಯರು ಪಾಲ್ಗೊಂಡಿದ್ದರು. ‘ಮಹಿಳೆಯರು ನಿಯಮಿತವಾಗಿ ಸ್ತನ ತಪಾಸಣೆಗೆ ಆದ್ಯತೆ ನೀಡಬೇಕು’ ಎಂಬ ಮಾಹಿತಿ ಫಲಕಗಳನ್ನು ಪ್ರದರ್ಶಿಸಿದರು.

ಆಸ್ಪತ್ರೆಯಲ್ಲಿ ಸ್ತನ ಕ್ಯಾನ್ಸರ್ ಕ್ಲಿನಿಕ್ ಉದ್ಘಾಟಿಸಿ ಮಾತನಾಡಿದ, ಕ್ಯಾನ್ಸರ್ ತಜ್ಞ ಡಾ. ರಾಹುಲ್ ಎಸ್‌. ಕನಕ, ‘ಮಹಿಳೆಯರು ಸ್ತನ ಕ್ಯಾನ್ಸರ್ ಲಕ್ಷಣದ ಬಗ್ಗೆ ತಿಳಿದಲ್ಲಿ ಮಾತ್ರ ರೋಗ ಉಲ್ಬಣ ತಡೆ ಸಾಧ್ಯ. ಆದ್ದರಿಂದ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಹೆಚ್ಚಬೇಕು. ಮಹಿಳೆಯರು ಆರೋಗ್ಯ ಕಡೆಗಣಿಸದೆ, ರೋಗ ಲಕ್ಷಣಗಳು ಕಂಡುಬಂದಲ್ಲಿ ತಪಾಸಣೆ ಮಾಡಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಹಿರಿಯ ವೈದ್ಯಕೀಯ ಸಲಹೆಗಾರ ಡಾ. ನೀಲೇಶ್ ರೆಡ್ಡಿ, ‘ಇತ್ತೀಚೆಗೆ ಸ್ತನ ಕ್ಯಾನ್ಸರ್ ಕೇವಲ ವಯಸ್ಸಾದ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ಸಮಸ್ಯೆಯಾಗಿ ಉಳಿದಿಲ್ಲ. ಇದು ದೇಶದ ಯುವ ಪೀಳಿಗೆಯ ಮೇಲೆ ಪರಿಣಾಮ ಬೀರುತ್ತಿದೆ’ ಎಂದು ಹೇಳಿದರು.

‘ಆರ್‌ಎಸ್‌ಎಸ್ ಬರೀ ಮೆರವಣಿಗೆ ಮಾಡಲಿ’

ಬೆಂಗಳೂರು: ‘ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಸೇರಿದಂತೆ ಯಾವುದೇ ಸಂಘ ಸಂಸ್ಥೆಗಳು ಮೆರವಣಿಗೆ ಇಲ್ಲವೇ ಪ್ರತಿಭಟನೆ ನಡೆಸಲು ಅವಕಾಶ ನೀಡಬಹುದು. ದೊಣ್ಣೆ ಹಿಡಿದು ಪಥ ಸಂಚಲನ ನಡೆಸುವುದಕ್ಕೆ ಅನುಮತಿ ನೀಡಬಾರದು’ ಎಂದು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ ಒತ್ತಾಯಿಸಿದೆ.

‘ಸಾಂವಿಧಾನಿಕವಾಗಿ ಪಥ ಸಂಚಲನ ಮಾಡುವ ಅಧಿಕಾರ ಇರುವುದು ಪೊಲೀಸ್ ಹಾಗೂ ಇನ್ನಿತರ ರಕ್ಷಣಾ ಪಡೆಗಳಿಗೆ ಮಾತ್ರ. ಆರ್‌ಎಸ್‌ಎಸ್ ಮೆರವಣಿಗೆ ಮಾಡಲು ಬಯಸಿದರೆ ಅದಕ್ಕೆ ನಮ್ಮ ಯಾವುದೇ ತಕರಾರು ಇಲ್ಲ. ದೊಣ್ಣೆ ಹಿಡಿದೇ ಮೆರವಣಿಗೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದೇ ಇರುವುದರಿಂದ ಈ ನಡೆಯನ್ನು ಸಮಿತಿ ವಿರೋಧಿಸಲಿದೆ’ ಎಂದು ಗುರುಪ್ರಸಾದ್ ಕೆರಗೋಡು, ಇಂದೂಧರ ಹೊನ್ನಾಪುರ, ಮಾವಳ್ಳಿ ಶಂಕರ್, ವಿ.ನಾಗರಾಜು, ಎನ್‌.ಮುನಿಸ್ವಾಮಿ, ಎನ್‌.ವೆಂಕಟೇಶ್ ತಿಳಿಸಿದ್ದಾರೆ.

ನಿಧನ ವಾರ್ತೆ


ಜಿ.ಅಶ್ವತ್ಥನಾರಾಯಣ ಏಕಬೋಟೆ



ಬೆಂಗಳೂರು: ಮಹಾಲಕ್ಷ್ಮಿ ಬಡಾವಣೆ ನಿವಾಸಿ ಜಿ. ಅಶ್ವತ್ಥನಾರಾಯಣ ಏಕಬೋಟೆ (91) ಅವರು ಶನಿವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ನೀರಾವರಿ ಇಲಾಖೆ ಕಾರ್ಯದರ್ಶಿಯಾಗಿ ನಿವೃತ್ತಿ ನಂತರವೂ ಬಿಡಿಎ ಸಲಹೆಗಾರರಾಗಿ, ಗಾಂಧಿನಗರದ ಅನಂತಸ್ವಾಮಿ ಆಶ್ರಮದ ಟ್ರಸ್ಟಿ ಹಾಗೂ ಸ್ವಕುಳಸಾಳಿ ಸಮಾಜದ ಸಂಘದ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದ್ದರು.

ಕೆ.ರಾಜಣ್ಣ



ಬೆಂಗಳೂರು: ನಾಗರಭಾವಿ ಗ್ರಾಮದ ನಿವಾಸಿ ಕೆ.ರಾಜಣ್ಣ (79) ಅವರು ಶುಕ್ರವಾರ ನಿಧನರಾದರು. ಪತ್ನಿ ರಮಾದೇವಿ, ಇಬ್ಬರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ನಾಗರಭಾವಿ ರುದ್ರಭೂಮಿಯಲ್ಲಿ ನೆರವೇರಲಿದೆ. ಮಾಹಿತಿಗೆ 9880273313 ಸಂಪರ್ಕಿಸಬಹುದು.

ಪಾಲಿಕೆಗಳಿಂದ ₹3,427 ಕೋಟಿ ಆಸ್ತಿ ತೆರಿಗೆ?

ಜಿಬಿಎ ಮೊದಲ ಸಭೆಯಲ್ಲಿ ಐದು ನಗರ ಪಾಲಿಕೆಗಳ ಆಯವ್ಯಯಕ್ಕೆ ಸಮ್ಮತಿ: ಪ್ರಾರಂಭಿಕವಾಗಿ ₹613 ಕೋಟಿ ವಿತರಣೆ

● ಆರ್. ಮಂಜುನಾಥ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಐದು ನಗರ ಪಾಲಿಕೆಗಳಿಂದ ವಾರ್ಷಿಕವಾಗಿ ₹3,427 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಲು ಯೋಜಿಸಲಾಗಿದೆ.

ನಗರ ಪಾಲಿಕೆಗಳಿಗೆ ಆಯವ್ಯಯವನ್ನು ನಿಗದಿ ಮಾಡಿ, ಜಿಬಿಎ ಮೊದಲ ಸಭೆಯಲ್ಲಿ ಅದಕ್ಕೆ ಅನುಮೋದನೆಯನ್ನು ನೀಡಿದ್ದು, ಆಸ್ತಿ ತೆರಿಗೆಯ ಗುರಿಯನ್ನು ನೀಡಲಾಗಿದೆ.

ಪ್ರತಿ ನಗರ ಪಾಲಿಕೆಯು ಸ್ವತಂತ್ರ ಹಣ ಕಾಸು ಲೆಕ್ಕಪತ್ರಗಳನ್ನು ನಿರ್ವಹಿಸಬೇಕು, ಜಿಬಿಎ ಸೂಚಿಸಿದ ವಿಶಾಲ ಚೌಕಟ್ಟನ್ನು ಅನುಸರಿಸುವಾಗ ಸಂಪನ್ಮೂಲಗಳನ್ನು ಸ್ವಾಯತ್ತವಾಗಿ ನಿರ್ವಹಿಸುವುದು ಅಗತ್ಯವಾಗಿದೆ ಎಂದು ತಿಳಿಸಲಾಗಿದೆ.

ಐದು ನಗರ ಪಾಲಿಕೆಗಳಿಗೆ ₹613.60 ಕೋಟಿಯನ್ನು ಜಿಬಿಎಯಿಂದ ವಿತರಿಸಲಾಗಿದ್ದು, ಆ ಹಣವನ್ನು ತಮ್ಮ ಕಾರ್ಯನಿರ್ವಹಣೆ, ಅಗತ್ಯವಾದ ಸಾಂಸ್ಥಿಕ ರಚನೆ, ಆಡಳಿತಾತ್ಮಕ ಹಾಗೂ ಇತರೆ ವೆಚ್ಚಗಳಿಗೆ ಬಳಸಿಕೊಳ್ಳಬಹುದು ಎಂದು ಸೂಚಿಸಲಾಗಿದೆ. ಅಲ್ಲದೆ, ಐದು ನಗರ ಪಾಲಿಕೆಗಳಿಗೆ 2025ರ ಸೆಪ್ಟೆಂಬರ್‌ನಿಂದ 2026ರ ಮಾರ್ಚ್ ವರೆಗಿನ ಆಯವ್ಯಯವನ್ನು ಸಿದ್ಧಪಡಿಸಿ ಕೊಟ್ಟು, ಅದಕ್ಕೆ ಜಿಬಿಎ ಸಭೆಯಲ್ಲಿ ಅನುಮೋದನೆಯನ್ನೂ ನೀಡಲಾಗಿದೆ.

ಐದು ನಗರ ಪಾಲಿಕೆಗಳ ಬಜೆಟ್ ಅಂದಾಜು
(ಸೆಪ್ಟೆಂಬರ್ 2025ರಿಂದ ಮಾರ್ಚ್ 2025)

ನಗರ ಪಾಲಿಕೆ	ಸ್ವೀಕೃತಿ	ಪಾವತಿ	ಉಳಿಕೆ (₹ ಕೋಟಿಗಳಲ್ಲಿ)
ಕೇಂದ್ರ	1,478.35	1,477.22	1.14
ಪೂರ್ವ	1,766.00	1,764.42	1.58
ಪಶ್ಚಿಮ	1,710.58	1710.34	0.24
ಉತ್ತರ	1,599.58	1,598.52	1.06
ದಕ್ಷಿಣ	1,423.24	1,422.15	1.09
ಒಟ್ಟು	7,977.77	7,972.66	5.11

712 ಚದರ ಕಿ.ಮೀ; ಐದೂ ನಗರ ಪಾಲಿಕೆಗಳ ವ್ಯಾಪ್ತಿ

1.44 ಕೋಟಿ 2023ರಂತೆ ಜನಸಂಖ್ಯೆ

20,225 ಪ್ರತಿ ಕಿ.ಮೀಗೆ ಜನಸಾಂದ್ರತೆ

ಬಿಬಿಎಂಪಿ ಇದ್ದಾಗ ಮಂಡಿಸಿದ್ದ ಬಜೆಟ್ 2025–26
(ಪರಿಷ್ಕೃತ) (₹ ಕೋಟಿಗಳಲ್ಲಿ)

20,440.33	ಒಟ್ಟಾರೆ ಸ್ವೀಕೃತಿ
20,436.77	ಒಟ್ಟಾರೆ ವೆಚ್ಚ

ಕೌನ್ಸಿಲ್, ಸಾಮಾನ್ಯ ಆಡಳಿತ, ಕಂದಾಯ, ನಗರ ಯೋಜನೆ, ಸಾರ್ವಜನಿಕ ಕಾಮಗಾರಿ, ಘನತ್ಯಾಜ್ಯ ನಿರ್ವಹಣೆ, ಸಾರ್ವಜನಿಕ ಆರೋಗ್ಯ–ಸಾಮಾನ್ಯ, ಸಾರ್ವಜನಿಕ ಆರೋಗ್ಯ–ವೈದ್ಯಕೀಯ, ತೋಟಗಾರಿಕೆ, ನಗರ ಅರಣ್ಯೀಕರಣ, ಸಾರ್ವಜನಿಕ ಶಿಕ್ಷಣ, ಸಮಾಜ ಕಲ್ಯಾಣದ ಬಾಬ್ತಿನಲ್ಲಿ ಐದು ನಗರ ಪಾಲಿಕೆಗಳ ಬಜೆಟ್ ನಿಗದಿಪಡಿಸಲಾಗಿದೆ.

ಬಿಬಿಎಂಪಿಯಾಗಿದ್ದಾಗ 2025–26ನೇ ಸಾಲಿಗೆ ₹20,440.33 ಕೋಟಿ ಬಜೆಟ್ ಮಂಡಿಸಲಾಗಿತ್ತು. ಐದು ನಗರ ಪಾಲಿಕೆಗಳಾಗಿ ವಿಭಜನೆಯಾದ ಮೇಲೆ ಇವುಗಳ ಒಟ್ಟಾರೆ ಬಜೆಟ್ ಗಾತ್ರ ₹7,977.77 ಕೋಟಿ ಮಾತ್ರವಾಗಿದೆ. ಬೃಹತ್ ಯೋಜನೆಗಳು ಹಾಗೂ ಅಂತರ್ ನಗರ ಪಾಲಿಕೆಗಳ ಯೋಜನೆಗಳನ್ನು ಜಿಬಿಎ ನಿರ್ವಹಿಸುವುದರಿಂದ ಸರ್ಕಾರದ ₹7 ಸಾವಿರ ಕೋಟಿ ಅನುದಾನ, ಪ್ರಾಧಿಕಾರಕ್ಕೇ ಸಂದಾಯವಾಗಲಿದೆ. ಕೇಂದ್ರ ಸರ್ಕಾರದ ಅನುದಾನ ರಾಜ್ಯ ಸರ್ಕಾರದ ಖಾತೆಗೆ ವರ್ಗಾವಣೆಯಾದನಂತರ, ನಗರ ಪಾಲಿಕೆಗಳು ಪ್ರತ್ಯೇಕ ಖಾತೆ ತೆರೆದು ಬೇಡಿಕೆ ಸಲ್ಲಿಸಿದರೆ, ಸರ್ಕಾರದ ನಿರ್ಣಯದಂತೆ ಜಿಬಿಎ ವಿತರಿಸಲಿದೆ.

ತೆರಿಗೆ ಪಾಲಿಕೆಗಳಿಗೆ ಹೋಗುತ್ತಿಲ್ಲ

ನಾಗರಿಕರು ಪಾವತಿಸುತ್ತಿರುವ ಆಸ್ತಿ ತೆರಿಗೆ, ಉದ್ದಿಮೆ ತೆರಿಗೆ ಹಾಗೂ ಇತರ ಶುಲ್ಕಗಳು ಆಯಾ ನಗರ ಪಾಲಿಕೆಗಳ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಯಾಗುತ್ತಿಲ್ಲ. ಐದು ನಗರ ಪಾಲಿಕೆಗಳು ರಚನೆಯಾಗಿ ಒಂದೂವರೆ ತಿಂಗಳಾಗಿದ್ದರೂ ಅವುಗಳ ಸ್ವ-ಕಾರ್ಯಾಚರಣೆಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಜಿಬಿಎ ಅಧಿಕಾರಿಗಳು ಇನ್ನೂ ಮುಗಿಸಿಲ್ಲ. ಹೀಗಾಗಿ, ಅವರು ಹೊಸ ಟೆಂಡರ್ ಕರೆಯುವುದು ಸೇರಿದಂತೆ ಹೊಸ ಕಾಮಗಾರಿಯನ್ನೂ ನಡೆಸಲು ಸಾಧ್ಯವಾಗುತ್ತಿಲ್ಲ.

'ಆಸ್ತಿ ತೆರಿಗೆ ಹಿಂದಿನ ಬಿಬಿಎಂಪಿ ಖಾತೆಗೆ ಬರುತ್ತಿದೆ. ಅದನ್ನು ಜಿಬಿಎ ನಿರ್ವಹಿಸುತ್ತಿದ್ದು, ಆಯಾ ನಗರ ಪಾಲಿಕೆಗಳ ವ್ಯಾಪ್ತಿಯ ಹಣವನ್ನು 15 ದಿನಕ್ಕೊಮ್ಮೆ ಮ್ಯಾನ್ಯುಯಲ್ ಆಗಿ ವರ್ಗಾಯಿಸಲಾಗುತ್ತಿದೆ. ಕೆಲವೇ ದಿನಗಳಲ್ಲಿ ತೆರಿಗೆಗಳೆಲ್ಲವೂ ಆಯಾ ನಗರ ಪಾಲಿಕೆಗಳ ಖಾತೆಗಳಿಗೇ ಹೋಗುವಂತೆ ಮ್ಯಾಪಿಂಗ್ ಮಾಡಲಾಗುತ್ತದೆ' ಎಂದು ಜಿಬಿಎ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.



ಸುದ್ದಿ 2 ನಿಮಿಷ

'ಕುಕ್ಕೆ ದೇಗುಲ: ವೇತನ ಪರಿಷ್ಕರಿಸಿ'

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ 2018ರ ಏಪ್ರಿಲ್‌ನಿಂದ ಅನ್ವಯವಾಗುವಂತೆ ಆರನೇ ವೇತನ ಆಯೋಗದ ಶಿಫಾರಸಿಗೆ ಅನುಗುಣವಾಗಿ ವೇತನ ಪರಿಷ್ಕರಣೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ಮತ್ತು ಏಕಸದಸ್ಯ ನ್ಯಾಯಪೀಠದ ಆದೇಶ ಜಾರಿ ಮಾಡದಿರುವ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಕೆ.ಸಿ.ಉದಯ್ ಕುಮಾರ್ ಮತ್ತಿತರರು ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ವಿಜಯ್ ಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಕುಕ್ಕೆ ಸುಬ್ರಹ್ಮಣ್ಯ ದೇವಾಲಯದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ 2018ರಿಂದ ಅನ್ವಯವಾಗುವಂತೆ ಆರನೇ ವೇತನ ಆಯೋಗದ ಶಿಫಾರಸಿಗೆ ಅನುಗುಣವಾಗಿ ವೇತನ ಪರಿಷ್ಕರಣೆ ಮಾಡಬೇಕೆಂಬ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಮುಂದಿನ 8 ವಾರಗಳಲ್ಲಿ ಜಾರಿ ಮಾಡಬೇಕು' ಎಂದು ನಿರ್ದೇಶಿಸಿರುವ ನ್ಯಾಯಪೀಠ, ಸರ್ಕಾರದ ಮೇಲ್ಮನವಿ ವಜಾಗೊಳಿಸಿದೆ.

ಇದೇ ವೇಳೆ, 'ಈ ಆದೇಶವನ್ನು ಪಾಲಿಸದೇ ಇದ್ದಲ್ಲಿ ಪುನಃ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲು ಅವಕಾಶ ಇರುತ್ತದೆ' ಎಂದು ತಿಳಿಸಿರುವ ನ್ಯಾಯಪೀಠ, ಸಿಬ್ಬಂದಿ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯನ್ನೂ ವಿಲೇವಾರಿ ಮಾಡಿದೆ.



ತಿಮರೋಡಿ ಅರ್ಜಿ: ತನಿಖೆಗೆ ಹೈಕೋರ್ಟ್ ಮಧ್ಯಂತರ ತಡೆ

ಬೆಂಗಳೂರು: ಸೌಜನ್ಯ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಅನಧಿಕೃತವಾಗಿ ಶಸ್ತ್ರಾಸ್ತ್ರ ಇರಿಸಿಕೊಂಡಿದ್ದ ಆರೋಪದಡಿ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆಗೆ ಹೈಕೋರ್ಟ್ ತಡೆ ನೀಡಿದೆ.

'ನನ್ನ ವಿರುದ್ಧದ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ನೀಡಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ಆರ್.ಬಾಲಕೃಷ್ಣ ಅವರ ವಾದ ಆಲಿಸಿದ ನ್ಯಾಯಪೀಠ, ಬೆಳ್ತಂಗಡಿ ಠಾಣಾ ಪೊಲೀಸ್ ಮತ್ತು ಪ್ರಕರಣದ ದೂರುದಾರ ಎಸ್‌ಐಟಿ ಅಧಿಕಾರಿ ಸಿ.ಎ.ಸೈಮನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಮಹೇಶ್ ಶೆಟ್ಟಿ ತಿಮರೋಡಿ ಮನೆಯಲ್ಲಿ 2025ರ ಆಗಸ್ಟ್ 26ರಂದು ಶೋಧ ನಡೆಸಿದ್ದ ಎಸ್‌ಐಟಿ ಪೊಲೀಸರು, ಮನೆಯಲ್ಲಿ ಪರವಾನಗಿ ಇಲ್ಲದ ಏರ್ ಗನ್ ವಶಪಡಿಸಿಕೊಂಡು ಶಸ್ತ್ರಾಸ್ತ್ರ ಕಾಯ್ದೆ-1959ರ ಅಡಿಯಲ್ಲಿ ದೂರು ದಾಖಲಿಸಿದ್ದಾರೆ.

ಚಿಟಿಕೆ ಸುದ್ದಿ

ವಾಯುಭಾರ ಕುಸಿತ

ಚೆನ್ನೈ: 'ಬಂಗಾಳ ಕೊಲ್ಲಿಯ ಆಗ್ನೇಯ ಭಾಗದಲ್ಲಿ ಶನಿವಾರ ವಾಯುಭಾರ ಕುಸಿತವಾಗಿದ್ದು, ಅ.27ಕ್ಕೆ ಇದು ಚಂಡಮಾರುತವಾಗಿ ಪರಿವರ್ತನೆಯಾಗಲಿದೆ' ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಈ ಚಂಡಮಾರುತಕ್ಕೆ 'ಮೊಂಟಾ' ಎಂದು ಹೆಸರಿಡಬಹುದು ಎನ್ನಲಾಗಿದೆ.

'ಈ ಚಂಡಮಾರುತದ ಕಾರಣ ಅ.25ರಿಂದ ಅ.29ರ ಒಳಗೆ ತಮಿಳುನಾಡಿನ ಕೆಲವು ಭಾಗಗಳಲ್ಲಿ, ಆಂಧ್ರ ಪ್ರದೇಶದ ಕರಾವಳಿ ಭಾಗ ಮತ್ತು ಒಡಿಶಾದಲ್ಲಿ ಭಾರಿ ಮಳೆಯಾಗಲಿದೆ. ಈಶಾನ್ಯ ಮಳೆ ಮಾರುತಗಳು ಆರಂಭವಾದ ಬಳಿಕ ಇದೇ ಮೊದಲ ಬಾರಿಗೆ ಬಂಗಾಳ ಕೊಲ್ಲಿಯಲ್ಲಿ ಚಂಡಮಾರುತವು ಸೃಷ್ಟಿಯಾಗಿದೆ' ಎಂದಿದೆ.

'ಸಂವಿಧಾನ ಓದಿನಿಂದ ಉತ್ತಮ ಭವಿಷ್ಯ'

ಬೆಂಗಳೂರು: 'ಸಂವಿಧಾನ ಓದು ಅಭಿಯಾನದಲ್ಲಿ ಭಾಗಿಯಾಗುವುದು ದೇಶದ ಭವಿಷ್ಯಕ್ಕೆ ಪೂರಕವಾಗಿ ಕೆಲಸ ಮಾಡಿದಂತೆ' ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಅವರು ಹೇಳಿದರು.

ಸಂವಿಧಾನ ಓದು ಅಭಿಯಾನದ ಭಾಗವಾಗಿ ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಶನಿವಾರ ರಾಜ್ಯಮಟ್ಟದ ಪ್ರಬಂಧ ರಚನೆ ಸ್ಪರ್ಧೆ ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಭಾಗಿಯಾಗಿದ್ದ 300 ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

'ಈ ಪ್ರಬಂಧ ಸ್ಪರ್ಧೆಯಲ್ಲಿ ಭಾಗಿಯಾಗಿರುವುದರಿಂದ ನಿಮ್ಮ ಭವಿಷ್ಯ ರೂಪಿಸಿಕೊಳ್ಳುವಲ್ಲಿಯೂ ಇದು ನೆರವಾಗುತ್ತದೆ. ಇಲ್ಲಿ ಪ್ರಬಂಧ ಬರೆದವರಿಗೆಲ್ಲಾ ಪ್ರಶಸ್ತಿ ಬರುವುದಿಲ್ಲ. ಹಾಗೆಂದು ಪ್ರಶಸ್ತಿ ಪಡೆದವರಷ್ಟೇ ಮೇಧಾವಿಗಳು ಮತ್ತು ಉಳಿದವರು ದಡ್ಡರು ಎಂದು ಭಾವಿಸಬೇಕಿಲ್ಲ. ಎಲ್ಲರೂ ಅರ್ಹರು' ಎಂದು ಅವರು ಹೇಳಿದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿಕೆ

'ಬಿಜೆಪಿಗೂ ಹಬ್ಬಿದ ಕಾಲೆಳೆಯುವ ಸಾಂಕ್ರಾಮಿಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ಅಧಿಕೃತ ಅಭ್ಯರ್ಥಿಗಳನ್ನು ಟಿಕೆಟ್ ವಂಚಿತ ಆಕಾಂಕ್ಷಿಗಳು ಕಾಲೆಳೆಯುವ ಸಾಂಕ್ರಾಮಿಕ ಬಿಜೆಪಿಗೂ ಹರಡಿರುವುದು ವಿಷಾದಕರ ಸಂಗತಿ. ಇಂತಹ ನಡವಳಿಕೆ ತೊಲಗಬೇಕು ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬಿಜೆಪಿ ಪ್ರಮುಖರ 'ಸಂಕಲ್ಪ' ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಟಿಕೆಟ್ ವಂಚಿತ ಅಭ್ಯರ್ಥಿಗಳು ಪಕ್ಷದ ಅಧಿಕೃತ ಅಭ್ಯರ್ಥಿಗಳನ್ನು ಸೋಲಿಸುವ ಸಂಸ್ಕೃತಿ ಕಾಂಗ್ರೆಸ್‌ನಲ್ಲಿದೆ. ಬಿಜೆಪಿ ಶಿಸ್ತು, ಮೌಲ್ಯಗಳಿಗೆ ಹೆಸರಾದ ಪಕ್ಷ. ರಾಷ್ಟ್ರೀಯತೆ, ದೇಶಾಭಿಮಾನವೇ ಧ್ಯೇಯವಾಗಿದೆ. ಬಿಜೆಪಿ ಅಧಿಕೃತ ಅಭ್ಯರ್ಥಿಗಳನ್ನು ಬಿಜೆಪಿಗರೇ ಸೋಲಿಸುವ ಕುತಂತ್ರಗಳು ಇತ್ತೀಚೆಗೆ ನಡೆಯುತ್ತಿವೆ. ಇಂತಹ ಅಸಹನೀಯ ಬೆಳವಣಿಗೆಗಳನ್ನು ತಡೆಯಲು ಅಗತ್ಯ ಕ್ರಮ ವಹಿಸಬೇಕು. ಇಲ್ಲದಿದ್ದರೆ ಪಕ್ಷಕ್ಕೆ ಬಹುದೊಡ್ಡ ನಷ್ಟವಾಗುತ್ತದೆ ಎಂದರು.



ಕೆಂಪೇಗೌಡರ ಬೆಂಗಳೂರನ್ನು ಐದು ಭಾಗ ಮಾಡಿದ ಕಾಂಗ್ರೆಸ್ ಜನರ ಮನಸ್ಸಿನಿಂದ ದೂರವಾಗಿದೆ. ಆದರೂ, ಅವರ ಆಡಳಿತವನ್ನು ಇನ್ನೂ ಎರಡೂವರೆ ವರ್ಷ ಸಹಿಸಿಕೊಳ್ಳುವುದು ಅನಿವಾರ್ಯ

ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯಸಚೇತಕ ಎನ್. ರವಿಕುಮಾರ್ ಮಾತನಾಡಿ, 'ಕಂದಾಯ ಇಲಾಖೆಯ ಇ-ಖಾತಾ, ಬಿ-ಖಾತಾ, ಎ-ಖಾತಾ ಸೇರಿದಂತೆ ಎಲ್ಲಾ ಮೇಳಗಳು ಭ್ರಷ್ಟಾಚಾರದ ಮೂಲಗಳಾಗಿವೆ. ನಗರದ ರಸ್ತೆ ಗುಂಡಿಗಳನ್ನು ಮುಚ್ಚಲಾಗದ ಸರ್ಕಾರದಿಂದ ರಾಜ್ಯದ ಜನತೆ ಏನನ್ನೂ ನಿರೀಕ್ಷಿಸಲಾಗದು' ಎಂದು ಟೀಕಿಸಿದರು.

ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್.ಸಿ. ತಮ್ಮೇಶ್ ಗೌಡ, ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಹರೀಶ್, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಪ್ರಮೀಳಾ ನಾಯ್ಡು, ಬ್ಯಾಟರಾಯನಪುರ ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ಹನುಮಂತಗೌಡ, ನಗರ ಮಂಡಲ ಬಿಜೆಪಿ ಅಧ್ಯಕ್ಷ ಕೃಷ್ಣಮೂರ್ತಿ, ಬಿಜೆಪಿ ಮುಖಂಡ ಪಿ.ಕೆ.ರಾಜಗೋಪಾಲ್, ಬಿಬಿಎಂಪಿ ಮಾಜಿ ಸದಸ್ಯೆ ಕುಸುಮ ಮಂಜುನಾಥ್, ಬೇಗೂರು ಮಹೇಶ್, ಬಿ.ಎಸ್.ಅನಿಲ್ ಕುಮಾರ್ ಇದ್ದರು.

'ಬೆಳೆಸಿದವರು ಯಾರೆಂದು ಛಲವಾದಿ ಹೇಳಲಿ'



ರಮೇಶ್ ಬಾಬು

'ತಮ್ಮನ್ನು ರಾಜಕೀಯವಾಗಿ ಬೆಳೆಸಿದ್ದು ಯಾರು ಎಂಬುದನ್ನು ಛಲವಾದಿ ನಾರಾಯಣ ಸ್ವಾಮಿ ಹೇಳಬೇಕು' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ರಮೇಶ್ ಬಾಬು, 'ಅವರು ಮಲ್ಲಿಕಾರ್ಜುನ ಖರ್ಗೆಯವರಿಂದ ಬೆಳೆದರೋ, ಬೇರೆಯವರಿಂದ ಬೆಳೆದರೋ ಎಂದು ತಿಳಿಸಬೇಕು' ಎಂದರು.

'ಆರ್‌ಎಸ್‌ಎಸ್ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗೆ ಪತ್ರ ಬರೆದ ವಿಚಾರ ರಾಜ್ಯದಲ್ಲಿ ಅನೇಕ ಚರ್ಚೆಗಳಿಗೆ ಅವಕಾಶ ಮಾಡಿಕೊಟ್ಟಿದೆ. ಆರೋಗ್ಯಕರ ಚರ್ಚೆಗೆ ಕಾಂಗ್ರೆಸ್‌ನ ವಿರೋಧ ಇಲ್ಲ. ಆದರೆ, ವ್ಯಕ್ತಿಗತ ಟೀಕೆ, ತೇಜೋವಧೆ ಮಾಡಲಾಗುತ್ತಿದೆ. ಇದರ ಮುಂದುವರಿದ ಭಾಗವಾಗಿ ಛಲವಾದಿ ನಾರಾಯಣ ಸ್ವಾಮಿ ಅವರು ಪ್ರಿಯಾಂಕ್ ಖರ್ಗೆ ಅವರ ಬಗ್ಗೆ ಮಾತನಾಡಿದ್ದಾರೆ' ಎಂದರು.

'ಪ್ರಿಯಾಂಕ್ ಖರ್ಗೆ ಅಥವಾ ಮಲ್ಲಿಕಾರ್ಜುನ ಖರ್ಗೆ ಅವರು ಯಾವುದಾದರೂ ದಲಿತ ನಾಯಕರನ್ನು ಬೆಳೆಸಿದ್ದಾರೆಯೇ ಎಂದು ಛಲವಾದಿ ನಾರಾಯಣ ಸ್ವಾಮಿ ಪ್ರಶ್ನೆ ಕೇಳಿದ್ದಾರೆ. ಯಲಹಂಕದಲ್ಲಿ ಸೈಕಲ್ ತುಳಿದುಕೊಂಡಿದ್ದ ಅವರಿಗೆ ರಾಜಕೀಯವಾಗಿ ಆಶ್ರಯ ಕೊಟ್ಟವರು ಯಾರು ಎಂಬುದನ್ನು ಮೊದಲು ಹೇಳಲಿ' ಎಂದರು.

'ಸಹಬಾಳ್ವೆಯಲ್ಲಿ ದಕ್ಷಿಣ ಕನ್ನಡ ಮಾದರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಿಡಿಗೇಡಿಗಳು ಎಲ್ಲಾ ಧರ್ಮದಲ್ಲಿದ್ದರೂ ಸಹಬಾಳ್ವೆ, ದಾನದ ವಿಚಾರದಲ್ಲಿ ದಕ್ಷಿಣ ಕನ್ನಡ ಇಡೀ ದೇಶಕ್ಕೆ ಮಾದರಿಯಾಗಿದೆ' ಎಂದು ಬಾರ್ಕೂರು ಸಂಸ್ಥಾನದ ವಿಶ್ವ ಸಂತೋಷ ಭಾರತಿ ಸ್ವಾಮೀಜಿ ಹೇಳಿದರು.

ದಕ್ಷಿಣ ಕನ್ನಡಿಗರ ಸಂಘ ಶನಿವಾರ ನಗರದ ಕನ್ನಡ ಭವನದಲ್ಲಿ ಆಯೋಜಿಸಿದ್ದ ಕರಾವಳಿ ರತ್ನ ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

'ನಿಮ್ಮನ್ನು ನೀವು ಮೊದಲು ಪ್ರೀತಿಸಿ, ನಿಮ್ಮ ಹೃದಯವನ್ನು ಸ್ವಚ್ಛವಾಗಿಟ್ಟುಕೊಳ್ಳಿ ಎಂದು ಎಲ್ಲಾ ಧರ್ಮಗಳು ಹೇಳುತ್ತವೆ. ಮಚ್ಚು ಹಿಡಿದು ಫೋಟೊ ಹಾಕಿಸಿಕೊಂಡು ಯಾವುದೇ ಧರ್ಮ ಬೆಂಬಲಿಸಿ ಎಂದು ಹೇಳುವವರನ್ನು ಬೆಂಬಲಿಸುವುದು ಕ್ರೂರತೆ ಬೆಂಬಲಿಸಿದ ಹಾಗೆ' ಎಂದು ಹೇಳಿದರು.

'ಧರ್ಮ, ಜಾತಿ ಎನ್ನುವುದಕ್ಕಿಂತ ಮಾನವ ಸೇವೆಯೇ ದೊಡ್ಡದು. ಇಂತಹ ಮಾದರಿಯನ್ನು ದಕ್ಷಿಣ ಕನ್ನಡ ತೋರಿಸಿದೆ. ತುಳು ಭಾಷೆ ಕನ್ನಡಕ್ಕಿಂತ ಪುರಾತನವಾದದ್ದು ಎನ್ನುವುದನ್ನು ಸಂಶೋಧನೆಗಳೇ ಹೇಳಿವೆ. ಅದೇ ರೀತಿ ಯಕ್ಷಗಾನದಿಂದ ಜನರ ನಡೆ, ನುಡಿ, ಸಂಸ್ಕೃತಿಯಲ್ಲೂ ಬದಲಾವಣೆಯಾಗಿ ಕರಾವಳಿಯವರಿಗೆ ಗೌರವವೂ ದೊರೆತಿದೆ' ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಮಾತನಾಡಿ, 'ದಕ್ಷಿಣ ಕನ್ನಡದವರು ಸಿನಿಮಾ, ಕಲೆ, ಸಂಗೀತ, ಬ್ಯಾಂಕಿಂಗ್, ಉದ್ಯಮ ಸಹಿತ ಹಲವು ಕ್ಷೇತ್ರಗಳಲ್ಲಿ ಗುರುತಿಸಿಕೊಂಡವರು. ಯಕ್ಷಗಾನದಿಂದಲೂ ಈ ಭಾಗಕ್ಕೆ ಗೌರವ ಬಂದಿದೆ. ಹೊಸ ತಲೆಮಾರಿನವರು ಈ ಹಿರಿಮೆಯನ್ನು ಮುಂದುವರೆಸಿಕೊಂಡು ಹೋಗಬೇಕು' ಎಂದು ಹೇಳಿದರು.

ನಾಲ್ವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಘದ ಅಧ್ಯಕ್ಷ ಡಾ.ಕೆ. ಸಿ.ಬಲ್ಲಾಳ್ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ತಜ್ಞ ಡಾ.ಕೆ.ಪಿ.ಪುತ್ತೂರಾಯ ಅವರಿಂದ ವಿನೋದ ವಿಚಾರ ನಡೆಯಿತು.



'ಕರಾವಳಿ ರತ್ನ' ಪ್ರಶಸ್ತಿಯನ್ನು ಕುವೈತ್ ಉದ್ಯಮಿ ನಕ್ರೆ ಸತೀಶಚಂದ್ರ ಶೆಟ್ಟಿ, ಬ್ಯಾರೀಸ್ ಗ್ರೂಪ್ ಅಧ್ಯಕ್ಷ ಸಯ್ಯದ್ ಮೊಹಮ್ಮದ್ ಬ್ಯಾರಿ, ಸೌಂದರ್ಯ ಗ್ರೂಪ್ ಆಫ್ ಎಜುಕೇಶನಲ್ ಇನ್‌ಸ್ಟಿಟ್ಯೂಟ್ ಬೆಂಗಳೂರು ಅಧ್ಯಕ್ಷ ಸೌಂದರ್ಯ ಮಂಜಪ್ಪ, ಉದ್ಯಮಿ ಎಲಿಯಾಸ್ ಸಾಂಕ್ಟಿಸ್ ಅವರಿಗೆ ಪ್ರದಾನ ಮಾಡಲಾಯಿತು
ಪ್ರಜಾವಾಣಿ ಚಿತ್ರ

ಸಂಘಕ್ಕೆ ಉಚಿತ ಜಾಗ

ದಕ್ಷಿಣ ಕನ್ನಡಿಗರ ಸಂಘಕ್ಕೆ ಬೆಂಗಳೂರಿನಲ್ಲಿ ಸ್ವಂತ ಕಟ್ಟಡ ನಿರ್ಮಿಸಲು 10 ಸಾವಿರ ಚದರ ಅಡಿ ಜಾಗವನ್ನು ಉಚಿತವಾಗಿ ನೀಡುವುದಾಗಿ ಉದ್ಯಮಿ ಸಯ್ಯದ್ ಮೊಹಮ್ಮದ್ ಬ್ಯಾರಿ ತಿಳಿಸಿದರು.

ಸಹಕಾರ ಸಂಘ ಕಾಯ್ದೆ: ತಿದ್ದುಪಡಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಹಕಾರ ಸಂಘಗಳ (ಕೆಸಿಎಸ್) ಕಾಯ್ದೆ–1959 ಮತ್ತು 1960ರ ನಿಯಮಗಳಲ್ಲಿನ ಹಲವು ನ್ಯೂನತೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, 'ಕಾಯ್ದೆಯನ್ನು ಕೂಲಂಕಶ ಪರಿಶೀಲನೆಗೆ ಒಳಪಡಿಸಿ ತುರ್ತಾಗಿ ಸಮಗ್ರ ತಿದ್ದುಪಡಿಗೆ ಒಳಪಡಿಸುವ ಅಗತ್ಯವಿದೆ' ಎಂದು ಆದೇಶಿಸಿದೆ.

ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರದ ಶಂಕರ್ ಜಿ.ಭಟ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಧಾರವಾಡ ಪೀಠದಲ್ಲಿ ವಿಚಾರಣೆ ನಡೆಸಿ ಕಳೆದ ತಿಂಗಳು ವಜಾಗೊಳಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಕಾಯ್ದೆ ಜಾರಿಯಾಗಿ ದಶಕಗಳೇ ಕಳೆದಿದ್ದು, ಹಲವು ತಿದ್ದುಪಡಿ ಕಂಡಿದೆ. ಆದರೆ ಅದರಲ್ಲಿ ಇನ್ನೂ ಸಾಕಷ್ಟು ಅಸ್ಪಷ್ಟತೆಗಳಿದ್ದು ಅವುಗಳನ್ನು ಸರಿಪಡಿಸಬೇಕಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ಕಾಯ್ದೆಯ ಅಡಿಯಲ್ಲಿ ಬರುವ ಸದಸ್ಯತ್ವದ ಹಕ್ಕುಗಳು, ಅನರ್ಹತೆ, ಮತದಾರರ ಪಟ್ಟಿ ಸಿದ್ಧಪಡಿಸುವುದು, ಕಾಲಕಾಲಕ್ಕೆ ಚುನಾವಣೆ ನಡೆಸುವುದು, ಆಡಳಿತಾಧಿಕಾರಿ ನೇಮಕಾತಿಗೆ ಸಂಬಂಧಿಸಿದ ಹಲವು ನಿಯಮಗಳಲ್ಲಿ ಸಂಘರ್ಷದ ಅಂಶಗಳಿವೆ. ತಾರ್ಕಿಕ ರೀತಿಯಲ್ಲಿ ಕೆಸಿಎಸ್ ಕಾನೂನಿಗೆ ಸಮಗ್ರ ತಿದ್ದುಪಡಿ ತರುವ ಕೆಲಸ ಜರೂರಾಗಿ ಆಗಬೇಕಿದೆ' ಎಂದು ನ್ಯಾಯಪೀಠ ಹೇಳಿದೆ.

'ಸಮಕಾಲೀನ ಅಗತ್ಯಗಳನ್ನು ಪರಿಹರಿಸಲು ಕಂಪನಿ ಕಾಯ್ದೆಯನ್ನು ಸಮಗ್ರವಾಗಿ ಪರಿಷ್ಕರಿಸಿದಂತೆಯೇ, ಕಲಂ 43 ಬಿ ಅಡಿಯಲ್ಲಿ ಸಹಕಾರಿ ಸಂಸ್ಥೆಗಳ ಸ್ವಾಯತ್ತತೆಯನ್ನು ಸಾಂವಿಧಾನಿಕ ತತ್ವಗಳೊಂದಿಗೆ ದಕ್ಷತೆ, ಪಾರದರ್ಶಕತೆ ಮತ್ತು ಹೊಂದಾಣಿಕೆಯನ್ನು ಖಾತ್ರಿಪಡಿಸಿಕೊಳ್ಳಲು ಆಧುನಿಕ ಕಾಲಘಟ್ಟಕ್ಕೆ ತಕ್ಕಂತೆ ತಿದ್ದುಪಡಿ ಮಾಡಬೇಕು. ಇಲ್ಲವಾದಲ್ಲಿ ಸುಧಾರಣೆ ಶೂನ್ಯವಾಗಿ ವ್ಯರ್ಥ ಮೊಕದ್ದಮೆಗಳ ದಾವೆ ಸಂಘರ್ಷ ನಡೆಯುತ್ತದೆ. ಸದಸ್ಯರ ಸಬಲೀಕರಣದ ನಿಜವಾದ ಉದ್ದೇಶ ವಿಫಲವಾಗುತ್ತದೆ' ಎಂದು ಆದೇಶದಲ್ಲಿ ವಿವರಿಸಿದೆ.

'1959ರ ಕೆಸಿಎಸ್ ಕಾಯ್ದೆ ಮತ್ತು 1960ರ ಕೆಸಿಎಸ್ ನಿಯಮಗಳನ್ನು ದಶಕಗಳಿಂದಲೂ ಒಂದೊಂದೇ ತಿದ್ದುಪಡಿಗಳಿಗೆ ಒಳಪಡಿಸಲಾಗಿದೆ. ದುರದೃಷ್ಟವಶಾತ್, ಅಂತಹ ತಿದ್ದುಪಡಿಗಳನ್ನು ಮಾಡುವಾಗ, ಅಸ್ತಿತ್ವದಲ್ಲಿರುವ ನಿಬಂಧನೆಗಳ ಮೇಲಿನ ಪರಸ್ಪರ ಕ್ರಿಯೆ ಮತ್ತು ಅದರಿಂದಾಗುವ ಅಡ್ಡ ಪರಿಣಾಮಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಪರಿಣಾಮ ಈ ಕಾನೂನು ಆಧುನಿಕ, ಸಾಮಾಜಿಕ, ಆರ್ಥಿಕ ಪರಿಸರಕ್ಕೆ ಹೊಂದಿಕೆಯಾಗದ ಸಂಘರ್ಷಯುಕ್ತ ನಿಬಂಧನೆಗಳ ತೇಪೆ ಕೆಲಸದಂತಾಗಿದೆ' ಎಂದು ಹೇಳಿದೆ.

ಈ ಆದೇಶದ ಪ್ರತಿಯನ್ನು ಕರ್ನಾಟಕ ರಾಜ್ಯ ಕಾನೂನು ಆಯೋಗದ ಅಧ್ಯಕ್ಷರಿಗೆ ಕಳುಹಿಸಲು ಮತ್ತು ಅವರ ಅಭಿಪ್ರಾಯ ಹಾಗೂ ಶಿಫಾರಸುಗಳನ್ನು ಪರಿಗಣಿಸಲು ವಿನಂತಿಸುವಂತೆ ಹೈಕೋರ್ಟ್‌ನ ನ್ಯಾಯಾಂಗ ರಿಜಿಸ್ಟ್ರಾರ್ ಅವರಿಗೆ ನ್ಯಾಯಪೀಠ ನಿರ್ದೇಶಿಸಿದೆ.

ಆರ್‌ಎಸ್‌ಎಸ್‌ಗೆ ವಿದೇಶಿ ದೇಣಿಗೆ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೂರು ವರ್ಷಗಳನ್ನು ಪೂರೈಸಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ (ಆರ್‌ಎಸ್‌ಎಸ್) ಬರುವ ವಿದೇಶಿ ದೇಣಿಗೆ, ಗುಪ್ತ ನಿಧಿಗಳ ಬಗ್ಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ತನಿಖೆ ನಡೆಸಬೇಕು' ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ.ರಾಮಚಂದ್ರಪ್ಪ ಆಗ್ರಹಿಸಿದರು.

'ಯಾವುದೇ ಸಂಘಟನೆಗಳು ಪ್ರತಿಭಟನೆ, ಹೋರಾಟ, ಮೆರವಣಿಗೆ, ಪಥಸಂಚಲನ, ಕಾರ್ಯಕ್ರಮ, ಪ್ರಾರ್ಥನೆಗಳನ್ನು ಶಾಲೆಗಳು, ರಸ್ತೆಗಳು, ಸರ್ಕಾರಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಾಡಬೇಕಾಗಿದ್ದಲ್ಲಿ ಸಂವಿಧಾನ ಬದ್ಧವಾಗಿ ನೋಂದಣಿ ಆಗಿರಬೇಕು ಅಥವಾ ಸರ್ಕಾರದ ಅನುಮತಿ ಪಡೆದುಕೊಳ್ಳಬೇಕು. ಸಂಘಟನೆಗಳ ಮುಖ್ಯಸ್ಥರ ವಿವರ, ಕಾರ್ಯಕ್ರಮದ ಉದ್ದೇಶದ ಸ್ಪಷ್ಟತೆಗಳನ್ನು ಕಡ್ಡಾಯಗೊಳಿಸಿ ಕಾನೂನು ರಚಿಸಬೇಕು' ಎಂದು ಸುದ್ದಿಗೋಷ್ಠಿಯಲ್ಲಿ ಸರ್ಕಾರವನ್ನು ಒತ್ತಾಯಿಸಿದರು.

'ಮುಂದಿನ ದಿನಗಳಲ್ಲಿ ನಾವೂ ಜಿಲ್ಲೆ ಮತ್ತು ಗ್ರಾಮಗಳಲ್ಲಿ ಪಥಸಂಚಲನ ಮಾಡುತ್ತೇವೆ. ಆರ್‌ಎಸ್‌ಎಸ್‌ನವರು ದೊಣ್ಣೆ ಹಿಡಿದುಕೊಂಡಿರುತ್ತಾರೆ. ಶಕ್ತಿ ದೇವತೆಗಳನ್ನು ಪೂಜಿಸುವ ಶೂದ್ರರು ಏನು ಹಿಡಿದುಕೊಳ್ಳಬೇಕು ಎಂಬುದನ್ನು ತೋರಿಸುತ್ತೇವೆ. ನಾವು ಸಭೆ, ಮೆರವಣಿಗೆ, ಪ್ರತಿಭಟನೆ ಮಾಡಿದರೆ ಪೊಲೀಸರು ಬಂಧಿಸಿ ಪ್ರಕರಣ ದಾಖಲಿಸುತ್ತಾರೆ. ಆದರೆ, ಆರ್‌ಎಸ್‌ಎಸ್‌ಗೆ ಯಾವುದೇ ಅಡಚಣೆ ಇಲ್ಲದೇ ಪಥಸಂಚಲನಕ್ಕೆ ಅವಕಾಶ ಕೊಡಲಾಗುತ್ತದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾವಳ್ಳಿ ಶಂಕರ್ ಮಾತನಾಡಿ, 'ಆರ್‌ಎಸ್‌ಎಸ್ ನೋಂದಣಿಯಾಗಿದೆಯಾ? ಅದಕ್ಕೆ ಬರುವ ಆದಾಯದ ಮೂಲದ ಬಗ್ಗೆ ಕೆಲವು ಪ್ರಶ್ನೆಗಳನ್ನು ಎತ್ತಿದ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನೇ ಖಳನಾಯಕ ಎಂಬಂತೆ ಬಿಂಬಿಸಲಾಗುತ್ತಿದೆ. ಅವರು ಕೇಳಿರುವುದರಲ್ಲಿ ಏನು ತಪ್ಪಿದೆ? ಆರ್‌ಎಸ್‌ಎಸ್ ಯಾವುದೇ ಕಾರ್ಯಕ್ರಮ ಮಾಡಿದರೂ ಕಾನೂನು ಬದ್ಧವಾಗಿ ಮಾಡಬೇಕು ಎಂಬುದು ನಮ್ಮ ಆಶಯ' ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ಒಕ್ಕೂಟದ ಸಂಚಾಲಕ ಎಣ್ಣೆಗೆರೆ ಆರ್.ವೆಂಕಟರಾಮಯ್ಯ, ಅನಂತನಾಯ್ಕ್, ಸಂಚಾಲನ ಸಮಿತಿ ಸದಸ್ಯ ಜಿ.ಡಿ.ಗೋಪಾಲ್, ಕೆ.ವೆಂಕಟಸುಬ್ಬರಾಜು, ದಲಿತ ಕ್ರಿಶ್ಚಿಯನ್ ಫೆಡರೇಷನ್ ಅಧ್ಯಕ್ಷ ಮನೋಹರ್ ಚಂದ್ರ ಪ್ರಸಾದ್, ಮಡಿವಾಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಿ.ನಂಜಪ್ಪ ಉಪಸ್ಥಿತರಿದ್ದರು.

ನಗರದಲ್ಲಿ ಇಂದು


ಉದ್ಯಾನದಲ್ಲಿ ಉದಯರಾಗ: ಆಶಿಶ್ ದೇವಾಡಿಗ ಅವರಿಂದ ಸ್ಯಾಕ್ಸೋಫೋನ್ ವಾದನ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್, ಕಬ್ಬನ್ ಪಾರ್ಕ್, ಬೆಳಿಗ್ಗೆ 6.45

ನಗೆ ಹಬ್ಬ: ಎಂ.ಎಸ್. ನರಸಿಂಹಮೂರ್ತಿ ಅವರ 76ನೇ ಜನ್ಮದಿನ ಸಮಾರಂಭ ಹಾಗೂ ಪುಸ್ತಕ ಬಿಡುಗಡೆ, ಆಯೋಜನೆ: ಜಾಗೃತಿ ಟ್ರಸ್ಟ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9.30

ನೂರು ಹೆಜ್ಜೆ ನೂರಾರು ಮಾತು: ಕನ್ನಡದಲ್ಲಿ ರಾಷ್ಟ್ರೀಯ ಸಾಹಿತ್ಯದ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಸುಧೀರ್, ಉಪಸ್ಥಿತಿ: ವಿ. ನಾಗರಾಜ್, ರಘುನಂದನ್ ಭಟ್ ನರೂರ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10

'ಫನಾ ಕ್ರಿಕೆಟ್ ಪಂದ್ಯಾವಳಿ' ಹಾಗೂ ಉಚಿತ ಆರೋಗ್ಯ ಶಿಬಿರ ಉದ್ಘಾಟನೆ: ಶೋಭಾ ಕರಂದ್ಲಾಜೆ, ತೇಜಸ್ವಿ ಸೂರ್ಯ, ಪ್ರಿಯಕೃಷ್ಣ, ಆಯೋಜನೆ: ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್‌ಹೋಮ್ಸ್ ಅಸೋಸಿಯೇಷನ್ (ಫನಾ), ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ಬಸವೇಶ್ವರನಗರ, ಬೆಳಿಗ್ಗೆ 10

ಪ್ರತಿಭಾ ಪುರಸ್ಕಾರ ಹಾಗೂ ಪುಸ್ತಕಗಳ ಬಿಡುಗಡೆ: ಸಾನ್ನಿಧ್ಯ: ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಉದ್ಘಾಟನೆ: ಎಂ.ವೀರಪ್ಪಮೊಯಿಲಿ, ಅಧ್ಯಕ್ಷತೆ: ಎಸ್.ಎಲ್. ಗಂಗಾಧರಪ್ಪ, ಪುಸ್ತಕಗಳ ಬಿಡುಗಡೆ: ಶಿವರಾಜ ತಂಗಡಗಿ, ವಿ. ದೇವಪ್ಪ, ಎ.ಸಿ. ಶ್ರೀನಿವಾಸ್, ಎಲ್.ಎನ್. ಮುಕುಂದರಾಜ್, ಆಯೋಜನೆ: ಕರ್ನಾಟಕ ರಾಜ್ಯ ಭೋವಿ (ವಡ್ಡರ) ಸಂಘ, ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 10




ಅರ್ಚನಾ ಜೋಯಿಸ್

'ಸಿನಿಮಾ ಮತ್ತು ಸಮಾಜ' ವಿಚಾರ ಸಂಕಿರಣ: ಅತಿಥಿಗಳು: ಪ್ರಶಾಂತ್ ಚಂದ್ರ, ಅರ್ಚನಾ ಜೋಯಿಸ್, ಆರ್. ಡಿ. ನಾಗಾರ್ಜುನ, ಆಯೋಜನೆ: ಮಂಥನ ಬೆಂಗಳೂರು, ರಸಗ್ರಹಣ, ಸ್ಥಳ: ರಾಷ್ಟ್ರೋತ್ಥಾನ ಫಿಟ್‌ನೆಸ್ ಸೆಂಟರ್, ಜಯನಗರ, ಬೆಳಿಗ್ಗೆ 10

'ಎಸ್.ವಿ.ಆರ್.@50' ಸಾಧನೆ, ಸಂಭ್ರಮ, ಚಿತ್ರೋತ್ಸವ: ಬೆಳಿಗ್ಗೆ 10.30ಕ್ಕೆ 'ಮುತ್ತಿನಹಾರ' ಚಲನಚಿತ್ರ ಪ್ರದರ್ಶನ, ಮಧ್ಯಾಹ್ನ 2.30ಕ್ಕೆ 'ನಾಗರಹೊಳೆ' ಚಲನಚಿತ್ರ ಪ್ರದರ್ಶನ, ಆಯೋಜನೆ: ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ, ಸ್ಥಳ: ಡಾ. ರಾಜ್‌ಕುಮಾರ್ ಭವನ, ಕರ್ನಾಟಕ ಕಲಾವಿದರ ಸಂಘ, ಚಾಮರಾಜಪೇಟೆ


ದಕ್ಷಿಣ ಭಾರತ ವಿದ್ಯುತ್ ಗ್ರಾಹಕರ ಸಮಾವೇಶ: ಉದ್ಘಾಟನೆ: ಸ್ವಪನ್ ಘೋಷ್, ಭಾಷಣ: ಎಂ.ಜಿ. ದೇವಸಹಾಯಂ, ವಡ್ಡೆ ಸೋಭನಾದ್ರಿಶ್ವರ ರಾವ್, ಎಸ್. ಗಾಂಧಿ, ಬಿ. ದಿಲೀಪನ್, ಸಮರ್ ಸಿನ್ಹಾ, ಕೆ. ಸೋಮಶೇಖರ್, ಅಜಯ್ ಚಟರ್ಜಿ, ದೀಪಾ, ಅಧ್ಯಕ್ಷತೆ: ಕೆ. ವೇಣುಗೋಪಾಲ್ ಭಟ್, ಆಯೋಜನೆ: ಅಖಿಲ ಭಾರತ ವಿದ್ಯುತ್ ಬಳಕೆದಾರರ ಸಂಘ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತದ ಬಳಿ, ಬೆಳಿಗ್ಗೆ 10.30



ಬಿ.ಆರ್. ಲಕ್ಷ್ಮಣರಾವ್

'ಒಪೆರಾ' ಕಾಡೋ ಕಥೆ... ಗುನುಗೋ ಗೀತೆ...: ಕಥೆ: ಜೋಗಿ, ಕವಿತೆ ವಾಚನ: ಬಿ.ಆರ್. ಲಕ್ಷ್ಮಣರಾವ್, ಗೀತಗಾಯನ: ಪ್ರವೀಣ ಡಿ. ರಾವ್, ಅರುಂಧತಿ ವಸಿಷ್ಠ, ರೂಪಕ್ ವೈದ್ಯ, ಕಥಾವಾಚನ: ಪ್ರಮೋದ್ ಶಿಗ್ಗಾಂವ್, ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರ 4ನೇ ಬಡಾವಣೆ, ಬೆಳಿಗ್ಗೆ 10.30

ಜಚನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ ಉದ್ಘಾಟನೆ: ಎಂ.ಸಿ. ಸುಧಾಕರ್, ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಕೆ. ಮರುಳಸಿದ್ದಪ್ಪ, 'ಶಿವಸಾಹಿತ್ಯ ಸೂರ್ಯ ಶ್ರೀ ಜಚನಿ' ಪುಸ್ತಕ ಬಿಡುಗಡೆ: ಕೆ.ವಿ. ಪ್ರಭಾಕರ, ಆಶಯ ನುಡಿ: ಡಿ.ವಿ. ಪರಮಶಿವಮೂರ್ತಿ, ಮುಖ್ಯ ಅತಿಥಿಗಳು: ಬಸವರಾಜ ಕಲ್ಗುಡಿ, ಬಂಜಗೆರೆ ಜಯಪ್ರಕಾಶ, ಎ.ಎಸ್. ನಾಗರಾಜಸ್ವಾಮಿ, ಡಿ.ಎನ್. ಪಾಟೀಲ, ಸ್ಥಳ: ನಿಡುಮಾಮಿಡಿ ಮಠ, ಬಸವನಗುಡಿ, ಬೆಳಿಗ್ಗೆ 10.30




ಜಯಂತ ಕಾಯ್ಕಿಣಿ

ಐದು ಪುಸ್ತಕಗಳ ಬಿಡುಗಡೆ: ಜಯಂತ ಕಾಯ್ಕಿಣಿ ಅವರ 'ಅಂಕದ ಪರದೆ', 'ಸೇವಂತಿ ಪ್ರಸಂಗ', ಸು. ರುದ್ರಮೂರ್ತಿ ಶಾಸ್ತ್ರಿ ಅವರ 'ಭಟ್ಟಿ ವಿಕ್ರಮಾದಿತ್ಯನ ಕಥೆಗಳು', ಸುಮಂಗಲಾ ಅವರ 'ಎನ್ನಾತ್ಮ ಕಂಪಮಿದು', ರಶ್ಮಿ ಎಸ್. ಅವರ 'ಊರೆಂಬೋ ಊರಲಿ' ಪುಸ್ತಕ ಬಿಡುಗಡೆ, ಅತಿಥಿಗಳು: ಅಚ್ಯುತ ಕುಮಾರ್, ಸಂಧ್ಯಾರಾಣಿ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಸುಚಿತ್ರ ಸಭಾಂಗಣ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

'ಆರೆಸ್ಸೆಸ್ 100' ಉಪನ್ಯಾಸ: ರಾಮ್ ಮಾಧವ್, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಆಯೋಜನೆ: ಮಂಥನ, ಸ್ಥಳ: ಸೌಂದರ್ಯ ಕಾಲೇಜು, ಹೆಸರಘಟ್ಟ ರಸ್ತೆ, ದಾಸರಹಳ್ಳಿ, ಬೆಳಿಗ್ಗೆ 10.30

100 ಶಿಕ್ಷಕರಿಗೆ ರಾಜ್ಯಮಟ್ಟದ 'ಉತ್ತಮ ಶಿಕ್ಷಕ ರತ್ನ' ಪ್ರಶಸ್ತಿ ಪ್ರದಾನ: ಆಯೋಜನೆ: ಕರ್ನಾಟಕ ರಾಜ್ಯ ಶಿಕ್ಷಣ ಸಂಸ್ಥೆಗಳ ನೌಕರರ ಸಂಘ, ಸ್ಥಳ: ಸರ್ಕಾರಿ ಕಲಾ ಕಾಲೇಜು, ಬೆಳಿಗ್ಗೆ 11

'ಸುಧನ್ವ ಮೋಕ್ಷ' ಯಕ್ಷಗಾನ ತಾಳಮದ್ದಳೆ: ಹಿಮ್ಮೇಳ: ಪ್ರಸನ್ನ ಕುಮಾರ್ ಹೆಗಡೆ, ಗಜಾನನ ಹೆಗಡೆ ಕಲ್ಲಬ್ಬೆ, ಆಗ್ನೇಯ ಭಟ್ ಕ್ಯಾಸನೂರು, ನಿನಾದ ಪುರಪ್ಪೆಮನೆ, ಮುಮ್ಮೇಳ: ಯಶಸ್ ನಗರ, ಅಕ್ಷಯ್ ಹೆಗಡೆ ಹೂಡ್ಲಮನೆ, ವಸಂತಿ ಭಟ್, ಕಾರ್ತಿಕ್ ದಂಟಕಲ್, ಆಯೋಜನೆ: ಚಂದ್ರ ಬಡಾವಣೆ ನಿವಾಸಿಗಳ ಸಂಘ, ಸ್ಥಳ: ಪ್ರಸನ್ನ ಗಣಪತಿ ದೇವಸ್ಥಾನ, 2ನೇ ಕ್ರಾಸ್, ಚಂದ್ರ ಬಡಾವಣೆ, ಸಂಜೆ 5



ನಟರಾಜ್ ಹೊನ್ನವಳ್ಳಿ

ಶಾ. ಬಾಲುರಾವ್ ಅನುವಾದ ಪ್ರಶಸ್ತಿ ಮತ್ತು ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ ಪ್ರದಾನ: ಪ್ರೊ.ವಿ. ಕೃಷ್ಣಮೂರ್ತಿರಾವ್, ಮುಖ್ಯ ಅತಿಥಿ; ಬಸವರಾಜ ಕಲ್ಗುಡಿ, ಪ್ರಶಸ್ತಿ ಸ್ವೀಕರಿಸುವವರು: ನಟರಾಜ್ ಹೊನ್ನವಳ್ಳಿ, ಆರ್. ದಿಲೀಪ್ ಕುಮಾರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಕಮಲಿನಿ ಶಾ. ಬಾಲುರಾವ್, ಆರ್. ಲಕ್ಷ್ಮೀನಾರಾಯಣ, ಆಯೋಜನೆ: ಬಿ.ಎಂ. ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಮ್ಯೂಸಿಕ್ ಆಚಾರ್ಯ ಅನಾವರಣ: ಅತಿಥಿಗಳು: ಶ್ರೀಪಾದ್ ಹೆಗಡೆ, ಸತೀಶ್ ಹಂಪಿಹೊಳಿ, ಗಾಯನ: ವಿಶಾಲ್ ಹೆಗಡೆ, ಸ್ಥಳ: ಶರಣ ಬಸವೇಶ್ವರ ನಿಲಯ, ಹೆಸರಘಟ್ಟ ರಸ್ತೆ, ಸಂಜೆ 5

ಸುವರ್ಣ ಮಹೋತ್ಸವ: ಎಸ್. ಜಯಸಿಂಹ ಅವರ ಒಂಬತ್ತು ಪುಸ್ತಕಗಳ ಬಿಡುಗಡೆ: ಸುಬುಧೇಂದ್ರತೀರ್ಥ ಸ್ವಾಮೀಜಿ, ವಿಶ್ವವಲ್ಲಭತೀರ್ಥ ಸ್ವಾಮೀಜಿ, ಸುಜಯನಿಧಿತೀರ್ಥ ಸ್ವಾಮೀಜಿ, ರಘುವರೇಂದ್ರತೀರ್ಥ ಸ್ವಾಮೀಜಿ, ಅಕ್ಷೋಭ್ಯ ರಾಮಪ್ರಿಯತೀರ್ಥ ಸ್ವಾಮೀಜಿ, ಉದ್ಘಾಟನೆ: ಎಂ.ಎನ್. ವೆಂಕಟಾಚಲಯ್ಯ, ಮುಖ್ಯ ಅತಿಥಿ: ಎನ್. ಸಂತೋಷ್ ಹೆಗ್ಡೆ, 'ಪರಿಮಳ ಪ್ರಶಸ್ತಿ' ಸ್ವೀಕರಿಸುವವರು: ರಾಮಚಂದ್ರ ಹುದ್ದಾರ್, ಆರ್. ಶ್ರೀಕುಮಾರ್, ರಮೇಶ್ ಭಟ್, ಪ್ರಹ್ಲಾದ್ ರಾಮರಾವ್, ಎಚ್.ಕೆ. ಸುರೇಶ್ ಆಚಾರ್ಯ, ಕೃಷ್ಣರಾಜ ಕುತ್ಪಾಡಿ, ಜಿ. ಅಶ್ವತ್ಥನಾರಾಯಣ, ಸುಮೇಧವಿಠಲ ದಾಸ, ಗೌರೀಶ್ ಅಕ್ಕಿ, ಡಿ.ಪಿ. ರಘುರಾಮ್, ಜೋಗಿ, ಡಿ. ಬಾಲಕೃಷ್ಣ, ನಳಿನಾ ಮೋಹನ್, ಶಿವಶ್ರೀ ಸ್ಕಂದಪ್ರಸಾದ್, ಪ್ರಸನ್ನ ಕೊರ್ತಿ, ಉಷಾ ಹೆಗ್ಡೆ, ಶ್ಯಾಮಸುಂದರ್ ಉಪಾಧ್ಯ, ಪಿ.ಕೆ. ಸುರೇಶ್, ಎಂ. ರಾಮಮೂರ್ತಿ, ಗೋವಿಂದರಾಜ ಬಾಬು, ಆಯೋಜನೆ: ಪರಿಮಳ ಗೆಳೆಯರ ಬಳಗ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ವಾರ್ಷಿಕೋತ್ಸವ ಸಮಾರಂಭ: ಅತಿಥಿಗಳು: ಅರಣ್ಯ ನಾರಾಯಣ್, ಮಹೇಶ್ ಸ್ವಾಮಿ, ಆಯೋಜನೆ: ತ್ರೈ ಸ್ಕೂಲ್ ಆಫ್ ಫೈನ್ ಆರ್ಟ್ಸ್, ಸ್ಥಳ: ಶಾರದಾ ಸ್ತ್ರೀ ಸಮಾಜ, ಚಾಮರಾಜಪೇಟೆ, ಸಂಜೆ 5.15

ಪ್ರಶಸ್ತಿ ಪ್ರದಾನ ಸಮಾರಂಭ: ಜೀವಮಾನ ಸಾಧನೆ ಪ್ರಶಸ್ತಿ: ಎಚ್.ಎನ್. ನರಹರಿ ರಾವ್, ಪ್ರಶಸ್ತಿ ಪ್ರದಾನ: ಮೋಹನದೇವ್ ಆಳ್ವ, ಅಧ್ಯಕ್ಷತೆ: ಚಿರಂಜೀವಿ ಸಿಂಘ್, ಉಪಸ್ಥಿತಿ: ಅಜಿತ್ ಕುಮಾರ್ ರೈ, ಗುರು ಕಿರಣ್, ಆಯೋಜನೆ: ಕೆ. ಮೋಹನ್ ದೇವ್ ಆಳ್ವ ಮತ್ತು ಶೈಲಜಾ ಆಳ್ವ ಟ್ರಸ್ಟ್, ಸ್ಥಳ: ಸುಚಿತ್ರ ಸಭಾಂಗಣ, ಬನಶಂಕರಿ 2ನೇ ಹಂತ, ಸಂಜೆ 6

'ಮಾರವತಾರ' ಯಕ್ಷಗಾನ ಏಕವ್ಯಕ್ತಿ ಪ್ರದರ್ಶನ: ಕೆರೆಮನೆ ಶ್ರೀಧರ ಹೆಗಡೆ, ಆಯೋಜನೆ: ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6.15

'ಕಾಯುವ ಕಾಯಕ' ನಾಟಕ ಪ್ರದರ್ಶನ: ರಚನೆ: ಡುಂಡಿರಾಜ್, ನಿರ್ದೇಶನ: ಅರ್ಚನಾ ಶ್ಯಾಮ್, ಆಯೋಜನೆ: ಅಂತರಂಗ ತಂಡ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 6.30

ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ಅಕ್ಷಯ್ ಮತ್ತು ಅಭಿಷೇಕ್, ಪಿಟೀಲು: ಬಿ.ಆರ್. ಕುಶಾಲ್, ಮೃದಂಗ: ಅಪ್ರಮೇಯ ಹೊಸಹಳ್ಳಿ, ಖಂಜಿರ: ಹರಿಶ್ಚಂದ್ರ, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.15

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

THIRUMALA VIDYA NIKETHAN ENGLISH MEDIUM SCHOOL
(Behind Chowdaiah Memorial Hall)
G.D.Park Extension, Vyalikaval, Bengaluru - 560 003.
080-2344 7560 / 2344 7570 | Email: tvns1984@gmail.com

REQUIRES

Experienced **PRINCIPAL** with Post Graduation: Good Administration and Teaching with a minimum experience of 10 years as Principal to above mentioned reputed English Medium School.

P.E Teacher with B.PEd. qualification and prior experience.

Salary Commensurate with qualification and experience.

Applications are invited from suitable candidates with relevant qualification, experience & good communication skills. Please mail/submit the resume with recent Photograph to: The Secretary, within 10 days from the date of advertisement to the above mentioned address.

Management Secretary

Accounts & Finance

WANTED MALE/ Female Accountant for a Construction Company in Indiranagar. Call: 9642509718

General

HIRING: ESTATE Manager– Shriram Shreyas Apartment, Telecom Layout, Bangalore-97; retired/ dynamic professionals welcome; society ops (maintenance, vendor/ AMC, security, etc..) Requirement: experienced candidate with technical expertise, with good communication skills.Preferred; immediate joining; Apply immediately: Email: treasurerssoaw@gmail.com| WhatsApp : 9741114979

WANTED BE / Diploma in Electrical Mechanical to take Part-time / Full-time Diploma Day & Evening classes. Wanted: Admission Development Officer, Assistants & Helpers. Contact personally with a resume, original documents. Nadgir Institute, Near Modi Hospital, Rajajinagar, Bangalore – 560010 Ph: 23387333, 8867065525, 9731721446.

Manager

SENIOR FINANCE Manager for CHITRAKOOTA CBSE SCHOOL, Nagarbhavi-Kengeri Ring Road. Candidate must have 7+ years' experience in Accounts and ability to lead a team. Salary: Rs 40,000 to 70,000 per month, based on experience. (Age below 40 years). Call: 7829647333

Multiple Vacancy

TYPIST STENO office assistant juinior advocates for lawyers office malleswaram 9008001933 jobsmalleswaram@gmail.com

REAL ESTATE SELLING

Sites

Anekal

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Anjanapura

ANJANAPURA BDA Site For Sale, 1ST Block 20x30, W/F Price 65 Lakhs Negotioble 9740150364/8884707773

Airport Road

"SALE SITE 40x60 BIAAPA approved before International Airport close to Defence & Aero park Rs.5900/-P.sft. 9845286505"

Banashankari

BANASHANKARI 6TH Stage,7th Block, BDA Site 20x30,West Facing, Contact The Best Property: 9980528223/9901942592

BANASHANKARI 6TH Stage, 3rd Block, BDA Site 30x40, West Facing Genuine Buyers Contact:9844216344

Kumaraswamy Layout

SITES/ HOUSES/ Flats- For Sale:- Kumaraswamy Layout, Isro Layout, Maruti Layout, Surroundings. Contact:- 9341952021/ 9108879240



BSK 6th Stage 4th 'T' Block, opp Park 40 feet Road, East Facing 5 min. walk from Silk Institute Metro Station 12500/- sft. slightly negotiable. **M : 9845286583**

Bannerghatta Road

BANNERGHATTA ROAD, Bilekahalli Near Shanthi Nikethan School, 60x50 East, A Katha BBMP Site, 4,80,00,000/- 9739995042

BANNERAGATTA ROAD Classic Orchid Layout 4759Sqft SWC 23000/- Nisarga Layout 50X80 3500/- To 5000/- 9449655947

Basavanagudi

SALE: PRIME PROPERTY West facing site 44'x60' on 4th Main, NR Colony, Basavanagudi, Bengaluru. A and E Khata, clear title. GN Properties: 9845044179

PREMIUM PROPERTY Sale @ Basavanagudi 100x120 Suitable for Apartments/ Bungalow Serious Buyers Call Goldline: 9845033756

Basaweshwaranagar

RAJARAJESHWARI NAGAR 15500 Sqft, Kempegowda Layout, 50x80 Basaveshwaranagar 40x60, Malagala 30'x50', 64'x85' Call: 9886112385

RESIDENTIAL/ COMMERCIAL 40×60, 30×50 Basveshwarnagar, 40×60 SMV Layout and Yeswathapur Industrial Site Sale 8660075308

PRIME BDA, East facing, 40x60 in Basaveshwaranagar, Sale at 8 Cr negotiable. Vinod 9844116589

Hebbal

VAYALIKAVAL SOCIETY NAGAVARA 2 Sites Measuring 1980 sft and 2400sft West Facing Excellent Location Call:7829203369

HEBBAL 30X35 House Sale Ground 1 BHK Two Carparking 1st 2 BHK, 2nd 2 BHK: 9845623970/ 9739400838

HSR Layout

"HSR-LAYOUT 20X30 Commercial Building with Rent, ₹1,80,000/- 30x40, 40x60, Residential, Commercial sites for sale. "Krishna" 9886294610"

Jayanagar

JAYANAGAR 4TH T-Block 60ft Road Commercial Property Sale, 40×65 Jayanagar 5th Residential Block 40×60 NF: 9845075792/ 9880600899

Koramangala

"KORAMANGALA BDA 1ST BLOCK Property WF 60x90 Opp. Park, Good Location, Genuine Buyers only Contact: 9916140866"

Magadi Road

BMRDA APPROVED LAYOUT 40×60 EAST FACING SITE SALE ₹3600/-SQFT NEAR MAGADI MAIN ROAD TAVAREKERE. 8105889812

Multiple Locations

SELLING/ BUYING HOUSES, SITES:30x40 40x60 FLATS, COMMERCIAL, Jayanagar, JP.Nagar BASAVANAGUDI Kanakapura Road, BANASHANKARI, BTM HSR. CALL 7760019494

Nagarabhavi

"NAGARABHAVI NEAR Deepa Complex 40x60 East MPM Layout 35 feet Road, Vastu BDA Site. 9448432633/ 7022218837"

"RAILWAY 2ND STAGE 30x40 West facing, builder location, opp.Soda factory, near Ullal RTO, Good Location. 9845408408"

BBMP EKHATA 60x40 EF DC Conversation 30ft Road Balaji Layout Narayana School, Mallathahalli Nagarbhavi 8880014616

Rajajinagar

SITE FOR Sale 85x65 S/W Corner W Of C Road 2nd Stage Rate 28,000/- Brokers Excuse: 7259881499

Rajarajeshwari Nagar

FOR SALE Rajarajeshwarinagar30x40, South, Poornaprajna Layout, 30x40 North Brokers Excuse Contact: 9448508410 9844216344

Uttarahalli

UTTARAHALLI PLOT Sale 27.5'x65' BBMP A Khatha. North facing & Lake View. Rs.15,000/sft. Call: 6362348146

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

Vishweshwariah Layout

"VISVESHWARAIAH-LAYOUT 6TH-BLOCK 50x80 South West corner Commercial property for sale near upcoming BDA Complex Price.₹14000/- Genuine Buyers only.Contact: 7892224597"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, BANASHANKARI 6th Stage. Contact: 8892901567

BDA AUCTIONED SITE FOR SALE IN THE PRIME LOCALITY
Property / Site bearing No. 17, 4th Cross, Maruthinagar, Nagarabhavi Main Road, 1st Stage, Maruthinagar, Chandra Layout, Bangalore-560 072, measuring 40'x40' = 1600 sqft. (Adjacent to "MARUTHI ARCADE").
Interested parties may Contact: **98441 01612** from 9am to 5pm

"30X40 EAST FACING 40 FEET ROAD TOP LOCATION VISHVESHWARAIAH LAYOUT 6TH-BLOCK, 40x60 RESIDENTIAL NEAR 100 FEET RING ROAD BDA SITES IMMEDIATE SALE- 9845143579"

"AVAILABLE VISHVESWARAIAH 1st- 50x80, 5th-40x60 North, 3rd-40x60, MPM 40x60 Good location, Genuine Buyers/Seller. 9448733456/ 7259675150"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE For Sale 30x40 South Facing Rs. 13500 Vishweshwaraiah Layout 3rd Block Call: 9916826976

***BUYING/SELLING* 20X30** 30x40,40x60,50X80 BDA SITES VISHVESHWARAIAH KEMPEGOWDA LAYOUT. Contact:SREENIDHI PROPERTY JUNCTION. 9742681666

Vidyaranyapura

IMMEDIATE REGISTRATION 60'x40' BEL 2 Block, Independent 4 BHK Duplex, Prime Location 16000/- S/F: 9844264852

Mysore

MYSORE DISTRICT ILAVALA HOBLI 30x40 Site Sale, 18 Lakhs, E-Katha "Sun City Homes" Excellent Property Buyers Contact: 9844603127

Outer Ring Road

ORR(SUMANAHALLI-LAGGERE BRIDGE) direct facing Corner Commercial Site 2,800 Sft. in Chowdeshwarinagar "A" Khata Call: 9980555558

House

Banashankari

20X30 FURNISHED 3 BHK newly constructed triplex house ready to occupy for sale at BDA Banashankari 6th phase. 4th block, ground floor parking, three floor, terrace cost Rs.1.40 Cr. Contact owner Ramesh: 9341250356

BTM Layout

FULLY FURNISHED Pent House 4560Sft 4 BHK Duplex Sale @ BTM Near Vegacity Mall 6Crores Goldline: 9845033756

Indiranagar

HAL 2ND Stage 60x90 Prime Location 5BHK House with Garden Sale, Domlur 2nd Stage 4800 Site 4BHK House with Garden for Sale. Call 9845004248

J P Nagar

J.P.NAGAR 7TH, Bank of Baroda Layout Near Bridge Milenium 40x60,East, 3 BHK Duplex House & 3 units 1 BHK House- 4,75,00,000/- 9739995042

Kanakapura Road

BCC LAYOUT, 30x50, G+3 Brand New House 4.60Crs, Banashankari 6th Stage 3rd Block,40x60, 50x80, 14000/- 9880837475

Rajarajeshwari Nagar

SALE- TWO independent duplex 3 BHK House with car parking. Serious buyers only contact: 8762018445.

Vishweshwariah Layout

5BHK TRIPLEX House 30x40 BDA For Sale Vishweshwaraiah layout 3rd Block Owner only: 9342874483, 9844333109

Yelahanka

YELAHANKA HOUSE FOR SALE. Ground(1-BHK)+triplex (4-BHK) with 2 car parking. fully furnished East facing House for Sale.The layout is approved by BDA and having BDA Khatha at Yelahanka, Bengaluru-64. Contact: 9611946333.

Basaveshwaranagar

BASAVESWARANAGAR, SHARADA colony, 40x60 South facing, Old house for sale Rs. 21k/ sft. Brokers excuse. 9880669560

Agricultural Land

Kolar

SALE 3 acres Agriculture land with borewell situated on Highway. Ideal for School, IT Park, Resort, warehouse etc. 5 minutes drive from Express Highway in Kolar District. Mob: 7975164154

Commercial Land

Devanahalli

DEVANAHALLI MAIN Road Sale Commercial 60000 Sft Converted Land Near Sadahalli Gate Buyers Contact :8884501767

Commerical

M G Road And Around

INDIA REALTY
COMMERCIAL PROPERTIES FOR SALE.
8,000 Sft - 60,000 Sft at Premium Locations in CBD Area with Clear Title.
Email: indiarealty.2025@gmail.com
Contact: 9844649990

Flat

Kumarapark

RACE COURSE ROAD, Furnished Apartment, 3 BHK 2816 sft, Carpark, Servant Room. Brokers Excuse. 9845345964.

Kanakapura Road

3BHK APARTMENT for Sale 40x60, 2400.Sqft. Individual Floor near Vajarahalli and Raghuvanahalli Metro Station 1 KM. Call 9740148870 9341050991.

Farm House/ Land/ Resorts

Nelamangala

FOR SALE: 15,000 Sqft converted land in Nelamangala- Vajarahalli Road. With clear Title. Currently rented for ware house. Contact: 9035609555

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಎಮ್ & ಎನ್ ಇನ್ಫ್ರಾ M & N INFRHA



Handicapped Amenities & Facilities to complement the exclusive lifestyle.
Under Ground Cable (Electrical) | Over Head Tank Water Supply
All Round Compound 30 feet Road with Foot Path |
Park with Green Environment | LED Street Lights
Water, Sanitary, & Electrical Connections for individual units |
Sites with 100% Vastu Compliance

Why Invest in M&N INFRHA
- Layout Approved by BM RDA Project with all clearances
- Bank Loans available from Nationalised & Reputed Banks.
- Rapid-growth corridor with steady appreciation
- Situated amidst multi-crore developed projects
- Location close to cultural hubs and equipped with modern amenities
- Units Ready for Registration.
- Located on Proposed 100 feet road.

ENQUIRE NOW BOOK YOUR PLOT!

OFFICE
M & N INFRHA #10, Vimala Enclave, Chowlugalli, Cubbonpet, Bangalore – 560002.

PROJECT ADDRESS
M & N INFRHA Survey. No. 144/16A, 146/1, Tavarekere Village, Bangalore South Taluk.

DEVELOPED & MARKETED BY: M. V. MARKETING 144, Bharanarushi Mahasamsthan Road, 3rd Block, Vishweshwariah Layout, Bangalore – 560110.

SITE LOCATION

CONTACT : +91 97419 29567 | +91 9743012555
Email - muralidharjs@gmail.com

Joint Development

Multiple Locations

JOINT DEVELOPMENT Investor Required with-huge returns, Buy Back Agreement options. Multiple Locations. 4&7 Acre (Lyt & resorts) 9535151616

REAL ESTATE BUYING

Sites

Sadashiva Nagar

INDIA REALTY
REQUIRED RESIDENTIAL SITE's
40x60, 50x80, 60x90, 80x120 in Sadashiva Nagar, Dollars Colony, Judicial Layout, Yelahanka, Manyatha Residency.
Email: indiarealty.2025@gmail.com
Contact: 9844649990

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESWARAIAH KEMPEGOWDA ANY BDA LAYOUT: 9845062822/ 8660751654

Nagarabhavi

WANTED BDA SITE 30x40, 40x60, 50x80 Nagarabhavi, Rajajinagar Housing Cooperative Society, Vishweswaraiah, Kempegowda Layout. 8105688602.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

INDIA REALTY
Premium Locations
High Ground Palace Road
2500 Sft Fully Furnished
5000 Sft Warm Shell
AVAILABLE FOR RENT
2/4 Wheeler Parking Lift DG, AC, Work Stations.
Near Prestige Trade Center
Contact: 9844649990

FOR RENT Independent Building Suitable for Showroom Space @Kanakapura Road, J.P.NAGAR Metro Signal Near Piller No-74 of 2500-6000 Sqft. Ground Floor with Parking, DG Power Suitable for Automobile/Jewellary/ Textile/Saree, Etc. Call-9901453477

FOR RENT Independent Corner Building Suitable for Showroom Space @Jayanagar 4th Block 100Ft Road of 10,000Sqft. With Basement/ Ground/1st/2nd/3rd &4th Floor Each Floor 2400Sqft. With Lift,Parking,DG Power Suitable for Jewellary/Textile/ Saree Etc. Call- 9901453477

FOR RENT Independent Corner Building Suitable for Showroom Space @BSK II STAGE, Wide Roads of 15,000Sqft. With Stilt,Ground, 1st/2nd/3rd/4th Terrace Each Floor 3000 Sqft With Lift,Parking,DG Power Suitable for Jewellary/Textile/ Saree/Hospital,Etc. Call-9901453477

PREMIUM MULTI Functional Space Near Nelamangala, Ideal For Corporate Workation, Film/TV Shoots, Highend AirBnB Rental With Complete Privacy. Everything is Plug and Play. 9880564557, 8073961925

RENT PREMIUM 3600sqft furnished office at 4th Flr Vishnupriya Towers Beside Srirampura Metro Station. 6 Cabins, 45 Workstations,Lift, Pantry, Parking. Contact: 9900029200

House

FOR RENT- 3 BHK Duplex House with 2 car-parkings, Osborne Road, Sivan Chetty Gardens, Bangalore- 560042. Contact No: 9886094370

OTHERS

Festival Sales

GOING CHEEP samsung mobile M35 3 days old 8gb memory 256 gb storage completely unused call 9900084198

MATRIMONIAL

Brides Wanted

Kannada

32YR, DOCTOR, 182cm, Vishwakarma/Vokkaliga, looking for Well educated bride (BC/OBC). Ph. 8618607705.

BUSINESS

Business to Business

Business

BUSINESS PARTNER Required For land & resorts Company Required 30Lakhs to 1cr Investment, secured hugely Returns: 9535151616

ALL LOANS from Bank/ Pvt. (Direct): Mortgage (any property, with/ without income), Project, Takeover, Npa, 3rd party Collateral, Sharing, Subsidy. Cibil no issue. Low int. DSA. Mediators also welcome. Cont. 9019388175.

Finance

WE ARRANGE Mortgage, Purchase Construction and Business Loan from Scheduled Bank. Mrs Jyothi- 8971132289/ 9380509779.

PERSONAL

Change of Name

CHANGE OF NAME
I, **PRAKASH PADMAPPA KOTTUR,** residing at # 400, Jayram Building, 8th Cross, Thigalarapalya, Hoodi, Bengaluru - 560048, have changed our minor daughter's name from **PRATHIKSHA JAIN** to **PRATHIKSHA P KOTTUR** vide affidavit dated 23.10.2025 before notary Thippeswamy T, Bengaluru. Henceforth she shall be called as **PRATHIKSHA P KOTTUR** only

CHANGE OF NAME
I, **SHYAM PRASAD SHETTY KOMPADAV,** residing at No. 73, Prarthana, BHEL Offies Colony, 25th Main, Nandini Layout, Bangalore-560096, have changed my name to **SHYAM PRASAD SHETTY** vide affidavit dated 25.10.2025 before notary C.V. Earappa, Bangalore. Henceforth I shall be known as **SHYAM PRASAD SHETTY.**

CHANGE OF NAME
I, Mohammed Maqsood S/o P. Mohammed Mustafa R/a House No. 46, Ward No. 28, Goldsmith Colony, Cowl Bazaar, Bellary-583 102
We have changed our daughter's name from **MAISHA FATHIMA** to **MARYAM FATHIMA** vide affidavit dated 25-10-2025 Sworn before Notary K. Veera Mohan, Bellary.

CHANGE OF NAME
I, **DAFEDAR FOUZIYA MD ISMAIL @ DAFEDAR FOUZIYA** residing at No. 2-2-81/1, Androon Quilla, VTC: Raichur, P.O: Raichur, Sub Dist: Raichur Dist: Raichur, Karnataka-584101. Declare that the above names pertain to me and henceforth I shall be known as **DAFEDAR FOUZIYA MD ISMAIL** vide affidavit dated: 21.10.2025 before Notary Sivakumara. M.N, Bangalore.

I, PATTADA DIYA NANJAPPA Residing @Betoli Village, Virajpet Taluk, Kodagu have changed my name to DIYA NANJAPPA vide affidavit dated 23.10.2025 before V.P.Ramesh Notary, Virajpet. Henceforth I shall be called as DIYA NANJAPPA only

Lost

DOCUMENT LOST
I, **S. PRABHAKARA,** S/o Srinivasa **Reddy** residing at No. 53, Jigala, Village, Attibele Hobli, Anekal Tq. Bengaluru-562107 have lost the Original **Sale Deed, Document No. ABL.1-06444-2017,18 CD ABLD313 of Site No. 1680/ B5 HIG-1 Dt. 15.2.2018** of the above Property while in transit. If found Please **Contact: 7022007963**

ಚಿಟಿಕೆ ಸುದ್ದಿ

ಸುಮಂಗಲಿ ಸೇವಾಶ್ರಮ ಸುವರ್ಣ ಸಂಭ್ರಮ 30ಕ್ಕೆ

ಬೆಂಗಳೂರು: ಸುಮಂಗಲಿ ಸೇವಾಶ್ರಮದ ಸುವರ್ಣ ಸಂಭ್ರಮ ಸಮಾರಂಭ ಇದೇ 30ರಂದು ಬೆಳಿಗ್ಗೆ 11 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಶ್ರಮದ ಅಧ್ಯಕ್ಷೆ ಎಸ್. ಜಿ. ಸುಶೀಲಮ್ಮ, 'ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಹಾಗೂ ಭಾಲ್ಕಿ ಮಠದ ಬಸವಲಿಂಗ ಪಟ್ಟದೇವರು ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಲಿದ್ದು, 'ಸುಮಂಗಲಿ' ಸ್ಮರಣ ಸಂಚಿಕೆ ಬಿಡುಗಡೆ ಮಾಡುತ್ತಾರೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸಮಾರಂಭ ಉದ್ಘಾಟಿಸುತ್ತಾರೆ' ಎಂದು ಹೇಳಿದರು.

'ಮೂರು ಪುಸ್ತಕಗಳು ಬಿಡುಗಡೆಯಾಗಲಿದ್ದು, 'ಕ್ಷೇಮ' ಪುಸ್ತಕವನ್ನು ಕೇಂದ್ರ ಸಚಿವ ವಿ. ಸೋಮಣ್ಣ ಬಿಡುಗಡೆ ಮಾಡುತ್ತಾರೆ. 'ಆಶ್ರಮ ನಡೆದು ಬಂದ ಹಾದಿ' ಪುಸ್ತಕವನ್ನು ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ ಹಾಗೂ 'ಯೋಗ' ಪುಸ್ತಕವನ್ನು ರಾಜ್ಯಸಭೆ ಸದಸ್ಯ ಕೆ. ನಾರಾಯಣ ಬಿಡುಗಡೆ ಮಾಡುತ್ತಾರೆ' ಎಂದು ತಿಳಿಸಿದರು.

ಜಾತಿ– ಧರ್ಮದ ಬಗ್ಗೆ ಚರ್ಚೆ ಇಂದು

ಬೆಂಗಳೂರು: ಧರ್ಮ, ಮತ, ಜಾತಿ, ಸಂಸ್ಕೃತಿ, ಎಡ-ಬಲ, ಪ್ರಗತಿಪರ-ಪ್ರತಿಗಾಮಿ ಪರಿಕಲ್ಪನೆ ಕುರಿತು ಇದೇ ಭಾನುವಾರ ಬೆಳಿಗ್ಗೆ 10.30ರಿಂದ ಮಧ್ಯಾಹ್ನ 12.30ರವರೆಗೆ ಸಭೆ ನಡೆಯಲಿದೆ.

ಮಲ್ಲೇಶ್ವರದ ಐದನೇ ಕ್ರಾಸ್‌ನಲ್ಲಿರುವ ವಕೀಲ ಕೆ. ವಿಶ್ವನಾಥ್ ನಾಯ್ಕ್ ಅವರ ಕಚೇರಿಯಲ್ಲಿ ಈ ಸಭೆ ಹಮ್ಮಿಕೊಳ್ಳಲಾಗಿದೆ. ಸಮಾಜೋರಾಜಕೀಯ ಕ್ಷೇತ್ರಗಳಲ್ಲಿ ಬಳಸುವ ಹಲವಾರು ಪದಗಳ ಅರ್ಥ ವಿಶ್ಲೇಷಣೆ ಮಾಡಿ, ಅವನ್ನು ಸರಿಯಾಗಿ ತಿಳಿದುಕೊಳ್ಳುವುದು ಈ ಸಭೆಯ ಉದ್ದೇಶ ಎಂದು ಲೇಖಕ ಕೆ.ಎಸ್. ಪಾರ್ಥಸಾರಥಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9448093966

ಲಾರಿ ಡಿಕ್ಕಿ: ಬೈಕ್ ಸವಾರ ಸಾವು

ಬೆಂಗಳೂರು: ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಿಮೆಂಟ್ ಮಿಕ್ಸರ್ ಲಾರಿ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವಿದ್ಯಾರಣ್ಯಪುರದ ದರ್ಶನ್ (57) ಮೃತ ಸವಾರ. ನಿವೇಶನ ಖರೀದಿಗೆಂದು ದರ್ಶನ್ ಅವರು ಬೈಕ್‌ನಲ್ಲಿ ತೆರಳುತ್ತಿದ್ದರು. ಸಾತನೂರು–ಬಾಗಲೂರು ರಸ್ತೆಯಲ್ಲಿ ವೇಗವಾಗಿ ಬಂದ ಲಾರಿ, ಬೈಕ್‌ಗೆ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ದರ್ಶನ್ ಅವರು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಅಪಘಾತ ಮಾಡಿದ ಬಳಿಕ ಲಾರಿ ಚಾಲಕ ಸ್ಥಳದಲ್ಲೇ ವಾಹನವನ್ನು ಬಿಟ್ಟು ಪರಾರಿಯಾಗಿದ್ದಾನೆ ಎಂದು ಪೊಲೀಸರು ಹೇಳಿದರು. ಚಿಕ್ಕಜಾಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಫೋಟ: ವೃದ್ಧೆ ಸಾವು, ಮೂವರು ಗಂಭೀರ

ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳ, ಸೊಕೊ ತಂಡ ಭೇಟಿ, ಪರಿಶೀಲನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ತ್ರಿವೇಣಿ ನಗರದ ಮನೆಯೊಂದರಲ್ಲಿ ಶನಿವಾರ ಸಂಭವಿಸಿದ ಸ್ಫೋಟದಲ್ಲಿ ವೃದ್ಧೆ ಮೃತಪಟ್ಟು ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಅಕ್ಕಯ್ಯಮ್ಮ(80) ಅವರು ಮೃತಪಟ್ಟಿದ್ದಾರೆ. ಶೇಖರ್ (52) ಕಿರಣ್ (22) ಚಂದನ್ (25) ಅವರು ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮನೆಯಲ್ಲಿದ್ದ ಸಿಲಿಂಡರ್‌ನಿಂದ ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಸ್ಥಳದಲ್ಲಿ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಕಟ್ಟಡದ ಅವಶೇಷಗಳ ತೆರವು ಕಾರ್ಯಾಚರಣೆ ನಡೆಯುತ್ತಿದೆ. ಕಾರ್ಯಾಚರಣೆ ಮುಗಿದ ಮೇಲೆ ನಿಖರವಾದ ಕಾರಣ ಪತ್ತೆಯಾಗಲಿದೆ ಎಂದು ಪೊಲೀಸರು ಹೇಳಿದರು.

ಶನಿವಾರ ಬೆಳಿಗ್ಗೆ 7.30ರ ಸುಮಾರಿಗೆ ಘಟನೆ ನಡೆದಿದೆ. ಸ್ಫೋಟದ ತೀವ್ರತೆಯಿಂದ ಮನೆ ಸಂಪೂರ್ಣವಾಗಿ ಧ್ವಂಸಗೊಂಡಿದೆ. ಅಕ್ಕಪಕ್ಕದ ಮೂರು ಶೆಡ್‌ಗಳಿಗೂ ಹಾನಿಯಾಗಿದೆ. ಅಲ್ಲದೆ, ಕೆಲವು ಮನೆಗಳ ಬಾಗಿಲಿನ ಫ್ರೇಮ್ ಮತ್ತು ಕಿಟಕಿಗಳು ಬಿರುಕುಬಿಟ್ಟಿವೆ.


ಅಕ್ಕಯ್ಯಮ್ಮ

ಪಕ್ಕದ ಮನೆಯಲ್ಲಿ ವಾಸವಾಗಿದ್ದ ಕಾಂಚನಾ ಎಂಬ ಮಹಿಳೆಯ ತಲೆಗೆ ಪೆಟ್ಟು ಬಿದ್ದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ಫೋಟದ ಶಬ್ದಕ್ಕೆ ತ್ರಿವೇಣಿ ನಗರ ನಿವಾಸಿಗಳು ಬೆಚ್ಚಿಬಿದ್ದಿದ್ದಾರೆ. ಅಕ್ಕಯ್ಯಮ್ಮ ಅವರ ಮಕ್ಕಳು ಫಾಸ್ಟ್‌ಫುಡ್ ವ್ಯಾಪಾರ ನಡೆಸುತ್ತಿದ್ದರು. ವರ್ಷದ ಹಿಂದೆ ತ್ರಿವೇಣಿ ನಗರದಲ್ಲಿ ರಮೇಶ್ ಎಂಬುವವರಿಗೆ ಸೇರಿದ ಬಾಡಿಗೆ ಮನೆಗೆ ಬಂದು ಅಕ್ಕಯ್ಯಮ್ಮ ಅವರು ತಮ್ಮ ಪುತ್ರ ಮತ್ತು ಮೊಮ್ಮಕ್ಕಳೊಂದಿಗೆ ನೆಲಸಿದ್ದರು.

ಗಂಭೀರವಾಗಿ ಗಾಯಗೊಂಡವರನ್ನು ಹತ್ತಿರದ ಟಿಸಿ ಪಾಳ್ಯದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಯಲ್ಲಿ ಬಹಳಷ್ಟು ಸುಟ್ಟಗಾಯಗಳಾಗಿರುವ ಚಂದನ್ ಸ್ಥಿತಿ ಗಂಭೀರವಾಗಿದೆ. ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿರುವ ಸಾಧ್ಯತೆಯಿದೆ ಎಂದು ಪೊಲೀಸರು ತಿಳಿಸಿದರು.

ಘಟನಾ ಸ್ಥಳಕ್ಕೆ ಪೂರ್ವ ವಿಭಾಗದ ಹೆಚ್ಚುವರಿ ಕಮಿಷನರ್ ರಮೇಶ್ ಬಾನೋತ್, ವೈಟ್‌ಫೀಲ್ಡ್ ಡಿಸಿಪಿ ಪರಶುರಾಮ್ ಮತ್ತು ಕೆ.ಆರ್.ಪುರ ಪೊಲೀಸರು, ಸೊಕೊ ತಂಡ, ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು, ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಭೇಟಿ ಮಾಡಿ ಪರಿಶೀಲನೆ ನಡೆಸಿದರು. ಘಟನೆ ಸಂಬಂಧ ಹಲವು ಮಾಹಿತಿಗಳನ್ನು ಕಲೆ ಹಾಕಿದ್ದಾರೆ.


ಸ್ಫೋಟದಿಂದ ಕುಸಿದ ಮನೆ

ಸಮಗ್ರ ತನಿಖೆಗೆ ಆಗ್ರಹ

ಅಡುಗೆ ಅನಿಲ ಸೋರಿಕೆಯಿಂದಲೇ ಈ ಅನಾಹುತ ಆಗಿದೆಯೇ ಅಥವಾ ಬೇರೆ ಏನಾದರೂ ಕಾರಣವಿದೆಯೇ ಎಂಬುದನ್ನು ಪೊಲೀಸರು ಪತ್ತೆ ಹಚ್ಚಬೇಕು. ಗಟ್ಟಿ ಮುಟ್ಟಾದ ಆರ್‌ಸಿಸಿ ಮನೆ ಸಂಪೂರ್ಣ ಹಾನಿಗೆ ಒಳಗಾಗಿದೆ. ಸಿಲಿಂಡರ್‌ನಿಂದ ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟವಾಗಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಲು ಸಾಧ್ಯವೇ? ಈ ಘಟನೆ ಸಂಬಂಧ ಸೂಕ್ತ ರೀತಿಯಲ್ಲಿ ತನಿಖೆ ಆಗಬೇಕು. ಮೃತರಿಗೆ ಸರ್ಕಾರ ಪರಿಹಾರ ಕೊಡಬೇಕು

ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

'ಕಾರಣ ಗೊತ್ತಾಗಲಿ'

ಅನುಮಾನ ನಿವಾರಣೆಗೆ ಸರಿಯಾದ ತನಿಖೆ ಆಗಬೇಕು. ಶೇಖರಿಸಿದ್ದ ಸ್ಫೋಟಕ, ಸ್ಫೋಟ ಆಗಿದೆಯೇ ಅನ್ನೋದು ಗೊತ್ತಾಗಬೇಕು. ಮೃತ ಅಕ್ಕಯ್ಯಮ್ಮ ಕುಟುಂಬಕ್ಕೆ ವೈಯಕ್ತಿಕವಾಗಿ ಒಂದು ಲಕ್ಷ ಪರಿಹಾರ ನೀಡುತ್ತೇನೆ

ಬೈರತಿ ಬಸವರಾಜ ಶಾಸಕ

ಸ್ನೇಹಿತೆಗೆ ಬ್ಲ್ಯಾಕ್‌ಮೇಲ್ ಕಿರುತೆರೆ ನಟಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತೆಯ ವಾಯ್ಸ್ ರೆಕಾರ್ಡ್, ವಿಡಿಯೊ ಹಾಗೂ ಫೋಟೊ ಸೇರಿದಂತೆ ಮೊಬೈಲ್‌ನಲ್ಲಿದ್ದ ದತ್ತಾಂಶವನ್ನು ಕಳವು ಮಾಡಿ ಪರಿಚಿತರು, ಕುಟುಂಬಸ್ಥರಿಗೆ ಕಳುಹಿಸಿದ ಆರೋಪದಡಿ ಕಿರುತೆರೆ ನಟಿ ಆಶಾ ಜೋಯಿಸ್ ವಿರುದ್ಧ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಯನಗರದ ಪಾರ್ವತಿ ಎಂಬುವವರು ನೀಡಿದ ದೂರಿನ ಮೇರೆಗೆ ಆಶಾ ಜೋಯಿಸ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. 'ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ಕಂಪನಿ ಮಾಲೀಕರ ಜೊತೆಗೆ ಪ್ರೇಮಾಂಕುರವಾಗಿತ್ತು. ಮದುವೆಯಾಗಿ ಜೀವನ ನಡೆಸಿಕೊಂಡಿದ್ದೆವು. ಮೂರು ವರ್ಷಗಳ ಹಿಂದೆ ನಮ್ಮ ಮನೆಯ ಎದುರಿನ ಮನೆಗೆ ಬಾಡಿಗೆಗೆ ಬಂದ ಆಶಾ ಜೋಯಿಸ್ ಅವರು, 'ನಾನು ಶೃಂಗೇರಿ ಮಠದ ಜೋಯಿಸ್ ಕುಟುಂಬಕ್ಕೆ ಸೇರಿದ್ದು, ರಾಮ ಜೋಯಿಸ್ ಸಹೋದರನ ಪುತ್ರಿ. ಕಿರುತೆರೆಯ ನಟಿ' ಎಂಬುದಾಗಿ ಪರಿಚಯ ಮಾಡಿಕೊಂಡಿದ್ದರು' ಎಂದು ಪಾರ್ವತಿ ದೂರಿನಲ್ಲಿ ತಿಳಿಸಿದ್ದಾರೆ.

'ಆಶಾ ಅವರು ನಾನು ಕೆಲಸ ಮಾಡುತ್ತಿದ್ದ ಕಂಪನಿಯ ಮಾಲೀಕರ ನಡುವಿನ ಸಂಬಂಧದ ವಿಷಯವನ್ನು ತಿಳಿದುಕೊಂಡಿದ್ದರು. ಕಂಪನಿಯ ಮಾಲೀಕರಿಂದ ಹಣ ವಸೂಲಿ ಮಾಡುವಂತೆ ಅವರು ಪ್ರೇರೇಪಿಸುತ್ತಿದ್ದರು. ಅದಕ್ಕೆ ನಾನು ಒಪ್ಪಿರುವುದಿಲ್ಲ' ಎಂದು ಪಾರ್ವತಿ ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.


ಆಶಾ ಜೋಯಿಸ್

'ಈ ನಡುವೆ ಆಶಾ ಅವರು ಪಾರ್ವತಿ ಅವರಿಂದ ₹50 ಸಾವಿರ ಸಾಲ ಪಡೆದಿದ್ದರು. ಸ್ವಲ್ಪ ಹಣ ವಾಪಸ್ ಮಾಡಿ ನಂಬಿಕೆ ಗಳಿಸಿದ್ದರು. ಕೆಲವು ದಿನ ಪಾರ್ವತಿ ಮನೆಯಲ್ಲಿ ಆಶ್ರಯ ಪಡೆದಿದ್ದ ಆಶಾ ಅವರು, ಪಾರ್ವತಿ ಕೆಲಸ ಮಾಡುತ್ತಿದ್ದ ಕಂಪನಿಯ ಮಾಲೀಕರಿಂದ ₹2 ಕೋಟಿ ಹಣಕ್ಕಾಗಿ ಬೇಡಿಕೆ ಇಡುವಂತೆ ಒತ್ತಾಯ ಮಾಡಿದ್ದರು. ಆದರೆ, ಪಾರ್ವತಿ ಅವರು ಒಪ್ಪಿರಲಿಲ್ಲ. ಕೆಲವು ದಿನ ಕಳೆದ ಬಳಿಕ ಆಶಾ ಅವರು ದೂರುದಾರರ ಗಮನಕ್ಕೆ ಬಾರದಂತೆ ಜೂನ್ 17ರಂದು ಮೊಬೈಲ್‌ನಲ್ಲಿದ್ದ ಫೋಟೊ, ವಿಡಿಯೊ ಹಾಗೂ ವಾಯ್ಸ್ ರೆಕಾರ್ಡ್‌ಗಳನ್ನು ಕದ್ದು, ಪರಿಚಿತರು, ಸ್ನೇಹಿತರಿಗೆ ರವಾನೆ ಮಾಡಿದ್ದರು' ಎಂಬ ಆರೋಪವಿದೆ.

'ಸಂಪತ್ತಿನ ಸಣ್ಣ ಪಾಲು ಸಮಾಜಕ್ಕೆ ಬಳಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು, ಸಮಾಜಮುಖಿಯಾಗಿ ಕೆಲಸ ಮಾಡಬೇಕು. ಗಳಿಸುವ ಸಂಪತ್ತಿನ ಸಣ್ಣ ಪಾಲನ್ನು ಸಮಾಜದ ಒಳಿತಿಗಾಗಿ ಸದ್ಬಳಕೆ ಮಾಡಬೇಕು' ಎಂದು ಭವಿಷ್ಯದ ವೈದ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು ಹೇಳಿದರು.

2025ರ ಶೈಕ್ಷಣಿಕ ಸಾಲಿನ ನೀಟ್ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಸರ್ಕಾರಿ ಕೋಟಾದಲ್ಲಿ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸಂತ ನಗರದಲ್ಲಿರುವ ದೇವರಾಜ ಅರಸು ಭವನದಲ್ಲಿ ಕಾಳಿದಾಸ ಹೆಲ್ತ್ ಎಜುಕೇಶನ್ ಮತ್ತು ಅಹಿಲ್ಯಾ ಟ್ರಸ್ಟ್ ವತಿಯಿಂದ ಶನಿವಾರ ನಡೆದ ಪ್ರೇರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದ ಪ್ರತಿಭಾವಂತ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸುತ್ತಿರುವುದು ಉತ್ತಮ ಕಾರ್ಯ. ಎಂಬಿಬಿಎಸ್ ಶಿಕ್ಷಣಕ್ಕೆ ಆಯ್ಕೆಯಾಗಿರುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಿ ಪ್ರೋತ್ಸಾಹ ನೀಡಲಾಗುತ್ತಿದೆ. ಸಂಸ್ಥೆಯ ರೂವಾರಿಗಳು, ಉತ್ತಮ ಸಾಮಾಜಿಕ ಕೆಲಸದಲ್ಲಿ ತೊಡಗಿಕೊಂಡಿರುವುದು ಅನುಕರಣೀಯ' ಎಂದು ಪ್ರಶಂಸಿದರು.

'ವಿದ್ಯಾರ್ಥಿವೇತನ ಪಡೆಯುವ ವೈದ್ಯಕೀಯ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು, ಸಮಾಜಮುಖಿಯಾಗಿ ಸೇವೆ ಸಲ್ಲಿಸಬೇಕು. ಜಾತಿವ್ಯವಸ್ಥೆಯಿಂದಾಗಿ ಸಮಾಜದಲ್ಲಿ ಅಸಮಾನತೆಯಿದೆ. ಸಮಾನತೆಯನ್ನು ಸಾಧಿಸಿ ಸಮಸಮಾಜವನ್ನು ನಿರ್ಮಿಸಬೇಕಿದೆ. ಇಂದಿನ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉತ್ತಮ ಸ್ಥಾನಕ್ಕೇರಿದಾಗ, ಸಾಮಾಜಿಕ ಚಿಂತನೆಯಿಂದ ದುಡಿಯಬೇಕು' ಎಂದೂ ಅವರು ಸಲಹೆ ನೀಡಿದರು



ಸಮಾರಂಭದಲ್ಲಿ ಕಲಬುರಗಿ ವಿಭಾಗದ ಕಾಗಿನೆಲೆ ಗುರುಪೀಠದ ಸಿದ್ಧರಾಮಾನಂದಪುರಿ ಸ್ವಾಮೀಜಿ, ಮೈಸೂರು ವಿಭಾಗದ ಕನಕ ಗುರುಪೀಠದ ಶಿವಾನಂದ ಪುರಿ ಸ್ವಾಮೀಜಿ, ಸಿದ್ದರಾಮಯ್ಯ, ಬಿ.ಝಡ್. ಜಮೀರ್ ಅಹಮದ್ ಖಾನ್, ನಸೀರ್ ಅಹಮದ್, ಎಚ್.ಎಂ. ರೇವಣ್ಣ ಇದ್ದರು

ನೇತ್ರದಾನಕ್ಕೆ ಆದ್ಯತೆ ನೀಡಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಪಂಚದಲ್ಲಿ ಅಂಧರಿಗೆ ದೃಷ್ಟಿ ಸಿಗುವಂತೆ ಮಾಡುವ ನೇತ್ರದಾನವು ಶ್ರೇಷ್ಠದಾನಗಳಲ್ಲಿ ಒಂದು' ಎಂದು ಬೆಂಗಳೂರಿನ ದಿ ಪ್ರಾಜೆಕ್ಟ್ ವಿಷನ್ ಸಂಸ್ಥಾಪಕ ನಿರ್ದೇಶಕ ಡಾ. ಜಾರ್ಜ್ ಕಣ್ಣಂದನಮ್ ಹೇಳಿದರು.

ನಗರದ ಕೆ. ನಾರಾಯಣಪುರಲ್ಲಿರುವ ಕ್ರಿಸ್ತು ಜಯಂತಿ ಡೀಮ್ಡ್ ವಿಶ್ವವಿದ್ಯಾಲಯದ ಜಯಂತಿಯನ್ ಸೇವಾ ವಿಸ್ತರಣೆ ಕೇಂದ್ರ ಹಾಗೂ ದಿ ಪ್ರಾಜೆಕ್ಟ್ ವಿಷನ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಕಣ್ಣಿನ ಆರೋಗ್ಯ, ಅಂಧರಿಗೆ ದಾರಿದೀಪ ಹಾಗೂ 'ದಿವ್ಯಾಂಗಾನುಭವ ನಡಿಗೆ' ಕಾರ್ಯಕ್ರಮದಲ್ಲಿ ಮಾತನಾಡಿದರು.

'ಜಗತ್ತಿನಾದ್ಯಂತ 39 ದಶಲಕ್ಷ ಅಂಧರಿದ್ದಾರೆ. ಅವರಲ್ಲಿ ಶೇ 20ರಷ್ಟು ಮಂದಿ ಕಾರ್ನಿಯಲ್ ಕಸಿ ಚಿಕಿತ್ಸೆಯ ಸಹಾಯ ಪಡೆದರೆ ದೃಷ್ಟಿ ಸಿಗಲಿದೆ. ವಿಶ್ವ ಆರೋಗ್ಯ ಸಂಸ್ಥೆ ವರದಿ ಪ್ರಕಾರ, ಭಾರತದಲ್ಲೇ ವಿಶ್ವದ ಅತಿ ಹೆಚ್ಚು ಸಂಖ್ಯೆಯ ಅಂಧರಿದ್ದಾರೆ. ಅವರಿಗೆ ಕಾರ್ನಿಯಲ್ ಕಸಿ ಮೂಲಕ ದೃಷ್ಟಿ ನೀಡಿ ದಾರಿದೀಪವಾಗಬಹುದು. ಇದನ್ನು ನೇತ್ರದಾನದ ಮೂಲಕ ಮಾತ್ರ ಸಾಧಿಸಲು ಸಾಧ್ಯ' ಎಂದು ತಿಳಿಸಿದರು.

ಕ್ರಿಸ್ತು ಜಯಂತಿ ಡೀಮ್ಡ್ ವಿವಿಯ ಕುಲಪತಿ ಫಾದರ್ ಡಾ.ಅಗಸ್ಟಿನ್ ಜಾರ್ಜ್ ಮಾತನಾಡಿ, 'ಮೂರು ವರ್ಷದಲ್ಲಿ ಪ್ರಪಂಚದಾದ್ಯಂತ 60ಕ್ಕೂ ಹೆಚ್ಚು ದಿವ್ಯಾಂಗಾನುಭವ ನಡಿಗೆ ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, 40 ಸಾವಿರಕ್ಕೂ ಹೆಚ್ಚು ಜನರನ್ನು ತಲುಪಲಾಗಿದೆ' ಎಂದರು.

2022ರ ದಿವ್ಯಾಂಗ್ ಬಾಲಿಕಾ ಪ್ರಶಸ್ತಿ ಪುರಸ್ಕೃತ ಫಾತಿಮಾ ಅನ್ವಿ ವಿದ್ಯಾರ್ಥಿಗಳು ದೃಷ್ಟಿಗೆ ನೀಡಬೇಕಾದ ಕಾಳಜಿ ಕುರಿತು ಮಾಹಿತಿ ನೀಡಿದರು.

ಕ್ರಿಸ್ತು ಜಯಂತಿ ಡೀಮ್ಡ್ ವಿವಿಯ ಜಯಂತಿಯನ್ ಸೇವಾ ವಿಸ್ತರಣೆ ಕೇಂದ್ರದ ನಿರ್ದೇಶಕ ಜೈಸ್ ವಿ.ಥಾಮಸ್ ಕಾರ್ಯಕ್ರಮ ಉದ್ಘಾಟಿಸಿದರು. ಕೇಂದ್ರದ ಸಂಯೋಜಕ ಶ್ರೀಧರ್ ಪಿ.ಡಿ ಹಾಜರಿದ್ದರು.

ಮುಖ್ಯಾಂಶಗಳು

- 'ದಿವ್ಯಾಂಗಾನುಭವ ನಡಿಗೆ' ಕಾರ್ಯಕ್ರಮ
- ಜಯಂತಿಯನ್ ಸೇವಾ ವಿಸ್ತರಣೆ, ದಿ ಪ್ರಾಜೆಕ್ಟ್ ವಿಷನ್ ಸಹಯೋಗ
- ಕಾರ್ನಿಯಲ್ ಕಸಿ ಚಿಕಿತ್ಸೆ ಬಗ್ಗೆ ಮಾಹಿತಿ


ಕ್ರಿಸ್ತು ಜಯಂತಿ ಡೀಮ್ಡ್ ವಿಶ್ವವಿದ್ಯಾಲಯದ ಜಯಂತಿಯನ್ ಸೇವಾ ವಿಸ್ತರಣೆ ಕೇಂದ್ರ ಹಾಗೂ ದಿ ಪ್ರಾಜೆಕ್ಟ್ ವಿಷನ್ ಸಂಸ್ಥೆಯ ಸಹಯೋಗದಲ್ಲಿ 'ದಿವ್ಯಾಂಗಾನುಭವ ನಡಿಗೆ' ನಡೆಯಿತು.

ಮಹಿಳೆ ಕೊಲೆ: ಆಟೊದಲ್ಲಿ ಮೃತದೇಹವಿಟ್ಟು ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯನ್ನು ಕೊಲೆ ಮಾಡಿ ಆಟೊದಲ್ಲಿ ಮೃತದೇಹವಿಟ್ಟು ಆರೋಪಿಗಳು ಪರಾರಿಯಾಗಿರುವ ಘಟನೆ ತಿಲಕ್‌ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ನಡೆದಿದೆ. ಠಾಣಾ ವ್ಯಾಪ್ತಿಯ ಸಮೀಪದಲ್ಲೇ ನಿಂತಿದ್ದ ಆಟೊದಲ್ಲಿ ಮೃತದೇಹ ಪತ್ತೆಯಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸಲ್ಮಾ (35) ಕೊಲೆಯಾದ ಮಹಿಳೆ. ಸಲ್ಮಾ ಅವರು ಪತಿಯಿಂದ ವಿಚ್ಛೇದನ ಪಡೆದುಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು. ಸಲ್ಮಾ ಅವರಿಗೆ ನಾಲ್ವರು ಮಕ್ಕಳಿದ್ದಾರೆ. ಯಾವ ಕಾರಣಕ್ಕೆ ಕೊಲೆ ಮಾಡಲಾಗಿದೆ ಎಂಬುದು ಗೊತ್ತಾಗಿಲ್ಲ. ಪ್ರಕರಣದ ತನಿಖೆ ನಡೆಸಲಾಗುತ್ತಿದೆ. ಆಟೊ ನಿಂತಿದ್ದ ಸುತ್ತಮುತ್ತಲ ರಸ್ತೆಗಳಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಬಾಲಕಿಯ ಕತ್ತು ಹಿಸುಕಿ ಕೊಲೆ

ಬೆಂಗಳೂರು: ಏಳು ವರ್ಷದ ಬಾಲಕಿಯ ಕತ್ತು ಹಿಸುಕಿ ಕೊಲೆ ಮಾಡಿದ ಘಟನೆ ಕುಂಬಳಗೂಡು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ರಾಮಸಮುದ್ರದ ಕನ್ನಿಕಾ ಬಡಾವಣೆಯ ಸಿರಿ ಕೊಲೆಯಾದ ಬಾಲಕಿ. ಮೃತಳ ತಾಯಿ ಶಿಲ್ಪಾ, ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಕೌಟುಂಬಿಕ ಕಲಹ ಕಾರಣಕ್ಕೆ ಪತಿಯನ್ನು ತೊರೆದು ಪ್ರತ್ಯೇಕವಾಗಿ ಪುತ್ರಿ ಜೊತೆಗೆ ಕನ್ನಿಕಾ ಬಡಾವಣೆಯಲ್ಲಿ ನೆಲಸಿದ್ದರು.

ಈ ನಡುವೆ ಶಿಲ್ಪಾ ಅವರಿಗೆ ಖಾಸಗಿ ಕಂಪನಿ ಉದ್ಯೋಗಿ ದರ್ಶನ್ ಎಂಬಾತನ ಜೊತೆ ಪರಿಚಯವಾಗಿತ್ತು. ನಂತರ ಸಲುಗೆ ಬೆಳೆದು ಮದುವೆಯಾಗಿದ್ದರು. ಇತ್ತೀಚೆಗೆ ನಮ್ಮ ಪ್ರೀತಿಗೆ ಸಿರಿ ಅಡ್ಡಿಯಾಗುವುದಾಗಿ ಶಿಲ್ಪಾ ಜೊತೆಗೆ ಮಲತಂದೆ ದರ್ಶನ್ ಜಗಳ ಮಾಡುತ್ತಿದ್ದರು. ಶುಕ್ರವಾರ ಶಿಲ್ಪಾ ಅವರು ಎಂದಿನಂತೆ ಬೆಳಿಗ್ಗೆ ಕೆಲಸಕ್ಕೆ ತೆರಳಿದ್ದರು. ಆಗ ಆರೋಪಿ ದರ್ಶನ್, ಬಾಲಕಿ ಸಿರಿಯ ಮುಖಕ್ಕೆ ಗುದ್ದಿ, ಕತ್ತು ಹಿಸುಕಿ ಕೊಲೆ ಮಾಡಿ ಮನೆಯ ಮುಂಬಾಗಿಲು ಹಾಕಿ ಪರಾರಿಯಾಗಿದ್ದ.

ಕುಂಬಳಗೂಡು ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರದೋಷ್‌ಗೆ ಮಧ್ಯಂತರ ಜಾಮೀನು

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರುವ ಆರೋಪಿ ಪ್ರದೋಷ್ ಅವರಿಗೆ 57ನೇ ಸಿಸಿಎಚ್ ನ್ಯಾಯಾಲಯವು ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಅನಾರೋಗ್ಯದಿಂದ ಬಳಲುತ್ತಿದ್ದ ಪ್ರದೋಷ್ ಅವರ ತಂದೆ ಸುಬ್ಬರಾವ್ ಅವರು ನಿಧನರಾಗಿದ್ದು, ಅಂತ್ಯಸಂಸ್ಕಾರ ಹಾಗೂ ಇತರೆ ಕಾರ್ಯಗಳನ್ನು ಮುಗಿಸಲು ಪ್ರದೋಷ್ ಅವರಿಗೆ ಮಧ್ಯಂತರ ಜಾಮೀನು ನೀಡುವಂತೆ ಕೋರಿ ಅವರ ಪರ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಪರಿಗಣಿಸಿದ ಕೋರ್ಟ್ 20 ದಿನಗಳ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಮೈಸೂರು ಡರ್ಬಿ

ರೆಡ್ ಬಿಷಪ್ ಗೆಲ್ಲುವ ನಿರೀಕ್ಷೆ

ಮೈಸೂರು ಡರ್ಬಿ – 2025 ಭಾನುವಾರ ಮುಕ್ತಾಯಗೊಳ್ಳಲಿರುವ ಮೈಸೂರು ರೇಸ್-2025 ಕೊನೆಯ ದಿನದ ಪ್ರಧಾನ ಆಕರ್ಷಣೆ. ಏಳು ಸ್ಪರ್ಧಿಗಳು ಭಾಗವಹಿಸುತ್ತಲಿದ್ದು, ರೆಡ್ ಬಿಷಪ್ ಈ ಡರ್ಬಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸನ್‌ವೇ ಲಾಗೂನ್ 4, ಶೀರ್ ಬ್ಲಿಸ್ 2, ಪ್ಲಾನೆಟ್ ಸೂಪರ್ 1
2ನೇ ರೇಸ್: ಝೂರೆವಿಚ್ 6, ನಿಂಬಲ್ ಸ್ಪಿರಿಟ್ 4, ಎಕ್ಸೆಂಪ್ಲರಿ ಬ್ಲೂಸ್ 9
3ನೇ ರೇಸ್: ಇಮ್ಮೋರ್ಟಲ್ ಬ್ಯೂಟಿ 8, ಮಾಸ್ಟರ್ ವೇ 3, ಸ್ಮೈಲ್ ಆಫ್ ಬ್ಯೂಟಿ 1
4ನೇ ರೇಸ್: ಬೆಲ್ಲಾವಿಟ 3, ನ್ಯಾಚುರಲ್ ಒನ್ 6, ನಾಟಿ ಅಫೇರ್ 2
5ನೇ ರೇಸ್: ಬೆಜವಾಡ ಸುಲ್ತಾನ್ 3, ಮಾರ್ಕ್ ಒನ್ 4, ಮ್ಯಾಪ್ಲ್ ಲೀಫ್ 5
6ನೇ ರೇಸ್: ಡಾನ್ ಕಾರ್ಲೋಸ್ 4, ಆಲ್ಡ್‌ಗೇಟ್ 1, ಐರನ್ ಕ್ಲಾಸಡ್ 2
7ನೇ ರೇಸ್: ರೆಡ್ ಬಿಷಪ್ 3, ಮ್ಯಾಹ್ಲರ್ 1, ಮಿರಾಕಲ್ ಸ್ಟಾರ್ 6
8ನೇ ರೇಸ್: ಫೋರ್ಟಿಸ್ 5, ನಾಟಿ ಸ್ಕಾಟಿ 4, ಎಟರ್ನಲ್ ಗ್ಲೋರಿ 8
9ನೇ ರೇಸ್: ಸ್ಟಾರ್ ಸಿಂಫೋನಿ 1, ವಫದಾರ್ 2, ಟೆಫಿಲ್ಲಾ 3

ಉತ್ತಮ ಬೆಟ್: ಡಾನ್ ಕಾರ್ಲೋಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಗುಂಡಿ ತಪ್ಪಿಸಲು ಹೋಗಿ ಅಪಘಾತ ಕ್ಯಾಂಟರ್ ಲಾರಿಗೆ ಸಿಲುಕಿ ಟೆಕಿ ಸಾವು

ಬೆಂಗಳೂರು: ಮಾದನಾಯಕನಹಳ್ಳಿ ಹತ್ತಿರದ ಹುಸ್ಕೂರು ಎಪಿಎಂಸಿ ರಸ್ತೆಯಲ್ಲಿ ಗುಂಡಿ ತಪ್ಪಿಸಲು ಯತ್ನಿಸುವ ವೇಳೆ ಸಂಭವಿಸಿದ ಅಪಘಾತದಲ್ಲಿ 26 ವರ್ಷದ ಪ್ರಿಯಾಂಕಾ ಮೃತಪಟ್ಟಿದ್ದಾರೆ.

ಸ್ವಾಫ್ಟ್‌ವೇರ್ ಕಂಪನಿಯ ಉದ್ಯೋಗಿ ಪ್ರಿಯಾಂಕಾ ತನ್ನ ಅಣ್ಣನೊಂದಿಗೆ ದ್ವಿಚಕ್ರ ವಾಹನದಲ್ಲಿ ಮಾದಾವರ ಕಡೆಗೆ ತೆರಳುತ್ತಿದ್ದರು. ಈ ವೇಳೆ ಎಪಿಎಂಸಿ ರಸ್ತೆಯಲ್ಲಿ ದೊಡ್ಡ ಗುಂಡಿಯನ್ನು ತಪ್ಪಿಸಲು ಹೋಗಿ ಬೈಕ್ ಸವಾರ ನಿಯಂತ್ರಣ ಕಳೆದುಕೊಂಡರು. ಇಬ್ಬರೂ ರಸ್ತೆ ಮೇಲೆ ಬಿದ್ದರು. ಪ್ರಿಯಾಂಕಾ ಅವರು ಕ್ಯಾಂಟರ್ ಲಾರಿಯ ಚಕ್ರದ ಕೆಳಗೆ ಸಿಲುಕಿದ್ದಾರೆ. ತಲೆಗೆ ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹುಸ್ಕೂರು ಬಳಿ ಕಾಮಗಾರಿಯಿಂದಾಗಿ ರಸ್ತೆ ಹದಗೆಟ್ಟಿದ್ದು, ಗುಂಡಿಯನ್ನು ತಪ್ಪಿಸಲು ಹೋಗಿ ಈ ಅನಾಹುತ ಸಂಭವಿಸಿದೆ. ಘಟನಾ ಸ್ಥಳಕ್ಕೆ ಮಾದನಾಯಕನಹಳ್ಳಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ನೆಲಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಡಯಾಲಿಸಿಸ್‌ಗೆ ಹೆದರಿ ವೃದ್ಧೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಯಾಲಿಸಿಸ್ ಚಿಕಿತ್ಸೆಗೆ ಹೆದರಿ ವೃದ್ಧೆ ರಾಣಿ ಸಿನ್ಹಾ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹರಳೂರು ಕೆರೆಯಲ್ಲಿ ಮೃತದೇಹ ಪತ್ತೆಯಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ. ಅಸಹಜ ಸಾವು (ಯುಡಿಆರ್) ಪ್ರಕರಣ ದಾಖಲಾಗಿದೆ ಎಂದು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಹೇಳಿದರು.

ಜಾರ್ಖಂಡ್‌ನ ರಾಂಚಿಯ ರಾಣಿ ಸಿನ್ಹಾ ಅವರು ಪತಿ ಅಜಿತ್ ಕುಮಾರ್ ಸಿನ್ಹಾ ಅವರೊಂದಿಗೆ ಏಳು ವರ್ಷಗಳಿಂದ ಹೊಸ್ಕೂರಿನ ಚೂಡಸಂದ್ರ ಗ್ರಾಮದ ಜಿ.ಆರ್. ಸಂಕಲ್ಪ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದು, ವಿದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು.

'ರಾಣಿ ಅವರು ಕೆಲವು ವರ್ಷದಿಂದ ಮಧುಮೇಹದಿಂದ ಬಳಲುತ್ತಿದ್ದರು. ಎರಡು ವರ್ಷಗಳಿಂದ ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿದ್ದರು. ಅ.17ರಂದು ಆಸ್ಪತ್ರೆಗೆ ದಾಖಲಾಗಿದ್ದಾಗ, ಡಯಾಲಿಸಿಸ್ ಮಾಡಿಸಬೇಕು ಎಂಬುದಾಗಿ ಸೂಚಿಸಿ ಮನೆಗೆ ಕಳುಹಿಸಿದ್ದರು. ಡಯಾಲಿಸಿಸ್‌ಗೆ ಹೆದರಿ ವೃದ್ಧೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದರು. 'ಡಯಾಲಿಸಿಸ್ ಮಾಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಭಯವಾಗುತ್ತಿದೆ. ಇದರಿಂದ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂಬುದಾಗಿ ವೃದ್ಧೆ ಬರೆದಿಟ್ಟ ಮರಣಪತ್ರವು ಸಿಕ್ಕಿದೆ' ಎಂದು ಪೊಲೀಸರು ಹೇಳಿದರು.

ಬುಡಕಟ್ಟು ಜನರಿಗೆ 'ಕಳಪೆ' ಆಹಾರ



ಪೌಷ್ಟಿಕ ಆಹಾರ ಪೂರೈಕೆ ಕಾರ್ಯಕ್ರಮದಡಿ ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಸಮುದಾಯಗಳಿಗೆ ವಿತರಿಸಿರುವ ಹೆಸರೇ ಇಲ್ಲದ ಎಲ್ಲಿಯವರೆಗೆ ಬಳಸಬಹುದು ಎನ್ನುವ ಮಾಹಿತಿಯೂ ಇಲ್ಲದ ಅಡುಗೆಎಣ್ಣೆ.

ಒಂದನೇ ಪುಟದಿಂದ...

ಜಿನುಗುವ ಬೆಲ್ಲ ಬಾಯಿಗಿಟ್ಟರೆ ಹುಳಿಯ ಅನುಭವವಾಗುತ್ತದೆ, ಕಾಳುಗಳ ಗಾತ್ರ ತೀರಾ ಕಿರಿದಾಗಿದ್ದು ಸಾರು ರುಚಿಸುವುದಿಲ್ಲ, ಬೇಯುವುದಿಲ್ಲ. ಅವಧಿ ಮೀರಿದ ಮೊಟ್ಟೆಗಳಲ್ಲಿ ಅರ್ಧದಷ್ಟು ಬಳಕೆಗೆ ಯೋಗ್ಯವಾಗಿರುವುದಿಲ್ಲ ಎಂದು ಹಾಡಿಯ ಮಹದೇವಮ್ಮ ದೂರಿದರು.

ಮೂರು ತಿಂಗಳ ಹಿಂದೆ ಹೆಸರಿಲ್ಲದ ಕಂಪೆನಿಯ ಕಂದು ಬಣ್ಣಕ್ಕೆ ತಿರುಗಿದ್ದ ದುರ್ವಾಸನೆ ಬೀರುವ ಸೂರ್ಯಕಾಂತಿ ಅಡುಗೆ ಎಣ್ಣೆಯನ್ನು ಚಾಮರಾಜನಗರದಲ್ಲಿ ಪೂರೈಕೆ ಮಾಡಲಾಗಿತ್ತು. ಸಮುದಾಯದಿಂದ ತೀವ್ರ ವಿರೋಧ ವ್ಯಕ್ತವಾದ ಬಳಿಕ ಎಚ್ಚೆತ್ತುಕೊಂಡ ಅಧಿಕಾರಿಗಳು ಬದಲಿ ಅಡುಗೆ ಎಣ್ಣೆ ವಿತರಿಸುವ ಭರವಸೆ ನೀಡಿದ್ದರು. ಇದುವರೆಗೆ ಬೆರಳೆಣಿಕೆ ಮಂದಿಗೆ ಹೊರತಾಗಿ ಬಹುಪಾಲು ಜನರಿಗೆ ಎಣ್ಣೆ ಸಿಕ್ಕಿಲ್ಲ. ಬಾಟಲ್‌ನ ಮುಚ್ಚಳ ತೆಗೆದ ಕಾರಣಕ್ಕೆ ವಾಪಸ್ ಪಡೆಯುತ್ತಿಲ್ಲ ಎಂಬ ದೂರುಗಳು ಕೇಳಿಬಂದಿವೆ. ಮುಚ್ಚಳ ತೆಗೆಯದೆ ನಮಗಾದರೂ ಎಣ್ಣೆ ಕಳಪೆ ಎಂದು ಹೇಗೆ ಗೊತ್ತಾಗುತ್ತದೆ ಎಂದು ಪ್ರಶ್ನಿಸುತ್ತಾರೆ ಅವರು.

ಸಂಶಯಾಸ್ಪದ ವರದಿ: ಕಲಬೆರಕೆ ಅಡುಗೆ ಎಣ್ಣೆ ವಿತರಣೆ ಆರೋಪದ ಹಿನ್ನೆಲೆಯಲ್ಲಿ ಜಿಲ್ಲೆಯ ಆಹಾರ ಸುರಕ್ಷತಾ ಅಧಿಕಾರಿಗಳು ಮೇ 23ರಂದು ಅಡುಗೆ ಎಣ್ಣೆ ಮಾದರಿಯನ್ನು ಮೈಸೂರಿನ ವಿಭಾಗೀಯ ಆಹಾರ ಪ್ರಯೋಗಾಲಯಕ್ಕೆ ಕಳಿಸಿದ್ದರು. ಪರೀಕ್ಷೆಗೊಳಪಡಿಸಿದ ಮುಖ್ಯ ಆಹಾರ ವಿಶ್ಲೇಷಕರು ನೀಡಿರುವ ವರದಿ ಬುಡಕಟ್ಟು ಸಮುದಾಯಗಳ ಜನರಲ್ಲಿ ಅಚ್ಚರಿ ಉಂಟುಮಾಡಿದೆ.

ಕಂದುಬಣ್ಣದ ದುರ್ವಾಸನೆ ಬೀರುವ ಅಡುಗೆ ಎಣ್ಣೆ ಬಳಕೆ ಯೋಗ್ಯವಾಗಿದ್ದು ಅಯೋಡಿನ್ ಹಾಗೂ ಆಸಿಡ್ ಪ್ರಮಾಣ ಸೇರಿದಂತೆ ಇತರ ಅಂಶಗಳು ನಿಗದಿತ ಪ್ರಮಾಣದಲ್ಲಿದ್ದು ಆಹಾರ ಸುರಕ್ಷತೆ ಹಾಗೂ ಗುಣಮಟ್ಟ ನಿಯಂತ್ರಣ ಕಾಯ್ದೆಯ ಅನುಸಾರವಾಗಿವೆ ಎಂದು ವಿಭಾಗೀಯ ಆಹಾರ ಪ್ರಯೋಗಾಲಯದಿಂದ ವರದಿ ನೀಡಲಾಗಿದೆ. ಡಿ.31, 2024ರಲ್ಲಿ ಪರೀಕ್ಷೆಗೆ ಕಳುಹಿಸಲಾಗಿದ್ದ ತೊಗರಿಬೇಳೆ, ಅಲಸಂದೆ ಕಾಳು, ರಾಗಿಯ ಗುಣಮಟ್ಟವೂ ಉತ್ತಮವಾಗಿದೆ ಎಂಬ ವರದಿ ಬಂದಿದೆ.

ಜನರ ಸವಾಲು: ಮುಗ್ಗಲು ಹಿಡಿದು ಬೇಳೆ ಕಾಳುಗಳು, ದುರ್ವಾಸನೆ ಬೀರುವ ಅಡುಗೆ ಎಣ್ಣೆ ಬಳಕೆಗೆ ಯೋಗ್ಯ ಎಂದಾದರೆ ಅಧಿಕಾರಿಗಳೇ ನಮಗೆ ನೀಡಿರುವ ಆಹಾರ ಪದಾರ್ಥಗಳನ್ನು ತಿಂದು ಇವೆಲ್ಲಾ ಒಳ್ಳೆಯ ಗುಣಮಟ್ಟದಿಂದ ಇದೆ ಎಂದು ಸಾಬೀತು ಪಡಿಸಲಿ. ಅಧಿಕಾರಿಗಳು ಪ್ರಯೋಗಾಲಯಕ್ಕೆ ಕಳಪೆ ಆಹಾರದ ಮಾದರಿಗಳ ಬದಲಾಗಿ ಬೇರೆ ಬದಲಿ ಮಾದರಿಗಳನ್ನು ಕಳುಹಿಸಿರುವ ಅನುಮಾನವಿದೆ ಎಂದು ಸಂಶಯ ವ್ಯಕ್ತಪಡಿಸುತ್ತಾರೆ ಆದಿವಾಸಿ ಸಮುದಾಯದ ಮುಖಂಡ ಸಿ.ಮಾದೇಗೌಡ.

'ನಾವು ವಾಪಸ್ ನೀಡಿದ ಎಣ್ಣೆ, ಕಾಳುಗಳನ್ನು ಸೀಲ್ ಮಾಡಿ ನಮ್ಮ ಎದುರಿಗೆ ಪ್ರಯೋಗಾಲಯಕ್ಕೆ ಪರಿಶೀಲನೆಗೆ ಕಳುಹಿಸಬೇಕಿತ್ತು. ಆದರೆ ಬೇರೆ ಬ್ಯಾಚ್‌ನ ಪಡಿತರವನ್ನು ಕಳುಹಿಸಿದ್ದಾರೆ. ಕಾಡಿನಂಚಿನಲ್ಲಿರುವ ನಮಗೆ ಸರ್ಕಾರವೇ ಮೋಸ ಮಾಡಿದರೆ ಇನ್ಯಾರಿಗೆ ದೂರಬೇಕು' ಎನ್ನುತ್ತಾರೆ ಅವರು.

ಆದಿವಾಸಿಗಳಿಗೆ ಮಳೆಗಾಲದಲ್ಲಿ ಕೂಲಿ ಸಿಗುವುದಿಲ್ಲ, ಈ ಅವಧಿಯಲ್ಲಿ ಸರ್ಕಾರ ಪೂರೈಸುವ ಪೌಷ್ಟಿಕ ಆಹಾರವನ್ನೇ ಬಹುತೇಕರು ನೆಚ್ಚಿಕೊಂಡಿದ್ದಾರೆ. ಆದರೆ, ನಿಯಮಿತವಾಗಿ ಕಿಟ್ ವಿತರಣೆಯಾಗದೆ ಸಂಕಷ್ಟ ಅನುಭವಿಸುತ್ತಿದ್ದಾರೆ. ಮೂರು ತಿಂಗಳ ಪೌಷ್ಟಿಕ ಆಹಾರದ ಕಿಟ್‌ಗಳು ವಿತರಣೆಗೆ ಬಾಕಿ ಇವೆ ಎನ್ನುತ್ತಾರೆ ಸೋಲಿಗರ ಮುಖಂಡ ಮುತ್ತಯ್ಯ.

ಜಿಲ್ಲಾ ಸಮಿತಿಯ ಅಧಿಕಾರ ಮೊಟಕು: ಸರ್ಕಾರದ ಮಹತ್ವಾಕಾಂಕ್ಷಿ ಪೌಷ್ಟಿಕ ಆಹಾರ ಪೂರೈಕೆ ಕಾರ್ಯಕ್ರಮ ಹಳಿತಪ್ಪಲು ಟೆಂಡರ್ ಪ್ರಕ್ರಿಯೆಯಲ್ಲಿ ಆಗಿರುವ ಬದಲಾವಣೆ ಹಾಗೂ ಜಿಲ್ಲಾ ಸಮಿತಿಯ ಅಧಿಕಾರ ಮೊಟಕುಗೊಳಿಸಿರುವುದು ಪ್ರಮುಖ ಕಾರಣ ಎಂದು ಆರೋಪಗಳು ಕೇಳಿಬಂದಿವೆ.

ಹಿಂದೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಸಮಿತಿಯಿಂದ ಟೆಂಡರ್ ಕರೆಯಲಾಗುತ್ತಿತ್ತು. ಟೆಂಡರ್ ಪಡೆದ ಸಂಸ್ಥೆಯು ಸಮಿತಿಯ ಕಣ್ಗಾವಲು ಹಾಗೂ ನಿಯಂತ್ರಣಕ್ಕೆ ಒಳಪಡುತ್ತಿತ್ತು. ಕಳಪೆ ಆಹಾರ ಪೂರೈಕೆಯಾದ ಬಗ್ಗೆ ಸಮಿತಿಗೆ ದೂರುಗಳು ಬಂದರೆ ಟೆಂಡರ್‌ದಾರ ಸಂಸ್ಥೆಗೆ ನೋಟಿಸ್ ನೀಡುವ, ಪದೇಪದೇ ನಿಯಮ ಉಲ್ಲಂಘಿಸಿದರೆ ಟೆಂಡರ್ ರದ್ದುಗೊಳಿಸುವ, ಕಪ್ಪುಪಟ್ಟಿಗೆ ಸೇರಿಸುವ ಅಧಿಕಾರ ಜಿಲ್ಲಾ ಸಮಿತಿಗೆ ಇತ್ತು.

ಜಿಲ್ಲಾ ಸಮಿತಿಗಳ ಅಧಿಕಾರ ಮೊಟಕುಗೊಳಿಸಿ ರಾಜ್ಯಮಟ್ಟದಲ್ಲಿ ಟೆಂಡರ್ ಹಂಚಿಕೆ ಆರಂಭಿಸಿದ ಮೇಲೆ ಸಮಸ್ಯೆ ಗಂಭೀರವಾಗಿದೆ. ಕಳಪೆ ಆಹಾರ ಪೂರೈಕೆ ಮಾಡಿದ ಸಂಸ್ಥೆಯ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಅಧಿಕಾರ ಜಿಲ್ಲಾ ಸಮಿತಿಗೆ ಇಲ್ಲದಂತಾಗಿದೆ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ ಹೆಸರೇಳಲು ಬಯಸದ ಜಿಲ್ಲಾಮಟ್ಟದ ಅಧಿಕಾರಿಗಳು.

ರಾಜ್ಯ ಮಟ್ಟದ ಅಧಿಕಾರಿಗಳು ದೂರಿಗೆ ಸ್ಪಂದಿಸುವುದಿಲ್ಲ. 'ಪರಿಶೀಲಿಸುತ್ತೇವೆ' ಎಂಬ ಸಿದ್ದ ಉತ್ತರ ಹೊರತಾಗಿ ಕ್ರಮ ಜರುಗಿಸುವುದಿಲ್ಲ. ಇತ್ತ ಟೆಂಡರ್ ಪಡೆದ ಸಂಸ್ಥೆಯ ಪ್ರತಿನಿಧಿಗಳು ಕ್ಯಾರೆ ಎನ್ನುವುದಿಲ್ಲ. ಆದಿವಾಸಿಗಳ ನೋವು ಅರಣ್ಯರೋಧನವಾಗಿದೆ. ಟೆಂಡರ್ ಪಡೆದವರು ಕೆಲವು ಜಿಲ್ಲೆಗಳಲ್ಲಿ ಆಹಾರ ಪದಾರ್ಥಗಳನ್ನು ಪೂರೈಸಲು ಉಪ ಗುತ್ತಿಗೆ ನೀಡಿರುವ ದೂರುಗಳು ಕೇಳಿ ಬಂದಿವೆ. ಉಪ ಗುತ್ತಿಗೆ ಪಡೆದವರು ಲಾಭದಾಸೆಗೆ ಕಳಪೆ ಆಹಾರ ಪದಾರ್ಥಗಳನ್ನು ಹಂಚಿಕೆ ಮಾಡುತ್ತಿದ್ದಾರೆ ಎಂದು ದೂರುತ್ತಾರೆ ಮುಖಂಡರು.

ಕರಾವಳಿಯಲ್ಲೂ ಇದೇ ಕಥೆ: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ 478 ಹಾಡಿಗಳಲ್ಲಿ 95,537 ಮಂದಿ ಬುಡಕಟ್ಟು ಸಮುದಾಯದವರು ವಾಸವಿದ್ದಾರೆ. ಉಭಯ ಜಿಲ್ಲೆಗಳಲ್ಲಿ 15,991 ಕೊರಗರು, 9,640 ಮಲೆಕುಡಿಯರು, 69,726 ಮರಾಠಿ ನಾಯಕರು, 180 ಮಂದಿ ಡೋಂಗ್ರಿ ಗೆರಾಸಿಯ ಸಮುದಾಯದವರು ನೆಲೆಸಿದ್ದಾರೆ.

ಅಪೌಷ್ಟಿಕತೆ ಹಾಗೂ ಅನುವಂಶೀಯ ಕಾಯಿಲೆಗಳಿಂದ ಬಳಲುತ್ತಿರುವ ಆದಿವಾಸಿಗಳಿಗೆ ಪೂರೈಕೆಯಾಗುತ್ತಿರುವ ಆಹಾರದಲ್ಲಿ ಗುಣಮಟ್ಟದ ಕೊರತೆ ಕಾಡುತ್ತಿದೆ. ಜೂನ್ ತಿಂಗಳಲ್ಲಿ ಕೊಳೆತ ಮೊಟ್ಟೆ, ಬಣ್ಣ ಕಳೆದುಕೊಂಡ ಅಡುಗೆ ಎಣ್ಣೆ, ಹುಳು ಬಿದ್ದ ದವಸ ಧಾನ್ಯಗಳನ್ನು ವಿತರಿಸಲಾಗಿದ್ದು ಕೊರಗ ಸಮುದಾಯದ ಮುಖಂಡರು ಪ್ರತಿಭಟನೆ ನಡೆಸಿ ಗುಣಮಟ್ಟದ ಆಹಾರ ಪೂರೈಕೆ ಮಾಡುವಂತೆ ಜಿಲ್ಲಾಡಳಿತಕ್ಕೆ ಒತ್ತಾಯಿಸಿದ್ದಾರೆ.

ಮೂರು ಅಥವಾ ನಾಲ್ಕು ತಿಂಗಳಿಗೊಮ್ಮೆ ಆಹಾರ ವಿತರಿಸುವುದರಿಂದ ದೀರ್ಘ ಕಾಲ ದಾಸ್ತಾನಿರಿಸಲಾಗದೆ ಬಹುಪಾಲು ಆಹಾರ ಪದಾರ್ಥಗಳು ಕೆಡುತ್ತಿವೆ. ಕರಾವಳಿಯ ಆಹಾರ ಪದ್ಧತಿಗೆ ತಕ್ಕಂತೆ ಪೌಷ್ಟಿಕ ಆಹಾರ ನೀಡಬೇಕು, ಬೆಳ್ತಿಗೆ ಅಕ್ಕಿ ಬದಲಾಗಿ ಕುಚಲಕ್ಕಿ, ಸಕ್ಕರೆ ಬದಲಾಗಿ ಬೆಲ್ಲ ವಿತರಿಸಬೇಕು ಎಂಬುದು ಕೊರಗ ಸಮುದಾಯದ ಮುಖಂಡರ ಒತ್ತಾಯ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿದ್ದಿ ಸಮುದಾಯದ 4,240 ಬಡ ಕುಟುಂಬಗಳಿಗೆ ಪೌಷ್ಟಿಕ ಆಹಾರದ ಕಿಟ್ ನೀಡಲಾಗುತ್ತಿದೆ. ತಿಂಗಳಿಗೊಮ್ಮೆ ವಿತರಿಸುವ ಬದಲು ಒಂದೂವರೆ ತಿಂಗಳಿಗೆ ಕಿಟ್ ನೀಡಲಾಗುತ್ತಿದೆ ಎಂಬುದು ಸಿದ್ದಿ ಜನರ ಆರೋಪ.

'ಕಳೆದ ವರ್ಷ 6 ತಿಂಗಳಿಗೊಮ್ಮೆ ಪೌಷ್ಟಿಕ ಆಹಾರ ವಿತರಣೆ ಮಾಡಲಾಗಿತ್ತು. ಆಹಾರ ಪದಾರ್ಥಗಳ ಗುಣಮಟ್ಟದಲ್ಲಿ ಆಗಾಗ ವ್ಯತ್ಯಾಸ ಉಂಟಾಗುತ್ತಲೇ ಇರುತ್ತದೆ. ಹಲವು ಸಲ ಒಡೆದ ಮೊಟ್ಟೆ ಹಾಗೂ ಕಳಪೆ ಧಾನ್ಯಗಳನ್ನು ಕೊಡಲಾಗಿದೆ ಎಂದು ಹಳಿಯಾಳದ ಜೂಲಿಯಾನಾ ಸಿದ್ದಿ ದೂರಿದರು.

ಮೂರ್ನಾಲ್ಕು ತಿಂಗಳ ಕಿಟ್ ವಿತರಣೆ: ಅಪೌಷ್ಟಿಕತೆ ಹಾಗೂ ರಕ್ತಹೀನತೆಯಿಂದ ಬಳಲುತ್ತಿರುವ ಬುಡಕಟ್ಟು ಸಮುದಾಯಗಳಿಗೆ ಪೌಷ್ಟಿಕ ಆಹಾರದ ಹೆಸರಿನಲ್ಲಿ ಕಳಪೆ ಆಹಾರ ನೀಡಿದರೆ ಅವರ ಆರೋಗ್ಯ ಮತ್ತಷ್ಟು ಹದಗೆಡಲಿದೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ ಉಡುಪಿ ಜಿಲ್ಲಾ ಮಲೆಕುಡಿಯ ಸಂಘದ ಅಧ್ಯಕ್ಷ ಗಂಗಾಧರ ಗೌಡ.

ಪ್ರತಿತಿಂಗಳು ನಿಯಮಿತವಾಗಿ ಆಹಾರ ಪದಾರ್ಥಗಳನ್ನು ವಿತರಿಸಿದೆ ಮೂರು ತಿಂಗಳ ಆಹಾರವನ್ನು ಒಟ್ಟಿಗೆ ಹಂಚಿಕೆ ಮಾಡಲಾಗುತ್ತದೆ. ಇದರಿಂದ ಮಳೆಗಾಲದಲ್ಲಿ ಆಹಾರ ಪದಾರ್ಥಗಳನ್ನು ಹುಳು ಬೀಳುತ್ತಿದ್ದು ಬಳಸಲಾಗದೆ ಹಾಳಾಗುತ್ತಿವೆ. ಐದಾರು ಕೆ.ಜಿ ಬೇಳೆ ಕಾಳುಗಳು, ಎಣ್ಣೆಕಾಳುಗಳು, ಬೆಲ್ಲ, ಆರೇಳು ಲೀಟರ್ ಅಡುಗೆ ಎಣ್ಣೆಯನ್ನು ಒಂದೇ ಬಾರಿ ಕೊಟ್ಟಾಗ ಕೆಲವರು ಮಾರಾಟ ಮಾಡುತ್ತಾರೆ ಎನ್ನುತ್ತಾರೆ ಮುಖಂಡರು.

ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ತೀರಾ ಹಿಂದುಳಿದ ಬುಡಕಟ್ಟು ನಿವಾಸಿಗಳ ಜೀವನಮಟ್ಟ ಸುಧಾರಿಸಲು ಗುಣಮಟ್ಟದ ಆಹಾರಪದಾರ್ಥಗಳನ್ನು ನೀಡಬೇಕು. ಕಳಪೆ ಗುಣಮಟ್ಟದ ತಿನ್ನಲು ಯೋಗ್ಯವಲ್ಲದ ಪದಾರ್ಥಗಳನ್ನು ಸರಬರಾಜು ಮಾಡಿದ ಪೂರೈಕೆದಾರರು ಹಾಗೂ ಅಧಿಕಾರಿಗಳ ವಿರುದ್ಧ ಕಾನೂನುಕ್ರಮ ತೆಗೆದುಕೊಳ್ಳದಿದ್ದರೆ ಇದೇ ರೀತಿಯ ಅವಾಂತರಗಳು ಮುಂದುವರೆಯುತ್ತದೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ

ಪೂರಕ ಮಾಹಿತಿ: ರಾಜೇಶ್ ರೈ ಚಟ್ಲ, ಗಿರೀಶ್ ಕೆ.ಎಸ್, ನವೀನ್ ಕುಮಾರ್ ಜಿ, ಗಣಪತಿ ಹೆಗಡೆ

ಪ್ರತಿ ತಿಂಗಳು ವಿತರಿಸುವ ಆಹಾರ ಧಾನ್ಯಗಳು

ಆಹಾರ ಪದಾರ್ಥ	ಪ್ರಮಾಣ (ಕೆಜಿಗಳಲ್ಲಿ)
ರಾಗಿ ಅಥವಾ ಅಕ್ಕಿ	8
ತೊಗರಿಬೇಳೆ	3
ಹುರುಳಿಕಾಳು	1
ಕಡಲೆಕಾಳು	1
ಅಲಸಂದೆ ಕಾಳು	1
ಹೆಸರುಕಾಳು	1
ಕಡಲೆಬೀಜ	1
ಸಕ್ಕರೆ	1
ಬೆಲ್ಲ	1
ಅಡುಗೆ ಎಣ್ಣೆ	2 ಲೀ
ತುಪ್ಪ	ಅರ್ಧ ಕೆ.ಜಿ
ಮೊಟ್ಟೆ	30



ಚಾಮರಾಜನಗರ ಜಿಲ್ಲೆಯ ಯರಕನಗದ್ದೆ ಕಾಲೊನಿಯಲ್ಲಿ ಕುಳಿತಿರುವ ಆದಿವಾಸಿಗಳು

77 ಮಂದಿಗೆ ಸಿಕಲ್‌ಸೆಲ್ ರೋಗ

ಚಾಮರಾಜನಗರ ಜಿಲ್ಲೆಯಲ್ಲಿ 77 ಮಂದಿ ಆದಿವಾಸಿಗಳು ಕುಡುಗೋಲು (ಸಿಕಲ್‌ಸೆಲ್) ಕಾಯಿಲೆಯಿಂದ ಬಳಲುತ್ತಿದ್ದಾರೆ. 1,000 ಮಂದಿಯಲ್ಲಿ ರೋಗವಾಹಕರು ಇದ್ದಾರೆ. ರಕ್ತಹೀನತೆ, ಮಧುಮೇಹ, ರಕ್ತದೊತ್ತಡದಂತೆ ಅಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿರುವ ಬುಡಕಟ್ಟು ಸಮುದಾಯಗಳ ಜನರಿಗೆ ಅಪೌಷ್ಟಿಕ ಆಹಾರ ಪೂರೈಕೆಯಾಗುತ್ತಿರುವುದು ಆರೋಗ್ಯ ಸಮಸ್ಯೆಗಳು ಮತ್ತಷ್ಟು ಗಂಭೀರವಾಗಲು ಕಾರಣವಾಗಿದೆ.

ಜಿಲ್ಲಾವಾರು ಬುಡಕಟ್ಟು ಜನಾಂಗದವರ ವಿವರ(2011ರ ಜನಗಣತಿ)

ಜಿಲ್ಲೆ	ಹಾಡಿಗಳ ಸಂಖ್ಯೆ	ಬುಡಕಟ್ಟು ಜನಸಂಖ್ಯೆ
ಮೈಸೂರು	215	49,778
ಚಾಮರಾಜನಗರ	158	27,763
ಕೊಡಗು	228	26,909
ದಕ್ಷಿಣ ಕನ್ನಡ	158	82,268
ಉತ್ತರ ಕನ್ನಡ	119	10,874
ಉಡುಪಿ	320	13,269
ಚಿಕ್ಕಮಗಳೂರು	427	24,232
ಶಿವಮೊಗ್ಗ	82	2,250
ರಾಮನಗರ	111	10,754

'ಸ್ಥಳೀಯವಾಗಿ ಖರೀದಿಸಿ ನೀಡಿ'

ಸ್ಥಳೀಯ ಆಹಾರ ಪದ್ಧತಿಗೆ ಒಗ್ಗಿರುವುದರಿಂದ ಸ್ಥಳೀಯವಾಗಿಯೇ ಆಹಾರ ಪದಾರ್ಥಗಳನ್ನು ಖರೀದಿಸಿ ನೀಡಬೇಕು, ಕುಚ್ಚಲಕ್ಕಿ, ಗಾಣದ ಎಣ್ಣೆ (ತೆಂಗಿನ ಎಣ್ಣೆ) ಹಾಗೂ ದವಸ ಧಾನ್ಯಗಳನ್ನೂ ನೀಡಬೇಕು.

ಗಂಗಾಧರ ಗೌಡ, ಉಡುಪಿ ಜಿಲ್ಲಾ ಮಲೆಕುಡಿಯ ಸಂಘದ ಅಧ್ಯಕ್ಷ

'ಪೌಷ್ಟಿಕ ಆಹಾರದ ಬಗ್ಗೆ ಜಾಗೃತಿ ಮೂಡಿಸಿ'

ಪ್ರಾಚೀನ ಆಹಾರ ಪದ್ಧತಿಗೆ ಒಗ್ಗಿರುವ ಹಲವರು ಪೌಷ್ಟಿಕ ಆಹಾರ ಸೇವನೆ ಮಾಡುವುದಿಲ್ಲ. ಅಧಿಕಾರಿಗಳು ಹಾಡಿಗಳಿಗೆ ಭೇಟಿ ನೀಡಿ ಪೌಷ್ಟಿಕ ಆಹಾರ ಸೇವನೆಯ ಅಗತ್ಯತೆ ಹಾಗೂ ಮಹತ್ವದ ಬಗ್ಗೆ ತಿಳಿವಳಿಕೆ ಮೂಡಿಸಬೇಕು. ಮದ್ಯವ್ಯಸನಿಗಳಿಗೆ ಕೌನ್ಸೆಲಿಂಗ್ ಮೂಲಕ ವ್ಯಸನಮುಕ್ತಗೊಳಿಸಬೇಕು, ಹಾಡಿಗಳಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಬೇಕು.

ಎಚ್.ಎಂ.ಕಾವೇರಿ, ಬುಡಕಟ್ಟು ಸಮುದಾಯದ ಪರ ಹೋರಾಟಗಾರ್ತಿ

ಸ್ಥಳೀಯವಾದ ಆಹಾರ ನೀಡಿ

ಎಲ್ಲ ಆದಿವಾಸಿಗಳಿಗೂ ಏಕರೂಪದ ಪೌಷ್ಟಿಕ ಆಹಾರ ನೀಡುವ ಬದಲಿಗೆ ಪ್ರಾದೇಶಿಕತೆಗೆ ಅನುಗುಣವಾಗಿ ಸ್ಥಳೀಯ ಆಹಾರ ಪದ್ಧತಿಯಂತೆ ನೀಡಬೇಕು. ಕಾಳಸಂತೆಯಲ್ಲಿ ಆಹಾರ ಮಾರಾಟ ಮಾಡದಂತೆ ಮನವರಿಕೆ ಮಾಡಿಕೊಡಕೊಡಬೇಕು.

ವಿ.ಮುತ್ತಯ್ಯ, ರಾಜ್ಯ ಮೂಲನಿವಾಸಿ ಬುಡಗಟ್ಟು ಜನರ ವೇದಿಕೆಯ ಸಂಚಾಲಕ

ಆರೋಗ್ಯ ತಪಾಸಣೆ ನಡೆಸಿ

ಸರ್ಕಾರ ವಿತರಿಸುವ ಪೌಷ್ಟಿಕ ಆಹಾರದ ಮಹತ್ವ ಹಾಗೂ ಬಳಕೆಯ ಬಗ್ಗೆ ಕೊರಗರಿಗೆ ಅರಿವಿಲ್ಲ. ಅಧಿಕಾರಿಗಳು ಹಾಡಿಗಳಿಗೆ ಬಂದು ಪೌಷ್ಟಿಕ ಆಹಾರದ ಮಹತ್ವ ತಿಳಿಸಿಕೊಡಬೇಕು, ನಿಯಮಿತವಾಗಿ ಆರೋಗ್ಯ ತಪಾಸಣೆ ನಡೆಸಬೇಕು.

ಸುಶೀಲಾ ನಾಡ, ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟದ ಅಧ್ಯಕ್ಷೆ

ಮಳೆಗಾಲದಲ್ಲಿ ಪೂರೈಕೆ ವ್ಯತ್ಯಯ

'ಮಳೆಗಾಲದಲ್ಲಿ ಕಿಟ್ ಪೂರೈಕೆಯಲ್ಲಿ ವ್ಯತ್ಯಯ ಸಹಜ. ಕಳೆದ ಆರು ತಿಂಗಳಿನಿಂದ ಕಿಟ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗದಂತೆ ಎಚ್ಚರಿಕೆ ವಹಿಸಲಾಗಿದೆ'

ವೈ.ಕೆ.ಉಮೇಶ್, ಉತ್ತರ ಕನ್ನಡ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಉಪನಿರ್ದೇಶಕ

ಕಾಳಸಂತೆಯಲ್ಲಿ ಮಾರಾಟ

ಪೌಷ್ಟಿಕ ಆಹಾರದ ಕಿಟ್‌ಗಳು ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವ ದೂರುಗಳು ಅಲ್ಲಲ್ಲಿ ಕೇಳಿಬಂದಿವೆ. ದುಶ್ಚಟಗಳಿಗೆ ಹಣ ಹೊಂದಿಸಲು ಕೆಲವರು ಪೌಷ್ಟಿಕ ಆಹಾರವನ್ನು ತೀರಾ ಕಡಿಮೆ ದರಕ್ಕೆ ನಗರ ಸೇರಿದಂತೆ ಹಾಡಿಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಅಂಗಡಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಕೆಲವು ಹಾಡಿಗಳಿಗೆ ಪೌಷ್ಟಿಕ ಆಹಾರ ಖರೀದಿಸಲೆಂದೇ ಪ್ರತಿ ತಿಂಗಳು ವರ್ತಕರು ಬರುತ್ತಾರೆ. ಕೆಲವರು ಅಂಗಡಿಗಳಿಗೆ ಖುದ್ದು ಕೊಂಡೊಯ್ದು ಮಾರಾಟ ಮಾಡಿ ಬರುತ್ತಾರೆ ಎಂದು ಹೆಸರು ಹೇಳಲಿಚ್ಛಿಸದ ಕೊಡಗಿನ ಆದಿವಾಸಿ ಸಮುದಾಯಗಳ ಮುಖಂಡರು ಬೇಸರ ವ್ಯಕ್ತಪಡಿಸಿದರು.

ಈ ಬಗ್ಗೆ 'ಪ್ರಜಾವಾಣಿ' ರಿಯಾಲಿಟಿ ಚೆಕ್ ಮಾಡಿದಾಗ ಕೆಲವರು ಕಾಳಸಂತೆಯಲ್ಲಿ ಪೌಷ್ಟಿಕ ಆಹಾರ ಮಾರಾಟವಾಗುತ್ತಿರುವುದು ಕಂಡುಬಂತು. ಈ ಕುರಿತು ವ್ಯಕ್ತಿಯೊಬ್ಬರನ್ನು ಪ್ರಶ್ನಿಸಿದಾಗ 'ಮದ್ಯ ಸೇವಿಸಲು ಹಣ ಇಲ್ಲ, ಹಾಗಾಗಿ ಮಾರಾಟ ಮಾಡಲು ಬಂದಿದ್ದೇನೆ' ಎಂಬ ಉತ್ತರ ನೀಡಿದರು. 'ಮನೆ ನಡೆಸಲು ಹಣ ಬೇಕಲ್ಲವೇ? ದುಡಿಮೆ ಇಲ್ಲದಾಗ ಆಹಾರ ಪದಾರ್ಥಗಳನ್ನು ಮಾರಾಟ ಮಾಡುವುದು ಅನಿವಾರ್ಯ' ಎಂದು ಮಹಿಳೆಯೊಬ್ಬರು ಉತ್ತರಿಸಿದರು. ಇನ್ನೂ ಕೆಲವರು ಆಹಾರ ನಮಗೆ ಒಗ್ಗುವುದಿಲ್ಲ' ಎಂದರು.



ಕೊರಗ ಸಮುದಾಯದವರಿಗೆ ಇತ್ತೀಚೆಗೆ ವಿತರಿಸಿದ್ದ ಮೊಟ್ಟೆ

ಡಿಕ್ಕಿ ಮುನ್ನವೇ ಬೈಕ್ ಸವಾರ ಸಾವು

ಒಂದನೇ ಪುಟದಿಂದ...

ಬಸ್ಸಿನ ಕೆಳಗೆ ಬೆಂಕಿ ಕಾಣಿಸಿಕೊಂಡಿದ್ದರಿಂದ ಆತಂಕಗೊಂಡ ಯರ್ರಿಸ್ವಾಮಿ ಸ್ಥಳದಿಂದ ಕಾಲ್ಕಿತ್ತಿದ್ದರು ಎಂದು ಅವರು ಹೇಳಿದ್ದಾರೆ.

ಬಸ್ ಬೆಂಕಿಗೆ ಆಹುತಿಯಾದ ಸ್ಥಳದಿಂದ ಸುಮಾರು 200ರಿಂದ 300 ಮೀಟರ್ ದೂರದಲ್ಲಿ ಶಿವಶಂಕರ್ ಮೃತದೇಹ ಪತ್ತೆಯಾಗಿದೆ. ಈ ಸ್ಥಳವನ್ನು ರಸ್ತೆ ಸಾರಿಗೆ ಪ್ರಾಧಿಕಾರ ಮತ್ತು ಪೊಲೀಸ್ ತಂಡಗಳು ಶನಿವಾರ ಪರಿಶೀಲನೆ ನಡೆಸಿದವು. ಬೈಕ್ ವಿಭಜಕಕ್ಕೆ ಡಿಕ್ಕಿ ಹೊಡೆದ ಸ್ಥಳದಲ್ಲಿನ ಕುರುಹುಗಳ ಶೋಧವನ್ನೂ ಈ ತಂಡದವರು ಪರಿಶೀಲಿಸಿದರು.

ಬೈಕ್ ಸವಾರ ಮದ್ಯ ಸೇವಿಸಿದ್ದರೇ?: ಬೈಕ್ ಸವಾರ ಶಿವಶಂಕರ್ ಅನುಮಾನಾಸ್ಪದ ನಡವಳಿಕೆ ಸೆರೆಯಾಗಿ ಇರುವ ವಿಡಿಯೊ ವ್ಯಾಪಕವಾಗಿ ಹರಿದಾಡಿದ್ದು, ಅವರು ಮದ್ಯ ಸೇವಿಸಿದ್ದರೇ ಎಂಬ ಶಂಕೆ ಮೂಡಿದೆ ಎಂದು ಪೊಲೀಸರು ಹೇಳಿದ್ದಾರೆ.

'ಪೆಟ್ರೋಲ್ ಬಂಕ್‌ನಲ್ಲಿ ಶಿವಶಂಕರ್ ಬೈಕ್ ನಿಲ್ಲಿಸಿ ಸಿಬ್ಬಂದಿಗಾಗಿ ಹುಡುಕಾಡಿ, ಸಿಡಿಮಿಡಿಗೊಂಡಿದ್ದರು. ಇದೇ ವೇಳೆ ಕಿರುಚಾಡುತ್ತಾ ಬೈಕ್ ಅನ್ನು ಸೈಡ್ ಸ್ಟ್ಯಾಂಡ್‌ನಿಂದಲೇ ಮತ್ತೊಂದು ಬದಿಗೆ ತಿರುಗಿಸಿ, ಮುಂದೆ ಸಾಗುವಾಗ ಸಮತೋಲನ ಕಾಯ್ದುಕೊಳ್ಳಲು ಹೆಣಗಾಡಿದ್ದ ದೃಶ್ಯಗಳೂ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿವೆ' ಎಂದು ಅವರು ತಿಳಿಸಿದ್ದಾರೆ.

ಸುರಕ್ಷಾ ಮಾನದಂಡಗಳ ಉಲ್ಲಂಘನೆ

ಹೈದರಾಬಾದ್: ಬೆಂಕಿ ಅಪಘಾತಕ್ಕೀಡಾದ ವಿ. ಕಾವೇರಿ ಟ್ರಾವೆಲ್ಸ್‌ನ ಎಸಿ ಸ್ಲೀಪರ್ ಬಸ್ ಹಲವು ಸುರಕ್ಷತಾ ಮಾನದಂಡಗಳನ್ನು ಉಲ್ಲಂಘಿಸಿರುವುದು ಆರಂಭಿಕ ತಪಾಸಣೆ ವೇಳೆ ಗೊತ್ತಾಗಿದೆ ಎಂದು ಆಂಧ್ರ ಪ್ರದೇಶ ರಸ್ತೆ ಸಾರಿಗೆ ಪ್ರಾಧಿಕಾರದ (ಆರ್‌ಟಿಎ) ಅಧಿಕಾರಿಗಳು ತಿಳಿಸಿದ್ದಾರೆ.

'ಈ ಬಸ್ ಅನ್ನು ಸ್ಲೀಪರ್ ಕೋಚ್ ಆಗಿ ಪರಿವರ್ತಿಸಲಾಗಿದೆ. ಅದರೆ ಪರಿವರ್ತನೆಗಾಗಿ ಅನುಮೋದನೆ ಪಡೆದಿಲ್ಲ' ಎಂದು ಅವರು ಹೇಳಿದ್ದಾರೆ.

ವಾಹನ ನಿರ್ಮಾಣ, ಅಗ್ನಿ ಸುರಕ್ಷತೆ, ತುರ್ತು ನಿರ್ಗಮನ ಮತ್ತು ಒಳಗಾಂಣ ವಸ್ತುಗಳ ಬಳಕೆ ಸೇರಿದಂತೆ ಒಟ್ಟಾರೆ ರಚನೆಯಲ್ಲಿ ಹಲವು ಮಹತ್ವದ ಸುರಕ್ಷತಾ ಮಾರ್ಗಸೂಚಿಗಳ ಪಾಲನೆ ಆಗಿಲ್ಲ ಎಂದು ಅವರು ತಿಳಿಸಿದ್ದಾರೆ.

ಅಗ್ನಿ ಪತ್ತೆ ಮತ್ತು ನಿಗ್ರಹ ವ್ಯವಸ್ಥೆ ಸಹ ಈ ಬಸ್‌ನಲ್ಲಿ ಇರಲಿಲ್ಲ. ಒಳಾಂಗಣದಲ್ಲಿ ಬಳಸುವ ಪರದೆಗಳು, ಕುಶನ್‌ಗಳು, ದಿಂಬುಗಳು ಅಗ್ನಿ ನಿರೋಧಕ ಆಗಿರಬೇಕು. ಆದರೆ ಬಸ್‌ನಲ್ಲಿ ಇದ್ದ ಈ ವಸ್ತುಗಳು ಹೆಚ್ಚು ದಹನಕಾರಿ ಆಗಿದ್ದವು ಎಂದು ಅವರು ಹೇಳಿದ್ದಾರೆ.

ಕಿಟಕಿಗಳನ್ನು ಒಡೆಯಲು ವಿನ್ಯಾಸಗೊಳಿಸಲಾದ ಚಿಕ್ಕ ಸುತ್ತಿಗೆಯಂತಹ ಉಪಕರಣಗಳು ಬಸ್ ಒಳಗೆ ಅಗತ್ಯವಿರುವಷ್ಟು ಸಂಖ್ಯೆಯಲ್ಲಿ ಇರಲಿಲ್ಲ ಎಂದೂ ಅವರು ತಿಳಿಸಿದ್ದಾರೆ.

ಪ್ರಯಾಣಿಕರ ದ್ವಾರದಿಂದ ಹಾರಿದ ಚಾಲಕ

ಕರ್ನೂಲ್ (ಪಿಟಿಐ): ಬೆಂಕಿ ಹೊತ್ತಿಕೊಂಡ ಬಸ್ಸಿನ ಪರಿಸ್ಥಿತಿ ಅರಿಯುವಲ್ಲಿ ವಿಫಲನಾದ ಬಸ್ಸಿನ ಚಾಲಕ, ಪ್ರಯಾಣಿಕರ ಬಾಗಿಲಿನಿಂದ ಹೊರಗೆ ಹಾರಿ ಪಾರಾಗಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಚಾಲಕ ಮಿರಿಯಾಲ ಲಕ್ಷ್ಮಯ್ಯ (42) ಮತ್ತು ಇಬ್ಬರು ಹೆಚ್ಚುವರಿ ಚಾಲಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಅಪಘಾತಕ್ಕೆ ಸಂಬಂಧಿಸಿದಂತೆ ಶುಕ್ರವಾರವೇ ಪ್ರಕರಣ ದಾಖಲಿಸಲಾಗಿದೆ ಎಂದು ಕರ್ನೂಲ್‌ನ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಾಂತ್ ಪಾಟೀಲ್ ಹೇಳಿದರು.

ಬಸ್ಸಿನಿಂದ ಹೊರಗೆ ಹಾರಿದ ಚಾಲಕ ಲಕ್ಷ್ಮಯ್ಯ ಬಸ್ಸಿನ ಮುಂಭಾಗ ಮತ್ತು ಹಿಂಭಾಗದ ಚಕ್ರಗಳ ನಡುವಿನ ಲಗೇಜ್ ರ್‍ಯಾಕ್‌ನಲ್ಲಿ ಮಲಗಿದ್ದ ಹೆಚ್ಚುವರಿ ಚಾಲಕರನ್ನು ಎಬ್ಬಿಸಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಬೆಂಕಿಯಿಂದ ಉರಿಯುತ್ತಿದ್ದ ಬಸ್ಸಿನೊಳಗೆ ಹೋಗಲು ಸಾಧ್ಯವಿಲ್ಲ ಎಂದು ಅರಿತ ಬಳಿಕ ಅವರು, ಟೈರ್ ಬದಲಿಸಲು ಬಳಸುವ ರಾಡ್‌ಗಳಿಂದ ಕೆಲ ಕಿಟಕಿ-ಗಾಜುಗಳನ್ನು ಒಡೆದಿದ್ದಾರೆ. ಇದರಿಂದಾಗಿ ಕೆಲ ಪ್ರಯಾಣಿಕರು ಬಸ್ಸಿನಿಂದ ಹೊರ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ ಎಂದು ಪಾಟೀಲ್ ವಿವರಿಸಿದರು.

ಬೆಂಕಿಯ ಕೆನ್ನಾಲಗೆ ವ್ಯಾಪಕವಾಗಿ ಇಡೀ ಬಸ್ ಅನ್ನು ಆವರಿಸಿದಾಗ ಆತಂಕಗೊಂಡ ಚಾಲಕ ಲಕ್ಷ್ಮಯ್ಯ ಸ್ಥಳದಿಂದ ಓಡಿಹೋಗಿದ್ದಾರೆ. ಅವರನ್ನು ಕರ್ನೂಲ್‌ನಲ್ಲಿ ಶುಕ್ರವಾರ ಮಧ್ಯಾಹ್ನ ವಶಕ್ಕೆ ಪಡೆಯಲಾಗಿದ್ದು, ದುರಂತಕ್ಕೆ ತಪ್ಪಿತಸ್ಥ ಎಂದು ಪರಿಗಣಿಸಲಾಗಿದೆ ಎಂದರು.

ಲಕ್ಷ್ಮಯ್ಯನ ವಿರುದ್ಧ ನಿರ್ಲಕ್ಷ್ಯ, ಅತಿ ವೇಗದ ಚಾಲನೆ ಆರೋಪ ಹೊರಿಸಲಾಗಿದೆ. ಬಿಎನ್‌ಎಸ್ ಕಾಯ್ದೆಯ ಸೆಕ್ಷನ್ 125 (ಎ) (ಮಾನವ ಜೀವಕ್ಕೆ ಅಪಾಯ) ಮತ್ತು 106 (1) (ನಿರ್ಲಕ್ಷ್ಯದಿಂದ ಸಾವಿಗೆ ಕಾರಣ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ತಿಳಿಸಿದರು.

ಡಿಎನ್‌ಎ ಪರೀಕ್ಷೆ 27ಕ್ಕೆ ಮುಗಿಯಲಿದೆ

ಕರ್ನೂಲ್ (ಪಿಟಿಐ): ಆಂಧ್ರ ಪ್ರದೇಶದಲ್ಲಿ ಸಂಭವಿಸಿದ ಬಸ್ ಬೆಂಕಿ ಅಪಘಾತದಲ್ಲಿ ಸುಟ್ಟು ಕರಕಲಾದ ದೇಹಗಳ ಡಿಎನ್‌ಎ ಪರೀಕ್ಷೆಗೆ 48 ಗಂಟೆಗಳು ಬೇಕಿದ್ದು, ಇದೇ 27ರೊಳಗೆ (ಸೋಮವಾರ) ಪೂರ್ಣಗೊಳ್ಳ ಬಹುದು ಎಂದು ಕರ್ನೂಲ್ ಜಿಲ್ಲಾಧಿಕಾರಿ ಎ. ಸಿರಿ ಶನಿವಾರ ತಿಳಿಸಿದರು.

ಡಿಎನ್‌ಎ ಫಲಿತಾಂಶಗಳು ಬಂದ ಬಳಿಕ ಮೃತದೇಹಗಳನ್ನು ಅವರ ಸಂಬಂಧಿಕರಿಗೆ ಹಸ್ತಾಂತರಿಸಲಾಗುವುದು. ಶವಗಳನ್ನು ಅವರ ಊರುಗಳಿಗೆ ಸಾಗಿಸಲು ಆಂಬುಲೆನ್ಸ್ ಮತ್ತು ಇತರ ವಾಹನಗಳ ವ್ಯವಸ್ಥೆಯನ್ನೂ ಆ ದಿನ ಮಾಡಲಾಗುವುದು ಎಂದು ಅವರು ಹೇಳಿದರು.

ಈ ದುರಂತದಲ್ಲಿ ಮೃತಪಟ್ಟವರ ಶವಗಳನ್ನು ಕರ್ನೂಲ್‌ನ ಸರ್ಕಾರಿ ಜನರಲ್ ಆಸ್ಪತ್ರೆಯಲ್ಲಿ ಸಂರಕ್ಷಿಸಿಡಲಾಗಿದೆ. ಶವಗಳ ಮಾದರಿಗಳನ್ನು ಸಂಗ್ರಹಿಸಿ ವಿಜಯವಾಡದ ವಿಧಿವಿಜ್ಞಾನ ಪ್ರಯೋಗಾಲಯಕ್ಕೂ ಕಳುಹಿಸಲಾಗಿದೆ ಎಂದು ಅವರು ವಿವರಿಸಿದರು.

'ಮೃತದೇಹಗಳು ಗುರುತಿಸಲಾಗದಷ್ಟು ಸುಟ್ಟು ಕರಕಲಾಗಿವೆ. ಡಿಎನ್‌ಎ ಪರೀಕ್ಷೆ ಮಾಡದೆ ಅವುಗಳನ್ನು ಸರಿಯಾಗಿ ಗುರುತಿಸಲು ಆಗುವುದಿಲ್ಲ' ಎಂದು ಅವರು ತಿಳಿಸಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 26-10-2000

- **ವಿಮಾನ ಅಪಘಾತ: 75 ಸಾವು**

ಮಾಸ್ಕೊ, ಅ 25 (ಎಎಫ್‌ಪಿ): ರಷ್ಯಾದ ಮಿಲಿಟರಿ ವಿಮಾನವೊಂದು ಇಂದು ರಾತ್ರಿ ಜಾರ್ಜಿಯ ಗಣರಾಜ್ಯದ ಗುಡ್ಡಗಾಡು ಪ್ರದೇಶದಲ್ಲಿ ಅಪಘಾತಕ್ಕೀಡಾಗಿದ್ದರಿಂದ ವಿಮಾನದಲ್ಲಿದ್ದ 75 ಮಂದಿ ಮೃತಪಟ್ಟಿದ್ದಾರೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಬಟುಮಿಯಲ್ಲಿ ವಿಮಾನ ಇಳಿಯಬೇಕಿತ್ತು. ರಾತ್ರಿ ವೇಳೆಯಲ್ಲಿ ಭಾರೀ ಪ್ರಮಾಣದ ಹಿಮ ಇದ್ದಿದುದರಿಂದ ಸಂಜೆ 7 ಗಂಟೆಗೆ ಅಪಘಾತ ಸಂಭವಿಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

75 ವರ್ಷಗಳ ಹಿಂದೆ

ಗುರುವಾರ, 26-10-1950

- **ಸರ್ವ ಬಲದಿಂದ ಮಂಚೂರಿಯ ಗಡಿ ಮುಟ್ಟಲಾಜ್ಞೆ**

ಟೋಕಿಯೋ ಅ.25– ಮಂಚೂರಿಯ ಗಡಿಯನ್ನು ಮುಟ್ಟುವ ಸಲುವಾಗಿ ಅಗತ್ಯವಿರುವ ಎಲ್ಲ ಬಲವನ್ನು ವಿನಿಯೋಗಿಸಬೇಕೆಂದು ಕೇಂದ್ರ ಕಚೇರಿಯಿಂದ ಆದೇಶ ಬಂದಿದೆ ಎಂಬುದಾಗಿ ಅಮೆರಿಕದ ಪ್ರಥಮ ಪಡೆಯ ವ್ಯಕ್ತಿಯೊಬ್ಬರು ಇಂದು ನುಡಿದರು. ಕೊರಿಯಾದ ಈಶಾನ್ಯದಲ್ಲಿರುವ ಕಮ್ಯುನಿಸ್ಟರ ನವರಾಜಧಾನಿ ಸಿನ್ಯೆಹು ಕಡೆಗೆ ಬ್ರಿಟಿಷ್ ಕಾಮನ್‌ವೆಲ್ತ್ ದಳಗಳು ಧಾವಿಸುತ್ತಿವೆ ಎಂಬುದಾಗಿ ವರದಿಯಾಗಿದೆ. ಕಮ್ಯುನಿಸ್ಟ್ ಉನ್ನತಾಧಿಕಾರಿಗಳು ಓಡಿಹೋಗಿರಬಹುದು ಎಂದು ಶಂಕಿಸಲಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

26 ಅಕ್ಟೋಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಪಂಚಮಿ ಅಹೋರಾತ್ರ ನಕ್ಷತ್ರ: ಜ್ಯೇಷ್ಠ ಗಂ.10-47 ಯೋಗ: ಶೋಭನ ಗಂ 6-46 ಕರಣ: ಬವ ಗಂ. 16-59 ತುಲಾ ಮಾಸದ 09 ನೇ ದಿನ. ಮಳೆ ನಕ್ಷತ್ರ : ಸ್ವಾತಿ 1 ನೇ ಪಾದ. ರಾಹುಕಾಲ : ಸಾಯಂಕಾಲ 04-30 06-00 ಸೂರ್ಯೋದಯ : 06-27 ಸೂರ್ಯಾಸ್ತ : 06-02 ಮುಸ್ಲಿಂ ದಿನಾಂಕ : 03 ಜುಮಾದುಲ್ಲಾವಲ್, ಅದೃಷ್ಟ ಸಂಖ್ಯೆ : 4, 10

ಮೇಷ: ಬಿಟ್ಟು ಹೋದ ಸಂಬಂಧಗಳನ್ನು ಮತ್ತೆ ಬೆಳೆಸುವ ಬಗ್ಗೆ ಕುಟುಂಬದವರೊಂದಿಗೆ ಚರ್ಚಿಸಿ, ಒಮ್ಮತದ ತೀರ್ಮಾನಕ್ಕೆ ಬರುವುದು ಉತ್ತಮ. ಬಾಕಿ ಉಳಿದ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನ ನೀಡಿ.

ವೃಷಭ: ನಿಮ್ಮ ಕಾರ್ಯ ವೈಖರಿಯು ಕೆಲವರಲ್ಲಿ ಮತ್ಸರ ಉಂಟುಮಾಡುತ್ತದೆ. ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಕೆಲಸದ ಅಧಿಕ ಒತ್ತಡದಿಂದ ಬೆನ್ನು ನೋವು ಕಾಡಬಹುದು.

ಮಿಥುನ: ಯೋಜನೆಗಳ ಬಗ್ಗೆ ಸಂಬಂಧಪಟ್ಟವರಲ್ಲಿ ಅಗತ್ಯವಾಗಿ ಚರ್ಚೆ ನಡೆಸಿ. ವ್ಯಾಪಾರಸ್ಥರು ದಿನನಿತ್ಯದ ಆಗುಹೋಗುಗಳ ಬಗ್ಗೆ ಗಮನಹರಿಸಿ. ತಾತ್ಕಾಲಿಕ ಹುದ್ದೆಯಲ್ಲಿರುವವರಿಗೆ ಬದಲಾವಣೆಯ ಸೂಚನೆ ಕಂಡುಬರಲಿದೆ.

ಕರ್ಕಾಟಕ: ನಿಮ್ಮ ಗುಪ್ತ ವಿಷಯಗಳನ್ನು ತಿಳಿದುಕೊಳ್ಳಲು ನಿಮ್ಮೊಡನೆ ಕಪಟ ಸ್ನೇಹವನ್ನು ಮಾಡುವವರ ಬಗ್ಗೆ ಗಮನವಿರಲಿ. ಮೊದಲು ಕೊಟ್ಟ ಮಾತಿನಂತೆಯೆ ನಡೆದುಕೊಳ್ಳಲು ಹರಸಹಾಸವನ್ನು ಪಡುವಂತಾಗಬಹುದು.

ಸಿಂಹ: ದೇಹದಲ್ಲಿನ ಉಷ್ಣತೆಯನ್ನು ನೀವಾಗಿಯೆ ಆಹಾರದ ಮೂಲಕ ನಿವಾರಿಸಿಕೊಳ್ಳದಿದ್ದರೆ ವೈದ್ಯರ ದರ್ಶನ ಅನಿವಾರ್ಯವಾಗುವುದು. ಪ್ರೀತಿ ಪಾತ್ರರೊಂದಿಗೆ ದೂರದ ಊರಿಗೆ ಪ್ರಯಾಣ ಬೆಳೆಸುವ ಯೋಗವಿದೆ.

ಕನ್ಯಾ: ನಿವೇಶನಗಳ ಖರೀದಿಯ ವ್ಯವಹಾರದಲ್ಲಿ ಮತ್ತೊಮ್ಮೆ ದಾಖಲೆಗಳ ಪರೀಕ್ಷೆ ಅನಿವಾರ್ಯ ಎನಿಸಲಿದೆ. ಕುಟುಂಬದ ವತಿಯಿಂದ ವಾರ್ಷಿಕವಾಗಿ ನಡೆಸಬೇಕಾದ ಸತ್ಕಾರ್ಯಗಳನ್ನು ಕುರಿತು ಸಮಾಲೋಚನೆ ನಡೆಸಿ.

ತುಲಾ: ಸಾಮಾಜಿಕ ಸೇವೆಯಲ್ಲಿ ಸಮಯ ವ್ಯರ್ಥವಾಗದಂತೆ ಜಾಗರೂಕತೆ ವಹಿಸಿ. ಸಾಧ್ಯವಾದಷ್ಟೂ ಉಳಿತಾಯ ಮಾಡುವ ಪ್ರಯತ್ನ ರೂಢಿಸಿಕೊಳ್ಳಿ. ಯೋಜನೆಗಳು ಪೂರ್ವವ್ಯವಸ್ಥಿತ ರೂಪದಲ್ಲಿ ಸಾಗಲಿವೆ.

ವೃಶ್ಚಿಕ: ಪರಿಸ್ಥಿತಿಗಳನ್ನು ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ಬೋಧನೆಯಲ್ಲಿ ಗಣಿತಕ್ಕೆ ಸಂಬಂಧಿಸಿದಂತೆ ವಿಶೇಷವಾಗಿ ಪರಿಣತೆಯನ್ನು ಹೊಂದಿರುವ ನಿಮಗೆ ಶಿಷ್ಯರ ಸಂಖ್ಯೆ ವೃದ್ಧಿಯಾಗಲಿದೆ.

ಧನು: ಮಕ್ಕಳ ವಿಷಯದಲ್ಲಿ ಅಸಡ್ಡೆ ತೋರಿಸಬಾರದು ಎಂಬುವುದು ಅರಿವಾಗಲಿದೆ. ಕುಟುಂಬದಲ್ಲಿ ಹಿಂದೆ ನಡೆದ ಕೆಟ್ಟ ವಿಚಾರಗಳ ಬಗ್ಗೆ ಮಾತನಾಡುವುದರಿಂದ ಸಹೋದರರಲ್ಲಿ ಭಿನ್ನಾಭಿಪ್ರಾಯ ಉಂಟಾಗುತ್ತದೆ.

ಮಕರ: ಆಹಾರ ಪದಾರ್ಥದ ವ್ಯಾಪಾರಸ್ಥರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ಸಂಘ ಸಮೂಹದ, ಸಜ್ಜನರ ಸಹವಾಸದಿಂದ ಪ್ರಾಪಂಚಿಕ ಜ್ಞಾನ ವೃದ್ಧಿಯಾಗುತ್ತದೆ. ದುರ್ಗಾದೇವಿಯಲ್ಲಿ ಶರಣಾಗುವುದರಿಂದ ಶುಭ ಪ್ರಾಪ್ತಿ.

ಕುಂಭ: ಒಂಟಿತನ ಹೋಗಲಾಡಿಸಿಕೊಳ್ಳಲು ಮನಸ್ಸನ್ನು ಅಧಿಕ ಸಮಯ ಕೆಲಸಗಳತ್ತ ಹರಿಸುವಿರಿ. ಉದ್ಯೋಗದಲ್ಲಿ ಒತ್ತಡಗಳಿಗೆ ಸಿಲುಕಬೇಡಿ. ರಾಜಕೀಯ ಧುರೀಣರಿಗೆ ಈ ದಿನವು ಮೋಡ ಮುಸುಕಿದಂತಿರುವುದು.

ಮೀನ: ಚಿನ್ನಾಭರಣದ ಖರೀದಿಸಬೇಕಾದ ಅನಿವಾರ್ಯತೆ ಎದುರಾಗಲಿದೆ. ಸಮಸ್ಯೆಗಳಿಗೆ ಸುಲಭವಾಗಿ ಉತ್ತರ ಸಿಗುವುದು. ಸರಕು ಸಾಗಾಣಿಕೆದಾರರಿಗೆ ಮತ್ತು ಬಂದರು ಕಾರ್ಮಿಕರಿಗೆ ಉತ್ತಮವಾದ ಪ್ರತಿಫಲ ದೊರೆಯಲಿದೆ.

ಪದಬಂಧ 6204


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಗರ್ಭಗುಡಿಯ ಮುಂಭಾಗದ ಅಂಕಣ (4)
3. ಮಾಡಿದ ತಪ್ಪು ಕೆಲಸಕ್ಕಾಗಿ ಮರುಗುವಿಕೆ (4)
5. ಉತ್ತರದವರ ವಿಪುಲತೆ (3)
6. ಜಾಸ್ತಿ ದುಡ್ಡುಳ್ಳ ವ್ಯಕ್ತಿ (4)
8. ತಿರುಗಿದಾಗ ಕಾಣಿಸಿಕೊಂಡಿತೇ ಈ ದವ್ವ? (2)
9. ಲೋಲುಪನ ಕುಂದು ಇಲ್ಲಿ ಕಾಣುತ್ತಿದೆ (2)
10. ಹಿಡಿತದಿಂದ ಖರ್ಚು ಮಾಡುವಿಕೆ (4)
13. ನಗರದಲ್ಲಿ ಕೇಳಿಸಿದ ಚರ್ಮವಾದ್ಯ (3)
16. ಅತಿಯಾದ ಸಿಟ್ಟು (4)
17. ಹೂವಿನಲ್ಲಿನ ಸಿಹಿ ರಸ (4)

ಮೇಲಿಂದ ಕೆಳಕ್ಕೆ

1. ಧಾನ್ಯಗಳ ಕೊಯ್ಲಿನ ಕಾಲ (2)
2. ರಂಗ ಹಿಡಿದಿರುವ ಕಿತ್ತಳೆ ಹಣ್ಣು (3)
3. ಪಣದಲ್ಲಿನ ಅಳತೆಯಿದು (4)
4. ಸೂರ್ಯನು ಮುಳುಗುವ ದಿಕ್ಕು (3)
5. ಯುದ್ಧಭೂಮಿಯಿದು (4)
6. ಯೌವ್ವನ ಹೀಗೆ ಬಂದಿದೆ (3)
7. ಈಕೆ ತೆಳ್ಳಗಿನ ಸೊಂಟದವಳು (4)
11. ನಿಷ್ಪ್ರಯೋಜಕ ಮಾತು (4)
12. ಹತ್ತು ವರ್ಷಗಳ ಅವಧಿ (3)
14. ಈತ ಹಾಡುಗಾರ (3)
15. ಪಾದರಿಯಲ್ಲಿ ಪದ್ಯದ ಒಂದು ಸಾಲು ಕಾಣುತ್ತಿದೆ (2)



6203ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ಮಲಾರ 6.ಒಡನಾಡಿ 7.ಪರಮಪುರುಷ 9.ಪ್ರಣಯಕಲಹ 14.ಮಾದರಿ 15.ಬಲವಂತ

ಮೇಲಿಂದ ಕೆಳಕ್ಕೆ: 1.ಗಮನಾರ್ಹ 2.ದಂಡ 3.ಕಡಿಮೆ 5.ರಗಾಪ 6.ಒನಪು 8.ಮಶಕ 10.ಯನತ 11.ಹಮಾಲಿ 12.ಪರಿಚ್ಛೇದ 13.ಓಬವ್ವ 16.ವಂದಿ

ಸುಡೊಕು 6588

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4	2			8			6	
			1		6		2	3
3		5		2		9		
	8	7					1	
		4	7	6	3	8		
5	9						7	4
		2	6	7		1		5
1	4		2				9	
	5			4		2		8

6587 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವನ್ಯಧಾಮದಲ್ಲಿ ಗಣಿಗಾರಿಕೆಗೆ ಯತ್ನ

ಹೊನ್ನಾವರ ತಾಲ್ಲೂಕಿನ ಶರಾವತಿ ನದಿ ತೀರದಲ್ಲಿ ಗಣಿಗಾರಿಕೆ ಆತಂಕ

• ಉಮೇಶಭಟ್ಟ ಪಿ.ಎಚ್

ಮುಖ್ಯಾಂಶಗಳು
- 440 ಹೆಕ್ಟೇರ್ ಪ್ರದೇಶದಲ್ಲಿ ಶೋಧ
- 30 ಕಡೆ 20 ಮೀಟರ್ ಆಳದ ಗುಂಡಿ
- ಶೋಧನಾ ವೆಚ್ಚ ₹1.4 ಕೋಟಿ

ಬೆಂಗಳೂರು: ಆರು ದಶಕದ ಹಿಂದೆಯೇ ಗಣಿ ಮತ್ತು ಭೂವಿಜ್ಞಾನ ಇಲಾಖೆ ಶೋಧ ನಡೆಸಿ ಬಾಕ್ಸೈಟ್ ಇರುವುದನ್ನು ಖಚಿತಪಡಿಸಿದ್ದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಅಪ್ಸರಕೊಂಡ–ಮುಗಳಿ ಸಾಗರ ವನ್ಯಜೀವಿ ಧಾಮ ಸಮೀಪದಲ್ಲೇ ಈಗ ಬಾಕ್ಸೈಟ್ ಗಣಿಗಾರಿಕೆ ನಡೆಸುವ ಪ್ರಯತ್ನಗಳು ಶುರುವಾಗಿವೆ.

ಮಿತಿ ಮೀರಿದ ಅಭಿವೃದ್ಧಿ, ಗಣಿಗಾರಿಕೆ ಚಟುವಟಿಕೆಗಳಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂಕುಸಿತದ ಭೀತಿ ಉಂಟಾಗಿದ್ದು ಹೊಸ ಯೋಜನೆಗಳಿಗೆ ವಿರೋಧ ವ್ಯಕ್ತವಾಗುತ್ತಿದೆ. ಇದರ ನಡುವೆಯೇ ಶರಾವತಿ ನದಿ ಸಮೀಪದಲ್ಲೇ ಇರುವ, ಕೆಲವು ವರ್ಷಗಳ ಹಿಂದೆ ಭೂಕುಸಿತ ಉಂಟಾಗಿದ್ದ ಸ್ಥಳದಿಂದ 2 ಕಿ.ಮೀ. ದೂರದಲ್ಲಿಯೇ ಗಣಿಗಾರಿಕೆ ಆರಂಭಿಸುವ ಯತ್ನಕ್ಕೆ ಪರಿಸರ ಹೋರಾಟಗಾರರು ಆತಂಕ ವ್ಯಕ್ತಪಡಿಸಿದ್ದಾರೆ.

2025ರ ಆರಂಭದಲ್ಲಿ ಕೇಂದ್ರ ಗಣಿ ಸಚಿವಾಲಯದ ತಾಂತ್ರಿಕ ಸಮಿತಿಯು ದೇಶದ ನಾನಾ ಭಾಗಗಳಲ್ಲಿ ಖನಿಜಗಳ ಲಭ್ಯತೆ ಪರೀಕ್ಷೆ ನಡೆಸಲು ಅನುಮತಿ ನೀಡಿತ್ತು. ಬಳಿಕ ಆಸಕ್ತ ಗಣಿ ಕಂಪನಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ತಾಂತ್ರಿಕ ಸಮಿತಿ ಮುಂದೆ ಸಲ್ಲಿಸಿವೆ.

ಮಹಾರಾಷ್ಟ್ರದ ನಾಗ್ಪುರದ ಪಿಆರ್‌ಬಿ ಇನ್ಫ್ರಾ ಪ್ರಾಜೆಕ್ಟ್ಸ್ ಕಂಪನಿ ಇಡಗುಂಜಿ ಸಮೀಪದ ನಿಟ್ಟಡಗಿ ಭಾಗದಲ್ಲಿ ಬಾಕ್ಸೈಟ್ ಗಣಿಗಾರಿಕೆ ಆರಂಭಿಸುವ ಯೋಚನೆಯಲ್ಲಿದೆ. ರಾಷ್ಟ್ರೀಯ ಖನಿಜ ಶೋಧನೆ ಟ್ರಸ್ಟ್ (ಎನ್‌ಎಂಇಟಿ) ಯೋಜನೆಯಡಿ ಪ್ರಾಥಮಿಕ ಸಮೀಕ್ಷೆ ನಡೆಸಲು ಅನುಮತಿ ಕೋರಲಾಗಿದೆ. ಸೂಕ್ಷ್ಮ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ನೀಡುವುದಕ್ಕೆ ಸ್ಥಳೀಯವಾಗಿಯೂ ವಿರೋಧ ವ್ಯಕ್ತವಾಗುತ್ತಿದೆ.

ಮಾರ್ಗಸೂಚಿ ಬದಲು: ಅಲ್ಯುಮಿನಿಯಂ ಉತ್ಪಾದನೆಗೆ ಪ್ರಮುಖ ಕಚ್ಚಾ ವಸ್ತುವಾಗಿರುವ ಬಾಕ್ಸೈಟ್‌ಗೆ ಉದ್ಯಮ ವಲಯದಲ್ಲಿ ಬೇಡಿಕೆಯಿದೆ. ಅಲ್ಯುಮಿನಿಯಂ ಪ್ರಮಾಣ ನಿಟ್ಟಡಗಿ ಪ್ರದೇಶದಲ್ಲಿ ಹೆಚ್ಚಿರುವ ಮಾಹಿತಿ ಆಧರಿಸಿ ಸಮೀಕ್ಷೆಗೆ ಅನುಮತಿ ನೀಡುವಂತೆ ಸಂಸ್ಥೆಯು ಕೇಂದ್ರ ಪರಿಸರ ಸಚಿವಾಲಯಕ್ಕೆ ಮನವಿ ಸಲ್ಲಿಸಿದೆ. ಇದನ್ನು ಪರಿಗಣಿಸಿರುವ ಕೇಂದ್ರ ಸರ್ಕಾರವು, ವರದಿ ನೀಡುವಂತೆ ಅರಣ್ಯ ಇಲಾಖೆಗೆ ಸೂಚನೆ ನೀಡಿದೆ. ಹೊನ್ನಾವರ ವಿಭಾಗದ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ವರದಿ ನೀಡಲು ಸಿದ್ಧತೆ ಮಾಡಿಕೊಂಡಿದ್ದಾರೆ.

1964 ರಿಂದ 1973ರವರೆಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಈ ಭಾಗದಲ್ಲಿ ಶೋಧನೆ ನಡೆಸಿದಾಗ 13.4 ಲಕ್ಷ ಟನ್ ಹಾಗೂ 2016–17ರಲ್ಲಿ ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾ ಕೈಗೊಂಡಿದ್ದ ಸಮೀಕ್ಷೆ ವೇಳೆ 90 ಲಕ್ಷ ಟನ್ ಬಾಕ್ಸೈಟ್ (ಅಲ್ಯುಮಿನಿಯಂ ಲ್ಯಾಟರೈಟ್) ಇರುವುದು ಖಚಿತವಾಗಿತ್ತು. ಇದಕ್ಕೆ ಈವರೆಗೂ ಅನುಮತಿ ಸಿಕ್ಕಿಲ್ಲ. ಈಗ ಶೋಧನೆಯ ಪ್ರಯತ್ನದೊಂದಿಗೆ ಗಣಿಗಾರಿಕೆ ನಡೆಸುವ ಸಾಧ್ಯತೆಗಳಿವೆ.

ಹಿಂದೆಲ್ಲಾ ಕರ್ನಾಟಕದಲ್ಲಿ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುವ ಉದ್ದೇಶದ ಸ್ಥಳ ಪೂರ್ವ ಸಮೀಕ್ಷೆಗೆ ಸ್ಥಳೀಯವಾಗಿಯೇ ಅನುಮತಿ ನೀಡಲಾಗುತ್ತಿತ್ತು. ಈಗ ಆಯಾ ವಿಭಾಗದಿಂದ ಸ್ಥಳ ಪರಿಶೀಲನೆ ನಡೆಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಂರಕ್ಷಣೆ) ಅವರಿಗೆ ವರದಿ ಸಲ್ಲಿಸಲಾಗುತ್ತದೆ. ವರದಿ ಆಧರಿಸಿ ಪೂರ್ವ ಸಮೀಕ್ಷೆಗೆ ಅವರು ಅನುಮತಿ ನೀಡುತ್ತಾರೆ. ಬೇಡಿಕೆ ಆಧರಿಸಿ ಹೊನ್ನಾವರ ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಅಂತಿಮ ವರದಿಯನ್ನು ಇಲಾಖೆಗೆ ಸಲ್ಲಿಸಲಿದ್ದಾರೆ.

ಸಾಗರ ವನ್ಯಧಾಮಕ್ಕೆ ಅಪಾಯ: ಭಟ್ಕಳ ತಾಲ್ಲೂಕಿನ ಮಂಕಿಯಿಂದ ಹೊನ್ನಾವರ ತಾಲ್ಲೂಕಿನ ಕಾಸರಕೋಡಿನವರೆಗಿನ 7.5 ಕಿ.ಮೀ. ಉದ್ದದ ವ್ಯಾಪ್ತಿಯಲ್ಲಿ ಕಡಲತೀರ, ಇದರ ಸುತ್ತಮುತ್ತಲಿನ 835.02 ಹೆಕ್ಟೇರ್ ಅರಣ್ಯಪ್ರದೇಶ ಹಾಗೂ ಅರಬ್ಬೀ ಸಮುದ್ರದ 6 ಕಿ.ಮೀ. ಜಲ ಪ್ರದೇಶದಲ್ಲಿನ 5124.302 ಹೆಕ್ಟೇರ್ ಪ್ರದೇಶ ಒಳಗೊಂಡು ಅಪ್ಸರಕೊಂಡ–ಮುಗಳಿ ಸಾಗರ ವನ್ಯಜೀವಿ ಧಾಮವನ್ನು ಘೋಷಿಸಲಾಗಿದೆ. ವಿಭಿನ್ನ ಮೀನುಗಳು, ಸಮುದ್ರ ಸೌತೆ, ಡಾಲ್ಫಿನ್ ಸಹಿತ ಅಪರೂಪದ ಜಲಚರಗಳ ಸಂರಕ್ಷಣೆ ಹಾಗೂ ಸಂವರ್ಧನೆಗೆ ಸಹಾಯಕವಾಗಲೆಂದು ಘೋಷಿಸಲಾದ ಈ ವನ್ಯಧಾಮದಿಂದ ಕೇವಲ 5 ಕಿ.ಮಿ ದೂರದಲ್ಲಿ ನಿಟ್ಟಡಗಿ ಅರಣ್ಯ ಪ್ರದೇಶವಿದೆ. ಈ ಕಾರಣದಿಂದಲೇ ಗಣಿ ಯೋಜನೆಗೆ ಇಲ್ಲಿ ಬಲವಾದ ವಿರೋಧ ವ್ಯಕ್ತವಾಗುತ್ತಿದೆ.

‘ಉತ್ತರ ಕನ್ನಡ ಜಿಲ್ಲೆಯ ಯಾಣ, ಯಲ್ಲಾಪುರದ ಅರೇಬೈಲ್ ಸಹಿತ ಹಲವು ಕಡೆಗಳಲ್ಲಿ ಗಣಿಗಾರಿಕೆ ಚಟುವಟಿಕೆ ನಡೆಸಲು ಬೇಡಿಕೆಯಿದೆ. ಹೊನ್ನಾವರ ತಾಲ್ಲೂಕಿನ ಅತಿ ಸೂಕ್ಷ್ಮ ಅರಣ್ಯ ಭಾಗ ಎನ್ನಿಸಿರುವ, 2 ವರ್ಷದ ಹಿಂದೆ ಭೂಕುಸಿತ ಆಗಿರುವ ಕಾಸರಕೋಡಿ ಅಪ್ಸರಕೊಂಡ ಪ್ರದೇಶಕ್ಕೆ ಹೊಂದಿಕೊಂಡ ಇಡಗುಂಜಿ ಭಾಗದಲ್ಲಿ ಬಾಕ್ಸೈಟ್ ಗಣಿಗಾರಿಕೆ ಸಮೀಕ್ಷೆಗೆ ಖಾಸಗಿ ಕಂಪನಿಗಳು ತಯಾರಿ ನಡೆಸಿವೆ. ಅನುಮತಿ ಕೊಟ್ಟರೆ ಶರಾವತಿ ನದಿ ತೀರದಲ್ಲೇ ಅನಾಹುತಗಳು ಕಟ್ಟಿಟ್ಟ ಬುತ್ತಿ. ಶೋಧನೆಗೆ ಅನುಮತಿ ನೀಡದಂತೆ ಅರಣ್ಯ ಇಲಾಖೆಗೆ ಪತ್ರ ಬರೆದಿದ್ದೇವೆ’ ಎಂದು ಪರಿಸರ ಹೋರಾಟಗಾರ ಅನಂತ ಹೆಗಡೆ ಆಶೀಸರ ತಿಳಿಸಿದರು.



ಭೂಕುಸಿತ ಕಂಡಿದ್ದ ಹೊನ್ನಾವರ ತಾಲೂಕು ನಿಟ್ಟಡಗಿ ಸಮೀಪದ ರಸ್ತೆ

ಹೊನ್ನಾವರ ತಾಲ್ಲೂಕಿನಲ್ಲಿ ಬಾಕ್ಸೈಟ್ ಖನಿಜ ಶೋಧನೆಗೆ ಮಹಾರಾಷ್ಟ್ರ ಕಂಪನಿಯಿಂದ ಬೇಡಿಕೆ ಬಂದಿದೆ. ಸದ್ಯದಲ್ಲೇ ಸ್ಥಳಕ್ಕೆ ಭೇಟಿ ನೀಡಿ ಸಮಗ್ರ ವರದಿ ಸಲ್ಲಿಸುತ್ತೇನೆ

ಸಿ.ಕೆ.ಯೋಗೀಶ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ

ಎಚ್‌ಡಿಕೆ– ಡಿಕೆಶಿ ಜಟಾಪಟಿ

ಬೆಂಗಳೂರು: ಎ ಖಾತೆ ಹೆಸರಿನಲ್ಲಿ ರಾಜ್ಯ ಸರ್ಕಾರ ಬೆಂಗಳೂರು ಜನರನ್ನು ಲೂಟಿ ಹೊಡೆಯಲು ಹೊರಟಿದೆ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು ಮಾಡಿದ ಆರೋಪಕ್ಕೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ‘ಅವರ ಬುರುಡೆ ಪುರಾಣವನ್ನೆಲ್ಲಾ ಬಿಚ್ಚಿಡುತ್ತೇನೆ’ ಎಂದ ಕುಮಾರಸ್ವಾಮಿ ಅವರಿಗೆ, ‘ಎಲ್ಲವನ್ನೂ ಬಿಚ್ಚಿಡು. ನಿನ್ನದನ್ನೂ ಬಿಚ್ಚಿಡುವೆ’ ಎಂದು ಶಿವಕುಮಾರ್ ಗುಡುಗಿದ್ದಾರೆ.

‘ಎಲ್ಲವೂ ಬೋಗಸ್’


‘ಬಿ’ ಖಾತೆಗೆ ‘ಎ’ ಖಾತೆ ನೀಡುತ್ತೇವೆ ಎಂದು ರಾಜ್ಯ ಸರ್ಕಾರ ಜನರನ್ನು ಸುಲಿಗೆ ಮಾಡಲು ಹೊರಟಿದೆ. ಎ ಖಾತೆ, ಬಿ ಖಾತೆ ಎಂಬ ವ್ಯವಸ್ಥೆ ಎಲ್ಲಿಯೂ ಇಲ್ಲ. ಇವರೇ ಸೃಷ್ಟಿಸಿಕೊಂಡು, ಜನರಿಂದ ಲೂಟಿ ಮಾಡುತ್ತಿದ್ದಾರೆ. ‘ಬಿ’ ಖಾತೆಯ ನಿವೇಶನಗಳಲ್ಲಿ ನಿರ್ಮಿಸಿರುವ ಮನೆಗಳಿಂದ ಪ್ರವಾಹ ಉಂಟಾಗಿ, ಮನೆ ಕುಸಿಯುತ್ತದ್ದಂತೆ. ಅದನ್ನು ‘ಎ’ ಖಾತೆಗೆ ಮಾಡಿದರೆ ಎಲ್ಲವೂ ಸರಿ ಹೋಗುತ್ತದಂತೆ. ಇದನ್ನು ಒಪ್ಪಲು ಸಾಧ್ಯವೇ?

‘ಯೋಗ್ಯತೆ ಇದೆಯಾ’

ಚರ್ಚೆಗೆ ಬರುವಂತಹ ಯೋಗ್ಯತೆ ಆ ವ್ಯಕ್ತಿ ಉಳಿಸಿಕೊಂಡಿದ್ದಾರಾ? ಚರ್ಚೆಗೆ ಕರೆಯುವ ಯೋಗ್ಯತೆ ಅವರಿಗೆ ಇದೆಯಾ? ರಾಜ್ಯಕ್ಕೆ ಕೈಗಾರಿಕೆ ತರುವುದು ನನ್ನ ಕೆಲಸವಲ್ಲ. ಅದು ರಾಜ್ಯ ಸರ್ಕಾರದ ಕೆಲಸ. ನಾನು ಮುಖ್ಯಮಂತ್ರಿ ಆಗಿದ್ದಾಗ 9 ಕೈಗಾರಿಕಾ ಕ್ಲಸ್ಟರ್‌ಗಳಿಗೆ ಅನುಮೋದನೆ ನೀಡಿದ್ದೆ. ಅವುಗಳ ಸ್ಥಿತಿ ಏನಾಗಿದೆ? ಕೈಗಾರಿಕೆಗಳು ಇಲ್ಲಿಗೆ ಬರಬೇಕು ಎಂಬಂತಹ ವಾತಾವರಣವನ್ನು ಇವರು ಸೃಷ್ಟಿಸಬೇಕು. ಅದನ್ನು ಬಿಟ್ಟು ಬೇರೆಲ್ಲಾ ಮಾಡಿಕೊಂಡು ಕೂತಿದ್ದಾರೆ. ಮತ್ತೆ ಬರುತ್ತೇನೆ, ಇವರ ಬುರುಡೆ ವ್ಯವಹಾರವನ್ನೆಲ್ಲಾ ಬಿಚ್ಚಿಡುತ್ತೇನೆ.

‘ನಮ್ಮ ಸರ್ಕಾರ ಬರುತ್ತದೆ’

ಈ ಸರ್ಕಾರದ ಆಡಳಿತದಿಂದ ಜನರು ಬೇಸತ್ತು ಹೋಗಿದ್ದಾರೆ. ಐದು ವರ್ಷ ನನಗೆ ಆಡಳಿತ ನೀಡಿದರೆ ಎಲ್ಲವನ್ನೂ ಸರಿ ಮಾಡುತ್ತೇನೆ. ಈ ಬಾರಿ ಖಂಡಿತಾ ಸರ್ಕಾರ ರಚಿಸುತ್ತೇವೆ. ನಮ್ಮದು ಸ್ವತಂತ್ರ ಸರ್ಕಾರ ಬರುತ್ತದೆಯೋ ಅಥವಾ ಮೈತ್ರಿ ಸರ್ಕಾರ ಬರುತ್ತದೆಯೋ ಎಂಬುದನ್ನು ಜನರು ನಿರ್ಧರಿಸಲಿದ್ದಾರೆ. ಈ ಕ್ಷಣದವರೆಗೂ ಜೆಡಿಎಸ್–ಬಿಜೆಪಿ ಮೈತ್ರಿ ಚೆನ್ನಾಗಿಯೇ ಇದೆ



‘ಚರ್ಚೆಗೆ ಬರಲಿ’

ಬಹಿರಂಗ ಚರ್ಚೆಗೆ ಬನ್ನಿ ಎಂದು ನಾನು ಕರೆಯುತ್ತಲೇ ಇದ್ದೇನೆ. ಎ ಖಾತೆ ವಿಚಾರದಲ್ಲಿ ಯಾವ ಭ್ರಷ್ಟಾಚಾರ ನಡೆಯುತ್ತಿದೆ? ಜನರ ಆಸ್ತಿ ದಾಖಲೆ ಸರಿಪಡಿಸುವುದು ನಮ್ಮ ಆರನೇ ಗ್ಯಾರಂಟಿ. ಇ –ಖಾತೆ ಮಾಡಿಕೊಡಲು ಅವರಿಂದ ಆಗಲಿಲ್ಲ. ಅವರಿಗೆ ಇಂತಹ ಯಾವುದೇ ಆಲೋಚನೆಗಳು ಇರಲಿಲ್ಲ. ಕುಮಾರಸ್ವಾಮಿ ಅವರು ಕೈಗಾರಿಕೆ ತರುತ್ತೇನೆ ಎನ್ನುತ್ತಾರಲ್ಲ, ತರಲಿ. ಎಲ್ಲಿ ಮಾಡುತ್ತಾರೆ ಎಂದು ಅವರೇ ಪಟ್ಟಿ ನೀಡಲಿ. ಭೂಸ್ವಾಧೀನ ಮಾಡಿಕೊಡುತ್ತೇವೆ.

‘ನಿನ್ನದನ್ನು ಬಿಚ್ಚಿಡುತ್ತೇನೆ’

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚೆ, ವಾದ–ವಿವಾದ ಇರಬೇಕು. ಹಿಟ್ ಅಂಡ್ ರನ್, ಬ್ಲ್ಯಾಕ್‌ಮೇಲ್ ಮಾಡುವುದಲ್ಲ. ನನ್ನ ವಿರುದ್ಧ ದಾಖಲೆಗಳು ಇದ್ದರೆ ಅದನ್ನು ಬಹಿರಂಗಪಡಿಸಲಿ. ಸಾರ್ವಜನಿಕವಾಗಿ ಬಂದು ಉತ್ತರ ನೀಡಲಿ. ಸದನದಲ್ಲಿ ಜೇಬು ತೋರಿಸಿ ಪೆನ್‌ಡ್ರೈವ್ ತೆಗೆಯುತ್ತೇನೆ, ತೆಗೆಯುತ್ತೇನೆ ಎಂದು ಹೇಳಿದಂತೆ ಅಲ್ಲ. ಕುಮಾರಸ್ವಾಮಿ, ನಾನು ಏನು ಮಾಡಿದ್ದೇನೆ ಮತ್ತು ನನ್ನ ಹುಳುಕು ಏನು ಎಂಬುದನ್ನು ನೀನು ಹೇಳು. ನಿನ್ನದನ್ನು ನಾನು ಹೇಳುತ್ತೇನೆ. ನನ್ನದನ್ನು ನೀನು ಬಿಚ್ಚಿಡು, ನಿನ್ನದನ್ನು ನಾನು ಬಿಚ್ಚಿಡುತ್ತೇನೆ.

‘9 ಸ್ಥಾನಕ್ಕೆ ಕುಸಿಯುತ್ತಾರೆ’

ನಮ್ಮ ಸರ್ಕಾರ ಬರುತ್ತದೆ ಎಂಬ ಡೈಲಾಗ್ ಅನ್ನು ಎಷ್ಟು ಸಾರಿ ಹೇಳಿ ಆಗಿದೆ. ಅದನ್ನು ಕೇಳಿ, ಕೇಳಿ ಸಾಕಾಗಿದೆ. ಕುಮಾರಸ್ವಾಮಿ ನಾಯಕತ್ವದಲ್ಲಿ ಈ ಹಿಂದೆ ಜೆಡಿಎಸ್ 18 ಸ್ಥಾನಕ್ಕೆ ಇಳಿದಿತ್ತು. ಮುಂದಿನ ಬಾರಿ 8 ಅಥವಾ 9 ಸ್ಥಾನಗಳಿಗೆ ಕುಸಿಯುತ್ತದೆ ಅಷ್ಟೆ.



ಚಿಟಿಕೆ ಸುದ್ದಿ

ಹೇಳಿಕೆಗೆ ಬದ್ಧ: ಯತೀಂದ್ರ

ಮೈಸೂರು: ‘ಕಾಂಗ್ರೆಸ್‌ನಲ್ಲಿ ಮುಂದಿನ ನಾಯಕತ್ವದ ಕುರಿತು ನೀಡಿರುವ ಹೇಳಿಕೆಗೆ ಈಗಲೂ ಬದ್ಧನಾಗಿದ್ದೇನೆ. ನಾನು ಹೇಳಿದ್ದರಲ್ಲಿ ತಪ್ಪೇನಿಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಶನಿವಾರ ಇಲ್ಲಿ ಸಮರ್ಥಿಸಿಕೊಂಡರು.

ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ‘ನನ್ನ ಹೇಳಿಕೆಯನ್ನು ಬೇರೆ ರೀತಿ ಬಿಂಬಿಸುತ್ತಿದ್ದಾರೆ. ನಾನು ಏನು ಹೇಳಬೇಕೋ ಅದನ್ನು ಹೇಳಿಯಾಗಿದೆ. ಅನಗತ್ಯವಾಗಿ ಮತ್ತೆ ಅದನ್ನೇ ಮಾತನಾಡಿ ವಿವಾದ ಸೃಷ್ಟಿಸುವುದಿಲ್ಲ’ ಎಂದರು.

ಮಾಧ್ಯಮದ ಮುಂದೆ ಮತ್ತೆ ಏನೂ ಮಾತನಾಡುವುದಿಲ್ಲ. ಎಲ್ಲಿ ಮಾತನಾಡಬೇಕೋ ಅಲ್ಲಿಯೇ, ಆಂತರಿಕ ವಿಚಾರಗಳನ್ನು ಪಕ್ಷದ ಒಳಗೇ ಮಾತನಾಡುತ್ತೇನೆ’ ಎಂದರು.

‘ಈ ಕುರಿತು ಪಕ್ಷದ ನೋಟಿಸ್ ಬಂದಾಗ ನೋಡಿಕೊಳ್ಳೋಣ. ನೋಟಿಸ್ ಕೊಟ್ಟರೆ ಸೂಕ್ತ ಉತ್ತರ ಕೊಡುತ್ತೇನೆ. ಈಗಿನ ಸ್ಥಿತಿಯಲ್ಲಿ ಸಿದ್ದರಾಮಯ್ಯನವರೇ ಐದು ವರ್ಷ ಸಿ.ಎಂ ಆಗಿ ಮುಂದುವರೆಯುತ್ತಾರೆ. ನವೆಂಬರ್, ಡಿಸೆಂಬರ್ ಕ್ರಾಂತಿ ಊಹಾಪೋಹ ಅಷ್ಟೇ’ ಎಂದರು.

ಕಡತಗಳಿಗೆ ಬೆಂಕಿ; ಆರೋಪಿ ಬಂಧನ

ಸಕಲೇಶಪುರ (ಹಾಸನ): ಪುರಸಭೆ ಮುಖ್ಯಾಧಿಕಾರಿ ಕೊಠಡಿ ಟೇಬಲ್ ಮೇಲಿದ್ದ ಕಡತಗಳಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದ ಆರೋಪಿಯನ್ನು ಪಟ್ಟಣ ಪೊಲೀಸರು ಬಂಧಿಸಿದ್ದಾರೆ.

ಪಟ್ಟಣದ ಕುಶಾಲನಗರ ಬಡಾವಣೆ ನಿವಾಸಿ ನಿಂಗರಾಜು ಬಂಧಿತ. 'ಹೇಮಾವತಿ ಸೇತುವೆ ಸಮೀಪ ತರಕಾರಿ ಮಾರಾಟಕ್ಕೆ ಮುಖ್ಯಾಧಿಕಾರಿ ಅಡ್ಡಿ ಮಾಡುತ್ತಿದ್ದರು. ಅದೇ ಸಿಟ್ಟಿನಿಂದ ಬೆಂಕಿ ಹಚ್ಚಿದೆ ಎಂದು ಹೇಳಿದ್ದಾನೆ’ ಎಂದು ತಿಳಿದುಬಂದಿದೆ. ಪ್ರಕರಣ ದಾಖಲಾಗಿದೆ.

ಗುರುಮಠಕಲ್ ಪಥಸಂಚಲನ ಮುಂದೂಡಿಕೆ

ಗುರುಮಠಕಲ್ (ಯಾದಗಿರಿ ಜಿಲ್ಲೆ): ಅನುಮತಿ ಸಿಗದ ಹಿನ್ನಲೆಯಲ್ಲಿ ಪಟ್ಟಣದಲ್ಲಿ ಶನಿವಾರ (ಅ.25) ನಡೆಯಬೇಕಿದ್ದ ಆರ್‌ಎಸ್‌ಎಸ್ ಪಥಸಂಚಲನ ಮುಂದೂಡಲಾಗಿದೆ.

ಅನುಮತಿ ಕೋರಿ ಆಯೋಜಕರು ಅ.21ರಂದು ತಹಶೀಲ್ದಾರ್ ಕಚೇರಿಗೆ ಮನವಿ ಸಲ್ಲಿಸಿದ್ದರು. ಪಥಸಂಚಲನಕ್ಕೆ ಸಿದ್ಧತೆ ಮಾಡಿಕೊಂಡಿದ್ದರು. ಗುರುವಾರ ತಹಶೀಲ್ದಾರ್ ಕಚೇರಿಗೆ ತೆರಳಿದ್ದ ಆಯೋಜಕರಿಗೆ, ‘ನನಗೆ ಅನುಮತಿ ನೀಡುವ ಅಧಿಕಾರ ಇಲ್ಲ’ ಎಂದು ತಹಶೀಲ್ದಾರ್ ಸ್ಪಷ್ಟನೆ ಕೊಟ್ಟು ಕಳುಹಿಸಿದ್ದರು.

ಅದೇ ದಿನ ಆಯೋಜಕರು ಜಿಲ್ಲಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಕೆ ಮಾಡಿದ್ದರು. ತರಾತುರಿಯಲ್ಲಿ ಅನುಮತಿ ನೀಡಲಾಗದು. ಮತ್ತೊಂದು ದಿನ ನಿಗದಿಗೊಳಿಸಿ ಅರ್ಜಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದ್ದರು.

‘ಗಾಂಧೀಜಿ ಸ್ತಂಭ ನಿರ್ಮಾಣ’

ಕೊಪ್ಪಳ: ‘ಮಹಾತ್ಮಗಾಂಧಿ ಅಧ್ಯಕ್ಷತೆಯ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ನೆನಪಿಗೆ ಒಂದು ವರ್ಷದಲ್ಲಿ, ರಾಜ್ಯದಾದ್ಯಂತ ಗಾಂಧೀಜಿ ಭೇಟಿ ನೀಡಿದ ಸ್ಥಳ ಅಥವಾ ಆ ಜಿಲ್ಲೆಯಲ್ಲಿ ಅವರ ಪುತ್ಥಳಿ ಸಮೇತ ಸ್ತಂಭ ನಿರ್ಮಿಸಲಾಗುವುದು’ ಎಂದು ಗಾಂಧಿ ಭಾರತ ಶತಮಾನೋತ್ಸವ ಸಮಿತಿ ಅಧ್ಯಕ್ಷ, ಸಚಿವ ಎಚ್‌.ಕೆ. ಪಾಟೀಲ ಇಲ್ಲಿ ಶನಿವಾರ ತಿಳಿಸಿದರು.

ಧರ್ಮಸ್ಥಳ ಪ್ರಕರಣ ಹಲವರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳು, ಇದೇ 27ಕ್ಕೆ ಬೆಳ್ತಂಗಡಿ ಕಚೇರಿಗೆ ವಿಚಾರಣೆಗೆ ಬರುವಂತೆ ಹಲವರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

‘ಪ್ರಕರಣದ ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟೆಣ್ಣವರ, ಜಯಂತ್ ಟಿ. ಹಾಗೂ ವಿಠಲ ಗೌಡ ಅವರಿಗೆ ನೋಟಿಸ್ ಜಾರಿಗೊಳಿಸಲಾಗಿದೆ’ ಎಂದು ಎಸ್‌ಐಟಿ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಈ ನಾಲ್ವರಿಗೆ ಹಿಂದೆಯೂ ನೋಟಿಸ್ ನೀಡಲಾಗಿತ್ತು. ಇತ್ತೀಚೆಗೆ ಸಿಕ್ಕಿರುವ ಪೂರಕ ಸಾಕ್ಷ್ಯಗಳ ಆಧಾರದಲ್ಲಿ ಮತ್ತೆ ನೋಟಿಸ್ ನೀಡಲಾಗಿದೆ ಎಂದು ಗೊತ್ತಾಗಿದೆ.

ಎಸ್‌ಐಟಿ ಮುಖ್ಯಸ್ಥರ ಭೇಟಿ: ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಅವರು ಬೆಳ್ತಂಗಡಿ ಕಚೇರಿಗೆ ಶನಿವಾರ ಭೇಟಿ ನೀಡಿ, ಪ್ರಕರಣದ ತನಿಖೆಯ ಪ್ರಗತಿಯನ್ನು ಪರಿಶೀಲಿಸಿದರು.

‘ಪ್ರಕರಣದ ಕುರಿತು ಕೋರ್ಟ್‌ಗೆ ಸಮಗ್ರ ವರದಿ ಸಲ್ಲಿಸಲು ಎಸ್‌ಐಟಿ ಸಿದ್ಧತೆ ನಡೆಸಿದೆ. ಶೋಧ ಕಾರ್ಯದಲ್ಲಿ ಕಂಡ ಅಂಶಗಳು, ಸಾಕ್ಷಿದಾರರ ಹೇಳಿಕೆ, ಇದುವರೆಗೆ ಕಲೆ ಹಾಕಿರುವ ತಾಂತ್ರಿಕ ಪುರಾವೆಗಳನ್ನು ಆಧರಿಸಿ ವರದಿ ಸಿದ್ಧಪಡಿಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಧರ್ಮಸ್ಥಳ ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನಲ್ಲಿ ಸಿಕ್ಕಿರುವ ಶವಗಳ ಅವಶೇಷಗಳಿಗೆ ಸಂಬಂಧಿಸಿದ ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಗಳು ಎಸ್‌ಐಟಿಗೆ ಇನ್ನಷ್ಟೇ ತಲುಪಬೇಕಿವೆ. ಕೆಲ ಸಾಮಗ್ರಿಗಳು, ಜೈವಿಕ ಮಾದರಿಗಳನ್ನು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಎನ್‌ವಿರಾನ್ಮೆಂಟಲ್ ಡಿಎನ್‌ಎ ತಜ್ಞರಿಗೆ ಕಳುಹಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ತ್ವರಿತವಾಗಿ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರ ಸೂಚನೆ ನೀಡಿದೆ ಎಂಬುದನ್ನು ಮೂಲಗಳು ಅಲ್ಲಗಳೆದಿವೆ.

ಸುಜಾತಾ ಭಟ್ ಅವರಿಗೂ ನೋಟಿಸ್: ‘ಮಗಳು ಕಾಣೆಯಾಗಿದ್ದಾಳೆ ಎಂದು ಸುಳ್ಳು ದೂರು ದಾಖಲಿಸಿದ್ದ ಸುಜಾತಾ ಭಟ್ ಅವರಿಗೂ ನೋಟಿಸ್ ಜಾರಿಗೊಳಿಸಿದೆ’ ಎಂದು ಮೂಲಗಳು ತಿಳಿಸಿವೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.80	30,079	30,079
ಹಾರಂಗಿ	2,859	2,858.26	1,194	500
ಕಬಿನಿ	2,284.00	2,283.92	2,709	2,908
ಹೇಮಾವತಿ	2,922	2,922	13,249	13,249
ಲಿಂಗನಮಕ್ಕಿ	1,819	1,815.35	4,516	6,891
ಸೂಪಾ (ಮೀ)	564	558.34	1,080.65	4,717.61
ಮಾಣಿ	595	593.62	234	675
ತುಂಗಭದ್ರಾ	1,633	1,626.06	26,815	29,156
ಮಲಪ್ರಭಾ	2,079.5	2,079.50	1,694	1,694
ಘಟಪ್ರಭಾ	2175	2,174.91	1,005	1,005
ಭದ್ರಾ *	186	184.10	12,379	7,576
ಆಲಮಟ್ಟಿ (ಮೀ)	519.6	519.59	00	1,430
ನಾರಾಯಣಪುರ (ಮೀ)	492.25	491.49	500	6,100

* ನೆಲಮಟ್ಟದಿಂದ

‘ಸಮಸ್ಯೆ ಆಲಿಸದಿದ್ದರೆ ಕಠಿಣ ತೀರ್ಮಾನ’

ನದಾಫ– ಪಿಂಜಾರ ಸಮುದಾಯದ ಮುಖಂಡರ ಕಿಡಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಕಾಂಗ್ರೆಸ್ ಸರ್ಕಾರ ನದಾಫ– ಪಿಂಜಾರರ ಬಗ್ಗೆ ತಾತ್ಸಾರ ಭಾವ ತಾಳುತ್ತಿದೆ. ಸಮಸ್ಯೆ ಹೇಳಿಕೊಳ್ಳಲು ಎರಡೂವರೆ ವರ್ಷಗಳಿಂದ ಮುಖ್ಯಮಂತ್ರಿ ಭೇಟಿಗೆ ಯತ್ನಿಸಿದರೂ ಸಾಧ್ಯವಾಗಿಲ್ಲ. ನ.20ರೊಳಗೆ ಅವಕಾಶ ಸಿಗದಿದ್ದರೆ ಕಠಿಣ ತೀರ್ಮಾನ ಕೈಗೊಳ್ಳಲಿದ್ದೇವೆ’ ಎಂದು ನದಾಫ– ಪಿಂಜಾರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಚ್‌. ಜಲೀಲ್ ಸಾಬ್ ಹೇಳಿದರು.

ಇಲ್ಲಿನ ಮುರುಘಾ ಮಠದ ಅನುಭವ ಮಂಟಪದಲ್ಲಿ ಶನಿವಾರ ನಡೆದ ನದಾಫ–ಪಿಂಜಾರ ಸಂಘದ 33ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಶಾಸಕರು, ಸಚಿವರಿಗೆ ಸಂಕಷ್ಟ ಹೇಳಿಕೊಂಡರೂ ಪ್ರಯೋಜನವಾಗಿಲ್ಲ. ಜನತಾ ದರ್ಶನದಲ್ಲಿ ಕೊಟ್ಟ ಮನವಿಗಳಿಗೆ ಬೆಲೆ ಇಲ್ಲದಂತಾಗಿದ. ಅಲ್ಲಿ ಕೊಟ್ಟ ಅರ್ಜಿಗಳನ್ನು ಕಸದ ಬುಟ್ಟಿಗೆ ಬಿಸಾಡುತ್ತಾರೆ. ಸರ್ಕಾರಕ್ಕೆ ಸಮುದಾಯದವರನ್ನು ಕಂಡರೆ ತಿರಸ್ಕಾರ ಇದ್ದಂತಿದೆ. ನಮ್ಮ ಅವಶ್ಯಕತೆ ಇಲ್ಲ ಎಂದಾದರೂ ತಿಳಿಸಲಿ. ನಾವು ನಿಗಮ– ಮಂಡಳಿಗಳಲ್ಲಿ ಸ್ಥಾನ ಕೇಳುತ್ತಿಲ್ಲ. ಸಮಸ್ಯೆ ಹೇಳಿಕೊಳ್ಳಲು ಭೇಟಿಗಾಗಿ ಸಮಯ ಕೇಳುತ್ತಿದ್ದೇವೆ’ ಎಂದರು.

‘ರಾಜ್ಯದಲ್ಲಿ ನಮ್ಮದು 19 ಲಕ್ಷ ಜನಸಂಖ್ಯೆ ಇದೆ. 2015ರ ಸಮೀಕ್ಷೆಯಲ್ಲಿ ಕೇವಲ 1 ಲಕ್ಷ ಎಂದು ತೋರಿಸಿದ್ದಾರೆ. ನಮ್ಮನ್ನು ಪ್ರವರ್ಗ–1ರಲ್ಲಿ ಪ್ರತ್ಯೇಕಿಸಿರುವುದು ಗೊಂದಲ ಸೃಷ್ಟಿಸಿದೆ. ನಮಗೆ ಪ್ರತ್ಯೇಕತೆ ಬೇಕಿಲ್ಲ. ಆದರೆ, ಅಲ್ಪಸಂಖ್ಯಾತರ ಯೋಜನೆಗಳಲ್ಲಿ ನದಾಫ–ಪಿಂಜಾರರಿಗೆ ಶೇ 25ರಷ್ಟು ಮೀಸಲಾತಿ ಬೇಕು’ ಎಂದು ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಸಚಿವ ಡಿ.ಸುಧಾಕರ್, ‘ನದಾಫ– ಪಿಂಜಾರ ಸಮುದಾಯದ ಬಗ್ಗೆ ಮುಖ್ಯಮಂತ್ರಿಯವರಿಗೆ ವಿಶೇಷ ಪ್ರೀತಿ ಇದೆ. ಅವರ ಭೇಟಿಗಾಗಿ ಗಡುವು ನೀಡುವುದು ಬೇಡ. ಆದಷ್ಟು ಬೇಗ ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಜಮೀರ್ ಅಹಮದ್ ಖಾನ್ ಅವರೊಂದಿಗೆ ಭೇಟಿಗೆ ಸಮಯ ನಿಗದಿ ಮಾಡಿಸುತ್ತೇನೆ’ ಎಂದು ಭರವಸೆ ನೀಡಿದರು.



ಚಿತ್ರದುರ್ಗದಲ್ಲಿ ನಡೆದ ನದಾಫ – ಪಿಂಜಾರರ ಸಮಾವೇಶದಲ್ಲಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಚ್‌ಜಲೀಲ್ ಸಾಬ್ ಅವರು ಸಚಿವ ಡಿ.ಸುಧಾಕರ್, ಶಾಸಕ ಟಿ.ರಘುಮೂರ್ತಿ ಅವರಿಗೆ ವಿವಿಧ ಬೇಡಿಕೆಗಳ ಪತ್ರ ಅರ್ಪಿಸಿದರು

ಆಳಂದ ‘ಮತ ಕಳವು’ ಮಿನಿಟ್ರಕ್ ಚಾಲಕ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಳಂದ ಮತ ಕಳವು ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ತಂಡವು ಶನಿವಾರ ಐವರನ್ನು ವಿಚಾರಣೆ ನಡೆಸಿದ್ದು, ಮಿನಿಟ್ರಕ್ ಚಾಲಕ ವಿಶಾಲ್ ಅವರನ್ನು ವಶಕ್ಕೆ ಪಡೆದಿದೆ.

ಆಳಂದ ಕ್ಷೇತ್ರದಲ್ಲಿ 6,018 ಮತದಾರರ ಚೀಟಿಗಳನ್ನು ಅಕ್ರಮವಾಗಿ ರದ್ದುಪಡಿಸಲು ಯತ್ನಿಸಿದ ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರವು ರಚಿಸಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಅಕ್ಟೋಬರ್ 17ರಂದು, ಬಿಜೆಪಿಯ ಪರಾಜಿತ ಅಭ್ಯರ್ಥಿ ಸುಭಾಷ ಗುತ್ತೇದಾರ ಅವರ ಕಲಬುರಗಿ ನಿವಾಸದ ಮೇಲೆ ದಾಳಿ ನಡೆಸಿತ್ತು.

ಇದೇ ವೇಳೆ, ಗುತ್ತೇದಾರ ಅವರ ಆಳಂದ ಮನೆಯ ಎದುರು ಮತದಾರರ ಪಟ್ಟಿ, ಚೀಟಿಗಳು ಸೇರಿ ಅಪಾರ ಪ್ರಮಾಣದ ದಾಖಲೆಗಳಿಗೆ ಬೆಂಕಿ ಇಡಲಾಗಿತ್ತು. ಎಸ್‌ಐಟಿ ಅಧಿಕಾರಿಗಳಿಗೆ ಈ ಬಗ್ಗೆ ಮಾಹಿತಿ ದೊರೆತು ಸ್ಥಳಕ್ಕೆ ತೆರಳುವ ಮೊದಲೇ ಅರೆಬರೆ ಸುಟ್ಟ ಕಾಗದ ಪತ್ರಗಳನ್ನು ಮಿನಿಟ್ರಕ್ ಒಂದರಲ್ಲಿ ತುಂಬಿಸಿ, ಅಮರ್ಜಾ ನದಿಗೆ ಸುರಿಯಲಾಗಿತ್ತು.

ತನಿಖಾಧಿಕಾರಿಗಳು ಮಿನಿಟ್ರಕ್ ಚಾಲಕನ್ನು ವಿಚಾರಣೆ ನಡೆಸಿ, ಬಿಟ್ಟು ಕಳುಹಿಸಿದ್ದರು. ಶನಿವಾರ ವಿಶಾಲ್, ಡೇಟಾ ಸೆಂಟರ್ ಉದ್ಯೋಗಿಗಳಾದ ಅಕ್ರಂ, ನದೀಮ್, ಜುನೇದ್ ಮತ್ತು ಇನ್ನೊಬ್ಬ ವ್ಯಕ್ತಿಯನ್ನು ಕರೆಯಿಸಿ ವಿಚಾರಣೆ ನಡೆಸಿದ್ದರು. ವಿಶಾಲ್ ಅವರನ್ನು ರಾತ್ರಿಯವರೆಗೆ ವಿಚಾರಣೆ ನಡೆಸಿ, ನಂತರ ವಶಕ್ಕೆ ಪಡೆಯಲಾಗಿದೆ. ಇತರರ ವಿಚಾರಣೆ ರಾತ್ರಿಯೂ ಮುಂದುವರೆದಿತ್ತು.



ಅಮರ್ಜಾ ನದಿಯಲ್ಲಿ ಸುರಿಯಲಾದ ಅರೆ–ಬರೆ ಸುಟ್ಟ ದಾಖಲೆ ಪತ್ರ

‘ಮಾಲೀಕ ಹೇಳಿದ್ದನ್ನು ಮಾಡಿದೆ’

‘ಸುಟ್ಟ ಹಾಕಲಾಗಿದ್ದ ಕಾಗದ ಪತ್ರಗಳು ಯಾವುದು, ಯಾರಿಗೆ ಸಂಬಂಧಿಸಿದ್ದು ಎಂಬುದು ನನಗೆ ಗೊತ್ತಿಲ್ಲ. ನಾನು ಚಾಲಕನಷ್ಟೆ. ಮಿನಿಟ್ರಕ್ ಮಾಲೀಕ ಸಿದ್ಧಾರೂಢ ಅವರು ಕರೆ ಮಾಡಿ, ತುರ್ತಾಗಿ ಕಸ ಸಾಗಿಸಬೇಕು ಎಂದು ಸೂಚಿಸಿದರು. ತಾನು ಅದನ್ನು ಪಾಲಿಸಿದೆ ಅಷ್ಟೆ ಎಂದು ಚಾಲಕ ಹೇಳಿಕೆ ನೀಡಿದ್ದಾನೆ’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

‘ಆದರೆ, ಆತ ಸ್ಥಳದಿಂದ ಪರಾರಿಯಾಗಲು ಯತ್ನಿಸಿದ್ದ ಮತ್ತು ಕಾಗದ ಪತ್ರಗಳನ್ನು ನದಿಗೆ ಎಸೆದಿದ್ದ. ಅವನ ಕೃತ್ಯಕ್ಕೂ ಹೇಳಿಕೆಗೂ ಹೊಂದಿಕೆಯಾಗುತ್ತಿಲ್ಲ. ಹೆಚ್ಚಿನ ವಿಚಾರಣೆಗಾಗಿ ಅವನನ್ನು ವಶಕ್ಕೆ ಪಡೆಯಲಾಗಿದೆ. ಮಿನಿಟ್ರಕ್ ಮಾಲೀಕ ಸಿದ್ಧಾರೂಢ ಅವರನ್ನು ವಿಚಾರಣೆಗೆ ಕರೆಯಲಾಗುತ್ತದೆ’ ಎಂದಿವೆ.

ನಿಲ್ಲದ ಮಳೆ ಅಬ್ಬರ: ಬೆಳೆ ಹಾನಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಉತ್ತರ ಕನ್ನಡ, ವಿಜಯನಗರ, ಬಳ್ಳಾರಿ ಜಿಲ್ಲೆಗಳಲ್ಲಿ ಮಳೆ ಮುಂದುವರೆದಿದೆ. ಉತ್ತರ ಕನ್ನಡ ಜಿಲ್ಲೆ ಕರಾವಳಿ ಭಾಗದಲ್ಲಿ ಶನಿವಾರ ವ್ಯಾಪಕ ಮಳೆ ಸುರಿದಿದ್ದು, ಅಂಕೋಲಾ ತಾಲ್ಲೂಕಿನ ಹಾರವಾಡದಲ್ಲಿ ರಾಜ್ಯದಲ್ಲೇ ಗರಿಷ್ಠ 8 ಸೆಂ.ಮೀ ಮಳೆ ಸುರಿಯಿತು.

ಮಳೆ ಹಿನ್ನೆಲೆಯಲ್ಲಿ ಕಾರವಾರ ತಾಲ್ಲೂಕಿನ ಶಾಲೆ, ಪಿಯು ಕಾಲೇಜುಗಳಿಗೆ ರಜೆ ನೀಡಲಾಗಿತ್ತು. ಕಾರವಾರ–ಕೈಗಾ ಹೆದ್ದಾರಿ ಭಾಗಶಃ ಜಲಾವೃತಗೊಂಡಿತ್ತು.

ಬಿರುಸಿನ ಗಾಳಿ ಇದ್ದ ಪರಿಣಾಮ ವಾಣಿಜ್ಯ ಮತ್ತು ಮೀನುಗಾರಿಕೆ ಬಂದರಿಗೆ ಇನ್ನಷ್ಟು ಮೀನುಗಾರಿಕೆ ದೋಣಿಗಳು ತಡರಾತ್ರಿಯಿಂದಲೂ ಬಂದು ಲಂಗರು ಹಾಕಿದವು.

ಮೊಳಕೆಯೊಡೆದ ಮೆಕ್ಕೆಜೋಳ: ವಿಜಯನಗರ ಜಿಲ್ಲೆಯಲ್ಲಿ ಮಳೆ ಹಾಗೂ ತೇವಾಂಶದಿಂದಾಗಿ ಅಪಾರ ಪ್ರಮಾಣದ ಮೆಕ್ಕೆಜೋಳ ರಾಶಿಯಲ್ಲೇ ಮೊಳಕೆಯೊಡೆದಿದೆ.

ಹೂವಿನಹಡಗಲಿ ಪಟ್ಟಣ ಸುತ್ತಮುತ್ತಲ ಗ್ರಾಮಗಳ ರೈತರು ಸಾವಿರಾರು ಕ್ವಿಂಟಲ್‌ನಷ್ಟು ಮೆಕ್ಕೆಜೋಳವನ್ನು ಎಪಿಎಂಸಿ ಪ್ರಾಂಗಣದಲ್ಲೇ ಒಣಗಿಸಿ ಮಾರಾಟ ಮಾಡಲು ತಂದಿದ್ದಾರೆ. ತಾಡಪಾಲು ಮುಚ್ಚಿದ್ದರೂ ಮಳೆಗೆ ಸಿಲುಕಿ ಮೆಕ್ಕೆಜೋಳ ಮೊಳಕೆಯೊಡೆದೆ. ನಾಲ್ಕೈದು ದಿನಗಳಿಂದ ಬಿಸಿಲಿಲ್ಲದೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಸಹ ಇದೇ ಸಮಸ್ಯೆ ಎದುರಾಗಿದೆ.

ಮೆಕ್ಕೆಜೋಳ ಖರೀದಿಗೆ ವರ್ತಕರು ಹಿಂದೇಟು ಹಾಕುತ್ತಿದ್ದಾರೆ. ಸರ್ಕಾರ ಖರೀದಿ ಕೇಂದ್ರ ತೆರೆದು, ಕ್ವಿಂಟಲ್‌ಗೆ ₹2400ರ ಬೆಂಬಲ ಬೆಲೆಯಲ್ಲಿ ಖರೀದಿಸಲಿ ಎಂದು ಆಗ್ರಹಿಸಿದ್ದಾರೆ.

ತುಂಗಭದ್ರಾ ಒಳಹರಿವು ಹೆಚ್ಚಳ: ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ 26,815 ಕ್ಯೂಸೆಕ್‌ಗೆ ಏರಿದ್ದು, ಜಲಾಶಯದಿಂದ 14,950 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ.

ಬಳ್ಳಾರಿ ಜಿಲ್ಲೆಯಲ್ಲಿ 18 ಮನೆಗಳಿಗೆ ಹಾನಿಯಾಗಿದೆ. ಕಂಪ್ಲಿ, ಸಿರುಗುಪ್ಪ ತಾಲ್ಲೂಕುಗಳಲ್ಲಿ ಭತ್ತದ ಬೆಳೆ ಹಾನಿಗೀಡಾಗಿದೆ. ಸಿರುಗುಪ್ಪ ತಾಲ್ಲೂಕಿನಲ್ಲಿ ಮಳೆಯಿಂದಾಗಿ ಭತ್ತ ಕಟಾವು, ಒಕ್ಕಣೆಗೆ ಅಡಚಣೆಯಾಗಿದೆ. ಹಲವು ಕಡೆ ಒಕ್ಕಣೆ ಮಾಡಿದ್ದ ಮೆಕ್ಕೆಜೋಳ ಹಾಳಾಗಿದೆ. ಬೆಳೆ ಹಾನಿ ಕುರಿತು ಜಿಲ್ಲಾಡಳಿತ ಜಂಟಿ ಸಮೀಕ್ಷೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೀದರ್‌ನಲ್ಲಿ ಮಳೆ: ಜಿಲ್ಲೆಯ ಹಲವೆಡೆ ಶನಿವಾರವೂ ಮಳೆಯಾಗಿದೆ. ಔರಾದ್ ತಾಲ್ಲೂಕಿನಲ್ಲಿ ಗಂಟೆಗೂ ಹೆಚ್ಚು ಕಾಲ ಜೋರು ಮಳೆಯಾಗಿದೆ. ಜಿಲ್ಲೆಯ ಬಸವಕಲ್ಯಾಣ, ಭಾಲ್ಕಿಯಲ್ಲೂ ವರ್ಷಧಾರೆಯಾಗಿದೆ. ಸತತ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದೆ.

ಪೊಲೀಸರ ‘ಸ್ಲೋಚ್ ಹ್ಯಾಟ್’ ಬದಲಾವಣೆ, ಅ.28ರಿಂದಲೇ ಹೊಸ ಟೋಪಿ

ಕಾನ್‌ಸ್ಟೆಬಲ್‌ಗಳಿಗೆ ಅ.28ರಿಂದ ‘ಪೀಕ್ ಕ್ಯಾಪ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪೊಲೀಸ್ ಕಾನ್‌ಸ್ಟೆಬಲ್ ಹಾಗೂ ಹೆಡ್ ಕಾನ್‌ಸ್ಟೆಬಲ್‌ಗಳು ಧರಿಸುತ್ತಿದ್ದ ‘ಸ್ಲೋಚ್ ಹ್ಯಾಟ್’ ಬದಲಿಗೆ ‘ಪೀಕ್ ಕ್ಯಾಪ್’ಗಳನ್ನು ವಿತರಣೆ ಮಾಡಲಾಗುತ್ತಿದೆ. ಹೊಸ ಟೋಪಿಗಳು ಅಕ್ಟೋಬರ್ 28ರಿಂದಲೇ ಪೊಲೀಸರ ಕೈಸೇರಲಿವೆ.

ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ.ಪರಮೇಶ್ವರ ಅವರು ಹೊಸ ಕ್ಯಾಪ್‌ಗಳನ್ನು ವಿತರಣೆ ಮಾಡಲಿದ್ದಾರೆ. ನಂತರ, ಹಂತಹಂತವಾಗಿ ವಿವಿಧ ಜಿಲ್ಲೆಗಳ ಕಾನ್‌ಸ್ಟೆಬಲ್ ಹಾಗೂ ಹೆಡ್‌ಕಾನ್‌ಸ್ಟೆಬಲ್‌ಗಳಿಗ ಹೊಸ ಕ್ಯಾಪ್ ವಿತರಣೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಜೂನ್‌ನಲ್ಲಿ ನಡೆದಿದ್ದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದಲ್ಲಿ ಹೊಸ ಕ್ಯಾಪ್ ವಿತರಣೆಗೆ ನಿರ್ಧರಿಸಲಾಗಿತ್ತು. ಅದಾದ ಮೇಲೆ ತೆಲಂಗಾಣ ಪೊಲೀಸರು ಧರಿಸುತ್ತಿರುವ ತೆಳುವಾದ ‘ಪೀಕ್ ಕ್ಯಾಪ್’ ವಿತರಣೆ ಮಾಡಲು ರಾಜ್ಯ ಸರ್ಕಾರವು ಒಪ್ಪಿಗೆ ಸೂಚಿಸಿತ್ತು. ಆಗಸ್ಟ್ 7ರಂದು ನಡೆದಿದ್ದ ಕಿಟ್ ನಿರ್ದಿಷ್ಟತಾ ಸಮಿತಿ ಸಭೆಯಲ್ಲಿ ಟೆಂಡರ್ ಅಂತಿಮಗೊಳಿಸಲಾಗಿತ್ತು. ಇದೀಗ ಹೊಸ ಟೋಪಿಗಳು ಸಿದ್ಧಗೊಂಡಿದ್ದು, ಮೊದಲ ಹಂತದಲ್ಲಿ ಪೊಲೀಸರಿಗೆ ‘ಪೀಕ್ ಕ್ಯಾಪ್’ ವಿತರಣೆ ನಡೆಯಲಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರಂಭದಲ್ಲಿ ಟರ್ಬನ್ ಮಾದರಿಯ ಟೋಪಿಯನ್ನು ಕಾನ್‌ಸ್ಟೆಬಲ್ ಹಾಗೂ ಹೆಡ್ ಕಾನ್‌ಸ್ಟೆಬಲ್‌ಗಳು ಧರಿಸುತ್ತಿದ್ದರು. ಪ್ರಸ್ತುತ ಬಳಸುತ್ತಿರುವ ಟೋಪಿಯನ್ನು (ಸ್ಲೋಚ್ ಕ್ಯಾಪ್) ಆರ್.ಗುಂಡೂರಾವ್ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಆರಂಭಿಸಲಾಗಿತ್ತು. ಹಳೆ ಮಾದರಿಯ ಟೋಪಿ ಬಳಕೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ ಎಂದು ಪೊಲೀಸರು ಅಳಲು ತೋಡಿಕೊಂಡಿದ್ದರು.

‘ಪ್ರತಿಭಟನೆ, ರ‍್ಯಾಲಿ ವೇಳೆ ಈ ಟೋಪಿ ಧರಿಸಿ, ಕರ್ತವ್ಯ ನಿರ್ವಹಿಸುವುದು ಕಾನ್‌ಸ್ಟೆಬಲ್‌ಗಳಿಗೆ ಕಷ್ಟವಾಗುತ್ತಿದೆ. ಟೋಪಿ ಕೆಳಕ್ಕೆ ಬಿದ್ದರೆ ಇಲಾಖೆ ಸಮವಸ್ತ್ರಕ್ಕೆ ಅಗೌರವ ತೋರಿದಂತಾಗುತ್ತದೆ. ಆದ್ದರಿಂದ, ಹಳೆ ಮಾದರಿಯ ಟೋಪಿ ಬದಲು ತಲೆಯ ಮೇಲೆ ಗಟ್ಟಿಯಾಗಿ ನಿಲ್ಲುವಂತಹ ಟೋಪಿಗಳನ್ನು ನೀಡಿದರೆ ಉತ್ತಮ’ ಎಂದು ಕಾನ್‌ಸ್ಟೆಬಲ್‌ಗಳು ಇಲಾಖೆಗೆ ಮನವಿ ಸಲ್ಲಿಸಿದ್ದರು.

ವಿವಿಧ ರಾಜ್ಯಗಳ ಟೋಪಿಯ ಪರಿಶೀಲನೆ: ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಗೋವಾ, ತೆಲಂಗಾಣ, ದೆಹಲಿ, ಮಹಾರಾಷ್ಟ್ರ ಪೊಲೀಸರು ಧರಿಸುವ ಟೋಪಿಗಳನ್ನು ಇಲಾಖೆಯ ಕಿಟ್ ನಿರ್ದಿಷ್ಟತಾ ಸಮಿತಿ ಸದಸ್ಯರು ಪರಿಶೀಲನೆ ನಡೆಸಿದ್ದರು. ಅಂತಿಮವಾಗಿ ತೆಲಂಗಾಣ ರಾಜ್ಯದ ಪೊಲೀಸರು ಧರಿಸುತ್ತಿರುವ ‘ಪೀಕ್ ಕ್ಯಾಪ್’ ಸೂಕ್ತವೆಂದು ನಿರ್ಧರಿಸಲಾಯಿತು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ತೆಳು, ಹಗುರ



ಪೊಲೀಸರಿಗೆ ವಿತರಣೆ ಆಗಲಿರುವ ಹೊಸ ಟೋಪಿ

ಹೊಸ ಟೋಪಿ ತೆಳು ಹಾಗೂ ಹಗುರವಾಗಿದೆ. ತೆಲಂಗಾಣ ಪೊಲೀಸರು ಇದೇ ಮಾದರಿಯ ಟೋಪಿಯನ್ನು ಬಳಸುತ್ತಿದ್ದಾರೆ. ಸಿಬ್ಬಂದಿಯ ಆರೋಗ್ಯದ ದೃಷ್ಟಿಯಿಂದಲೂ ಅನುಕೂಲವಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ರಾಜ್ಯದ ಪೊಲೀಸ್ ಅಧಿಕಾರಿಗಳು ಧರಿಸುತ್ತಿರುವ ಟೋಪಿಯಿಂದ ಯಾವುದೇ ಆರೋಗ್ಯ ಸಮಸ್ಯೆ ಆಗುತ್ತಿಲ್ಲ. ಅದೇ ಮಾದರಿಯ ಟೋಪಿಯನ್ನು ವಿತರಣೆ ಮಾಡಿದರೆ ಅಧಿಕಾರಿ ಮತ್ತು ಸಿಬ್ಬಂದಿ ಗುರುತಿಸುವುದು ಕಷ್ಟವಾಗಲಿದೆ. ಇದು ಪೊಲೀಸರ ಕಾರ್ಯನಿರ್ವಹಣೆ ಮೇಲೂ ಪರಿಣಾಮ ಬೀರಬಹುದು. ಹೀಗಾಗಿ, ಕಾನ್‌ಸ್ಟೆಬಲ್ ಹಾಗೂ ಹೆಡ್‌ಕಾನ್‌ಸ್ಟೆಬಲ್‌ಗಳಿಗೆ ಸ್ಮಾರ್ಟ್ ಪೀಕ್ ಟೋಪಿಯನ್ನು ಅಂತಿಮಗೊಳಿಸಲಾಗಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಮುಂಬೈ ಧಾರಣೆ (ಶೇಂಗಾ)

25-10-2025

ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1420)
ಒಂದು ವಾರದ ಡೆಲಿವರಿ	1410 (1415)
ಪಾಮ್ ವಾರದ ಡೆಲಿವರಿ	1278 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1425 (1430)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,21,900 (1,21,800)
ಬೆಳ್ಳಿ ಕೆಜಿಗೆ	1,48,500 (1,48,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿ)

ಶೇಂಗಾ (ರಿಫೈನ್ಡ್)	₹1405 (1410)
ಸೋಯಾ (ರಿಫೈನ್ಡ್)	₹1280 (1285)
ಸೂರ್ಯಕಾಂತಿ (ರಿಫೈನ್ಡ್)	₹1475 (1480)
ಪಾಮೋಲಿನ್	₹1280 (1285)

‘ನನ್ನ ಪಾತ್ರ ಇಲ್ಲ, ತನಿಖೆಗೆ ಸಹಕರಿಸುವೆ’

ಶಬರಿಮಲೆ ಪ್ರಕರಣ: ಬಳ್ಳಾರಿಯ ರೊದ್ದಂ ಜುವೆಲ್ಸ್ ಮಾಲೀಕ ಗೋವರ್ಧನ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಶಬರಿಮಲೆ ದೇವಸ್ಥಾನದ ಚಿನ್ನ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಕೇರಳದ ವಿಶೇಷ ತನಿಖಾ ದಳದ ಅಧಿಕಾರಿಗಳು ವಿಚಾರಣೆ ನಡೆಸಿದ್ದು ನಿಜ. ತನಿಖೆಗೆ ಎಲ್ಲ ಸಹಕಾರ ನೀಡುತ್ತಿದ್ದೇನೆ’ ಎಂದು ಬಳ್ಳಾರಿಯ ರೊದ್ದಂ ಜುವೆಲ್ಸ್ ಮಾಲೀಕ ಗೋವರ್ಧನ್ ಹೇಳಿದ್ದಾರೆ.


ಗೋವರ್ಧನ್

ಚಿನ್ನ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಶುಕ್ರವಾರ ಬಳ್ಳಾರಿಗೆ ಬಂದಿದ್ದ ಕೇರಳ ಎಸ್‌ಐಟಿ ತಂಡ, ರೊದ್ದಂ ಜುವೆಲ್ಸ್ ಮಾಲೀಕರ ಬಳಿ ದಾಖಲೆಗಳನ್ನು ಪರಿಶೀಲಿಸಿದ್ದರು.

ಈ ಕುರಿತು ಶನಿವಾರ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಗೋವರ್ಧನ್, ‘ಎಸ್‌ಐಟಿ ಅಧಿಕಾರಿಗಳು ಒಮ್ಮೆ ತಿರುವನಂತಪುರಕ್ಕೆ ಕರೆಸಿಕೊಂಡು ವಿಚಾರಣೆ ನಡೆಸಿದ್ದಾರೆ. ಸದ್ಯ ಬಳ್ಳಾರಿಗೆ ಬಂದು ದಾಖಲೆಗಳ ಪರಿಶೀಲಿಸಿದ್ದಾರೆ. ಮಾಧ್ಯಮಗಳೊಂದಿಗೆ ವಿಚಾರ ಹಂಚಿಕೊಳ್ಳಬಾರದು ಎಂದು ತಾಕೀತು ಮಾಡಿದ್ದು, ಹೆಚ್ಚು ಮಾತನಾಡುವುದಿಲ್ಲ’ ಎಂದರು.

‘ಸತತ 35 ವರ್ಷಗಳಿಂದಲೂ ನಾನು ಶಬರಿಮಲೆಯನ್ನು ಆರಾಧಿಸುತ್ತಿದ್ದೇನೆ. ಅಲ್ಲಿ ಕನ್ನಡ ಮಾತನಾಡುತ್ತಿದ್ದ ಉಣ್ಣಿಕೃಷ್ಣನ್ ನನಗೆ ಪರಿಚಯವಾಗಿದ್ದರು. 2019ರಲ್ಲಿ ಮುಖ್ಯ ದೇಗುಲದ ಬಾಗಿಲು ಮತ್ತು ಇತರೆ ವಸ್ತುಗಳನ್ನು ಮಾಡಿಕೊಡುವಂತೆ ಮನವಿ ಮಾಡಿದ್ದರು. ನಾನು ಅದನ್ನು ದೇಣಿಗೆಯಾಗಿ ಮಾಡಿ ಕೊಟ್ಟಿದ್ದೇನೆ. ಆದರೆ, ಅದನ್ನು ಉಣ್ಣಿಕೃಷ್ಣನ್ ಹೆಸರಿನಲ್ಲಿ ನೀಡಿದ್ದೇನೆ’ ಎಂದು ಹೇಳಿದರು.

‘ದೇಗುಲಕ್ಕೆ ದ್ವಾರಪಾಲಕರನ್ನು ಮಾಡಿಕೊಡುವಂತೆ ಮತ್ತೆ ನನಗೆ ಕೇಳಿಕೊಳ್ಳಲಾಗಿತ್ತು. ಅದು ನನ್ನಿಂದ ಸಾಧ್ಯವಾಗಿಲ್ಲ. ಚಿನ್ನ ಕಳ್ಳತನ ಪ್ರಕರಣ 2019ರಲ್ಲೇ ನಡೆದಿದೆ. ಹೀಗಾಗಿ ಆ ವರ್ಷದ ವ್ಯವಹಾರಗಳನ್ನು ಎಸ್‌ಐಟಿ ತನಿಖೆ ಮಾಡುತ್ತಿದೆ. ಆದ್ದರಿಂದ ನನ್ನನ್ನು ವಿಚಾರಣೆ ಮಾಡಲಾಗುತ್ತಿದೆ. ಉಳಿದಂತೆ ನನ್ನ ಪಾತ್ರ ಬೇರೆ ಏನೂ ಇಲ್ಲ’ ಎಂದು ಸ್ಪಷ್ಟಪಡಿಸಿದರು.

ಕೇರಳ ಪೊಲೀಸರು ಬಳ್ಳಾರಿಗೆ ಬಂದರೂ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡದ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ‘ನೋಟಿಸ್ ಕೊಡುವ ಸಲುವಾಗಿ ಮಾತ್ರ ಕೇರಳ ಪೊಲೀಸರು ಬಳ್ಳಾರಿಗೆ ಬಂದಿದ್ದಾರೆ.

ಬಂಧನ ಪ್ರಕ್ರಿಯೆ ಮಾಡಿಲ್ಲ. ಹೀಗಾಗಿ ಅವರು ನಮ್ಮ ನೆರವು ಕೋರಿಲ್ಲ’ ಎಂದು ತಿಳಿಸಿದರು.

ಕೋಟ್ಯಧಿಪತಿ ಬಳಿ ಅಯ್ಯಪ್ಪನ ಚಿನ್ನ: ಕೇರಳ ಕಾಂಗ್ರೆಸ್

ಕೊಚಿ (ಪಿಟಿಐ): ಶಬರಿಮಲೆ ದೇಗುಲದಲ್ಲಿ ನಾಪತ್ತೆಯಾಗಿದ್ದ ಚಿನ್ನವನ್ನು ಕೋಟ್ಯಧಿಪತಿಯೊಬ್ಬರಿಂದ ಎಸ್‌ಐಟಿ ವಶಕ್ಕೆ ಪಡೆದಿದೆ ಎಂದು ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್‌ನ ವಿ.ಡಿ. ಸತೀಶನ್ ಶನಿವಾರ ಆರೋಪಿಸಿದ್ದಾರೆ.

‘ಶ್ರೀಮಂತ ವ್ಯಕ್ತಿಯೊಬ್ಬರಿಗೆ ದೇಗುಲದ ಚಿನ್ನವನ್ನು ಮಾರಾಟ ಮಾಡಲಾಗಿದೆ. ಕಾಂಗ್ರೆಸ್ ಮಾಡಿದ್ದ ಆರೋಪಗಳೆಲ್ಲ ನಿಜ ಎನ್ನುವುದು ಎಸ್‌ಐಟಿ ನಡೆಸುತ್ತಿರುವ ತನಿಖೆಯಲ್ಲಿ ಸಾಬೀತಾಗಿದೆ. ಹೀಗಾಗಿ ಮುಜರಾಯಿ ಸಚಿವ ವಿ.ಎನ್.ವಾಸವನ್ ರಾಜೀನಾಮೆ ಕೊಡಬೇಕು ಮತ್ತು ಟಿಡಿಬಿಯನ್ನು ವಿಸರ್ಜಿಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ಗೋವರ್ಧನ್ ಮಾಲೀಕತ್ವದ ಆಭರಣ ಮಳಿಗೆಯಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಹಲವು ಚಿನ್ನದ ಗಟ್ಟಿಗಳನ್ನು ವಶಕ್ಕೆ ಪಡೆದಿದೆ. ದೇಗುಲದ ಗರ್ಭಗುಡಿಯ ಚೌಕಟ್ಟು ಮತ್ತು ದ್ವಾರಪಾಲಕ ವಿಗ್ರಹಗಳಿಗೆ ಚಿನ್ನದ ಹೊದಿಕೆ ಮಾಡಲು ಅವರು ಧನಸಹಾಯ ಮಾಡಿದ್ದರು ಎನ್ನಲಾಗಿತ್ತು. ಉದ್ಯಮಿ ಉಣ್ಣಿಕೃಷ್ಣನ್ ಪೊಟ್ಟಿ ಯೋಜನೆಯ ಪ್ರಮುಖ ಪ್ರಾಯೋಜಕ ಎಂಬುದು ಬಂಧನ ನಂತರ ಗೊತ್ತಾಗಿದೆ’ ಎಂದು ಸತೀಶನ್ ಹೇಳಿದರು. ‘ಹಾಲಿ ತಿರುವಾಂಕೂರು ದೇವಸ್ವಂ ಮಂಡಳಿಯಿಂದಲೇ (ಟಿಡಿಬಿ) ಇದೆಲ್ಲ ಆಗಿದೆ. ಮಂಡಳಿಗೆ ಎಲ್ಲ ಮಾಹಿತಿ ಇತ್ತು. ಪೊಟ್ಟಿ ಅವರನ್ನು ದ್ವಾರಪಾಲಕ ವಿಗ್ರಹಗಳ ಚಿನ್ನದ ಹೊದಿಕೆ ಕಾರ್ಯ ಕೈಗೊಳ್ಳಲು ಮಂಡಳಿ ಆಹ್ವಾನಿಸಿತ್ತು. ಹೈಕೋರ್ಟ್ ವಿಚಾರಣೆ ವೇಳೆ ಇದೆಲ್ಲವೂ ಬಯಲಾಗಿದೆ’ ಎಂದು ಅವರು ಆರೋಪಿಸಿದ್ದಾರೆ.

ಬೆಂಗಳೂರಿನಲ್ಲೂ ಪರಿಶೀಲನೆ

ಬೆಂಗಳೂರು: ಶಬರಿಮಲೆ ದೇವಸ್ಥಾನದಿಂದ ಚಿನ್ನ ಕದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಕೇರಳದ ವಿಶೇಷ ತನಿಖಾ ತಂಡವು (ಎಸ್‌ಐಟಿ) ಬೆಂಗಳೂರಿನ ವಿವಿಧೆಡೆಯೂ ಶುಕ್ರವಾರ ರಾತ್ರಿ ಪರಿಶೀಲನೆ ನಡೆಸಿದೆ.

ಪ್ರಕರಣದ ಪ್ರಮುಖ ಆರೋಪಿ ಉಣ್ಣಿಕೃಷ್ಣನ್ ಪೋಟಿ ಅವರನ್ನು ನಗರಕ್ಕೆ ಕರೆತಂದು ಮಹಜರು ನಡೆಸಲಾಗಿದೆ. ಉಣ್ಣಿಕೃಷ್ಣನ್ ಅವರು ಶ್ರೀರಾಂಪುರದ ಬಾಡಿಗೆ ಮನೆಯಲ್ಲಿ ಕೆಲವು ದಿನಗಳ ವಾಸ್ತವ್ಯ ಮಾಡಿದ್ದರು. ಅಲ್ಲಿ ಪರಿಶೀಲನೆ ನಡೆಸಿದ ತನಿಖಾಧಿಕಾರಿಗಳು, ಕೆಲವೊಂದು ದಾಖಲೆಗಳನ್ನು ಜಪ್ತಿ ಮಾಡಿಕೊಂಡು ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಭದ್ರತಾ ಕೋಣೆ ಪರಿಶೀಲನೆ

ಪತ್ತನಂತಿಟ್ಟ: ಶಬರಿಮಲೆ ದೇಗುಲದ ಮುಖ್ಯ ಭದ್ರಾಗಾರದಲ್ಲಿರುವ (ಸ್ಟ್ರಾಂಗ್ ರೂಂ) ಚಿನ್ನಾಭರಣ ಸೇರಿದಂತೆ ಎಲ್ಲ ಬೆಲೆಬಾಳುವ ವಸ್ತುಗಳ ಪರಿಶೀಲನೆ ಮತ್ತು ಪಟ್ಟಿ ಮಾಡಲು ಹೈಕೋರ್ಟ್ ಸೂಚನೆ ಮೇರೆಗೆ ನೇಮಕಗೊಂಡಿರುವ ಕೇರಳ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಟಿ. ಶಂಕರನ್ ಅವರು ಶನಿವಾರ ಆರನ್ಮುಳ ಭದ್ರತಾ ಕೊಠಡಿಗೆ ಭೇಟಿ ನೀಡಿ, ಪರಿಶೀಲನೆ ಆರಂಭಿಸಿದ್ದಾರೆ.

ಈಗಾಗಲೇ ಶಂಕರನ್ ಅವರು ಶಬರಿಮಲೆ ದೇಗುಲದ ಆವರಣದಲ್ಲೇ ಇರುವ ಒಂದು ಭದ್ರಾಗಾರದ ಪರಿಶೀಲನೆ ಮುಗಿಸಿದ್ದಾರೆ. ಶಬರಿಮಲೆ ದೇಗುಲಕ್ಕೆ ಭಕ್ತರು ನೀಡಿರುವ ಅಮೂಲ್ಯವಾದ, ಬೆಲೆಬಾಳುವ ವಸ್ತುಗಳನ್ನು ಆರನ್ಮುಳದಲ್ಲಿ ಇಡಲಾಗಿದೆ ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಅಧಿಕಾರಿಗಳು ತಿಳಿಸಿದ್ದಾರೆ.

ಟಿಡಿಬಿ ಅಧಿಕಾರಿಗಳು, ಅಕ್ಕಸಾಲಿಗರ ಸಮ್ಮುಖದಲ್ಲಿ ಆಭರಣಗಳನ್ನು ಮತ್ತೊಂದು ಕೊಠಡಿಗೆ ಸ್ಥಳಾಂತರಿಸಿ ಅಲ್ಲಿ ಪಟ್ಟಿ ಮಾಡಲಾಗುತ್ತಿದೆ. ಈ ಪ್ರಕ್ರಿಯೆ ಹಲವು ದಿನಗಳನ್ನು ತೆಗೆದುಕೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಗ್ರ ಜಾಲದ ನಂಟು: ವ್ಯಕ್ತಿ ಸೆರೆ

ಚಂಡೀಗಢ (ಪಿಟಿಐ): ಪಾಕಿಸ್ತಾನ ನಿಷೇಧಿತ ಉಗ್ರ ಸಂಘಟನೆಯೊಂದರ ಆದೇಶ ಪಾಲಿಸುತ್ತಿದ್ದ ಅಮೆರಿಕ, ಬ್ರಿಟನ್ ಹಾಗೂ ಜರ್ಮನಿಯಲ್ಲಿದ್ದ ವ್ಯಕ್ತಿಗಳ ಜಾಲದ ಭಾಗವಾಗಿದ್ದ ಮನ್‌ಪ್ರೀತ್ ಸಿಂಗ್ ಅಲಿಯಾಸ್ ಚಟ್ಟಿ ಎಂಬುವವನನ್ನು ಪಂಜಾಬ್ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಈತನಿಂದ ಎರಡು ಕಚ್ಚಾ ಬಾಂಬ್‌ಗಳು, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಚ್ಚಾ ಬಾಂಬ್ ತಯಾರಿಸಲು ಈತ ಉತ್ಕೃಷ್ಟ ಗುಣಮಟ್ಟದ ಆರ್‌ಡಿಎಕ್ಸ್ ಬಳಸಿದ್ದ ಎಂದು ಡಿಜಿಪಿ ಗೌರವ್ ಯಾದವ್ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

‘ಪಾಕಿಸ್ತಾನಕ್ಕೆ ಪ್ರಜಾಪ್ರಭುತ್ವ ಪರಿಕಲ್ಪನೆಯೇ ಇಲ್ಲ’

ವಿಶ್ವಸಂಸ್ಥೆ (ಪಿಟಿಐ): ಪಾಕಿಸ್ತಾನಕ್ಕೆ ಪ್ರಜಾಪ್ರಭುತ್ವದ ಪರಿಕಲ್ಪನೆಯೆ ಇಲ್ಲ. ಇದು ಆ ರಾಷ್ಟ್ರಕ್ಕೆ ಹೊಸ ವಿಚಾರ. ಆಕ್ರಮಿತ ಪ್ರದೇಶಗಳಲ್ಲಿ ನಡೆಸುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಪಾಕಿಸ್ತಾನ ಕೊನೆಗೊಳಿಸಬೇಕು ಎಂದು ಭಾರತ ವಿಶ್ವಸಂಸ್ಥೆಯಲ್ಲಿ ಆಗ್ರಹಿಸಿದೆ.

‘ವಿಶ್ವಸಂಸ್ಥೆಯ ಭವಿಷ್ಯ’ ವಿಷಯದ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯ ಮುಕ್ತ ಚರ್ಚೆಯಲ್ಲಿ ಪಾಕಿಸ್ತಾನ ಪ್ರತಿನಿಧಿ ಉಲ್ಲೇಖಿಸಿದ ವಿಚಾರಗಳಿಗೆ ವಿಶ್ವಸಂಸ್ಥೆಯ ಭಾರತದ ಕಾಯಂ ಪ್ರತಿನಿಧಿ, ರಾಯಭಾರಿ ಪರ್ವತನೇನಿ ಹರೀಶ್ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನದ ಚೌಕಟ್ಟಿನಡಿಯಲ್ಲಿ ಜಮ್ಮು ಮತ್ತು ಕಾಶ್ಮೀರದ ಜನರು ತಮ್ಮ ಮೂಲಭೂತ ಹಕ್ಕುಗಳನ್ನು ಚಲಾಯಿಸುತ್ತಿದ್ದಾರೆ. ಈ ವಿಚಾರಗಳು ಪಾಕಿಸ್ತಾನದ ಅರಿವಿಗೆ ಬಾರದ ವಿಚಾರಗಳು ಎಂದು ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಯಾವಾಗಲೂ ಭಾರತದ ಅವಿಭಾಜ್ಯ ಅಂಗ ಎಂದು ಪುನರುಚ್ಚರಿಸಿದರು.

‘ಪಾಕಿಸ್ತಾನವು ಅಕ್ರಮವಾಗಿ ವಶಪಡಿಸಿಕೊಂಡಿರುವ ಪ್ರದೇಶಗಳಲ್ಲಿ ನಡೆಯುತ್ತಿರುವ ಪಾಕ್ ಸೇನಾ ಕಾರ್ಯಾಚರಣೆ, ಆಕ್ರಮಣ, ದೌರ್ಜನ್ಯ ಮತ್ತು ಸಂಪನ್ಮೂಲಗಳ ಲೂಟಿಯ ಬಗ್ಗೆ ಅಲ್ಲಿನ ಜನರೇ ವಿರೋಧ ವ್ಯಕ್ತಪಡಿಸುತ್ತಿದ್ದಾರೆ’ ಎಂದು ತಿಳಿಸಿದ್ದಾರೆ.



‘ಭದ್ರತಾ ಮಂಡಳಿಯ 80 ವರ್ಷ ಹಳೆಯ ಸಂರಚನೆಯು ಪ್ರಸ್ತುತ ಭೌಗೋಳಿಕ ರಾಜಕೀಯ ಪರಿಸ್ಥಿತಿಯನ್ನು ಪ್ರತಿಬಿಂಬಿಸುವುದಿಲ್ಲ. ಹಾಗಾಗಿ ವಿಶ್ವಸಂಸ್ಥೆಯು ನೈಜ ಮತ್ತು ಸಮಗ್ರ ಸುಧಾರಣೆಗಳನ್ನು ತರಬೇಕು’ ಎಂದು ಆಗ್ರಹಿಸಿದ್ದಾರೆ.

ಕ್ವಾಲಾಲಂಪುರ: ಇಂದಿನಿಂದ ಆಸಿಯಾನ್ ಶೃಂಗಸಭೆ

ಕ್ವಾಲಾಲಂಪುರ(ಮಲೇಷ್ಯಾ)(ಎಪಿ): ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘದ (ಆಸಿಯಾನ್) ಶೃಂಗಸಭೆ ಇದೇ 26ರಿಂದ ಆರಂಭವಾಗಲಿದ್ದು, 28ರ ವರೆಗೆ ನಡೆಯಲಿದೆ.

11ನೇ ಸದಸ್ಯರಾಷ್ಟ್ರವಾಗಿ ಪೂರ್ವ ತಿಮೋರ್, ಆಸಿಯಾನ್ ಸಂಘಟನೆಗೆ ಸೇರ್ಪಡೆಯಾಗಲಿದೆ. ಅಲ್ಲದೇ, ಅಮೆರಿಕ ಅಧ್ಯಕ್ಷರಾಗಿ ಎರಡನೇ ಬಾರಿಗೆ ಆಯ್ಕೆಗೊಂಡ ನಂತರ ಇದೇ ಮೊದಲ ಬಾರಿಗೆ ಏಷ್ಯಾಕ್ಕೆ ಭೇಟಿ ನೀಡುತ್ತಿರುವ ಡೊನಾಲ್ಡ್ ಟ್ರಂಪ್ ಕೂಡ ಈ ಶೃಂಗದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಶೃಂಗಸಭೆಗೆ ಪೂರ್ವಭಾವಿಯಾಗಿ, ಆಸಿಯಾನ್ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಶನಿವಾರ ಸಭೆ ನಡೆಸಿದರು. ಸದಸ್ಯ ರಾಷ್ಟ್ರಗಳಾದ ಭಾರತ, ಚೀನಾ, ಜಪಾನ್, ಆಸ್ಟ್ರೇಲಿಯಾ, ರಷ್ಯಾ, ದಕ್ಷಿಣ ಕೊರಿಯಾ ಹಾಗೂ ಅಮೆರಿಕ ಪ್ರತಿನಿಧಿಗಳು ಪಾಲ್ಗೊಳ್ಳುವರು.

ಟ್ರಂಪ್ ಪ್ರವಾಸ: ಆಸಿಯಾನ್ ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದು, ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಜೊತೆ ಮಾತುಕತೆ ನಡೆಸುವುದು ಸೇರಿ ವಿವಿಧ ದೇಶಗಳ ನಾಯಕರ ಭೇಟಿ ಉದ್ದೇಶದಿಂದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶನಿವಾರ ಏಷ್ಯಾ ಪ್ರವಾಸ ಕೈಗೊಂಡಿದ್ದಾರೆ.

ಜಿಯೊ ಮೌಲ್ಯ ₹12 ಲಕ್ಷ ಕೋಟಿ?

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಒಡೆತನದಲ್ಲಿರುವ ಜಿಯೊ ಪ್ಲಾಟ್‌ಫಾರ್ಮ್ಸ್ ಕಂಪನಿಯ ಮಾರುಕಟ್ಟೆ ಮೌಲ್ಯವು 2027ಕ್ಕೆ 148 ಬಿಲಿಯನ್ ಡಾಲರ್ (ಈಗಿನ ರೂಪಾಯಿ ಮೌಲ್ಯದ ಲೆಕ್ಕದಲ್ಲಿ ಅಂದಾಜು ₹12.99 ಲಕ್ಷ ಕೋಟಿ) ಆಗಬಹುದು ಎಂದು ಐಸಿಐಸಿಐ ಸೆಕ್ಯುರಿಟೀಸ್ ಅಂದಾಜು ಮಾಡಿದೆ.

ಜಿಯೊ ಪ್ಲಾಟ್‌ಫಾರ್ಮ್ಸ್‌ನ ಷೇರುಗಳನ್ನು ಐಪಿಒ ಮೂಲಕ ಸಾರ್ವಜನಿಕರಿಗೆ ಲಭ್ಯವಾಗಿಸಿ, 2026ರ ಮೊದಲಾರ್ಧದಲ್ಲಿ ಷೇರುಪೇಟೆಯಲ್ಲಿ ಅದು ವಹಿವಾಟು ನಡೆಸುವಂತೆ ಮಾಡುವ ನಿರೀಕ್ಷೆ ಇದೆ. ಈ ಷೇರು ಮಾರಾಟವು ದೇಶದ ಬಂಡವಾಳ ಮಾರುಕಟ್ಟೆಯ ಇತಿಹಾಸದಲ್ಲಿ ಅತಿದೊಡ್ಡದಾಗಿರಲಿದೆ ಎಂಬ ಅಂದಾಜು ಕೂಡ ಇದೆ.

ಜಿಯೊ ಪ್ಲಾಟ್‌ಫಾರ್ಮ್ಸ್‌ನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಪಾಲು ಶೇ 66.3ರಷ್ಟು ಇದೆ. ಫೇಸ್‌ಬುಕ್, ಗೂಗಲ್, ಸಿಲ್ವರ್ ಲೇಕ್, ವಿಸ್ತಾ ಈಕ್ವಿಟಿ ಪಾರ್ಟ್ನರ್ಸ್ ಸೇರಿದಂತೆ ವಿವಿಧ ಸಂಸ್ಥೆಗಳು ಒಟ್ಟು ಶೇ 32.9ರಷ್ಟು ಪಾಲು ಹೊಂದಿವೆ.

ಉಕ್ರೇನ್ ಮೇಲೆ ರಷ್ಯಾ ಕ್ಷಿಪಣಿ ದಾಳಿ: ನಾಲ್ವರ ಸಾವು

ಕೀವ್ (ಎಪಿ): ಉಕ್ರೇನ್ ಮೇಲೆ ಶನಿವಾರ ಮುಂಜಾನೆವರೆಗೂ ಕ್ಷಿಪಣಿ ಮತ್ತು ಡ್ರೋನ್‌ಗಳನ್ನು ಬಳಸಿ ರಷ್ಯಾ ನಡೆಸಿದ ವಾಯುದಾಳಿಯಲ್ಲಿ ಕನಿಷ್ಠ 4 ಮಂದಿ ಮೃತಪಟ್ಟು, 16 ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ರಾಜಧಾನಿ ಕೀವ್‌ನಲ್ಲಿ ಇಬ್ಬರು ಸಾವಿಗೀಡಾಗಿದ್ದು, ಒಂಭತ್ತು ಮಂದಿ ಗಾಯಗೊಂಡಿದ್ದಾರೆ. ಹಲವು ಕಟ್ಟಡಗಳಿಗೆ ಭಾರಿ ಹಾನಿಯಾಗಿದೆ ಎಂದು ನಗರ ಸೇನಾ ಆಡಳಿತದ ಮುಖ್ಯಸ್ಥ ತೈಮುರ್ ಕಾಚೆಂಕೊ ತಿಳಿಸಿದ್ದಾರೆ.

ನಿಪ್ರೊಪೆಟ್ರೋವ್‌ಸ್ಕ್ ಪ್ರಾಂತ್ಯದಲ್ಲಿ ಇಬ್ಬರು ಮೃತಪಟ್ಟು, ಏಳು ಮಂದಿ ಗಾಯಗೊಂಡಿದ್ದಾರೆ. ಅಪಾರ್ಟ್‌ಮೆಂಟ್ ಸೇರಿ ಹಲವು ಕಟ್ಟಡ ಮತ್ತು ವಾಹನಗಳಿಗೂ ಹಾನಿಯಾಗಿದೆ ಎಂದು ಸ್ಥಳೀಯ ಗವರ್ನರ್ ವ್ಲಾಡಿಸ್ಲಾವ್ ಹೈವನಿಂಕೊ ತಿಳಿಸಿದ್ದಾರೆ.

ರಷ್ಯಾ 9 ಕ್ಷಿಪಣಿ ಮತ್ತು 62 ಡ್ರೋನ್‌ಗಳನ್ನು ಬಳಸಿತ್ತು. 4 ಕ್ಷಿಪಣಿ ಮತ್ತು 50 ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ ಎಂದು ಉಕ್ರೇನ್ ವಾಯುಪಡೆ ಹೇಳಿದೆ. ಮತ್ತೊಂದೆಡೆ ಉಕ್ರೇನ್‌ನ 121 ಡ್ರೋನ್‌ಗಳನ್ನು ಹೊಡೆದುರುಳಿಸಿದ್ದಾಗಿ ರಷ್ಯಾ ರಕ್ಷಣಾ ಇಲಾಖೆ ಹೇಳಿಕೊಂಡಿದೆ.

ಅಮೆರಿಕಕ್ಕೆ ಝೆಲೆನ್‌ಸ್ಕಿ ಮನವಿ: ತನಗೆ ಸೇನಾ ನೆರವು ನೀಡಿರುವ ಐರೋಪ್ಯ ರಾಷ್ಟ್ರಗಳ ನಾಯಕರೊಂದಿಗೆ ಮಾತುಕತೆ ನಡೆಸಲು ಲಂಡನ್‌ನಲ್ಲಿದ್ದ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ, ಶಕ್ತಿಶಾಲಿ ಟೊಮಹಾಕ್ ಕ್ಷಿಪಣಿಗಳನ್ನು ನೀಡುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಮನವಿ ಮಾಡಿದ್ದಾರೆ.

‘ದಿ ವಾಷಿಂಗ್ಟನ್ ಪೋಸ್ಟ್’ನ ವರದಿ– ಆರೋಪ ಅಲ್ಲಗಳೆದ ಎಲ್‌ಐಸಿ


‘ಅದಾನಿ’ಯಲ್ಲಿ ಹೂಡಿಕೆ ನಮ್ಮದೇ ನಿರ್ಧಾರ’

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಅದಾನಿ ಸಮೂಹದಲ್ಲಿ ಹೂಡಿಕೆ ಮಾಡುವಂತೆ ಹಣಕಾಸು ಇಲಾಖೆಯ ಅಧಿಕಾರಿಗಳು ನೋಡಿ ಕೊಂಡಿದ್ದರು ಎಂಬ ವರದಿಯೊಂದು ಅಮೆರಿಕದ ‘ದಿ ವಾಷಿಂಗ್ಟನ್ ಪೋಸ್ಟ್’ನಲ್ಲಿ ಪ್ರಕಟವಾಗಿದ್ದು, ಎಲ್‌ಐಸಿಯು ಈ ವರದಿಯನ್ನು ತಳ್ಳಿಹಾಕಿದೆ.

ಅದಾನಿ ಸಮೂಹಕ್ಕೆ ಸೇರಿದ ಕಂಪನಿಗಳಲ್ಲಿ ಸ್ವತಂತ್ರವಾಗಿ, ಆಡಳಿತ ಮಂಡಳಿ ಒಪ್ಪಿಗೆ ನೀಡಿದ ನೀತಿಗಳಿಗೆ ಅನುಗುಣವಾಗಿ ಹೂಡಿಕೆ ಮಾಡಲಾಗಿದೆ. ಕೇಂದ್ರ ಹಣಕಾಸು ಸಚಿವಾಲಯದ ಅಧೀನದ ‘ಹಣಕಾಸು ಸೇವೆಗಳ ಇಲಾಖೆ ಅಥವಾ ಬೇರೆ ಯಾವುದೇ ಸಂಸ್ಥೆಯು ಈ ಹೂಡಿಕೆಗಳಲ್ಲಿ ಯಾವುದೇ ಪಾತ್ರ ಹೊಂದಿಲ್ಲ’ ಎಂದು ಎಲ್‌ಐಸಿ ‘ಎಕ್ಸ್’ ಮೂಲಕ ಹೇಳಿದೆ.

ಭಾರತದ ಅತಿದೊಡ್ಡ ವಿಮಾ ಕಂಪನಿ ಎಲ್‌ಐಸಿ. ಇದು ವಿವಿಧ ಕಂಪನಿಗಳ ಹಣಕಾಸಿನ ಮೂಲಭೂತ ಅಂಶಗಳನ್ನು ಪರಿಗಣಿಸಿ, ವಿಸ್ತೃತವಾಗಿ ಪರಿಶೀಲನೆ ನಡೆಸಿ ಹೂಡಿಕೆ ತೀರ್ಮಾನ ಕೈಗೊಂಡಿದೆ. ಭಾರತದ 500 ಮುಂಚೂಣಿ ಕಂಪನಿಗಳಲ್ಲಿ ಎಲ್‌ಐಸಿ ಮಾಡಿರುವ ಹೂಡಿಕೆಯು 2014ರ ನಂತರದಲ್ಲಿ 10 ಪಟ್ಟು ಹೆಚ್ಚಾಗಿದೆ. 2014ರಲ್ಲಿ ಎಲ್‌ಐಸಿ ಹೂಡಿಕೆಯು ₹1.56 ಲಕ್ಷ ಕೋಟಿ ಇದ್ದಿದ್ದು, ಈಗ ₹15.6 ಲಕ್ಷ ಕೋಟಿ ಆಗಿದೆ.

‘ಪರಿಶೀಲನೆಗಳನ್ನು ನಡೆಸುವಾಗ ಅತ್ಯುನ್ನತ ಮಟ್ಟವನ್ನು ಕಾಯ್ದುಕೊಳ್ಳಲಾಗಿದೆ. ಜಾರಿಯಲ್ಲಿರುವ ನಿಯಮಗಳನ್ನು, ಕಾಯ್ದೆಗಳಲ್ಲಿನ ಅಂಶಗಳನ್ನು ಹಾಗೂ ನಿಯಮಗಳನ್ನು ಪಾಲನೆ ಮಾಡಿ, ಎಲ್ಲ ಭಾಗೀದಾರರ ಹಿತವನ್ನು ಗಮನದಲ್ಲಿ ಇರಿಸಿಕೊಂಡು ಹೂಡಿಕೆ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ’ ಎಂದು ಎಲ್‌ಐಸಿ ಹೇಳಿದೆ.



ಎಲ್‌ಐಸಿಯು ಅದಾನಿ ಸಮೂಹದಲ್ಲಿ ಹೂಡಿಕೆ ಮಾಡುವಂತೆ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದರು. ಈ ಹೂಡಿಕೆ ಮಾಡಿದ ಸಂದರ್ಭದಲ್ಲಿ ಅದಾನಿ ಸಮೂಹವು ಸಾಲದ ಹೊರೆಯನ್ನು ಹೊತ್ತಿತ್ತು, ಅಮೆರಿಕದಲ್ಲಿ ಪರಿಶೀಲನೆಗಳಿಗೆ ಗುರಿಯಾಗಿತ್ತು ಎಂದು ‘ದಿ ವಾಷಿಂಗ್ಟನ್ ಪೋಸ್ಟ್’ ವರದಿಯಲ್ಲಿ ಹೇಳಲಾಗಿದೆ.

ಅದಾನಿ ಸಮೂಹಕ್ಕೆ ಸೇರಿದ ಅದಾನಿ ಪೋರ್ಟ್ಸ್ ಆ್ಯಂಡ್ ಎಸ್‌ಇಜೆಡ್ ಕಂಪನಿಯಲ್ಲಿ ಎಲ್‌ಐಸಿ ಈ ವರ್ಷದ ಮೇ ತಿಂಗಳಲ್ಲಿ ಅಂದಾಜು ₹5 ಸಾವಿರ ಕೋಟಿ ಹೂಡಿಕೆ ಮಾಡಿದೆ. ಅದಾನಿ ಪೋರ್ಟ್ಸ್ ಆ್ಯಂಡ್ ಎಸ್‌ಇಜೆಡ್ ಕಂಪನಿಯು ಭಾರತದಲ್ಲಿ ‘ಎಎಎ’ ಕ್ರೆಡಿಟ್ ರೇಟಿಂಗ್ ಹೊಂದಿದೆ.

ತನ್ನ ಹೂಡಿಕೆ ತೀರ್ಮಾನಗಳಲ್ಲಿ ಹಣಕಾಸು ಸೇವೆಗಳ ಇಲಾಖೆ ಅಥವಾ ಇತರ ಯಾವುದೇ ಸಂಸ್ಥೆಗೆ ಯಾವುದೇ ಪಾತ್ರ ಇಲ್ಲ ಎಂದು ಎಲ್‌ಐಸಿ ಹೇಳಿದೆ. ವರದಿಯು ‘ಎಲ್‌ಐಸಿಯ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯ ಬಗ್ಗೆ ಪೂರ್ವಗ್ರಹ ಮೂಡುವಂತೆ ಮಾಡುವ ಉದ್ದೇಶದ, ಎಲ್‌ಐಸಿಯ ಹೆಸರನ್ನು ಹಾಳು ಮಾಡುವ ಉದ್ದೇಶದ, ದೇಶದ ಹಣಕಾಸು ವಲಯದ ಬಲಿಷ್ಠ ಬುನಾದಿಗೆ ಕೆಟ್ಟ ಹೆಸರು ತರುವ’ ಉದ್ದೇಶದ ಹೇಳಿಕೆಗಳನ್ನು ಒಳಗೊಂಡಿದೆ ಎಂದು ಎಲ್‌ಐಸಿ ಆಕ್ರೋಶ ವ್ಯಕ್ತಪಡಿಸಿದೆ.

ವಿಮಾ ಕಂಪನಿಯು ಭಾರತದ ಅತಿದೊಡ್ಡ ಸಾಂಸ್ಥಿಕ ಹೂಡಿಕೆದಾರನಾಗಿದೆ. ಎಲ್‌ಐಸಿ ನಿರ್ವಹಿಸುತ್ತಿರುವ ಆಸ್ತಿಯ ಮೊತ್ತವು ₹41 ಲಕ್ಷ ಕೋಟಿಗಿಂತ ಹೆಚ್ಚಿದೆ. ದೇಶದ ಬಹುತೇಕ ಎಲ್ಲ ಉದ್ಯಮ ಸಮೂಹ ಹಾಗೂ ಉದ್ಯಮ ವಲಯವನ್ನು ಒಳಗೊಳ್ಳುವ 351 ಕಂಪನಿಗಳಲ್ಲಿ ಎಲ್‌ಐಸಿ ಹೂಡಿಕೆ ಮಾಡಿದೆ.

ಎಲ್‌ಐಸಿಯು ಸರ್ಕಾರದ ಸಾಲಪತ್ರಗಳು ಹಾಗೂ ಖಾಸಗಿ ಕಂಪನಿಗಳ ಸಾಲಪತ್ರಗಳಲ್ಲಿ ಕೂಡ ಹೂಡಿಕೆ ಮಾಡಿದೆ. ನಿಗಮದ ಹೂಡಿಕೆಗಳು ಬೇರೆ ಬೇರೆ ವಲಯಗಳಲ್ಲಿ ಇವೆ.

ಎಲ್‌ಐಸಿಯು ಅದಾನಿ ಸಮೂಹದಲ್ಲಿ ಮಾಡಿರುವ ಹೂಡಿಕೆಗಳ ಮೊತ್ತವು, ಆ ಸಮೂಹದ ಒಟ್ಟು ಸಾಲದ ಶೇ 2ರಷ್ಟಕ್ಕಿಂತ ಕಡಿಮೆ ಇದೆ. ಅಮೆರಿಕದ ಅತಿದೊಡ್ಡ ಫಂಡ್‌ಗಳಾದ ಬ್ಲ್ಯಾಕ್‌ರಾಕ್, ಅಪೋಲೊ, ಜಪಾನ್‌ನ ಅತಿದೊಡ್ಡ ಬ್ಯಾಂಕ್‌ಗಳಾದ ಮಿಜುಹೊ ಮತ್ತು ಎಂಯುಎಫ್‌ಜಿ, ಜರ್ಮನಿಯ ಎರಡನೆಯ ಅತಿದೊಡ್ಡ ಬ್ಯಾಂಕ್ ಆಗಿರುವ ಡಿ.ಜೆಡ್. ಬ್ಯಾಂಕ್ ಕೂಡ ಅದಾನಿ ಸಾಲಪತ್ರಗಳಲ್ಲಿ ಹೂಡಿಕೆ ಮಾಡಿವೆ. ಇದು ಜಾಗತಿಕ ಹೂಡಿಕೆದಾರರಲ್ಲಿ ಇರುವ ವಿಶ್ವಾಸವನ್ನು ತೋರಿಸುತ್ತಿದೆ.

ಅದಾನಿ ಸಮೂಹದ ಒಟ್ಟು ಸಾಲದ ಮೊತ್ತವು ₹2.6 ಲಕ್ಷ ಕೋಟಿಯಷ್ಟಿದೆ. ಆದರೆ ಇದಕ್ಕೆ ಪ್ರತಿಯಾಗಿ ಸಮೂಹದ ವಾರ್ಷಿಕ ಕಾರ್ಯಾಚರಣೆ ಲಾಭದ ಮೊತ್ತವು ₹90 ಸಾವಿರ ಕೋಟಿ ಇದೆ, ಸಮೂಹದ ಬಳಿ ₹60 ಸಾವಿರ ಕೋಟಿ ಹಣ ಇದೆ. ಅಂದರೆ, ಹೊಸ ಮೂಲಸೌಕರ್ಯದ ಮೇಲಿನ ಹೂಡಿಕೆಗಳನ್ನು ನಿಲ್ಲಿಸಿದರೆ ಅದಾನಿ ಸಮೂಹವು ತನ್ನ ಅಷ್ಟೂ ಸಾಲವನ್ನು ಮೂರು ವರ್ಷಗಳಲ್ಲಿ ತೀರಿಸಬಲ್ಲದು ಎಂದು ಮೂಲಗಳು ವಿವರಿಸಿವೆ.

ಎಲ್‌ಐಸಿಯ ಈಕ್ವಿಟಿ ಹೂಡಿಕೆಗಳ ಪೈಕಿ ಅತಿಹೆಚ್ಚಿನ ಹೂಡಿಕೆ ಇರುವುದು ಅದಾನಿ ಸಮೂಹದಲ್ಲಿ ಅಲ್ಲ. ಬದಲಿಗೆ ರಿಲಯನ್ಸ್ ಇಂಡಸ್ಟ್ರೀಸ್, ಐಟಿಸಿ ಮತ್ತು ಟಾಟಾ ಸಮೂಹದಲ್ಲಿ ಎಲ್‌ಐಸಿ ಅತಿಹೆಚ್ಚು ಹಣ ತೊಡಗಿಸಿದೆ.

ಎಲ್‌ಐಸಿ: ಪ್ರಮುಖ ಹೂಡಿಕೆಗಳು ಎಲ್ಲಿವೆ?

ಕಂಪನಿ	ಷೇರುಪಾಲು	ಮೊತ್ತ (₹)
ಅದಾನಿ ಸಮೂಹ	4%	₹60 ಸಾವಿರ ಕೋಟಿ
ರಿಲಯನ್ಸ್ ಇಂಡಸ್ಟ್ರೀಸ್	6.94%	₹1.33 ಲಕ್ಷ ಕೋಟಿ
ಐಟಿಸಿ ಲಿಮಿಟೆಡ್	15.86%	₹82,800 ಕೋಟಿ
ಎಚ್‌ಡಿಎಫ್‌ಸಿ ಬ್ಯಾಂಕ್	4.89%	₹64,725 ಕೋಟಿ
ಎಸ್‌ಬಿಐ	9.59%	₹79,361 ಕೋಟಿ
ಟಿಸಿಎಸ್	5.02%	₹55,644 ಕೋಟಿ

ಮೊಬೈಲ್ ಫೋನ್ ಬ್ಯಾಂಕಿಂಗ್ : ಕಾಂಗ್ರೆಸ್ ವಾಗ್ದಾಳಿ

ನವದೆಹಲಿ: ಅದಾನಿ ಸಮೂಹದಲ್ಲಿ ಎಲ್‌ಐಸಿಯ ಸುಮಾರು ₹33 ಸಾವಿರ ಕೋಟಿ ಹೂಡಿಕೆ ಇದ್ದು, ಇದು ಮೋದಿ ಸರ್ಕಾರದ ‘ಮೊಬೈಲ್ ಫೋನ್ ಬ್ಯಾಂಕಿಂಗ್’ ಎಂದು ಕಾಂಗ್ರೆಸ್ ಆರೋಪಿಸಿದೆ.

‘ಹಣಕಾಸಿನ ಗಂಭೀರ ಸಮಸ್ಯೆ ಎದುರಿಸುತ್ತಿರುವ ಅದಾನಿ ಸಮೂಹಕ್ಕೆ ಅನುಕೂಲ ಮಾಡಿಕೊಡಲು ಸರ್ಕಾರ ಈ ಮಾರ್ಗ ಅನುಸರಿಸಿದೆ. ಈ ಕುರಿತು ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ (ಪಿಎಸಿ) ತನಿಖೆ ನಡೆಸಬೇಕು’ ಎಂದೂ ಒತ್ತಾಯಿಸಿದೆ. ‘ಮೋದಿ ಸರ್ಕಾರದಲ್ಲಿ ನೇರ ನಗದು ಪಾವತಿಯ (ಡಿಬಿಟಿ) ನೈಜ ಫಲಾನುಭವಿಗಳು ಜನಸಾಮಾನ್ಯರಲ್ಲ, ಅವರು ಮೋದಿಯ ಆಪ್ತ ಸ್ನೇಹಿತರಷ್ಟೇ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಅದಾನಿ ಸಮೂಹದಲ್ಲಿ ಎಲ್‌ಐಸಿಯ ಹೂಡಿಕೆ ಮಾತ್ರವಲ್ಲ, 2023ರಲ್ಲಿ ಅದಾನಿ ಎಫ್‌ಪಿಒದಲ್ಲಿ ಎಸ್‌ಬಿಐ ₹525 ಕೋಟಿ ಹೂಡಿಕೆ ಮಾಡಲು ಮುಂದಾದ ಬಗ್ಗೆಯೂ ಕೇಂದ್ರ ಸರ್ಕಾರ ಉತ್ತರಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

‘ಅಕ್ಷರಶಃ ಬಲವಂತದ ಕ್ರಮ’ದ ಮೂಲಕ ಅದಾನಿ ಸಮೂಹದಲ್ಲಿ ಹೂಡಿಕೆ ಮಾಡುವಂತೆ ಎಲ್‌ಐಸಿಗೆ ಅಧಿಕಾರಿಗಳು ಒತ್ತಡ ಹೇರಿದ್ದರು. ಈ ಬಗ್ಗೆ ತನಿಖೆ ನಡೆಯಬೇಕು ಎಂದು ಕಾಂಗ್ರೆಸ್ ಮುಖಂಡರು ಒತ್ತಾಯಿಸಿದ್ದಾರೆ.

ಎಲ್‌ಐಸಿಯಿಂದ ಅದಾನಿ ಸಮೂಹದ ಕಂಪನಿಗಳಿಗೆ ಹಣ ವರ್ಗಾಯಿಸಲು ಅಧಿಕಾರಿಗಳು ಆರು ತಿಂಗಳ ಹಿಂದೆಯೇ (ಮೇ ತಿಂಗಳಲ್ಲಿ) ಮಾರ್ಗಸೂಚಿ ಸಿದ್ಧಪಡಿಸಿದ್ದರು ಎಂದು ಕಾಂಗ್ರೆಸ್ ಆರೋಪಿಸಿದೆ.

ಲೂಟಿ ಅಲ್ಲದೆ ಮತ್ತೇನು? : ‘ದೇಶದ ಮಧ್ಯಮ ವರ್ಗದ ಜನರು ತಮ್ಮ ದುಡಿಮೆಯ ಹಣದಲ್ಲಿ ಒಂದೊಂದು ಪೈಸೆಯನ್ನೂ ಕೂಡಿಟ್ಟು ಎಲ್‌ಐಸಿ ಕಂತು ತುಂಬಿದ್ದಾರೆ. ಆದರೆ, ಮೋದಿ ಅವರು ಈ ಹಣವನ್ನು ಅದಾನಿ ಸಮೂಹ ರಕ್ಷಿಸಲು ವರ್ಗಾಯಿಸಿದ್ದಾರೆ. ಇದು ಸುಮಾರು 30 ಕೋಟಿಯಷ್ಟು ಎಲ್‌ಐಸಿ ಪಾಲಿಸಿದಾರರಿಗೆ ಸರ್ಕಾರ ಮಾಡಿರುವ ವಿಶ್ವಾಸದ್ರೋಹ. ಇದು ಲೂಟಿ ಅಲ್ಲದೆ ಮತ್ತೇನು ಎಂದು ಖರ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮೋದಿ ಸರ್ಕಾರ ಮತ್ತು ಅದಾನಿ ಸಮೂಹ ’ಅತ್ಯಂತ ವ್ಯವಸ್ಥಿತವಾಗಿ’ ಎಲ್‌ಐಸಿ ಮತ್ತು 30 ಕೋಟಿ ಪಾಲಿಸಿದಾರರ ಉಳಿತಾಯವನ್ನು ದುರ್ಬಳಕೆ ಮಾಡಿಕೊಂಡಿದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಆರೋಪಿಸಿದ್ದಾರೆ.

ಕೋಟಕ್ ಮಹೀಂದ್ರ ಲಾಭ ಇಳಿಕೆ

ನವದೆಹಲಿ (ಪಿಟಿಐ): ಖಾಸಗಿ ವಲಯದ ಕೋಟಕ್ ಮಹೀಂದ್ರ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದ ಲಾಭದಲ್ಲಿ ಶೇ 3ರಷ್ಟು ಇಳಿಕೆ ಕಂಡಿದೆ. ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹3,344 ಕೋಟಿ ಲಾಭ ಗಳಿಸಿದ್ದ ಬ್ಯಾಂಕ್, ಈ ವರ್ಷದ ತ್ರೈಮಾಸಿಕದಲ್ಲಿ ₹3,253 ಕೋಟಿ ಲಾಭ ಕಂಡಿದೆ.

ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಒಟ್ಟು ವರಮಾನವು ₹16,239 ಕೋಟಿಗೆ ಹೆಚ್ಚಾಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹15,900 ಕೋಟಿ ಆಗಿತ್ತು. ಹಣಕಾಸಿನ ಫಲಿತಾಂಶದ ವಿವರಗಳನ್ನು ಕೋಟಕ್ ಮಹೀಂದ್ರ ಬ್ಯಾಂಕ್ ಶನಿವಾರ ಷೇರುಪೇಟೆಗೆ ಸಲ್ಲಿಸಿದೆ. ಬ್ಯಾಂಕ್‌ನ ಬಡ್ಡಿ ವರಮಾನವು ₹13,649 ಕೋಟಿ ಆಗಿದೆ. ಇದು ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹13,216 ಕೋಟಿ ಇತ್ತು. ಕಳೆದ ವರ್ಷದ ಇದೇ ಅವಧಿಯಲ್ಲಿ ₹7,020 ಕೋಟಿ ಇದ್ದ ನಿವ್ವಳ ಬಡ್ಡಿ ವರಮಾನವು ಈ ಬಾರಿ ₹7,311 ಕೋಟಿ ಆಗಿದೆ. ಬ್ಯಾಂಕ್‌ನ ಎನ್‌ಪಿಎ ಪ್ರಮಾಣವು ಶೇ 1,39ಕ್ಕೆ ಇಳಿಕೆ ಕಂಡಿದೆ. ಹಿಂದಿನ ವರ್ಷದಲ್ಲಿ ಇದು ಶೇ 1.49ರಷ್ಟು ಇತ್ತು.

ಥಾಯ್ಲೆಂಡ್‌ನ ಸಿರಿಕಿತ್ ನಿಧನ

ಬ್ಯಾಂಕಾಕ್ (ಎಪಿ): ಥಾಯ್ಲೆಂಡ್ ರಾಜವಂಶಸ್ಥೆ ಸಿರಿಕಿತ್ ಕಿತಿಯಾಕಾರ ಅವರು ಶುಕ್ರವಾರ ನಿಧನರಾಗಿದ್ದಾರೆ. ಅವರಿಗೆ 93 ವರ್ಷ ವಯಸ್ಸಾಗಿತ್ತು.

‘ರಕ್ತದ ಸೋಂಕು ಹಾಗೂ ಇತರ ವಯೋಸಹಜ ಕಾಯಿಲೆಗಳಿಂದ ಅವರು ಬಳಲುತ್ತಿದ್ದರು. 1932 ರಲ್ಲಿ ಜನಿಸಿದ್ದ ರಾಣಿ ಸಿರಿಕಿತ್, 66 ವರ್ಷ ಥಾಯ್ಲೆಂಡ್ ರಾಣಿಯಾಗಿ ಮೆರೆದಿದ್ದರು. ರಾಜಪ್ರಭುತ್ವ ಮತ್ತು ಜನರ ನಡುವಿನ ಕೊಂಡಿಯಾಗಿ ಕೆಲಸ ಮಾಡಿ, ಪ್ರಜೆಗಳನ್ನು ಮಕ್ಕಳಂತೆ ಕಂಡರು. ಅದಕ್ಕಾಗಿಯೇ 1976ರಿಂದ ಅವರ ಜನ್ಮದಿನವಾದ ಆಗಸ್ಟ್ 12 ರಂದು ‘ತಾಯಂದಿರ ದಿನ’ವಾಗಿ ಆಚರಿಸಲಾಗುತ್ತದೆ.

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹185
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹167

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹583

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹285-636
ದ್ವಿತಳಿ (ಬಿ.ವಿ)	₹325-822


ಮುದ್ರೆ-ಮನೆ ಕಾಫಿ (50 ಕೆಜಿಗೆ)	
ಎಪಿ	₹30,500
ಎಸಿ	₹15,680
ಆರ್‌ಪಿ	₹19,500
ಆರ್‌ಸಿ	₹11,050

ದೆಹಲಿಯ 4 ಮನೆಗಳ ಪೈಕಿ 3ರಲ್ಲಿ ಮಾಲಿನ್ಯ ಸಂತ್ರಸ್ತರು

ವಿಷಕಾರಿ ಗಾಳಿ: ಕಣ್ಣುಗಳಲ್ಲಿ ಉರಿ

ನವದೆಹಲಿ (ಪಿಟಿಐ): ‘ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಹೆಚ್ಚಿದ ವಿಷಕಾರಿ ಗಾಳಿಯಿಂದ ನಾಲ್ಕರಲ್ಲಿ ಮೂರು ಮನೆಗಳ ಸದಸ್ಯರು ಕಣ್ಣುಗಳಲ್ಲಿ ಉರಿ, ತಲೆ ಸುತ್ತು, ಗಂಟಲು ಕೆರೆತ, ಕಫ ಹಾಗೂ ನಿದ್ರೆಯ ಕೊರತೆಯಿಂದ ಬಳಲುತ್ತಿದ್ದಾರೆ’ ಎಂದು ಆನ್‌ಲೈನ್ ಮೂಲಕ ಸಮೀಕ್ಷೆ ನಡೆಸಿದ ‘ಲೋಕಲ್ ಸರ್ಕಲ್ಸ್’ ಪ್ಲಾಟ್‌ಫಾರ್ಮ್ ತಿಳಿಸಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಟಿಸಿದ ಅಂಕಿಅಂಶಗಳ ಪ್ರಕಾರ, ‘ಮಾಲಿನ್ಯಕಾರಕ ಸೂಕ್ಷ್ಮಕಣಗಳ (ಪಿಎಂ) 2.5 ಪ್ರಮಾಣವು ಪ್ರತಿ ಘನಮೀಟರ್‌ಗೆ 488 ಮೈಕ್ರೋಗ್ರಾಂಗೆ ತಲುಪಿತ್ತು. ಇದು ಕಳೆದ ಐದು ವರ್ಷಗಳಲ್ಲಿಯೇ ಗರಿಷ್ಠ ಮಟ್ಟದ್ದಾಗಿದೆ. ದೀಪಾವಳಿ ದಿನವಾದ ಅಕ್ಟೋಬರ್ 20 ಹಾಗೂ ಮರುದಿನ ಮಾಲಿನ್ಯ ಪ್ರಮಾಣವು ಅತ್ಯಂತ ಗರಿಷ್ಠ ಪ್ರಮಾಣದಲ್ಲಿತ್ತು’ ಎಂದು ತಿಳಿಸಿದೆ.



ದೆಹಲಿ, ಗುರುಗ್ರಾಮ, ನೋಯಿಡಾ, ಫರೀದಾಬಾದ್, ಗಾಜಿಯಾಬಾದ್‌ನ 44 ಸಾವಿರ ಮಂದಿ ಈ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದಾರೆ. ಮನೆಯಲ್ಲಿ ಒಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಮಂದಿ ಗಂಟಲು ಕೆರೆತ, ಕಫದಿಂದ ಬಳಲುತ್ತಿದ್ದಾರೆ ಎಂದು ಶೇಕಡಾ 42ರಷ್ಟು ಮಂದಿ ತಿಳಿಸಿದ್ದು, ಶೇಕಡಾ 25ರಷ್ಟು ಮಂದಿ ಕಣ್ಣಿನ ಉರಿ, ತಲೆನೋವಿನಿಂದ ಬಳಲುತ್ತಿರುವುದಾಗಿ ತಿಳಿಸಿದ್ದಾರೆ. ಉಳಿದ ಶೇಕಡಾ 17ರಷ್ಟು ಮಂದಿ ಉಸಿರಾಟದ ತೊಂದರೆ ಅಥವಾ ಅಸ್ತಮಾ ಉಲ್ಬಣಗೊಂಡಿರುವುದಾಗಿ ಹೇಳಿದ್ದಾರೆ ಎಂದು ಹೇಳಿದೆ.

ವೈದ್ಯೆ ಆತ್ಮಹತ್ಯೆ: ಪಿಎಸ್‌ಐ, ಟೆಕಿ ಬಂಧನ

ಸಾತಾರಾ: ಪ್ರಕರಣದಲ್ಲಿ ರಾಜಕಾರಣಿಯ ಹೆಸರು ಕೇಳಿಬರುತ್ತಿದ್ದಂತೆ ತನಿಖೆ ಚುರುಕುಗೊಳಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಸಾತಾರಾ ಜಿಲ್ಲೆಯ ಸರ್ಕಾರಿ ವೈದ್ಯೆಯ ಆತ್ಮಹತ್ಯೆ ಪ್ರಕರಣದ ಪ್ರಮುಖ ಆರೋಪಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಗೋಪಾಲ್ ಬದನೆ ಅವರನ್ನು ಶನಿವಾರ ಸಂಜೆ ಬಂಧಿಸಲಾಗಿದೆ. ಈ ಪ್ರಕರಣದ ಮತ್ತೊಬ್ಬ ಆರೋಪಿ ಪುಣೆ ಮೂಲದ ಟೆಕಿ ಪ್ರಶಾಂತ್ ಬಣಕರ್‌ನನ್ನು ಬಂಧಿಸಿದ್ದ ಪೊಲೀಸರು, ತಲೆಮರೆಸಿಕೊಂಡಿದ್ದ ಬದನೆಗಾಗಿ ಹುಡುಕಾಟ ನಡೆಸಿದ್ದರು.

ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ತಮ್ಮ ವಿರುದ್ಧ ಪ್ರಕರಣ ದಾಖಲಾದ ದಿನದಿಂದಲೇ ಬದನೆ ತಲೆಮರೆಸಿಕೊಂಡಿದ್ದರು. ಶನಿವಾರ ಸಂಜೆ ವೇಳೆಗೆ ಅವರು ಫಲ್ಟಣ್ ಗ್ರಾಮೀಣ ಪೊಲೀಸ್ ಠಾಣೆಗೆ ಹಾಜರಾದರು. ಅವರನ್ನು ಕಸ್ಟಡಿಗೆ ಪಡೆಯಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ದೇವೇಂದ್ರ ಫಡಣವೀಸ್

ಸಾತಾರಾ ಜಿಲ್ಲೆಯ ಫಲ್ಟಣ್ ಉಪ ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 28 ವರ್ಷದ ವೈದ್ಯೆಯು ಪಟ್ಟಣದ ಹೋಟೆಲ್‌ನ ಕೊಠಡಿಯೊಂದರಲ್ಲಿ ಗುರುವಾರ ನೇಣು ಹಾಕಿಕೊಂಡು, ಆತ್ಮಹತ್ಯೆ ಮಾಡಿಕೊಂಡಿದ್ದರು. ತಮ್ಮ ಮೇಲೆ ಹಲವು ಬಾರಿ ಅತ್ಯಾಚಾರ ಎಸಗಿದ್ದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮತ್ತು ಮಾನಸಿಕ ಕಿರುಕುಳ ನೀಡುತ್ತಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಹೆಸರನ್ನು ಅವರು ಅಂಗೈನಲ್ಲಿ ಬರೆದಿಟ್ಟಿದ್ದರು.

ಆರೋಪಿ ಪ್ರಶಾಂತ್ ಬಣಕರ್‌ನ ತಂದೆಯ ಮಾಲೀಕತ್ವದ ಮನೆಯಲ್ಲಿ ವೈದ್ಯೆ ವಾಸವಾಗಿದ್ದರು. ಪ್ರಕರಣದಲ್ಲಿ ರಾಜಕಾರಣಿಯೊಬ್ಬರ ಹೆಸರು ಕೇಳಿಬರುತ್ತಿದ್ದಂತೆ ಪೊಲೀಸರು ತನಿಖೆ ಚುರುಕುಗೊಳಿಸಿ ಬಣಕರ್‌ನನ್ನು ಬಂಧಿಸಿದ್ದರು. ಮತ್ತೊಂದೆಡೆ ಪೊಲೀಸರು ವೈದ್ಯೆಯ ವಿರುದ್ಧ ಮೇಲಧಿಕಾರಿಗೆ ದೂರು ನೀಡಿದ್ದರು. ವೈದ್ಯೆಯು ವಿಕ್ಷಿಪ್ತ ನಡವಳಿಕೆಯವರಾಗಿದ್ದು, ಕೆಲಸದಲ್ಲಿ ಸಹಕರಿಸುತ್ತಿಲ್ಲ. ಯಾವುದೇ ಆರೋಪಿಯ ವೈದ್ಯಕೀಯ ತಪಾಸಣೆಗೆ ಅವರನ್ನು ನೇಮಿಸಬಾರದು ಎಂದು ದೂರಿನಲ್ಲಿ ಕೇಳಲಾಗಿತ್ತು.

ಆದಾಗ್ಯೂ, ಈ ದೂರಿಗೆ ನಾಲ್ಕು ಪುಟಗಳಲ್ಲಿ ಉತ್ತರ ನೀಡಿದ್ದ ವೈದ್ಯೆ, 'ಆರೋಪಿಗಳಿಗೆ ನಕಲಿ ಫಿಟ್‌ನೆಸ್ ಪ್ರಮಾಣಪತ್ರಗಳನ್ನು ನೀಡುವಂತೆ ಗೋಪಾಲ್ ಬದನೆ ಮತ್ತು ಇತರ ಪೊಲೀಸ್ ಸಿಬ್ಬಂದಿ ಒತ್ತಡ ಹೇರುತ್ತಿದ್ದಾರೆ. ಜೊತೆಗೆ ಆರೋಪಿಯೊಬ್ಬನ ವೈದ್ಯಕೀಯ ಪ್ರಮಾಣಪತ್ರವನ್ನು ಬದಲಾಯಿಸುವಂತೆ ಸಹಾಯಕರ ಮೂಲಕ ಸಂಸದರೊಬ್ಬರು ಒತ್ತಡ ಹೇರಿದ್ದಾರೆ' ಎಂದು ಆರೋಪಿಸಿದ್ದರು.

ಪ್ರಕರಣದಲ್ಲಿ ಆಡಳಿತಾರೂಢ ಮಹಾಯುತಿ ಸರ್ಕಾರ ಪೊಲೀಸರನ್ನು ರಕ್ಷಿಸುತ್ತಿದೆ ಎಂದು ವಿಪಕ್ಷ ಮಹಾ ವಿಕಾಸ್ ಅಘಾಡಿಯ ಪಕ್ಷಗಳು ಆರೋಪಿಸಿವೆ.

ಶಿವಸೇನೆ (ಯುಬಿಟಿ) ನಾಯಕ ಅಂಬಾದಾಸ್ ದಾನ್ವೆ ಅವರು ವೈದ್ಯೆಯು ಅಧಿಕಾರಿಗಳಿಗೆ ಬರೆದ ನಾಲ್ಕು ಪುಟಗಳ ಪತ್ರವನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ಬಿಜೆಪಿಯ ಮಾಜಿ ಸಂಸದ ರಂಜಿತ್‌ಸಿಂಗ್ ನಾಯ್ಕ್ ನಿಂಬಾಳ್ಕರ್ ಅವರು ವೈದ್ಯೆಗೆ ಒತ್ತಡ ಹೇರಿದ್ದಾರೆ ಎಂದು ಆರೋಪಿಸಿದ್ದು, ಅವರನ್ನು ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಆದಾಗ್ಯೂ, ರಂಜಿತ್‌ಸಿಂಗ್ ಅವರು ಈ ಆರೋಪವನ್ನು ನಿರಾಕರಿಸಿದ್ದು, ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ತನ್ನ ಹೆಸರನ್ನು ಎಳೆದು ತರಲಾಗಿದೆ ಎಂದು ಹೇಳಿದ್ದಾರೆ.

'ಲಾಡ್ಕಿ ಬಹೀನ್‌ಗಿಂತ ಮಹಿಳಾ ಭದ್ರತೆಯ ಅಗತ್ಯವಿದೆ. ಫಡಣವೀಸ್ ಅಡಿಯಲ್ಲಿ ಪ್ರವರ್ಧಮಾನಕ್ಕೆ ಬಂದ ಜನರು ಮಹಿಳೆಯರಿಗೆ ಈ ರೀತಿ ಕಿರುಕುಳ ನೀಡುತ್ತಿದ್ದರೆ, ಅವರು ಗೃಹ ಸಚಿವರಾಗಿ ವಿಫಲರಾಗಿದ್ದಾರೆ ಎಂದರ್ಥ. ಅವರು ರಾಜೀನಾಮೆ ನೀಡಬೇಕು' ಎಂದು ದಾನ್ವೆ ಹೇಳಿದ್ದಾರೆ.

ಮೃತ ವೈದ್ಯೆಯನ್ನು ಬೆದರಿಸಿದ ಸಂಸದರೊಬ್ಬರ ಇಬ್ಬರು ಸಹಾಯಕರ ಬಗ್ಗೆ ಪ್ರಶ್ನಿಸಿದ ದಾನ್ವೆ, 'ವೈದ್ಯೆಯ ದೂರಿನ ಬಗ್ಗೆ ಅವರ ಮೇಲಾಧಿಕಾರಿ ಯಾವ ಕ್ರಮ ಕೈಗೊಂಡರು' ಎಂದೂ ಪ್ರಶ್ನಿಸಿದ್ದಾರೆ.

ವಿರೋಧ ಪಕ್ಷಗಳ ಆರೋಪಗಳಿಗೆ ಪತ್ರಿಕ್ರಿಯೆ ನೀಡಿದ ರಾಜ್ಯದ ಗೃಹ ಸಚಿವರೂ ಆಗಿರುವ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, 'ಇಂತಹ ವಿಚಾರದಲ್ಲೂ ವಿಪಕ್ಷಗಳು ರಾಜಕೀಯ ಮಾಡುತ್ತಿರುವುದು ದುರದೃಷ್ಟಕರ. ಅವರು ಘಟನೆಗೆ ರಾಜಕೀಯ ಬಣ್ಣ ನೀಡುತ್ತಿದ್ದಾರೆ' ಎಂದು ಹೇಳಿದ್ದಾರೆ.

ಪ್ರಕರಣ ಗಂಭೀರವಾದುದು ಎಂದು ಪ್ರತಿಪಾದಿಸಿದ ಅವರು, ಪ್ರಕರಣದಲ್ಲಿ ಭಾಗಿಯಾದ ಯಾರನ್ನೂ ಬಿಡುವುದಿಲ್ಲ ಎಂದು ತಿಳಿಸಿದ್ದಾರೆ.

'ಇದು ದುಃಖಕರ ಮತ್ತು ಗಂಭೀರ ವಿಚಾರ. ವೈದ್ಯೆ ಎದುರಿಸಿದ ಸಂಕಟವನ್ನು ಊಹಿಸಿ... ಅವರು ಆರೋಪಿಗಳ ಹೆಸರನ್ನು ಅಂಗೈನಲ್ಲಿ ಬರೆದಿಟ್ಟು ಜೀವ ಕಳೆದುಕೊಂಡಿದ್ದಾರೆ.

ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಆರೋಪಿ ಪೊಲೀಸ್ ಅಧಿಕಾರಿಯನ್ನು ತಕ್ಷಣವೇ ಅಮಾನತು ಮಾಡಲಾಗಿತ್ತು' ಎಂದು ಹೇಳಿದ್ದಾರೆ.

ವೈದ್ಯೆಯ ಅಂತ್ಯಕ್ರಿಯೆ ಅವರ ತವರು ಜಿಲ್ಲೆಯಾದ ಬೀಡ್‌ನ ವಡ್ವಾನಿ ತಾಲ್ಲೂಕಿನಲ್ಲಿರುವ ಸ್ವಂತ ಜಮೀನಿನಲ್ಲಿ ಶುಕ್ರವಾರ ನಡೆಯಿತು.

'ಸಂಸದನ ವಿರುದ್ಧ ಕ್ರಮ ಕೈಗೊಳ್ಳಿ'

ಫಲ್ಟಣ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡ ವೈದ್ಯೆಯ ಮೇಲೆ ಒತ್ತಡ ಹೇರಲು ಯತ್ನಿಸಿದ ಸಂಸದನನ್ನು ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಬೇಕು ಎಂದು ಬಿಜೆಪಿ ಶಾಸಕ ಸುರೇಶ್ ಧಸ್ ಅವರು ಶನಿವಾರ ಆಗ್ರಹಿಸಿದ್ದಾರೆ.

'ವೈದ್ಯೆಗೆ ಬೆದರಿಸಿದ ಸಂಸದ ಮತ್ತು ಅವರ ಸಹಾಯಕ ಯಾರು ಎಂದು ತನಿಖೆಯಿಂದ ಬಹಿರಂಗವಾಗುತ್ತದೆ. ಅವರು ಯಾರೇ ಆಗಲಿ, ಪ್ರಕರಣದಲ್ಲಿ ಅವರು ಭಾಗಿಯಾಗಿದ್ದರೆ ಅವರನ್ನು ಪ್ರಕರಣದಲ್ಲಿ ಆರೋಪಿಗಳನ್ನಾಗಿಸಬೇಕು' ಎಂದು ಶಾಸಕ ಧಸ್ ಹೇಳಿದ್ದಾರೆ.

'ಆರೋಪಿಗಳನ್ನು ಗಲ್ಲಿಗೇರಿಸಿ'

ಛತ್ರಪತಿ ಸಂಭಾಜಿನಗರ (ಪಿಟಿಐ): ಆತ್ಮಹತ್ಯೆ ಮಾಡಿಕೊಂಡ ಸರ್ಕಾರಿ ವೈದ್ಯೆಯ ಸಾವಿಗೆ ಕಾರಣಕರ್ತರಾದ ಪೊಲೀಸ್ ಅಧಿಕಾರಿ ಹಾಗೂ ಎಂಜಿನಿಯರ್‌ಗೆ ಮರಣದಂಡನೆ ವಿಧಿಸಬೇಕು ಎಂದು ಅವರ ಸಂಬಂಧಿಕರು ಆಗ್ರಹಿಸಿದ್ದಾರೆ.

ತನ್ನ ಮೇಲೆ ನಡೆಯುತ್ತಿದ್ದ ಕಿರುಕುಳದ ಬಗ್ಗೆ ಸಂತ್ರಸ್ತ ವೈದ್ಯೆ ಹಲವು ಬಾರಿ ದೂರಿಕೊಂಡಿದ್ದರೂ ಅದನ್ನು ನಿರ್ಲಕ್ಷಿಸಲಾಗಿತ್ತು ಎಂದು ಅವರ ಸಂಬಂಧಿಕರು ಸುದ್ದಿ ಮಾಧ್ಯಮದ ಜೊತೆಗೆ ಮಾತನಾಡುತ್ತಾ ಆರೋಪಿಸಿದ್ದಾರೆ.

ವೈದ್ಯರೂ ಆಗಿರುವ ಮೊತ್ತೊಬ್ಬ ಸಂಬಂಧಿ ಮಾತನಾಡುತ್ತಾ, 'ಘಟನೆ ಬಗ್ಗೆ ನಮಗೆ ಪೊಲೀಸರು ತಿಳಿಸಿದ್ದರಿಂದ ನಾವು ಆಸ್ಪತ್ರೆಗೆ ತೆರಳಿದೆವು. ನಾನು ವೈದ್ಯ ಆಗಿರುವುದರಿಂದ ಶವಪರೀಕ್ಷೆಗೆ ನಾನೂ ಹಾಜರಾಗುತ್ತೇನೆ ಎಂದು ಅವರಿಗೆ ತಿಳಿಸಿದೆ. ಈ ವೇಳೆ ಅವರ ಅಂಗೈನಲ್ಲಿನ ಟಿಪ್ಪಣಿ ಗಮನಿಸಿ ಅದನ್ನು ಪೊಲೀಸರಿಗೆ ತಿಳಿಸಿದೆ' ಎಂದು ಹೇಳಿದ್ದಾರೆ.'ಮೃತ ವೈದ್ಯೆ ಕೆಲಸ ಮಾಡುತ್ತಿದ್ದ ಆಸ್ಪತ್ರೆಯಲ್ಲಿ ವೈದ್ಯಕೀಯ ವರದಿಬದಲಾಯಿಸುವಂತೆ ಫಲ್ಟಣ್‌ನ ರಾಜಕಾರಣಿಗಳು ಅವರ ಮೇಲೆ ಒತ್ತಡ ಹೇರುತ್ತಿದ್ದರು. ಆರೋಪಿಗಳನ್ನು ಗಲ್ಲಿಗೇರಿಸಿ' ಎಂದು ಮತ್ತೊಬ್ಬ ಸಂಬಂಧಿ ಹೇಳಿದ್ದಾರೆ.

ತಪ್ಪಿತಸ್ಥರನ್ನು ಶಿಕ್ಷಿಸಿ: ವೈದ್ಯರ ಸಂಘಗಳ ಆಗ್ರಹ

ಮುಂಬೈ: ಅತ್ಯಾಚಾರ ಮತ್ತು ಮಾನಸಿಕ ಕಿರುಕುಳಕ್ಕೊಳಗಾಗಿ ಆತ್ಮಹತ್ಯೆಗೈದ ವೈದ್ಯೆಯ ಸಾವಿನ ಪ್ರಕರಣದ ಬಗ್ಗೆ ಭಾರತೀಯ ವೈದ್ಯಕೀಯ ಸಂಘ–ಮಹಾರಾಷ್ಟ್ರ ರಾಜ್ಯ (ಐಎಂಎ) ಮತ್ತು ಅಖಿಲ ಭಾರತ ವೈದ್ಯಕೀಯ ಸಂಘಗಳ ಒಕ್ಕೂಟ (ಎಫ್‌ಎಐಎಂಎ) ಆಕ್ರೋಶ ವ್ಯಕ್ತಪಡಿಸಿದೆ.

ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಮಾಹಿತಿ ಬಹಿರಂಗಪಡಿಸುವವರಿಗೆ ರಕ್ಷಣೆ ಒದಗಿಸಬೇಕು ಎಂದು ಸಂಘಗಳು ಒತ್ತಾಯಿಸಿವೆ.



ಮಹಾಯುತಿ ಸರ್ಕಾರ ಪೊಲೀಸರನ್ನು ಪದೇ ಪದೇ ರಕ್ಷಿಸುತ್ತಿರುವುದರಿಂದ ಪೊಲೀಸ್ ದೌರ್ಜನ್ಯ ಹೆಚ್ಚಳವಾಗಿದೆ. ಆರೋಪಿ ಅಧಿಕಾರಿಯನ್ನು ಕೆಲಸದಿಂದ ವಜಾ ಮಾಡಬೇಕು

ವಿಜಯ ವಡೆಟ್ಟಿವಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ

ತಮಿಳುನಾಡಿನಲ್ಲಿ ಮುಂದಿನ ವಾರದಿಂದ ಎಸ್‌ಐಆರ್: ಆಯೋಗ

ಚೆನ್ನೈ (ಪಿಟಿಐ): 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ತಮಿಳುನಾಡಿನಲ್ಲಿ ಮುಂದಿನ ವಾರ ಆರಂಭಗೊಳ್ಳಲಿದೆ' ಎಂದು ಕೇಂದ್ರ ಚುನಾವಣಾ ಆಯೋಗವು ಮದ್ರಾಸ್ ಹೈಕೋರ್ಟ್‌ಗೆ ತಿಳಿಸಿದೆ.



ತಮಿಳುನಾಡು ಸೇರಿದಂತೆ ಸದ್ಯದಲ್ಲೇ ದೇಶದಾದ್ಯಂತ ಚುನಾವಣೆ ಎದುರಿಸಲಿರುವ ರಾಜ್ಯಗಳಲ್ಲಿ ಬಿಹಾರ ಮಾದರಿಯಲ್ಲಿಯೇ ಎಸ್‌ಐಆರ್ ಪ್ರಕ್ರಿಯೆ ಮುಂದಿನ ವಾರ ಆರಂಭಗೊಳ್ಳಲಿದೆ ಎಂದು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮಣೀಂದ್ರ ಮೋಹನ್ ಶ್ರೀವಾಸ್ತವ ಹಾಗೂ ನ್ಯಾಯಮೂರ್ತಿ ಜಿ.ಅರುಳ್ ಮುರುಗನ್ ಅವರ ಮುಂದೆ ಆಯೋಗವು ದಾಖಲೆಗಳನ್ನು ಸಲ್ಲಿಸಿದೆ.

ಚೆನ್ನೈನ ಟಿ.ನಗರ ವಿಧಾನಸಭಾ ಕ್ಷೇತ್ರದ 229 ಬೂತ್‌ಗಳಲ್ಲಿ ಸಂಪೂರ್ಣವಾಗಿ, ಪಾರದರ್ಶಕವಾಗಿ ಮರುಪರಿಶೀಲನೆ ನಡೆಸುವಂತೆ ಎಐಎಡಿಎಂಕೆಯ ಮಾಜಿ ಶಾಸಕ ಬಿ.ಸತ್ಯನಾರಾಯಣ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ದೂರನ್ನು ಪರಿಗಣಿಸುವುದಾಗಿ ಹೈಕೋರ್ಟ್ ಮುಂದೆ ಆಯೋಗವು ತಿಳಿಸಿದೆ.

'ಡಿಎಂಕೆ ಪಕ್ಷಕ್ಕೆ ಅನುಕೂಲ ಮಾಡಿಕೊಡಬೇಕು ಎಂಬ ದೃಷ್ಟಿಯಿಂದ ಟಿ.ನಗರ ವಿಧಾನಸಭಾ ಕ್ಷೇತ್ರದಲ್ಲಿ ಎಐಎಡಿಎಂಕೆ ಪಕ್ಷದ 13 ಸಾವಿರ ಬೆಂಬಲಿಗರ ಹೆಸರುಗಳನ್ನು 2021ರಲ್ಲಿ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ತೆಗೆದು ಹಾಕಿದ್ದರು. ಆದರೆ, ಸತ್ತವರ ಹೆಸರನ್ನು ತೆಗೆದುಹಾಕಿರಲಿಲ್ಲ. 1998ರಲ್ಲಿ ಕ್ಷೇತ್ರದಲ್ಲಿ 2,08,349 ಲಕ್ಷ ಮತದಾರರಿದ್ದು, 2021ರ ವೇಳೆಗೆ 36,656ರಷ್ಟು ಮಾತ್ರ ಏರಿಕೆಯಾಗಿದೆ. ಕ್ಷೇತ್ರದಲ್ಲಿರುವ ಜನಸಂಖ್ಯೆಗೂ ಹಾಗೂ ಮತದಾರರ ನಡುವೆ ದೊಡ್ಡ ಮಟ್ಟದ ಅಂತರವಿದೆ. ಈ ಕುರಿತು ಸಮಗ್ರ ತನಿಖೆ ನಡೆಸಿ, ಪರಿಷ್ಕರಣೆ ನಡೆಸಬೇಕು' ಎಂದು ಕೋರಿ ಬಿ.ಸತ್ಯನಾರಾಯಣ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿದಾರರ ಮನವಿಯನ್ನು ಸ್ವೀಕರಿಸಿದ ಹೈಕೋರ್ಟ್ ವಿಚಾರಣೆಯನ್ನು ಮುಂದಿನ ವಾರಕ್ಕೆ ಮುಂದೂಡಿದೆ.


ಒಡಿಶಾದ ಭುವನೇಶ್ವರದಲ್ಲಿ ಶನಿವಾರ ನಡೆದ ಸೇನಾ ನೇಮಕಾತಿ ರ್‍ಯಾಲಿಯಲ್ಲಿ ಆಕಾಂಕ್ಷಿಗಳು ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ವಿದ್ಯಾವಂತ ಸ್ತ್ರೀಯರ ಹಣಾಹಣಿ

• ಅಭಯ್ ಕುಮಾರ್

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಪಟ್ನಾ: ರಾಜಕೀಯ ಪಕ್ಷಗಳ ಪೈಪೋಟಿಯಿಂದಾಗಿ ಈಗಾಗಲೇ ರಂಗೇರಿರುವ ಬಿಹಾರದ ಚುನಾವಣಾ ಕಣ ಈ ಬಾರಿ ಮತ್ತಷ್ಟು ರೋಚಕ ಸವಾಲುಗಳನ್ನು ಕಾಣುವ ಸಾಧ್ಯತೆಗಳಿವೆ. ಬಹುತೇಕ ರಾಜಕೀಯ ಪಕ್ಷಗಳು ಅತ್ಯುನ್ನತ ವಿದ್ಯಾಭ್ಯಾಸ ಹೊಂದಿರುವ ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಮೂಲಕ ಶಕ್ತಿ ಪ್ರದರ್ಶನಕ್ಕೆ ಮುಂದಾಗಿರುವುದು ವಿಶೇಷ.

ತಂದೆ ಐಎಎಸ್ ಅಧಿಕಾರಿ, ಸಹೋದರಿ ಐಪಿಎಸ್ ಅಧಿಕಾರಿ ಮಾತ್ರವಲ್ಲದೆ, ಸ್ವತಃ ತಾವೇ ಸುಪ್ರೀಂ ಕೋರ್ಟ್‌ನಲ್ಲಿ ವಕೀಲರಾಗಿರುವ ಲತಾ ಸಿಂಗ್ ಅವರನ್ನು ಪ್ರಶಾಂತ್ ಕಿಶೋರ್ ಅವರ ಜನ ಸುರಾಜ್ ಪಕ್ಷವು ಅಸ್ಥಾವಾನ್ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಈ ಹಿಂದೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪ್ರಧಾನ ಕಾರ್ಯದರ್ಶಿ ಆಗಿದ್ದ, ಬಳಿಕ ಮೋದಿ ಸರ್ಕಾರದಲ್ಲಿ ಸಚಿವರಾಗಿದ್ದ ಆರ್‌ಸಿಪಿ ಸಿಂಗ್ ಅವರು ಲತಾ ಸಿಂಗ್ ಅವರ ತಂದೆ. ತವರು ಕ್ಷೇತ್ರದಲ್ಲೇ ಲತಾ ಕಣಕ್ಕಿಳಿದಿದ್ದಾರೆ. ಆದರೆ, 2005ರಿಂದಲೂ ಅಸ್ಥಾವಾನ್ ಕ್ಷೇತ್ರದಲ್ಲಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಅಭ್ಯರ್ಥಿಗಳೇ ಗೆಲುವು ಸಾಧಿಸುತ್ತಿರುವುದು ಗಮನಾರ್ಹ.

ಇತ್ತ ಆರ್‌ಜೆಡಿ ಪಕ್ಷವು ವೈಶಾಲಿಯ ಲಾಲ್‌ಗಂಜ್ ಕ್ಷೇತ್ರದಲ್ಲಿ ಶಿವಾನಿ ಶುಕ್ಲಾ ಎಂಬವರನ್ನು ಅಭ್ಯರ್ಥಿಯನ್ನಾಗಿ ಘೋಷಿಸಿದೆ. ರಾಜಕಾರಣಿಯಾಗಿ ಬದಲಾದ 'ಡಾನ್' ಮುನ್ನಾ ಶುಕ್ಲಾ ಅವರ ಪುತ್ರಿಯಾಗಿರುವ ಶಿವಾನಿ, ಬೆಂಗಳೂರಿನಲ್ಲಿ ಕಾನೂನು ಪದವಿ ಪಡೆದು, ಬ್ರಿಟನ್‌ನ ಲೀಡ್ಸ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಶಿವಾನಿ ಸ್ಪರ್ಧಿಸುತ್ತಿರುವ ಅದೇ ಲಾಲ್‌ಗಂಜ್ ಕ್ಷೇತ್ರವನ್ನು ಈ ಹಿಂದೆ ಶಿವಾನಿ ಅವರ ತಂದೆ ಮತ್ತು ತಾಯಿ ಅನ್ನೂ ಶುಕ್ಲಾ ಪ್ರತಿನಿಧಿಸಿದ್ದರು.

ಜಮುಯಿ ಕ್ಷೇತ್ರದಿಂದ ಶ್ರೇಯಸಿ ಸಿಂಗ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಫರೀದಾಬಾದ್‌ನಲ್ಲಿ ಎಂಬಿಎ ಪದವಿ ಪಡೆದಿರುವ ಶ್ರೇಯಸಿ, ಕೇಂದ್ರದ ಮಾಜಿ ಸಚಿವ, ದಿವಂಗತ ದಿಗ್ವಿಜಯ ಸಿಂಗ್ ಅವರ ಪುತ್ರಿ.


ಲತಾ ಸಿಂಗ್


ಶ್ರೇಯಸಿ ಸಿಂಗ್

2018ರ ಕಾಮನ್‌ವೆಲ್ತ್ ಶೂಟಿಂಗ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಕ್ರೀಡಾ ಪ್ರತಿಭೆಯಾಗಿಯೂ ಶ್ರೇಯಸಿ ಗುರುತಿಸಿಕೊಂಡಿದ್ದರು.

ಪ್ರಮುಖ ಎಡಪಕ್ಷವಾಗಿರುವ ಸಿಪಿಐ–ಎಂಎಲ್ ಕೂಡ ಮೊದಲ ಪ್ರಯತ್ನದಲ್ಲೇ ಬಿಹಾರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದ ದಿವ್ಯ ಗೌತಮ್ ಅವರನ್ನು ದೀಘಾ ಕ್ಷೇತ್ರದಿಂದ ಕಣಕ್ಕಿಳಿಸಿದೆ. ದಿವ್ಯಾ ಅವರು ದಿವಂಗತ ನಟ ಸುಶಾಂತ್ ಸಿಂಗ್ ರಜಪೂತ್ ಅವರ ಸಂಬಂಧಿಕರು.

ಜೆಡಿಯು ಕೂಡ ಗಾಯ್‌ಘಾಟ್ ಕ್ಷೇತ್ರದಿಂದ ಕೋಮಲ್ ಸಿಂಗ್ ಅವರನ್ನು ಅಭ್ಯರ್ಥಿಯನ್ನಾಗಿ ಘೋಷಿಸಿದೆ. ಕೋಮಲ್ ಅವರು ವೈಶಾಲಿ ಕ್ಷೇತ್ರದ ಎಲ್‌ಜೆಪಿ ಸಂಸದರಾದ ವೀಣಾ ದೇವಿ ಹಾಗೂ, ಜೆಡಿಯು ಎಂಎಲ್‌ಸಿ ತಂದೆ ದಿನೇಶ್ ಸಿಂಗ್ ಅವರ ಪುತ್ರಿ. ಕೋಮಲ್ ದೆಹಲಿ ವಿಶ್ವವಿದ್ಯಾಲಯದಲ್ಲಿ ಪದವಿ ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದಾರೆ.

'ಬಿಹಾರದಲ್ಲಿ ರೈಲು ಸಂಚಾರಕ್ಕೀಗ ಪಡಿಪಾಟಲು'

ಪಟ್ನಾ (ಪಿಟಿಐ): ಛತ್ ಪೂಜೆಯ ಅಂಗವಾಗಿ ಊರಿಗೆ ಮರಳುತ್ತಿರುವ ಬಿಹಾರಿಗಳನ್ನು ಅತ್ಯಂತ ಅಮಾನವೀಯ ಸ್ಥಿತಿಯಲ್ಲಿ ಪ್ರಯಾಣಿಸುವಂತೆ ಕೇಂದ್ರ ಸರ್ಕಾರ ಮಾಡಿದೆ. ಅಲ್ಲದೇ, ಬಿಹಾರಕ್ಕೆ ರೈಲುಗಳ ಸಮರ್ಪಕ ಸಂಚಾರಕ್ಕೆ ವ್ಯವಸ್ಥೆ ಮಾಡಿಲ್ಲ ಎಂದು ಆರ್‌ಜೆಡಿ ಮುಖ್ಯಸ್ಥ ಲಾಲೂ ಪ್ರಸಾದ್ ಶನಿವಾರ ಆರೋಪಿಸಿದ್ದಾರೆ.

ರೈಲಿನಲ್ಲಿ ಜನರು ಇಡುಕಿರಿದಿದ್ದು, ವಿಪರೀತ ಕಷ್ಟ ಅನುಭವಿಸುತ್ತಲೇ ಪ್ರಯಾಣಿಸುತ್ತಿರುವ ವಿಡಿಯೊವನ್ನು ಲಾಲೂ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

'ದೇಶದಲ್ಲಿರುವ 13,198 ರೈಲುಗಳ ಪೈಕಿ 12000 ರೈಲುಗಳನ್ನು ಛತ್ ಪೂಜೆಯ ಸಲುವಾಗಿ ಬಿಹಾರದ ಪ್ರಯಾಣಕ್ಕೆ ನಿಯೋಜಿಸಲಾಗಿದೆ ಎಂದು ಸುಳ್ಳುಗಳ ಸರದಾರ, ಹುಸಿ ಭರವಸೆಗಳ ನಾಯಕರೊಬ್ಬರು ಹೇಳಿಕೊಂಡಿದ್ದಾರೆ. ಇದು ಕೂಡ ಸುಳ್ಳು' ಎಂದು ಲಾಲೂ ಬರೆದಿದ್ದಾರೆ.

ಛತ್ ಪೂಜೆಗಾಗಿ 12000 ವಿಶೇಷ ರೈಲುಗಳನ್ನು ಬಿಹಾರದಲ್ಲಿ ಸಂಚಾರಕ್ಕಾಗಿ ರೈಲ್ವೆ ನಿಯೋಜಿಸಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಜೆ.ಪಿ.ನಡ್ಡಾ ಇತ್ತೀಚೆಗಷ್ಟೇ ಬಿಹಾರದಲ್ಲಿ ನಡೆದ ಸಾರ್ವಜನಿಕ ರ್‍ಯಾಲಿಯಲ್ಲಿ ಹೇಳಿದ್ದರು.

'ಜಂಗಲ್‌ರಾಜ್‌ ಬರುವುದೋ ಅಭಿವೃದ್ಧಿ ಗೆಲ್ಲುವುದೋ?'

ಖಗಡಿಯಾ, ಬಿಹಾರ (ಪಿಟಿಐ): 'ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯು 'ಜಂಗಲ್‌ರಾಜ್' ತರಲಿದೆಯೇ ಅಥವಾ ಅಭಿವೃದ್ಧಿ ಮಾರ್ಗದಲ್ಲಿ ಮುನ್ನಡೆಯಲಿದೆಯೇ ಎಂಬುದನ್ನು ನಿರ್ಧರಿಸಲಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ಖಗಡಿಯಾದಲ್ಲಿ ಶನಿವಾರ ನಡೆದ ಬೃಹತ್ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಬಿಹಾರದಲ್ಲಿ ಚುನಾವಣಾ ಆಯೋಗ ಕೈಗೆತ್ತಿಕೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) 'ಇಂಡಿಯಾ' ಒಕ್ಕೂಟವು ವಿರೋಧಿಸುತ್ತಿದೆ. ಪ್ರತಿಯೊಬ್ಬ ನುಸುಳುಕೋರನನ್ನು ಪತ್ತೆಹಚ್ಚಿ, ಮತಪಟ್ಟಿಯಿಂದ ತೆಗೆದುಹಾಕಲಾಗುತ್ತಿದೆ. ಚುನಾವಣೆ ಬಳಿಕ ಅಂಥವರನ್ನು ದೇಶದಿಂದಲೇ ಗಡೀಪಾರು ಮಾಡಲಾಗುವುದು' ಎಂದು ತಿಳಿಸಿದ್ದಾರೆ.

ಹಿರಿಯ ನಟ ಸತೀಶ್ ಶಾ ನಿಧನ

ಪ್ರಜಾವಾಣಿ ವಾರ್ತೆ

ಮುಂಬೈ: 'ಜಾನೇ ಭಿ ದೋ ಯಾರೋ'ದಂತಹ ಐತಿಹಾಸಿಕ ಸಿನಿಮಾದ ಹಾಸ್ಯಪಾತ್ರದಿಂದ ಹೆಸರುವಾಸಿಯಾಗಿದ್ದ, 'ಯೇ ಜೋ ಹೈ ಜಿಂದಗಿ', 'ಸಾರಾಭಾಯಿ ವರ್ಸಸ್ ಸಾರಾಭಾಯಿ' ಟೆಲಿವಿಷನ್ ಧಾರವಾಹಿಗಳ ಮೂಲಕ ಮನೆಮಾತಾಗಿದ್ದ ಹಿರಿಯ ನಟ ಸತೀಶ್ ಶಾ ಅವರು ಶನಿವಾರ ಕೊನೆಯುಸಿರೆಳೆದಿದ್ದಾರೆ. ಅವರಿಗೆ 74 ವರ್ಷ ವಯಸ್ಸಾಗಿತ್ತು.


ಸತೀಶ್ ಶಾ

ಹಾಸ್ಯನಟ ಗೋವರ್ಧನ್ ಅಸರಾನಿ, ಜಾಹೀರಾತು ನಿರೂಪಕ ಪೀಯೂಷ್ ಪಾಂಡೆ ನಿಧನರಾದ ಕೆಲವು ದಿನಗಳಲ್ಲಿ ಮತ್ತೊಬ್ಬ ನಟನನ್ನು ಕಳೆದುಕೊಂಡಂತಾಗಿದೆ.


ಸತೀಶ್ ಶಾ ನಿಧನವಾಗಿರುವುದನ್ನು ಸಿನಿ ಹಾಗೂ ಟಿವಿ ಕಲಾವಿದರ ಒಕ್ಕೂಟ, ಭಾರತೀಯ ಸಿನಿಮಾ ನಿರ್ದೇಶಕರ ಒಕ್ಕೂಟ ಹಾಗೂ ಅಖಿಲ ಭಾರತೀಯ ಸಿನಿಮಾ ಕಲಾವಿದರ ಒಕ್ಕೂಟವು ಖಚಿತಪಡಿಸಿದೆ.

'ಸತೀಶ್ ಅವರ ನಿಧನಕ್ಕೆ ತೀವ್ರ ಸಂತಾಪ ಸಲ್ಲಿಸುತ್ತಿದ್ದೇವೆ. 1985ರಿಂದಲೂ ಸಂಘದ ಸಕ್ರಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದರು' ಎಂದು ಒಕ್ಕೂಟವು ತಿಳಿಸಿದೆ.

'ಅವರು ಹೃದಯಾಘಾತದಿಂದ ನಿಧನರಾದರು ಎಂದು ತೋರುತ್ತದೆ. ಆದರೂ ಅವರ ಸಾವಿನ ಕುರಿತು ವೈದ್ಯರ ಅಂತಿಮ ವರದಿಯನ್ನು ಎದುರು ನೋಡುತ್ತಿದ್ದೇವೆ' ಎಂದು ಅವರ ಸಹಾಯಕ ಆಪ್ತ ಸಹಾಯಕ ರಮೇಶ್ ಕಡತಲಾ ತಿಳಿಸಿದ್ದಾರೆ.

ದಿ. ಜಯಂತ್ ನಾರ್ಳೀಕರ್‌ಗೆ 'ವಿಜ್ಞಾನ ರತ್ನ' ಪ್ರಶಸ್ತಿ

ನವದೆಹಲಿ (ಪಿಟಿಐ): ದೇಶದ ಹೆಸರಾಂತ ಖಭೌತ ವಿಜ್ಞಾನಿ, ಇತ್ತೀಚೆಗೆ ನಿಧನರಾದ ಜಯಂತ್ ನಾರ್ಳೀಕರ್ ಅವರನ್ನು ದೇಶದ ಅತ್ಯುನ್ನತ ವಿಜ್ಞಾನ ಪುರಸ್ಕಾರವಾದ 'ವಿಜ್ಞಾನ ರತ್ನ ಪ್ರಶಸ್ತಿ'ಗೆ ಸರ್ಕಾರ ಆಯ್ಕೆ ಮಾಡಿದೆ. ಜಯಂತ್ ನಾರ್ಳೀಕರ್ ಅವರು ಮೇ 20ರಂದು ತಮ್ಮ 86ನೇ ವಯಸ್ಸಿನಲ್ಲಿ ಮೃತಪಟ್ಟಿದ್ದರು.




ವಿಶ್ವವು ಮಹಾಸ್ಫೋಟದಿಂದ ಒಂದೇ ಕ್ಷಣದಲ್ಲಿ ಸೃಷ್ಟಿಯಾಯಿತು ಎಂಬ ಬಿಗ್‌ಬ್ಯಾಂಗ್ ಸಿದ್ಧಾಂತವನ್ನು ಪ್ರಶ್ನಿಸಿದ್ದ ನಾರ್ಳೀಕರ್, ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದ್ದರು.

ನಾರ್ಳೀಕರ್ ಜತೆಗೆ ಇತರೆ ಎಂಟು ವಿಜ್ಞಾನಿಗಳನ್ನು 'ವಿಜ್ಞಾನ್ ಶ್ರೀ ಪ್ರಶಸ್ತಿ'ಗೆ ಸರ್ಕಾರ ಆಯ್ಕೆ ಮಾಡಿದೆ. ಜ್ಞಾನೇಂದ್ರ ಪ್ರತಾಪ್‌ಸಿಂಗ್ (ಕೃಷಿ ವಿಜ್ಞಾನ), ಯೂಸೆಫ್ ಮಹಮದ್ ಶೇಖ್ (ಅಣು ಶಕ್ತಿ), ಕೆ. ತಂಗರಾಜ್ (ಜೈವಿಕ ವಿಜ್ಞಾನ), ಪ್ರದೀಪ್ ತಲಪ್ಪಿಲ್ (ರಸಾಯನ ವಿಜ್ಞಾನ), ಅನಿರುದ್ಧ ಬಾಲಚಂದ್ರ ಪಂಡಿತ್ (ಎಂಜಿನಿಯರಿಂಗ್), ಎಸ್. ವೆಂಕಟ ಮೋಹನ್ (ಪರಿಸರ ವಿಜ್ಞಾನ), ಮಹಾನ್ ಎಂ.ಜೆ. (ಗಣಿತ ಮತ್ತು ಗಣಕ ವಿಜ್ಞಾನ) ಮತ್ತು ಜಯನ್ ಎಂ. (ಬಾಹ್ಯಾಕಾಶ ವಿಜ್ಞಾನ) ಪ್ರಶಸ್ತಿಗೆ ಆಯ್ಕೆಯಾದ ವಿಜ್ಞಾನಿಗಳು.

ಜಗದೀಶ್ ಗುಪ್ತಾ ಕೆ, ಸತ್ಯೇಂದ್ರ ಕುಮಾರ್ ಎಂ, ದೇವಾರ್ಕ್ ಸೇನ್ ಗುಪ್ತಾ, ದೀಪಾ ಅಗಾಶೆ, ದಿವ್ಯೇಂದು ದಾಸ್, ವಾಲಿಯರ್ ರಹಮಾನ್, ಅರ್ಕಪ್ರವ ಬಸು, ಸವ್ಯಸಾಚಿ ಮುಖರ್ಜಿ, ಶ್ವೇತಾ ಪ್ರೇಮ್ ಅಗರ್‌ವಾಲ್, ಸುರೇಶ್ ಕಮಾರ್, ಅಮಿತ್ ಕುಮಾರ್ ಅಗರ್‌ವಾಲ್, ಸುರ್ಹುದ್ ಶ್ರೀಕಾಂತ್ ಮೋರೆ, ಅಂಕುರ್ ಗರ್ಗ್, ಮೋಹನ ಶಂಕರ ಶಿವಪ್ರಕಾಶಂ ಸೇರಿ 14 ಮಂದಿ ಯುವ ವಿಜ್ಞಾನಿಗಳು 'ವಿಜ್ಞಾನ್ ಯುವ ಪ್ರಶಸ್ತಿಗೆ' ಆಯ್ಕೆಯಾಗಿದ್ದಾರೆ.ವಿಜ್ಞಾನ ತಂಡ ಪ್ರಶಸ್ತಿಗೆ 'ಸಿಎಸ್‌ಐಆರ್ ಅರೊಮಾ ಮಿಷನ್' ಆಯ್ಕೆಯಾಗಿದೆ.

ಹರೂರಿನ ಹಾದಿಯಲ್ಲಿ...
ಅಪರೂಪದ ಜೀವವೈವಿಧ್ಯಗಳನ್ನು ತನ್ನೊಡಲೊಳಗಿಟ್ಟುಕೊಂಡ ಪಶ್ಚಿಮ ಘಟ್ಟದ ಕಾಳಿ ನದಿಯ ಪಕ್ಕದ ತಾಣದಲ್ಲೊಂದು ಸುತ್ತು 13



ಸರ್ಕಾರದ ಯೋಜನೆಯೊಂದು ಆಸಕ್ತರಿಂದ ಸಮರ್ಪಕವಾಗಿ ಅನುಷ್ಠಾನಗೊಂಡರೆ ಸಾಕು. ಅದರ ಫಲಿತಾಂಶವೇ ಯೋಜನೆಯ ಯಶಸ್ಸನ್ನು ಹೇಳುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ನಗರಸಭೆ ವ್ಯಾಪ್ತಿಯ ಕಲ್ಲೂಡಿಯ ಜನರು ಅತ್ಯಂತ ಕಡಿಮೆ ಬಂಡವಾಳ, ಹೆಚ್ಚು ಆದಾಯ ಎನ್ನುವ ಮಂತ್ರವನ್ನು ಜಪಿಸುತ್ತಿದ್ದಾರೆ. ಕಳೆದ ಮೂರೂವರೆ ದಶಕಗಳಿಂದ ಹಪ್ಪಳ ತಯಾರಿಕೆಯಲ್ಲಿ ತೊಡಗಿರುವ ಇಲ್ಲಿನ ಜನರು, ಆರ್ಥಿಕವಾಗಿ ಸಬಲರಾಗಿದ್ದಾರೆ. ಈ ಪ್ರದೇಶ ಸ್ವಸಹಾಯ ಗುಂಪಿನಂತೆ ಗೋಚರಿಸುತ್ತದೆ.

ಕಲ್ಲೂಡಿ ಹಪ್ಪಳ ಎಲ್ಲೆಲ್ಲೂ ಸಪ್ಪಳ!



• ಡಿ.ಎಂ.ಕುರ್ಕೆ ಪ್ರಶಾಂತ್

ಕಲ್ಲೂಡಿ, ಗೌರಿಬಿದನೂರು ತಾಲ್ಲೂಕು ಕೇಂದ್ರದ ಅಂಚಿನಲ್ಲಿರುವ ಗ್ರಾಮ. ಈಗ ನಗರದೊಳಗೆ ಸೇರಿ ನಗರಸಭೆಯ ವಾರ್ಡ್ ನಂಬರ್ 25 ಮತ್ತು 26ರ ಹಣೆಪಟ್ಟಿ ಹಚ್ಚಿಕೊಂಡಿದೆ. ಇಂತಿಪ್ಪ ಪ್ರದೇಶದಲ್ಲಿ ಇನ್ನೂ ಬೆಳಕು ಹರಿದಿರಲಿಲ್ಲ. ಮಬ್ಬುಗತ್ತಲು. ಚುಮುಚುಮು ಚಳಿ. ಅಲ್ಲಿನ ಬೀದಿಗಳಲ್ಲಿ ಹೆಜ್ಜೆ ಹಾಕುತ್ತಿದ್ದೆ. ಮನೆ ಮುಂದೆ ಒಲೆ ಹಚ್ಚಿ ದೊಡ್ಡ ತಪ್ಪಲೆಗಳನ್ನಿಟ್ಟು ಉಪ್ಪು, ಖಾರ, ಜೀರಿಗೆಯೊಂದಿಗೆ ಬೇಯಿಸುತ್ತಿರುವ ಅಕ್ಕಿಹಿಟ್ಟಿನ ಘಮಲು ಎಲ್ಲೆಡೆ ಅಡರಿಕೊಂಡಿತ್ತು. ಬೆಂದ ಅಕ್ಕಿಹಿಟ್ಟು ಉಂಡೆಯಾಗಿ, ಒತ್ತುಮಣೆ ಮೇಲೆ ಒತ್ತಿಸಿಕೊಂಡು ಹಪ್ಪಳವಾಗಿ ರೂಪಾಂತರಗೊಳ್ಳುತ್ತಿತ್ತು. ಹೀಗೆ ನಸುಕಿನಲ್ಲೇ ಅಲ್ಲಿನ ಬೀದಿಗಳಲ್ಲಿ ಸಾಗುತ್ತಾ ಹನುಮಂತಪ್ಪ ಅವರ ಮನೆಯ ತಾರಸಿ ಏರಿದ್ದೆ. ಅವರು ಹಪ್ಪಳ ಒತ್ತುತ್ತಾ ಕುಳಿತಿದ್ದರು. ಆ ಹಿರಿಯ ಜೀವದೊಂದಿಗೆ ಮಾತಿಗಿಳಿದೆ.

ಎಪ್ಪತ್ಮೂರರ ಪ್ರಾಯದ ಹನುಮಂತಪ್ಪ ಸಣ್ಣ ಹಿಡುವಳಿದಾರರು. ಇಬ್ಬರು ಹೆಣ್ಣು ಮಕ್ಕಳು. ಸ್ವಲ್ಪ ಜಮೀನಿತ್ತು. ಮೂರ್ನಾಲ್ಕು ದಶಕಗಳ ಹಿಂದೆ ರೇಷ್ಮೆ ಕೃಷಿ ಮಾಡುತ್ತಿದ್ದರು. ಬರ, ಮತ್ತಿತರ ಕಾರಣಗಳಿಂದ ಕೃಷಿ ಲಾಭದಾಯಕ ಅನಿಸಲಿಲ್ಲ. ಕುಟುಂಬ ನಿರ್ವಹಣೆಯೂ ಕಷ್ಟ ಎನ್ನುವ ದುಃಸ್ಥಿತಿ. ಅಂತಹ ದಿನಗಳಲ್ಲಿ ಇವರ ಕುಟುಂಬ ಹಪ್ಪಳ ಮಾಡಲು ಆರಂಭಿಸಿತು. ಆಮೇಲೆ ಇವರ ಬದುಕಿನ ದಿಕ್ಕೇ ಬದಲಾಯಿತು. 'ಈಗ ನೀವು ನಿಂತಿದ್ದೀರಲ್ಲ, ಈ ಮನೆ ಕಟ್ಟಿದ್ದೂ ಇದೇ ಹಪ್ಪಳದ ಆದಾಯದಿಂದ. ಇನ್ನೂ ಎರಡು ಮನೆಗಳನ್ನು ಕಟ್ಟಿಸಿದ್ದೇನೆ' ಎಂದು ತಾರಸಿಯಲ್ಲಿ ಒಣಗುತ್ತಿದ್ದ ಹಪ್ಪಳದತ್ತ ಕೈ ತೋರಿದರು ಹನುಮಂತಪ್ಪ.

ಈ ವ್ಯಾಪ್ತಿಯಲ್ಲಿ 800 ರಿಂದ 900 ಮನೆಗಳಿವೆ. ಅವುಗಳಲ್ಲಿ 600ಕ್ಕೂ ಹೆಚ್ಚು ಮನೆಗಳಲ್ಲಿ ಹಪ್ಪಳ ತಯಾರಿಸಲಾಗುತ್ತದೆ. ಹೆಚ್ಚಿನದಾಗಿ ಮಧ್ಯಮ ಮತ್ತು ಬಡ ಕುಟುಂಬಗಳು ವಾಸಿಸುತ್ತಿರುವ ಇಲ್ಲಿನ ಜನರ ಆದಾಯದ ಪ್ರಮುಖ ಮೂಲವೇ ಹಪ್ಪಳ.

ಕಲ್ಲೂಡಿಯಲ್ಲಿ ಹಪ್ಪಳ ಹೀಗೆ ಜೋರಾಗಿ ಸಪ್ಪಳ ಮಾಡಲು ಕಾರಣರಾದವರಲ್ಲಿ ಗಂಗಲಕ್ಷ್ಮಮ್ಮ ಪ್ರಮುಖರು. ಇವರು 1988 ರಲ್ಲಿ ಝಾನ್ಸಿ ರಾಣಿ ಆದರ್ಶ ಮಹಿಳಾ ಸಮಾಜ ಸ್ಥಾಪಿಸಿದರು. ಮಹಿಳೆಯರಿಗೆ ಹೊಲಿಗೆ ತರಬೇತಿ ಕೊಡಿಸಿದರು. ನಂತರ ಕೈಗಾರಿಕಾ ಇಲಾಖೆಯ 'ವಿಶ್ವ' ಯೋಜನೆ ಮತ್ತು 'ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ'ದ (ಐಆರ್‌ಡಿಪಿ) ಭಾಗವಾದ ಗ್ರಾಮೀಣ ಪ್ರದೇಶದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ (ಡ್ವಾಕ್ರಾ) ಯೋಜನೆಯಡಿ ಮಹಿಳೆಯರಿಗೆ ಗೃಹೋಪಯೋಗಿ ಆಹಾರ ಪದಾರ್ಥಗಳ ತಯಾರಿಕೆ ಬಗ್ಗೆ ತರಬೇತಿ ಕೊಡಿಸಿದರು. ಹಪ್ಪಳ, ಉಪ್ಪಿನಕಾಯಿ ಸೇರಿದಂತೆ ಗೃಹೋಪಯೋಗಿ ಉತ್ಪನ್ನಗಳು ಈ ಊರಿನಲ್ಲಿ ತಯಾರಾಗಲು ಮುನ್ನುಡಿ ಬರೆದರು.

ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸುವ ದೃಷ್ಟಿಯಿಂದ ತಾಲ್ಲೂಕು ಮಹಿಳಾ ಮಂಡಳಿಗಳ ಒಕ್ಕೂಟ ಸ್ಥಾಪಿಸಿದರು. ಮಾಜಿ ಶಾಸಕಿ ಜ್ಯೋತಿ ರೆಡ್ಡಿ ಅಧ್ಯಕ್ಷೆ, ಗಂಗಲಕ್ಷ್ಮಮ್ಮ ಕಾರ್ಯದರ್ಶಿ. ಈ ರೀತಿ ಕಲ್ಲೂಡಿಯಲ್ಲಿ ಮಹಿಳೆಯರ ಆರ್ಥಿಕಾಭಿವೃದ್ಧಿ ಮತ್ತು ಸ್ವಾವಲಂಬನೆಯ ಆಶಯದೊಂದಿಗೆ ಆರಂಭವಾದ ಹಪ್ಪಳ ತಯಾರಿಕೆ, ಈಗ ಗ್ರಾಮದ ಬಹುತೇಕ ಮನೆಗಳನ್ನು ಬೆಳಗಿದೆ. ಮಹಿಳೆಯರು, ಪುರುಷರು, ಮಕ್ಕಳು, ಇಷ್ಟೇ ಏಕೆ ಸರ್ಕಾರಿ ನೌಕರರೂ ಹಪ್ಪಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

'ನಮ್ಮೂರ ಹೆಣ್ಣು ಮಕ್ಕಳನ್ನು ಬೇರೆ ಕಡೆಗಳಿಗೆ ಮದುವೆ ಮಾಡಿಕೊಟ್ಟಿದ್ದೇವೆ. ಅವರು ಅಲ್ಲಿಯೂ ಹಪ್ಪಳ ತಯಾರಿಕೆ ಮುಂದುವರೆಸಿದ್ದಾರೆ. ನಮ್ಮೂರಿಗೆ ಸೊಸೆಯಾಗಿ ಬಂದವರೂ ಹಪ್ಪಳ ತಯಾರಿಸುವುದನ್ನು ಕಲಿತಿದ್ದಾರೆ. ಜ್ಯೋತಿ ರೆಡ್ಡಿ ಅವರು ಶಾಸಕಿಯಾಗಿದ್ದಾಗ ಶಾಸಕರ ಭವನದ ಕ್ಯಾಂಟೀನ್‌ನಲ್ಲಿಯೂ ಕಲ್ಲೂಡಿ ಹಪ್ಪಳ ಸ್ಥಾನ ಪಡೆದಿತ್ತು. ರಾಜ್ಯದ ಜನತಾ ಬಜಾರ್‌ಗಳಿಗೂ ಹಪ್ಪಳ ಪೂರೈಸಿದ್ದೇವೆ. ಇದು ನಮ್ಮ ಹಪ್ಪಳದ ಪ್ರಚಾರಕ್ಕೆ ಕಾರಣವಾಯಿತು' ಎನ್ನುತ್ತಾರೆ ಗಂಗಲಕ್ಷ್ಮಮ್ಮ.

'ಹಪ್ಪಳಗಳನ್ನು ಮಾರಾಟ ಮಾಡುವಾಗ ಅವಮಾನಗಳನ್ನೂ ಅನುಭವಿಸಿದ್ದೇವೆ. ಆರಂಭದ ದಿನಗಳಲ್ಲಿ ಮಾರುಕಟ್ಟೆಗೆ ಬಹಳ ಕಷ್ಟಪಟ್ಟಿದ್ದೇವೆ. ಈಗ ಎಲ್ಲರೂ ಅವರದ್ದೇ ಮಾರುಕಟ್ಟೆ ಕಂಡುಕೊಂಡಿದ್ದಾರೆ' ಎಂದು ಖುಷಿಯಿಂದ ಹೇಳಿದರು.

ವಿಶೇಷವೆಂದರೆ ಇಲ್ಲಿನ ಹಪ್ಪಳ ತಯಾರಿಕೆ ಬೃಹತ್ ಉದ್ಯಮದ ರೂಪ ಪಡೆದಿಲ್ಲ. ಯಂತ್ರಗಳು ಆವರಿಸಿಲ್ಲ. ಸಾಂಪ್ರದಾಯಿಕ ರೀತಿಯಲ್ಲಿಯೇ ಮನೆಗಳಲ್ಲಿ ಹಪ್ಪಳ ತಯಾರಿಕೆ ನಡೆಯುತ್ತಿದೆ. ಪ್ರತಿ ಮನೆಯಲ್ಲೂ ಅವರ ಶಕ್ತ್ಯಾನುಸಾರ ನಿತ್ಯ ಐದು, ಹತ್ತು ಕೆ.ಜಿ ಅಕ್ಕಿಹಿಟ್ಟಿನಿಂದ 25 ಕೆ.ಜಿ ಹಿಟ್ಟಿನವರೆಗೂ ಹಪ್ಪಳ ತಯಾರಿಸುತ್ತಾರೆ.

'ನಾನು ಮನೆ ಕಟ್ಟಿದೆ', 'ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿದೆ', 'ಮದುವೆ ಮಾಡಿದೆ', 'ಆಟೊ ಖರೀದಿಸಿದೆ'...ಹೀಗೆ ತಮ್ಮ ಬದುಕಿನ ಆರ್ಥಿಕ ಸಾಧನೆಯ ಶ್ರೇಯವನ್ನು ಹಪ್ಪಳಕ್ಕೆ ಸಮರ್ಪಿಸುವವರು ಮನೆ ಮನೆಯಲ್ಲೂ ಸಿಗುತ್ತಾರೆ.

'ನಾವು ಬಾಡಿಗೆ ಮನೆಯಲ್ಲಿ ವಾಸವಿದ್ದೇವೆ. ಜಮೀನಿಲ್ಲ. ಹಪ್ಪಳ ಇಲ್ಲದೇ ಹೋಗಿದ್ದರೆ ನಮ್ಮ ಪಾಡು ಹೇಳುವುದೇ ಕಷ್ಟವಾಗುತ್ತಿತ್ತು' ಎನ್ನುವ ಭಾಗ್ಯಮ್ಮ, 'ತಿಂಗಳಿಗೆ ಕನಿಷ್ಠ ₹15 ಸಾವಿರ ದುಡಿಮೆ ಆಗುತ್ತಿದೆ. ಮತ್ತಷ್ಟು ಗಳಿಸಲು ಅವಕಾಶವಿದೆ. ಆದರೆ ನಾವು ನಮ್ಮ ಕೈಯಲ್ಲಾದಷ್ಟು ಮಾತ್ರ ಮಾಡುತ್ತಿದ್ದೇವೆ. ಕೆಲವರು ಮನೆ ಬಾಗಿಲಿಗೆ ಬಂದು ಹಪ್ಪಳ ಖರೀದಿಸುತ್ತಾರೆ' ಎನ್ನುವ ಸರಸ್ವತಮ್ಮ ಅವರ ಮಾತುಗಳೇ ಕಲ್ಲೂಡಿಯ ಹಲವು ಮಹಿಳೆಯರ ಮಾತುಗಳಾಗಿವೆ.

ಓದಿಗೂ ಆಸರೆ

'ಆಗ ಬಿ.ಇಡಿ ಓದುತ್ತಿದ್ದೆ. ಮನೆಯಲ್ಲಿ ತುಂಬಾ ಬಡತನ. ಏನಾದರೂ ಮಾಡಿ ನಾನೇ ಹಣ ಸಂಪಾದಿಸಿ ಓದು ಪೂರ್ಣಗೊಳಿಸಬೇಕು ಎನ್ನುವ ಛಲವಿತ್ತು. ನಮ್ಮೂರಿನ ಒಬ್ಬರ ಬಳಿ ₹100ಕ್ಕೆ ಹಪ್ಪಳ ಖರೀದಿಸಿದೆ. ಅದನ್ನು ಬೆಂಗಳೂರಿನಲ್ಲಿ ₹ 300ಕ್ಕೆ ಮಾರಾಟ ಮಾಡಿದೆ. ಹಪ್ಪಳದಲ್ಲಿ ದುಡ್ಡಿದೆ ಎನ್ನುವುದು ಆಗಲೇ ಗೊತ್ತಾಯಿತು. ಅಲ್ಲಿಂದ ಹಪ್ಪಳದ ಕಾಯಕದಲ್ಲಿ ತೊಡಗಿದ್ದೇನೆ' ಎನ್ನುತ್ತಾರೆ ಮಂಜುನಾಥ್.

ಈಗ ಮಂಜುನಾಥ್ ನಿತ್ಯ 100 ಕೆ.ಜಿಯಷ್ಟು ಅಕ್ಕಿಹಿಟ್ಟಿನ ಹಪ್ಪಳ ತಯಾರಿಸುತ್ತಾರೆ. ಗ್ರಾಮದಲ್ಲಿ ಗುಡಿ ಕೈಗಾರಿಕೆ ರೀತಿಯಲ್ಲಿ ಹಪ್ಪಳ ತಯಾರಿಸುತ್ತಿರುವವರು ಇವರೊಬ್ಬರೇ. ಇವರ ಘಟಕದಲ್ಲಿ ನಿತ್ಯ ಹತ್ತು ಮಂದಿ ಕೆಲಸ ಮಾಡುತ್ತಾರೆ.

'ಮೊದಲಿಗೆ ಸಣ್ಣ ಪ್ರಮಾಣದಲ್ಲಿ ಹಪ್ಪಳ ತಯಾರಿಸುತ್ತಿದ್ದೆ. ಕ್ರಮೇಣ ದೊಡ್ಡ ಪ್ರಮಾಣಕ್ಕೆ ಕೈಹಾಕಿದೆ. ನಾನು ಓದಿ ಕೆಲಸ ಪಡೆದಿದ್ದು ಅಷ್ಟೇ ಅಲ್ಲ, ನನ್ನ ತಂಗಿಯರನ್ನು ಇದೇ ದುಡಿಮೆಯಿಂದಲೇ ಮದುವೆ ಮಾಡಿದೆ. ನನ್ನ ಮಗ ಖಾಸಗಿ ಕಂಪನಿಯಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾನೆ. ಇಲ್ಲಿಗೆ ಬಂದು ಕೆಲಸ ಮಾಡು, ಅವರಿಗಿಂತ ಹೆಚ್ಚು ಸಂಬಳ ಕೊಡುತ್ತೇನೆ ಎಂದು ಹೇಳಿದ್ದೇನೆ. ಹಪ್ಪಳದಲ್ಲಿ ಒಳ್ಳೆಯ ಆದಾಯವಿದೆ. ಗುಣಮಟ್ಟ ಕೊಡಬೇಕು ಅಷ್ಟೆ' ಎನ್ನುತ್ತಾರೆ ಮಂಜುನಾಥ್.

12ನೇ ಪುಟಕ್ಕೆ...



ದೊಡ್ಡೋರ್ ಜೊತೆ ಸೇರಿ ನಾವೂ ಹಪ್ಪ ಮಾಡ್ತೀವಿ....
ಚಿತ್ರಗಳು: ಬಿ.ಆರ್.ಮಂಜುನಾಥ್

ವೃದ್ಧರಿಗೆ ಉದ್ಯೋಗ

ವೃದ್ಧರಿಗೆ ದುಡಿಮೆ ಕಷ್ಟ ಎನ್ನುವ ಮಾತು ಇಲ್ಲಿ ಅಪವಾದ. ಪ್ರತಿ ಮನೆ ಅಂಗಳ ಅಥವಾ ತಾರಸಿಯಲ್ಲಿ ನಡೆಯುವ ಹಪ್ಪಳದ ಕೆಲಸದಲ್ಲಿ ಕನಿಷ್ಠ ಒಬ್ಬರಾದರೂ ವೃದ್ಧರು ತೊಡಗಿಸಿಕೊಂಡಿರುತ್ತಾರೆ. ಕೆಲವು ಕಡೆ ಹಿರಿಯ ಜೀವಗಳೇ ಪೂರ್ಣವಾಗಿ ಹಪ್ಪಳ ಸಿದ್ಧಗೊಸುತ್ತವೆ. ವೃದ್ಧಾಪ್ಯದಲ್ಲಿಯೂ ಸ್ವಾವಲಂಬನೆ ಮತ್ತು ಜೀವನೋತ್ಸಾಹದಿಂದ ದುಡಿಮೆಯಲ್ಲಿ ತೊಡಗಿಸಿಕೊಂಡಿರುವುದನ್ನು ಇಲ್ಲಿ ನೋಡುವುದೇ ಚೆಂದ.

'ಮನೆಯಲ್ಲಿ ಕುಳಿತು ಕಾಲಹರಣ ಮಾಡುವುದಕ್ಕಿಂತ ಇಲ್ಲಿ ಹಪ್ಪಳ ಒತ್ತುವ ಕೆಲಸ ಮಾಡುತ್ತೇನೆ' ಎನ್ನುವ ಹಿರಿಯರ ಸಂಖ್ಯೆ ಇಲ್ಲಿ ಬಹಳಷ್ಟಿದೆ.

ಹಪ್ಪಳ ಒತ್ತುವ ಕೆಲಸ ಬಹಳಷ್ಟು ಹಿರಿಯರಿಗೆ, ಹೆಣ್ಣು ಮಕ್ಕಳಿಗೆ ಉದ್ಯೋಗ ನೀಡಿದೆ. ಒಂದು ಸೀರೆ (ಒಂದು ಸೀರೆ ಹಾಸಿ ಅದರ ತುಂಬಾ ಹಪ್ಪಳ ಒತ್ತುವುದು) ಹಪ್ಪಳ ಒತ್ತಿದರೆ ₹30 ಕೂಲಿ ಸಿಗುತ್ತದೆ. ಬೆಳಿಗ್ಗೆ 6ರಿಂದ 10ರವರೆಗೆ ₹400ರಿಂದ ₹500 ಗಳಿಸಬಹುದು.



ಬೆಂಗಳೂರಿಗೆ ರೈಲಿನಲ್ಲಿ ಹೊರಟ ಕಲ್ಲೂಡಿ ಹಪ್ಪಳ



ಕಾಂಡ್ಲಾ ನಡುವೆ ನಡಿಗೆಗೆ ಹೀಗೊಂದು ಪಥ...

ಕಾಂಡ್ಲಾ ಕಾಡಿನಲ್ಲೊಂದು ಸುತ್ತು...

• ಎಚ್.ಎಸ್. ನವೀನಕುಮಾರ್ ಹೊಸದುರ್ಗ

ಘಟ್ಟ ಪ್ರದೇಶಗಳಿಂದ ಹರಿದು ಬಂದು ಸಮುದ್ರ ಸೇರುವ ನದಿ ಸೃಷ್ಟಿಸುವ ಜೀವ ಪರಿಸರ ಅತ್ಯಂತ ಸೂಕ್ಷ್ಮ ಹಾಗೂ ವಿಶಿಷ್ಟವಾದುದು. ಈ ಪ್ರದೇಶವನ್ನು ಅಳಿವೆಗಳೆಂದು ಕರೆಯುತ್ತಾರೆ. ನದಿಯ ಸಿಹಿ ನೀರು ಹಾಗೂ ಸಮುದ್ರದ ಉಪ್ಪು ನೀರು ಇವೆರಡೂ ಮಿಶ್ರಣವಾಗುವ, ಈ ಜೌಗು ಪ್ರದೇಶದ ಹಿನ್ನೀರಿಗೆ 'ಬ್ರಾಕಿಶ್ ವಾಟರ್' ಎಂದು ಕರೆಯಲಾಗುತ್ತದೆ.

ಈ ಪ್ರದೇಶದಲ್ಲಿ ದಿನಕ್ಕೆ ಎರಡು ಬಾರಿ ಸಂಭವಿಸುವ ಸಮುದ್ರದ ಉಬ್ಬರವಿಳಿತದಿಂದ ಕೆಸರು ಮಿಶ್ರಿತ ಜೌಗು ಪ್ರದೇಶ ಸೃಷ್ಟಿಯಾಗಿರುತ್ತದೆ. ಇಲ್ಲಿ ಕಂಡು ಬರುವ ಸಸ್ಯರಾಶಿಗೆ 'ಕಾಂಡ್ಲಾ ವನ' ಎಂದು ಕರೆಯುತ್ತಾರೆ. ಇಲ್ಲಿನ ಸಸ್ಯಗಳು ಅತ್ಯಂತ ವಿಶಿಷ್ಟ ಬಗೆಯವು. ಸಾಧಾರಣವಾಗಿ ನೆಲದ ಮೇಲಿರುವ ಸಸ್ಯಗಳಲ್ಲಿ ಬೇರು ಭೂಮಿಯ ಒಳಗಿದ್ದರೆ, ಇಲ್ಲಿನ ಸಸ್ಯಗಳು ನೆಲದಿಂದ ಹೊರಗೆ ಚಾಚಿಕೊಂಡಿರುವ ಹಾಗೂ 'ಆಸರೆ ಬೇರು' ಹಾಗೂ 'ಸಿಕ್ಕು ಬೇರು' ಗಳನ್ನು ಹೊಂದಿರುತ್ತವೆ.

ಈ ಕಾಂಡ್ಲಾ ಗಿಡ–ಮರಗಳು 'ನ್ಯುಮಟೋ ಫೋರ್ಸ್' (Pneumatophores) ಎಂಬ ಮೇಲ್ಮುಖ ಬೇರುಗಳನ್ನು ಹೊಂದಿದ್ದು ಇವನ್ನು 'ಉಸಿರಾಡುವ ಬೇರುಗಳು' ಎಂದು ಕರೆಯುತ್ತಾರೆ.


ಇಂತಹ ವಿಶಿಷ್ಟವಾದ ಹಾಗೂ ಜೀವ ಪರಿಸರದಲ್ಲಿರುವ ಅತ್ಯಂತ ಮುಖ್ಯವಾದ ಜಲ ವನರಾಶಿಯ ಪರಿಚಯ ಮಾಡಿಕೊಡುವ ಅಪರೂಪದ ಪ್ರಯತ್ನವನ್ನು ಕರ್ನಾಟಕ ಅರಣ್ಯ ಇಲಾಖೆಯು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಮಾಡಿದೆ. ಇಲ್ಲಿರುವ 'ಶರಾವತಿ ಕಾಂಡ್ಲಾ ನಡಿಗೆ' ಖಂಡಿತವಾಗಿಯೂ ನಮ್ಮನ್ನು ಬೇರೆ ಲೋಕಕ್ಕೇ ಒಯ್ಯುತ್ತದೆ. ಕಾಂಡ್ಲಾ ವನದೊಳಗೆ ಹಾಕಲಾಗಿರುವ ಸುಮಾರು ಒಂದು ಕಿಲೋಮೀಟರ್‌ನಷ್ಟಿರುವ ಮರದ ಹಲಗೆಯ ಸೇತುವೆಯ ಮೇಲೆ ನಡೆಯುತ್ತಾ, ಪಕ್ಕದಲ್ಲಿಯೇ ಆಕ್ಟೋಪಸ್‌ನಂತೆ, ತಮ್ಮ ಬೇರುಗಳನ್ನು ವಿಶಾಲವಾಗಿ ಹರಡಿಕೊಂಡು ನಿಂತಿರುವ ಕಾಂಡ್ಲಾ ವೃಕ್ಷಗಳ ಪಕ್ಕದಲ್ಲಿಯೇ ನಡಿಗೆ ಮಾಡಬಹುದು.

13ನೇ ಪುಟಕ್ಕೆ...



ಕಾಂಡ್ಲಾ ಲೋಕಕ್ಕೆ ಸ್ವಾಗತ

ಪಾಪನಾಶಿಯೆಂಬ ಯೋಗ ಗ್ರಾಮ



ಯೋಗ ನಿರತ ಪೂರ್ಣಿಮಾ ಕಟಗ್ಗಾರ್

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಕಪ್ಪತ್ತಗುಡ್ಡದ ಸೆರಗಿನಲ್ಲಿರುವ ಪಾಪನಾಶಿ ಗ್ರಾಮ ಗದಗದಿಂದ 15 ಕಿಲೋಮೀಟರ್ ದೂರದಲ್ಲಿದೆ. ಈ ಗ್ರಾಮದ ಪೂರ್ಣಿಮಾ ಕಟಗ್ಗಾರ ಕದಾಂಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಎಂಟನೇ ತರಗತಿ ಓದುತ್ತಿದ್ದಾಳೆ. ಐದು ವರ್ಷಗಳ ನಿರಂತರ ಯೋಗಾಭ್ಯಾಸದ ಕಾರಣ ಆಕೆಯ ದೇಹ ಬಿಲ್ಲಿನಂತೆ ಬಾಗುತ್ತದೆ. ಗಂಡಭೇರುಂಡಾಸನ, ವೃಶ್ಚಿಕಾಸನ, ಹನುಮಾಸನ, ಮಯೂರಾಸನದಂತಹ ಹಲವು ಬಗೆಯ ಕಠಿಣ ಆಸನಗಳನ್ನು ಸಲೀಸಾಗಿ ಮಾಡುತ್ತಾಳೆ.

ಪೂರ್ಣಿಮಾ ಒಬ್ಬಳಷ್ಟೇ ಅಲ್ಲ, ಪಾಪನಾಶಿ ಗ್ರಾಮದ ಹಲವು ಮಕ್ಕಳು ಇಂತಹ ಕಠಿಣ ಆಸನಗಳನ್ನು ಲೀಲಾಜಾಲವಾಗಿ ಮಾಡುತ್ತಾರೆ. ರಾಜ್ಯ, ರಾಷ್ಟ್ರ ಮಟ್ಟದ ವಿವಿಧ ಯೋಗಾಸನ ಸ್ಪರ್ಧೆಗಳಲ್ಲಿ ಭಾಗವಹಿಸಿ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ. ಐದು ಮಂದಿ ಯೋಗಪಟುಗಳು ಆಳ್ವಾಸ್ ವಿದ್ಯಾಸಂಸ್ಥೆಯಲ್ಲಿ ಉಚಿತ ಶಿಕ್ಷಣದ ಸೌಲಭ್ಯಕ್ಕೆ ಆಯ್ಕೆಯಾಗಿದ್ದಾರೆ.

ಈ ಗ್ರಾಮದ ಬಹುತೇಕ ಮನೆಗಳ ಷೋಕೇಸುಗಳಲ್ಲಿ ಪದಕಗಳು, ಪಾರಿತೋಷಕಗಳು ತುಂಬಿವೆ. ಇಲ್ಲಿಯ ಜನರ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಯೋಗಕ್ಕೆ ಸಂಬಂಧಿಸಿದ ವಿಡಿಯೊಗಳು ಹೆಚ್ಚು ಹರಿದಾಡುತ್ತವೆ. ಇಲ್ಲಿನ ಮಕ್ಕಳು ರೀಲ್ಸ್‌ಗೆ ಬದಲಾಗಿ ಯೋಗಕ್ಕೆ ಸಂಬಂಧಿಸಿದ ವಿಡಿಯೊಗಳಿಗೆ ಹೆಚ್ಚಿನ ಲೈಕ್ ಒತ್ತುತ್ತಾರೆ. ಗ್ರಾಮದ ಮಹಿಳೆಯರು ಬಿಡುವಿನ ವೇಳೆ ಶಾಲಾ ಆವರಣ, ಜಮೀನಿನ ಬದು, ರಸ್ತೆಬದಿಯಲ್ಲಿ ಯೋಗಾಭ್ಯಾಸ ಮಾಡುವ ದೃಶ್ಯ ಆಗಾಗ ಕಾಣಬಹುದು.

ಇಲ್ಲಿನ ಆಯುರ್ವೇದ ಆಸ್ಪತ್ರೆಯಲ್ಲಿ ತಿಂಗಳಿಗೊಮ್ಮೆ ನಡೆಯುವ 'ಜೀವನಶೈಲಿ' ಕಾರ್ಯಕ್ರಮದಲ್ಲಿ ಬಿಪಿ, ಶುಗರ್ ರೋಗಿಗಳಿಗೆ ವಿಶೇಷವಾಗಿ ಯೋಗಾಭ್ಯಾಸ ನಡೆಯುತ್ತದೆ.

ಆಯುರ್ವೇದ ಮತ್ತು ಯೋಗ ಪದ್ಧತಿಯನ್ನು ಗ್ರಾಮೀಣ ಜನತೆಗೆ ತಲುಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಆಯುಷ್ಮಾನ್ ಭಾರತ್ ಹಾಗೂ ರಾಷ್ಟ್ರೀಯ ಆಯುಷ್ ಅಭಿಯಾನ ಆರಂಭಿಸಿತು. ಈ ಯೋಜನೆ ಅಡಿ 2020ರಲ್ಲಿ ಪಾಪನಾಶಿಯಲ್ಲಿ ಯೋಗ ಶಿಕ್ಷಣ ಪ್ರಾರಂಭಗೊಂಡಿತು. ಇಲ್ಲಿನ ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಡಾ. ಅಶೋಕ ಮತ್ತಿಗಟ್ಟಿ ಯೋಗ ಸಾಧಕರೂ ಹೌದು. ಇವರ ಆಸಕ್ತಿಯ ಕಾರಣದಿಂದಲೇ ಪಾಪನಾಶಿಯೆಂಬ ಸಾಮಾನ್ಯ ಗ್ರಾಮ ಇದೀಗ ಯೋಗ ಗ್ರಾಮವಾಗಿದೆ.

ಗ್ರಾಮದ ಜನರಲ್ಲಿ ಯೋಗದ ಕುರಿತು ಜಾಗೃತಿ ಮೂಡಿಸಲು ಮತ್ತಿಗಟ್ಟಿ ಅವರ ತಂಡ ಬಹಳಷ್ಟು ಶ್ರಮವಹಿಸಿತು. ಆರಂಭದಲ್ಲಿ ಮಹಿಳೆಯರು ಮನೆಗೆಲಸ, ಹೊಲಗೆಲಸದ ಕಾರಣ ನೀಡಿದರು. ಗಂಡಸರು ದುಡಿಮೆಯ ನೆಪ ಹೇಳಿದರು. ಆದರೂ, ಅಂತಿಮವಾಗಿ ಜನರು ಬಿಡುವಿನ ಸಮಯದಲ್ಲಿ ಯೋಗ ಕಲಿಯುವ ಮನಸ್ಸು ಮಾಡುವಂತೆ ಪ್ರೇರೇಪಿಸಲಾಯಿತು.

ಹೀಗಾಗಿಯೇ 2020ರಲ್ಲಿ ಈ ಗ್ರಾಮದಲ್ಲಿ ಯೋಗ ಚಟುವಟಿಕೆ ಉತ್ತುಂಗದಲ್ಲಿತ್ತು. ಪ್ರತಿದಿನ ಬೆಳಿಗ್ಗೆ ಮೂರು, ಸಂಜೆ ಮೂರು ಬ್ಯಾಚ್‌ನಲ್ಲಿ ಯೋಗಾಭ್ಯಾಸ ನಡೆದವು. ಮಕ್ಕಳು, ಮಹಿಳೆಯರು ಯೋಗಾಭ್ಯಾಸಕ್ಕೆ ಹೆಚ್ಚಿನ ಆಸಕ್ತಿ ತೋರಿಸಿದರು. ಮಹಿಳೆಯರಿಗಾಗಿಯೇ ಪ್ರತ್ಯೇಕ ಬ್ಯಾಚ್ ನಡೆಯಿತು. ಆದರೆ, ಮಾರ್ಚ್‌ನಲ್ಲಿ ಲಾಕ್‌ಡೌನ್ ಘೋಷಣೆ ಆಯಿತು. ಆಗ ವೇಗಕ್ಕೆ ತಡೆಬಿದ್ದಿತು.


ಕೋವಿಡ್ ಭಯ ದೂರವಾದ ನಂತರ ಮಕ್ಕಳ ಯೋಗಾಭ್ಯಾಸ ಎಂದಿನಂತೆ ಆರಂಭಗೊಂಡಿತು. ಸಂಘ ಸಂಸ್ಥೆಗಳು ನಡೆಸುವ ಯೋಗ ಸ್ಪರ್ಧೆಗಳಿಗೆ ಮಕ್ಕಳನ್ನು ಕಳುಹಿಸಿಕೊಡಲು ಮತ್ತಿಗಟ್ಟಿ ಶ್ರಮಿಸಿದರು. ಸ್ಪರ್ಧೆಗಳಲ್ಲಿ ಭಾಗವಹಿಸಿದ ಮಕ್ಕಳು ಬಹುಮಾನಗಳನ್ನೂ ತಂದರು. ಅವರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಊರಿನ ಯುವಕ ಮಂಡಳದಿಂದ ದೊಡ್ಡ ಕಾರ್ಯಕ್ರಮ ಏರ್ಪಡಿಸಿ ಯೋಗ ಪಟುಗಳನ್ನು ಸನ್ಮಾನಿಸುವ ಮೂಲಕ ಅಶೋಕ ಮತ್ತಿಗಟ್ಟಿ ಅವರು ಊರಿನ ಜನರಲ್ಲಿ ಯೋಗದ ಬಗ್ಗೆ ಆಸಕ್ತಿಯನ್ನು ಮತ್ತಷ್ಟು ಬೆಳೆಸುವ ಕೆಲಸ ಮಾಡಿದರು.

ಅಕ್ಕಪಕ್ಕದೂರಿನ ಮಕ್ಕಳು ಬಿಡುವಿನ ಸಮಯವನ್ನು ಆಟಕ್ಕೆ ಮೀಸಲಿಟ್ಟರೆ, ಪಾಪನಾಶಿಯ ಚಿಣ್ಣರು ಯೋಗ ಕಲಿಕೆಗೆ ಆಸಕ್ತಿ ತೋರುತ್ತಾರೆ. ಪ್ರತಿದಿನ ಸಂಜೆ 5 ಗಂಟೆ ಆಗುತ್ತಿದ್ದಂತೆ ಪುಟಾಣಿ ಮಕ್ಕಳಿಂದ ಹಿಡಿದು ಹೈಸ್ಕೂಲು, ಕಾಲೇಜು ಓದುವ ವಿದ್ಯಾರ್ಥಿಗಳೆಲ್ಲರೂ ಒಂದೆಡೆ ಸೇರುತ್ತಾರೆ. ಒಂದು ಗಂಟೆಗೂ ಹೆಚ್ಚು ಸಮಯ ಯೋಗಾಭ್ಯಾಸ ಮಾಡುತ್ತಾರೆ. 2020ರಿಂದಲೂ ಈ ಅಭ್ಯಾಸ ತಪ್ಪದೇ ನಡೆದು ಬಂದಿದೆ. ಹಾಗಾಗಿ, ಯೋಗಾಭ್ಯಾಸ ಮಾಡುವ ಈ ಊರಿನ ಹುಡುಗರು, ಹೆಣ್ಣುಮಕ್ಕಳು ಆರೋಗ್ಯದಿಂದ ಇದ್ದಾರೆ.

ಮಹಿಳೆಯರು ಯೋಗದ ಬಗ್ಗೆ ಆಸಕ್ತಿ ಬೆಳೆಸಿಕೊಂಡಿದ್ದರಿಂದ ಆರೋಗ್ಯದಲ್ಲಿ ಸಾಕಷ್ಟು ಬದಲಾವಣೆ ಕಂಡುಬಂದಿದೆ. ಬಹಳಷ್ಟು ಮಹಿಳೆಯರ ಬೊಜ್ಜು ಕರಗಿದೆ. ತೂಕ ಇಳಿದಿದೆ. ಮಧುಮೇಹ, ರಕ್ತದೊತ್ತಡ ನಿಯಂತ್ರಣಕ್ಕೆ ಬಂದಿದೆ. ಚಿಕಿತ್ಸೆ ಜತೆಗೆ ಯೋಗದ ಅವಶ್ಯಕತೆ ಇರುವವರನ್ನು ಗುರುತಿಸಿ, ಅವರಿಗೆ ಯೋಗಾಸನ ಹೇಳಿಕೊಡಲಾಗುತ್ತದೆ.

ಯೋಗ ಶಿಕ್ಷಕಿ ಸುಧಾ ಪಾಟೀಲ ಮಕ್ಕಳಿಗೆ ಆಸನ ಮತ್ತು ಪ್ರಾಣಾಯಾಮ ಹೇಳಿಕೊಡುತ್ತಾರೆ. ಚಿಕ್ಕಮಕ್ಕಳಿಗೆ ಮಂಡೂಕಾಸನ, ಶಶಾಂಕಾಸನ, ಪ್ರಾಣಾಯಾಮ, ಮಕರಾಸನ, ವಜ್ರಾಸನ, ಪದ್ಮಾಸನದಂತಹ ಸರಳ ಆಸನಗಳನ್ನು ಹೇಳಿಕೊಡುತ್ತಾರೆ. ನಾಲ್ಕೈದು ವರ್ಷಗಳ ಮಕ್ಕಳು ಈ ಎಲ್ಲ ಆಸನಗಳ ಹೆಸರನ್ನು ನೆನಪಿನಲ್ಲಿಟ್ಟುಕೊಂಡಿರುವುದು ವಿಶೇಷ. ದೊಡ್ಡವರು ಕಠಿಣ ಆಸನಗಳಾದ ಗಂಡಭೇರುಂಡಾಸನ, ಪರಿವೃತ್ತ ಉಪವಿಷ್ಟಕೋನಾಸನ, ಮಯೂರಾಸನ, ಕೈಲಾಸಾಸನ, ಮರುಡಾಸನ, ಮಲಯಾಸನ ಸೇರಿದಂತೆ ವಿವಿಧ ಆಸನಗಳನ್ನು ಪ್ರತಿನಿತ್ಯ ಅಭ್ಯಾಸ ಮಾಡುತ್ತಾರೆ.

13ನೇ ಪುಟಕ್ಕೆ...



ಡಾ. ಅಶೋಕ ಮತ್ತಿಗಟ್ಟಿ



ಯೋಗಾಭ್ಯಾಸದಲ್ಲಿ ತೊಡಗಿರುವ ಮಕ್ಕಳು

ಗೋಕುಲದಲ್ಲಿ ಸಂಗೀತಾಮೃತ ಧಾರೆ

ದೀಪಾವಳಿ ಸಂಗೀತೋತ್ಸವದ ಜೊತೆಯಲ್ಲಿ ವರ್ಷದಲ್ಲಿ ಹಲವು ಬಾರಿ ಸಂಗೀತ ಕಛೇರಿಗಳನ್ನು ಏರ್ಪಡಿಸುತ್ತಿರುವ ಕಾಸರಗೋಡು ಜಿಲ್ಲೆಯ ಗೋಕುಲಂ ಗೋಶಾಲೆಯಲ್ಲಿ ಶಾಸ್ತ್ರೀಯ ನೃತ್ಯದ ವೈಶಾಖ ನಟನವೂ ಪ್ರತಿ ವರ್ಷ ನಡೆಯುತ್ತದೆ. ಈ ಮೂಲಕ ಪ್ರಖ್ಯಾತ ಕಲಾವಿದರ ಕೂಡುವಿಕೆ ಹಾಗೂ ಸಹೃದಯರಿಗೆ ಮುದನೀಡುವ ಕಲಾಕೇಂದ್ರವಾಗಿ ಈ ಪ್ರದೇಶ ಮಾರ್ಪಟ್ಟಿದೆ.

• ವಿಕ್ರಂ ಕಾಂತಿಕೆರೆ

ಕರ್ನಾಟಕ ಸಂಗೀತದ ವಿದುಷಿ–ವಿದ್ವಾನರ ಸ್ವರಾಲಾಪ ಮತ್ತು ಲಯವಿನ್ಯಾಸದ ಸೊಗಸಿನ ಜೊತೆಯಲ್ಲಿ ವಿಳಂಬಿತ್–ಧೃತ್ ಗತ್‌ಗಳಲ್ಲಿ ಹಿಂದುಸ್ತಾನಿ 'ಪಂಡಿತ'ರ ಖಯಾಲ್, ಚೀಜ್‌ಗಳ ಹೊನಲು. ವೀಣೆ, ಸಿತಾರ್, ಸರೋದ್‌ನ ಝೇಂಕಾರದಲ್ಲಿ ತೇಲಿ ಕೊಳಲು, ವಯಲಿನ್, ಮ್ಯಾಂಡೊಲಿನ್ ನಾದಸಂಗಮದಲ್ಲಿ ಮಿಂದವರಿಗೆ ಡ್ರಮ್‌ನ ಮಾಯಾಲೋಕ, ಫ್ಯೂಜನ್‌ನ ರಂಗು...

ಗಡಿನಾಡು ಕಾಸರಗೋಡಿನ ಪೆರಿಯದಲ್ಲಿರುವ ಬೇಕಲ್ ಗೋಕುಲಂ ಗೋಶಾಲೆ ಆವರಣದಲ್ಲಿ ಪ್ರತಿವರ್ಷ ದೀಪಾವಳಿ ವೇಳೆ ಸಂಗೀತದ ದೀವಳಿಗೆಗಳು ಬೆಳಗುವ ಪರಿ ಇದು.

ಉತ್ತರ ಕನ್ನಡ ಜಿಲ್ಲೆಯ ಕರ್ಕಿ ಮೂಲದ ಕೆಮಿಕಲ್ ಬಯಾಲಜಿ ಪದವೀಧರೆ ನಾಗರತ್ನಾ ಮತ್ತು ಕಾಸರಗೋಡಿನ ವಿಷ್ಣುಪ್ರಸಾದ್ ಹೆಬ್ಬಾರ್ ದಂಪತಿ ಗೋವುಗಳ ಸೇವೆಗಾಗಿ 2017ರಲ್ಲಿ ನಿರ್ಮಿಸಿದ್ದು ಗೋಕುಲಂ ಗೋಶಾಲೆ. ನಂತರ ಅಲ್ಲಿ ಕಲಾಪೋಷಣೆ ಆರಂಭವಾಯಿತು. ಬೇಸಿಗೆಯಲ್ಲಿ ರಸಿಕರ ಹೃದಯ ತಂಪಾಗಿಸಲು 'ವೈಶಾಖ ನಟನಂ' ನೃತ್ಯೋತ್ಸವ ಆಯೋಜಿಸುವ ಇಲ್ಲಿ ಸಂಗೀತದ ಮುಖ್ಯ ಕಾರ್ಯಕ್ರಮ ದೀಪಾವಳಿ ಸಂಗೀತೋತ್ಸವ. ಶ್ರೀಕೃಷ್ಣ ಜನ್ಮಾಷ್ಟಮಿ ಸೇರಿದಂತೆ ಪ್ರತಿವರ್ಷ ಸಣ್ಣ ಪ್ರಮಾಣದ ಕೆಲವು ಸಂಗೀತ ಕಛೇರಿಗಳೂ ನಡೆಯುತ್ತವೆ. ಈ ಎಲ್ಲ ಕಾರ್ಯಕ್ರಮಗಳಲ್ಲೂ ಎಳೆಯ ಕಲಾವಿದರಿಂದ ಹಿಡಿದು ಖ್ಯಾತನಾಮರ 'ಸ್ವರ'ಸೇವೆ ನಡೆಯುತ್ತದೆ.

ಗಾಯಕರಾದ ಟಿ.ವಿ ಗೋಪಾಲಕೃಷ್ಣನ್, ಶ್ರೀನಿವಾಸನ್, ವಿದ್ಯಾಭೂಷಣ, ವಿನೀತ್ ಪುರವಂಕರ, ಆಶಾ ಪುರವಂಕರ, ಮೇಧಾ ವಿದ್ಯಾಭೂಷಣ, ಕಾಂಚನಾ ಸಹೋದರಿಯರು, ವೀಣಾ ವಾದಕರಾದ ಎ.ಅನಂತಪದ್ಮನಾಭನ್, ರಾಜೇಶ್ ವೈದ್ಯ, ಮುಡಿಕೊಂಡನ್ ರಮೇಶ್, ಪಾವನಾ ಆಚಾರ್, ಯುವ ವೇಣು ವಾದಕ ಜೆ.ಎ ಜಯಂತ್, ವಯಲಿನ್ ವಾದಕರಾದ ವಿಠ್ಠಲ ರಾಮಮೂರ್ತಿ, ಚಾರುಲತಾ ರಾಮಾನುಜಂ, ಗಂಗಾ ಶಶಿಧರನ್, ಡ್ರಮ್ಮರ್ ಶಿವಮಣಿ... ಹೀಗೆ ಇಲ್ಲಿ ನಾದತರಂಗ ಸೃಷ್ಟಿಸುವ ಕಲಾವಿದರ ಪಟ್ಟಿ ದೊಡ್ಡದಿದೆ.

'ಗೋಕುಲಂ'ನಲ್ಲಿ ಕಾರ್ಯಕ್ರಮ ನೀಡುವ ಉಮೇದು ಅಧಿಕವಾಗುತ್ತಿದ್ದಂತೆ ಪ್ರತಿವರ್ಷ ಸಲ್ಲಿಕೆಯಾಗುವ ಅರ್ಜಿಗಳ ಸಂಖ್ಯೆಯೂ ಹೆಚ್ಚುತ್ತಿದೆ. 'ಎಲ್ಲರಿಗೂ ಅವಕಾಶ ಒದಗಿಸುವ ಉದ್ದೇಶದಿಂದ ಕಛೇರಿಗಳ ಸಂಖ್ಯೆ, ದಿನಗಳ ಸಂಖ್ಯೆ ಮತ್ತು ಸಮಯವನ್ನು ವಿಸ್ತರಿಸುತ್ತಾ ಹೋಗುತ್ತಿದ್ದೇವೆ. ದೀಪಾವಳಿ ಸಂಗೀತೋತ್ಸವ ಐದು ವರ್ಷಗಳಿಂದ ನಡೆಯುತ್ತಿದೆ. ಆರಂಭದಲ್ಲಿ ಮೂರು ದಿನ, ನಂತರದ ವರ್ಷ ಆರುದಿನ, ಆಮೇಲೆ ಒಂಬತ್ತು ದಿನ ಇದ್ದ ಕಾರ್ಯಕ್ರಮವನ್ನು ಈ ಬಾರಿ ಹದಿಮೂರು ದಿನಗಳಿಗೆ ವಿಸ್ತರಿಸಬೇಕಾಗಿ ಬಂದಿದೆ. ಮೊದಮೊದಲು ಬೆಳಿಗ್ಗೆ 9ರಿಂದ ಸಂಜೆ 6 ಗಂಟೆಯವರೆಗೆ ಕಛೇರಿ ನಡೆಸಲಾಗುತ್ತಿತ್ತು. ಈಗ ಬೆಳಿಗ್ಗೆ 9ರಿಂದ ರಾತ್ರಿ 9ರ ವರೆಗೆ ನಡೆಸಬೇಕಾಗಿ ಬಂದಿದೆ' ಎಂದು ವಿಷ್ಣುಪ್ರಸಾದ್ ಹೆಬ್ಬಾರ್ ತಿಳಿಸಿದರು.

ಕೇಳಿ ಕೇಳಿ ಸಂಗೀತ

ಈ ಬಾರಿಯ ದೀಪಾವಳಿ ಸಂಗೀತೋತ್ಸವದ ಎರಡನೇ ದಿನ ಒಂಬತ್ತು ಕೃತಿಗಳ ಬಿಡುಗಡೆಯ ಸಂಭ್ರಮವಿತ್ತು. ವಿಷ್ಣುಪ್ರಸಾದ್ ಹೆಬ್ಬಾರ್ ಅವರು ಲಾವಂಗಿ, ಚಕ್ರವಾಕ, ಆನಂದಭೈರವಿ, ಧನ್ಯಾಸಿ, ಆರಭಿ, ಹಂಸಧ್ವನಿ, ವಸಂತ, ಶ್ರೀರಾಗಂ ಮತ್ತು ಹಂಸನಾದ ರಾಗಗಳಲ್ಲಿ ರಚಿಸಿದ ನವಗ್ರಹ ಕೀರ್ತನೆಗಳನ್ನು ವೆಳ್ಳಿಕೋತ್ ವಿಷ್ಣು ಭಟ್ ಹಾಡಿ ಕರ್ನಾಟಕ ಸಂಗೀತದ ಭಂಡಾರಕ್ಕೆ ಸೇರ್ಪಡೆಗೊಳಿಸಿದರು. 'ಗೋಕುಲಂ'ನ ಸಂಗೀತ ಪರಿಸರದಲ್ಲೇ ಕಲೆತದ್ದರಿಂದ ಉಂಟಾದ ಪ್ರೇರಣೆಯೇ ಈ ಕೃತಿಗಳ ಉದಯಕ್ಕೆ ಕಾರಣ ಎನ್ನುತ್ತಾರೆ ವಿಷ್ಣುಪ್ರಸಾದ್. ಸಂಗೀತ ಕೇಳಿದ, ಸಂಗೀತಗಾರರ ಜೊತೆ ಒಡನಾಡಿದ ನಂತರ ತಮ್ಮ ವ್ಯಕ್ತಿತ್ವ ಸಂಗೀತಮಯವಾಗಿದೆ ಎನ್ನುವ ಅವರು 300ರಷ್ಟು ಕೃತಿಗಳನ್ನು ರಚಿಸಲು ಇಲ್ಲಿನ ವಾತಾವಣರ ಪೂರಕವಾಗಿ ನಿಂತಿದೆ ಎಂದು ಹೇಳುತ್ತಾರೆ.

'ಇಲ್ಲಿಗೆ ಬರುವ ಕಲಾವಿದರಿಗೆ ವೇದಿಕೆಗಳ ಕೊರತೆ ಇಲ್ಲ. ದೇಶ–ವಿದೇಶದ ಪ್ರಮುಖ ಭಾಗಗಳಲ್ಲಿ ಕಾರ್ಯಕ್ರಮ ಪ್ರಸ್ತುತಪಡಿಸಿದವರೇ ಹೆಚ್ಚಿನವರು. ಆದರೆ ಗೋಕುಲಂನಲ್ಲಿ ಕಾರ್ಯಕ್ರಮ ನೀಡಬೇಕು ಎಂಬ ಉತ್ಕಟತೆ ಅನೇಕರಲ್ಲಿ ಇದೆ. ಒಂದು ಬಾರಿ ಬಂದವರು ಮತ್ತೆಮತ್ತೆ ಬರಲು ಬಯಸುತ್ತಾರೆ. ಖುಷಿಯಾಗಿ ವಾಪಸ್ ಹೋಗುತ್ತಾರೆ. ನಿರಂತರ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಿದ್ದರಿಂದ ಈ ಭಾಗದ ಜನರಲ್ಲೂ ಶಾಸ್ತ್ರೀಯ ಸಂಗೀತದ ಆಸಕ್ತಿ ಕುಡಿಯೊಡೆದಿದೆ. ಇಲ್ಲಿನ ಪರಂಪರಾ ವಿದ್ಯಾಪೀಠದಲ್ಲಿ ನಡೆಯುವ ಸಂಗೀತ ತರಬೇತಿಯಲ್ಲಿ ಸುತ್ತಮುತ್ತಲ 40ರಷ್ಟು ಮಂದಿ ಕಲಿಯುತ್ತಿದ್ದಾರೆ' ಎನ್ನುತ್ತಾರೆ ವಿಷ್ಣುಪ್ರಸಾದ್ ಹೆಬ್ಬಾರ್.

ಪ್ರಯೋಗಗಳಿಗೂ ಗೋಕುಲಂನಲ್ಲಿ ಆದ್ಯತೆ ನೀಡಲಾಗುತ್ತದೆ. ಪಂಚವೀಣೆಯ ರಸಯಾತ್ರೆ, ಸವಾಲಿನ ತಾಳಕಲೆಯಾದ ಅವಧಾನ ಪಲ್ಲವಿ ಅಥವಾ ತಾಳಾವಧಾನ, ಸಹೋದರರು, ಸಹೋದರಿಯರ ದ್ವಂದ್ವ ಗಾಯನ, ವೈವಿಧ್ಯಮಯ ವಾದ್ಯಗಳ ಸಮ್ಮಿಲನ ಇತ್ಯಾದಿಗಳೊಂದಿಗೆ ಈ ಬಾರಿಯೂ ದೀಪಾವಳಿ ಸಂಗೀತೋತ್ಸವದಲ್ಲಿ ಸ್ವರಸೌರಭವಿತ್ತು. ಪಾವನಾ ಬಿ.ಆಚಾರ್, ಶಶಿಕಲಾ ಎನ್.ಭಟ್, ವಾಣಿ ಎಸ್. ಐತಾಳ್, ಕೌಸ್ತುಭ ರಾವ್ ಮತ್ತು ಪ್ರಿಯದರ್ಶಿನಿ ಭಟ್ ಅವರು ಮೊದಲ ದಿನ ಬೆಳಿಗ್ಗೆ ನಡೆಸಿಕೊಟ್ಟ ಪಂಚವೀಣೆ ಕಚೇರಿಯು ಈ ಬಾರಿಯ ಸಂಗೀತೋತ್ಸವದ ಆಶಯಕ್ಕೆ ರಾಗ–ಲಯದ ಭಾಷ್ಯ ಬರೆದಿತ್ತು.

ನಂತರ ಮೋಹಕ ಆಲಾಪಗಳ, ರಾಗಂ ತಾನಂ ಪಲ್ಲವಿಗಳ, ನೆರವಲ್‌ಗಳ, ಕಲ್ಪನಾ ಸ್ವರಗಳ, ಕೊನ್ನಕೋಲ್‌ಗಳ, ತಾನ್–ತರಾನಗಳ, ಜೋಡ್–ಜಾಲಾಗಳ ಅಮೃತವರ್ಷಕ್ಕೆ ಸಂಗೀತೋತ್ಸವ ಸಾಕ್ಷಿಯಾಯಿತು. ❖

ಸಮಾನತೆ, ವಸ್ತುವೈವಿಧ್ಯ


ಗೋಕುಲಂ ಗೋಶಾಲೆಯ ಸಂಗೀತ ಕಛೇರಿಗಳಲ್ಲಿ ಶ್ರೇಷ್ಠ ಕಲಾವಿದರಿಗೆ ಅವರ ಸರಿಸಮಾನರೇ ಸಾಥ್–ಸಹಕಾರ ನೀಡುವ ಪದ್ಧತಿ ಇಲ್ಲ. ಎಲ್ಲರನ್ನೂ ಸಮಾನವಾಗಿ ಕಾಣುವುದರಿಂದ ಹೆಸರಾಂತ ಕಲಾವಿದರ ಜೊತೆಯಲ್ಲಿ ಹೊಸಬರೂ ವೇದಿಕೆ ಹಂಚಿಕೊಳ್ಳುತ್ತಾರೆ. ಹೊಸಪೀಳಿಗೆಯವರಿಗೆ ದೊಡ್ಡ ಕಲಾವಿದರು ಸಹಕಾರ ನೀಡುವುದೂ ಇದೆ.

ದೀಪಾವಳಿ ಸಂಗೀತೋತ್ಸವದ ಮೂರನೇ ಆವೃತ್ತಿಯಿಂದ ವಸ್ತುವೈವಿಧ್ಯವನ್ನೂ ತರಲಾಗಿದೆ. 2023ರಲ್ಲಿ ಕೊಳಲಿಗೆ ಆದ್ಯತೆ ನೀಡಲಾಗಿತ್ತು. ಕಳೆದ ಬಾರಿ ಸಹೋದರರು–ಸಹೋದರಿಯರು ಮಿಂಚಿದ್ದರು. ಈ ಬಾರಿ ವೀಣೆಯ ವೈಭವವಿತ್ತು. ಮುಂದಿನ ಬಾರಿ 'ಪರಂಪರೆ' ಹೆಸರಿನಲ್ಲಿ ಒಂದೇ ಕುಟುಂಬದ ಕುಡಿಗಳನ್ನು ಕರೆಸುವ ಯೋಜನೆ ಇದೆ.

> ಗೋಕುಲಂ ಗೋಶಾಲೆಯ ಕಾರ್ಯಕ್ರಮ ಸಂಘಟಕರು ಮಾಡುತ್ತಿರುವ ಸಂಗೀತ ಸೇವೆ ಅನುಕರಣೀಯ. ಜನರಿಗೆ ರಂಜನೆಯ ಜೊತೆಯಲ್ಲಿ ವಿಭಿನ್ನ ಅನುಭವ ಸಿಗುವ ಸ್ಥಳ ಅದು. ಅದು ಕಲಾವಿದರಿಗೆ ಅಂತರಾತ್ಮದತ್ತ ಇಣುಕಿ ನೋಡಲು ನೆರವಾಗುವ ಕಾರ್ಯಕ್ರಮ. ಅಂಥ ಜಾಗದಲ್ಲಿ ಪ್ರದರ್ಶನ ನೀಡುವುದು ಭಾಗ್ಯವೇ ಸರಿ.
> **ಚಾರುಲತಾ ರಾಮಾನುಜಂ,** ಕಲಾವಿದೆ


ಗಂಗಾ ಶಶಿಧರನ್

> ಗೋಕುಲಂ ಗೋಶಾಲೆಯಲ್ಲಿ ಕಾರ್ಯಕ್ರಮ ನೀಡುವುದು ಹೆಮ್ಮೆಯ ವಿಷಯ. ಸಂಘಟಕನಾಗಿರುವ ನನಗೆ ಗೋಕುಲಂ ಗೋಶಾಲೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸುವ ವಿಧಾನ ಅಚ್ಚರಿ ಹುಟ್ಟಿಸಿದೆ. ಕಲಾವಿದರನ್ನು ಕರೆದು ಸಂಗೀತ ಸೇವೆಗೆ ಅವಕಾಶ ಒದಗಿಸುವುದರ ನಡುವೆ ಕಲಾಸಕ್ತರಿಗೆ ವೈವಿಧ್ಯಮಯ ಸಂಗೀತದ ಆಸ್ವಾದನೆಗೆ ವೇದಿಕೆ ಒದಗಿಸುತ್ತಿರುವುದು ವಿಶೇಷ.
> **ವಿಠ್ಠಲ ರಾಮಮೂರ್ತಿ,** ಕಲಾವಿದ



> ಕೃಷಿ ಮತ್ತು ಕಲೆ ಇಲ್ಲದಿದ್ದರೆ ಮನುಷ್ಯನ ಅಸ್ತಿತ್ವ ಸಪ್ಪೆ. ಹೊಟ್ಟೆ ತುಂಬಬೇಕಾದರೆ ಕೃಷಿ ಬೇಕೇಬೇಕು. ಮನಸ್ಸು ಸಂತೃಪ್ತವಾಗಬೇಕಾದರೆ ಕಲೆ ಬೇಕು. ಹೊಟ್ಟೆ ಮತ್ತು ಮನಸ್ಸು ತುಂಬಿದರೆ ಜೀವನ ಸಾರ್ಥಕವಾಗುತ್ತದೆ. ಕೃಷಿ ಸಂಸ್ಕೃತಿಯ ಭಾಗವಾಗಿ ಇಲ್ಲಿ ಗೋವುಗಳನ್ನು ಸಾಕುತ್ತೇವೆ. ಕಲೆಯನ್ನೂ ಪೋಷಿಸುತ್ತೇವೆ. ಕಲಾವಿದರಿಗೆ ವೇದಿಕೆ ಮತ್ತು ಕಲೆಗೆ ಪ್ರೇರಣೆಯಾಗಲು ಸಾಧ್ಯವಾದದ್ದರಲ್ಲಿ ಖುಷಿ ಇದೆ.
> **ವಿಷ್ಣುಪ್ರಸಾದ್ ಹೆಬ್ಬಾರ್,** ಗೋಕುಲಂ ಗೋಶಾಲೆಯ ಸ್ಥಾಪಕ


ಅರ್ಚನಾ ಮತ್ತು ಆರತಿ ಸಹೋದರಿಯರು


ರಾಜೇಶ್ ವೈದ್ಯ

ಬಾಲ್ಕನಿಯಲ್ಲಿ ಸೂರಕ್ಕಿಯ ಬಾಣಂತನ

• ಕೆ.ಪಿ.ಸತ್ಯನಾರಾಯಣ

ನಮ್ಮ ಮನೆಯ ಬಾಲ್ಕನಿಯಲ್ಲಿ ಮಕ್ಕಳಿಗೆ ಜೋಕಾಲಿ ಹಾಕಲೆಂದು ಸರಪಳಿಯೊಂದನ್ನು ನೇತುಬಿಟ್ಟಿದ್ದೇವೆ. ಒಂದು ದಿನ ಪಕ್ಷಿಗಳೆರಡು ಆ ಸರಪಳಿಯ ಮೇಲೆ ಕುಳಿತು ಏನೋ ಚಟುವಟಿಕೆಯಲ್ಲಿ ನಿರತವಾಗಿರುವುದು ಕಂಡುಬಂತು. ಮನೆಯ ಮುಂದೆ ಮಾವು, ತೆಂಗಿನಮರಗಳು ಮತ್ತು ಹಲವಾರು ಗಿಡಗಳು ಇರುವುದರಿಂದ ಹಕ್ಕಿಗಳು ಬಂದು ಹೋಗುವುದು ಸಾಮಾನ್ಯ ಎಂದುಕೊಂಡು ಸುಮ್ಮನಾಗಿದ್ದೆವು. ಆದರೆ ಮರುದಿನ ನೋಡಿದರೆ ಇಳಿಬಿದ್ದ ಸರಪಳಿಯ ತುದಿಯಲ್ಲಿ ಹಕ್ಕಿಗಳ ಗರಿಗಳು, ನಾರು, ಜೇಡರಬಲೆಯ ಎಳೆಗಳು ಇತ್ಯಾದಿ ನೇತಾಡುತ್ತಿದ್ದವು. ಕೆಲವು ದಿನಗಳಲ್ಲಿಯೇ ಅಲ್ಲೊಂದು ಗೂಡು ನಿರ್ಮಾಣವೂ ಆಗಿಬಿಟ್ಟಿತು! ಗೂಡು ನೋಡಲೇನೂ ಆಕರ್ಷಕವಾಗಿರಲಿಲ್ಲ. ಸಿಕ್ಕ ಸಿಕ್ಕ ವಸ್ತುಗಳನ್ನು ಉಪಯೋಗಿಸಿ ಗೂಡನ್ನು ನಿರ್ಮಿಸಲಾಗಿತ್ತು.

ಹಕ್ಕಿಗಳು ಆಗಾಗ್ಗೆ ಬಂದು ಹೋಗುವುದನ್ನು ಕಿಟಕಿಯ ಹಿಂದೆ ನಿಂತು ಗಮನಿಸಿದಾಗ ಅವು ಸೂರಕ್ಕಿಗಳು ಎಂದು ತಿಳಿಯಿತು. ಸೂರ್ಯಪಕ್ಷಿ, ಹೂವಕ್ಕಿ ಇತ್ಯಾದಿ ಹೆಸರುಗಳೂ ಇವಕ್ಕೆ ಇವೆ. ಇಂಗ್ಲಿಷ್‌ನಲ್ಲಿ ಸನ್ ಬರ್ಡ್ (ಸಿನ್ನಿರಿಸ್ ಏಷ್ಯಾಟಿಕಸ್) ಎನ್ನಲಾಗುತ್ತದೆ. ಇಲ್ಲಿ ಗೂಡು ಕಟ್ಟಿದ್ದು ಕಡುನೀಲಿಯ ಸೂರಕ್ಕಿಗಳು (ಪರ್ಪಲ್ ಸನ್‌ಬರ್ಡ್).

ಒಂದೆರಡು ದಿನಗಳಲ್ಲಿಯೇ ಹೆಣ್ಣುಹಕ್ಕಿ ಸಾಕಷ್ಟು ಹೊತ್ತು ಗೂಡಿನಲ್ಲಿಯೇ ಕಾಲ ಕಳೆಯಲು ಶುರು ಮಾಡಿತು. ಬಹುಶಃ ಮೊಟ್ಟೆಗಳನ್ನು ಇಟ್ಟಿರಬಹುದೆಂದುಕೊಂಡೆ. ರಾತ್ರಿಯೆಲ್ಲಾ ಅಲ್ಲೇ ಕುಳಿತು ಮೊಟ್ಟೆಗಳಿಗೆ ಕಾವು ಕೊಡುತ್ತಿತ್ತು. ಹಗಲಿನಲ್ಲಿ ಯಾವಾಗಲೋ ಸ್ವಲ್ಪ ಹೊರಗೆ ಹೋಗಿ ಹೊಟ್ಟೆ ತುಂಬಿಸಿಕೊಂಡು ಬರುತ್ತಿತ್ತು. ಗೂಡಿನ ರಚನೆ ಯಾವ ರೀತಿ ಇತ್ತೆಂದರೆ ಅದರ ಬಾಯಿ ಬಿಟ್ಟು ಇನ್ನೇನೂ ಗೋಚರಿಸುತ್ತಿರಲಿಲ್ಲ. ಒಳಗೆ ಕುಳಿತ ಹಕ್ಕಿಯ ಕತ್ತು ಮಾತ್ರ ಕಾಣುತ್ತಿತ್ತು. ಎರಡು ವಾರ ಕಳೆದ ನಂತರ ಮೊಟ್ಟೆಗಳಿಂದ ಮರಿಗಳು ಆಚೆ ಬಂದವೆನಿಸುತ್ತದೆ. ಹೆಣ್ಣು ಹಕ್ಕಿ ಹೊರಗೆ ಹೋಗಿ ಆಹಾರವನ್ನು ತಂದು ಗೂಡಿನೊಳಗೆ ಹೋಗಿ ಮರಿಗಳಿಗೆ ತಿನ್ನಿಸಿ ಬರತೊಡಗಿತು. ಹೆಣ್ಣಿನ ಸರಿಸಮಾನವಾಗಿ ಅಲ್ಲದಿದ್ದರೂ ಗಂಡು ಹಕ್ಕಿಯೂ ಮರಿಗಳಿಗೆ ಉಣಿಸುವುದರಲ್ಲಿ ಸಹಕಾರ ನೀಡುತ್ತಿತ್ತು. ಮತ್ತೊಂದೆರಡು ವಾರಗಳ ನಂತರ ಮರಿಗಳ ಕೊಕ್ಕುಗಳು ಗೂಡಿನ ದ್ವಾರದ ಬಳಿ ಕಂಡರೂ ಅವುಗಳು ಕಾಣುತ್ತಿರಲಿಲ್ಲ. ಗಂಡು ಹೆಣ್ಣು ಸೂರಕ್ಕಿಗಳು ಸತತವಾಗಿ ಹಾರಾಟ ನಡೆಸಿ ಆಹಾರವನ್ನು ಒದಗಿಸುವುದು ಮಾತ್ರ ನಡೆದೇ ಇತ್ತು.

ಹೀಗಿರುವಾಗ ಒಂದು ಬೆಳಿಗ್ಗೆ ನೋಡಿದರೆ ಗೂಡಿನ ಬಳಿ ಯಾವ ಚಟುವಟಿಕೆಯೂ ಇರಲಿಲ್ಲ. ಬಹುಶಃ ರಾತ್ರಿ ಮರಿಗಳು ಆಚೆ ಹೋಗಿರಬಹುದು. ಪೂರ್ಣ ರೆಕ್ಕೆ ಬಲಿಯದ ಮರಿಗಳು ಬಹಳ ದೂರ ಹೋಗಿರುವ ಸಾಧ್ಯತೆ ಇಲ್ಲ, ಸನಿಹದಲ್ಲಿಯೇ ಇರುವ ಮಾವಿನಮರದ ಮೇಲಿರಬಹುದೆಂದು ಹುಡುಕಿದರೂ ಕಾಣಲಿಲ್ಲ. ನಾಲ್ಕಾರು ವಾರಗಳು ನಮ್ಮ ಬಾಲ್ಕನಿಯಲ್ಲಿ ಬಾಣಂತನ ಮಾಡಿಕೊಂಡ ಸೂರಕ್ಕಿಗಳು ಮತ್ತೊಮ್ಮೆ ಬಂದಾವೆಂಬ ನಿರೀಕ್ಷೆಯಲ್ಲಿ ನಾವಿದ್ದೇವೆ. ❖


ಮರಿಯೇ ಇಷ್ಟೊಂದು ಹಸಿವೇ?


ಇನ್ನೂ ತುತ್ತು ಕೊಡಮ್ಮಾ...


ಇರು, ಮಕರಂದ ತಂದೆ...

ಹೂವಕ್ಕಿಗಳು...

ನಮ್ಮ ರಾಜ್ಯದಲ್ಲಿ ಎರಡು ರೀತಿಯ ಹೂವಕ್ಕಿಗಳು ಕಂಡು ಬರುತ್ತವೆ. ಒಂದು ಕಡುನೀಲಿಯ ಹೂವಕ್ಕಿ-ಗಂಡು ಹಕ್ಕಿಗಳು ಥಕ್ಕನೆ ಕಪ್ಪು ಬಣ್ಣದಲ್ಲಿ ಇದ್ದಂತೆ ಕಂಡರೂ ಅವುಗಳ ಮೇಲೆ ತುಸು ಬೆಳಕು ಬಿದ್ದರೂ ತಲೆಯ ಭಾಗದ ನೀಲಿಬಣ್ಣ ಗೋಚರಿಸುತ್ತದೆ. ಇನ್ನೊಂದು ನೇರಳೆಕಂಠದ ಹೂವಕ್ಕಿ-ಗಂಡಿನ ಕುತ್ತಿಗೆ ನೇರಳೆ ಬಣ್ಣ, ತಲೆ ನೀಲಿ ಬಣ್ಣ. ಎರಡೂ ವಿಧದ ಸೂರಕ್ಕಿಗಳಲ್ಲಿ ಹೆಣ್ಣುಗಳು ಕಂದು ಬಣ್ಣದ ಬೆನ್ನು ಹಾಗೂ ರೆಕ್ಕೆಗಳನ್ನು ಹೊಂದಿರುತ್ತವೆ. ಹೆಣ್ಣು ಗಂಡೆರಡಕ್ಕೂ ಹೊಟ್ಟೆಯ ಭಾಗ ಬಿಳುಪು ಮಿಶ್ರಿತ ತಿಳಿ ಹಳದಿಯಾಗಿರುತ್ತದೆ.

ಹೂಗಳ ತೊಟ್ಟು ಅಥವಾ ರೆಂಬೆಗಳ ಮೇಲೆ ತಲೆಕೆಳಗಾಗಿ ಕುಳಿತು ಹೂಗಳ ಬುಡಕ್ಕೆ ಬಾಗಿದ ತಮ್ಮ ಕೊಕ್ಕನ್ನು ತೂರಿಸುವುದರ ಮೂಲಕ ಇವು ಮಕರಂದ ಕುಡಿಯುತ್ತವೆ. ಆದ್ದರಿಂದಲೇ ಇವಕ್ಕೆ ಹೂವಕ್ಕಿ ಎನ್ನುವ ಅನ್ವರ್ಥನಾಮವೂ ಇದೆ. ಈ ಹಕ್ಕಿಗಳು ಮಕರಂದ ಹೀರುವುದನ್ನು ನೋಡುವುದೇ ಚೆಂದ. ಜೇಡ ಮುಂತಾದ ಸಣ್ಣಸಣ್ಣ ಕ್ರಿಮಿಕೀಟಗಳನ್ನೂ ಅವುಗಳು ತಿನ್ನುವುದುಂಟು. ಹೂವಕ್ಕಿಗಳ ಗಾತ್ರ ಚಿಕ್ಕದು. ಹೀಗಾಗಿ ಹೂಗಳ ಮಧ್ಯೆ ಸರಾಗವಾಗಿ ಚಲಿಸಿ, ಮಧು ಹೀರಲು ಶಕ್ತವಾಗಿವೆ. ಹತ್ತಾರು ಹೂಗಳಿಗೆ ಎಡತಾಕುವುದರಿಂದ ಇವು ಪರಾಗಸ್ಪರ್ಶ ಕ್ರಿಯೆಯಲ್ಲಿ ಕೂಡಾ ನೆರವಾಗುತ್ತವೆ. ಕ್ಷಣಮಾತ್ರದಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ಹಾರುತ್ತಾ ಹಲವಾರು ಹೂಗಿಡಗಳಿಗೆ ಭೇಟಿ ಕೊಡುತ್ತಾ ಸದಾ ಚಟುವಟಿಕೆಯಿಂದ ಇರುವ ಈ ಹಕ್ಕಿಗಳನ್ನು ನೋಡುವುದೇ ಖುಷಿಯ ಸಂಗತಿ. ಸೂರಕ್ಕಿಗಳು ರಸವನ್ನು ಹೀರಲು ದಾಸವಾಳದ ಹೂಗಳಿಗೆ ಹೆಚ್ಚಾಗಿ ಭೇಟಿ ಕೊಟ್ಟಿದ್ದನ್ನು ನಾನು ಗಮನಿಸಿದ್ದೆ.

ಇವು ಗುಂಪುಗಳಲ್ಲಿ ಕಂಡುಬರುವುದಿಲ್ಲ. ಅಪರೂಪಕ್ಕೆ ಒಂಟಿಯಾಗಿ, ಹೆಚ್ಚಿನ ವೇಳೆ ಜೋಡಿಯಾಗಿಯೇ ಇರುತ್ತವೆ. ಮನುಷ್ಯರ ವಾಸಸ್ಥಳಗಳ ಬಳಿಯೇ ಜೇಡರಬಲೆ, ಹತ್ತಿ, ಬಟ್ಟೆಯ ಚೂರು, ಕಸಕಡ್ಡಿಗಳನ್ನು ಸೇರಿಸಿ ಗೂಡು ಕಟ್ಟುತ್ತವೆ. ಬಳ್ಳಿಗಳ ಅಥವಾ ಇಳಿಬಿದ್ದ ರೆಂಬೆಗಳ ತುದಿಯಲ್ಲಿ ಇವು ಗೂಡನ್ನು ಮಾಡುವುದರಿಂದ ಶತ್ರುಗಳಿಂದ ಅಪಾಯ ಕಡಿಮೆ. ಸೂರಕ್ಕಿಗಳು ಒಂದು ಸಲಕ್ಕೆ ಎರಡು ಮೊಟ್ಟೆಗಳನ್ನಿಡುವುದು ಸಾಮಾನ್ಯ. ಅಪರೂಪಕ್ಕೆ ನಾಲ್ಕರವರೆಗೂ ಇಡಬಹುದು.

ಮುನ್ನೋಟ 26-10-2025 ರಿಂದ 01-11-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಮೇಲೆ ನೀವು ನಂಬಿಕೆ ಇಟ್ಟುಕೊಳ್ಳಿರಿ. ಆದಾಯವು ಕಡಿಮೆ ಇರುತ್ತದೆ. ಬಂಧುಗಳೊಳಗಿನ ವ್ಯಾಪಾರ ನಷ್ಟಕ್ಕೆ ಕಾರಣವಾಗಬಹುದು. ಆಸ್ತಿ ಮಾಡಿಕೊಳ್ಳುವ ಯೋಗವಿದೆ, ಈಗ ಬಳಸಿಕೊಳ್ಳಿರಿ. ಪ್ರತಿಭೆಗೆ ತಕ್ಕ ಅವಕಾಶಗಳು ಒದಗಿ ಬರುತ್ತವೆ. ವೈಯಕ್ತಿಕ ಕೆಲಸಗಳ ಬಗ್ಗೆ ಹೆಚ್ಚು ಗಮನಹರಿಸಿರಿ. ಬಟ್ಟೆ ವ್ಯಾಪಾರಸ್ಥರಿಗೆ ಉತ್ತಮ ವ್ಯವಹಾರವಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ವೈಯಕ್ತಿಕ ಅಲಂಕಾರಕ್ಕೆ ಹೆಚ್ಚು ಗಮನಕೊಡುವಿರಿ. ಸಂಗಾತಿಯ ಸಹಕಾರದಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ವ್ಯವಹಾರಗಳಲ್ಲಿ ಬಂಧುಗಳ ನಡುವೆ ಒಮ್ಮತ ಮೂಡುವ ಸಾಧ್ಯತೆಗಳಿವೆ. ಅನಾರೋಗ್ಯ ಸಮಸ್ಯೆ ಇದ್ದವರಿಗೆ ಸ್ವಲ್ಪ ಸುಧಾರಣೆ ಕಂಡುಬರುತ್ತದೆ. ಹೆಚ್ಚಿನ ಮೊತ್ತದ ವಸ್ತುಗಳನ್ನು ಖರೀದಿ ಮಾಡುವಾಗ ಎಚ್ಚರವಿರಲಿ. ಸ್ವಂತ ವ್ಯವಹಾರದಲ್ಲಿ ಜಾಣತನವನ್ನು ತೋರಿ ಲಾಭ ಹೆಚ್ಚು ಮಾಡಿಕೊಳ್ಳುವಿರಿ

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆರಂಭದಲ್ಲಿ ದ್ವಂದ್ವ ನೀತಿಗಳು ನಿಮ್ಮಲ್ಲಿ ಇರುತ್ತವೆ. ಆದಾಯವು ನಿರೀಕ್ಷೆಯನ್ನು ತಲುಪುತ್ತವೆ. ಕೃಷಿಕರಿಗೆ ಆದಾಯದಲ್ಲಿ ಸ್ವಲ್ಪ ಅನಿಶ್ಚಿತತೆ ಎದುರಾಗಬಹುದು. ಮಧ್ಯಸ್ಥಿಕೆ ವಹಿಸುವುದು, ಜಾಮೀನು ಕೊಡುವುದು ಬಹಳ ದುಬಾರಿಯಾಗಬಹುದು. ವಿಶ್ವಾಸಪೂರ್ವಕ ಮಾತುಗಳಿಂದಾಗಿ ಎಲ್ಲರಲ್ಲೂ ಸ್ನೇಹ ಸಂಪಾದನೆ ಮಾಡುವಿರಿ. ಎಲ್ಲರ ಸಹಕಾರ ನಿಮಗೆ ದೊರೆತು ಕೆಲಸದಲ್ಲಿ ಯಶಸ್ಸನ್ನು ಕಾಣುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸ್ವಾಭಿಮಾನ ಬಹಳ ಹೆಚ್ಚಾಗಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಕೆಲವು ಮಹಿಳೆಯರಿಗೆ ಸ್ಥಾನಮಾನಗಳು ಲಭ್ಯವಾಗುತ್ತವೆ. ನಿಮ್ಮ ಲಾಭದ ಲೆಕ್ಕಾಚಾರಗಳು ಸ್ವಲ್ಪ ವ್ಯತ್ಯಾಸವಾಗಿ ಲಾಭದಲ್ಲಿ ಕಡಿಮೆಯಾಗಬಹುದು. ಈಗ ದೈನಂದಿನ ಕೆಲಸಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಾಸ ಕಾಣಬಹುದು. ಸೂಕ್ಷ್ಮ ನೇಯ್ಗೆಯನ್ನು ಮಾಡುವ ನೇಕಾರರಿಗೆ ಬೇಡಿಕೆ ಹೆಚ್ಚಾಗಿ ಕೈತುಂಬಾ ಕೆಲಸ ಬಂದು ಧನ ಸಂಪಾದನೆಯಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಅಧ್ಯಾತ್ಮದತ್ತ ಒಲವು ಹೆಚ್ಚುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಬಂಧುಗಳ ಸಹಕಾರ ನಿಮಗೆ ದೊರೆಯುತ್ತದೆ. ಕೃಷಿಭೂಮಿಯನ್ನು ವ್ಯಾಪಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವ್ಯಾಪಾರ-ವ್ಯವಹಾರದಲ್ಲಿ ಮಹತ್ವದ ಬೆಳವಣಿಗೆಗಳು ನಡೆದು ನಿಮಗೆ ವ್ಯಾಪಾರದಲ್ಲಿ ಸೂಕ್ತಸ್ಥಾನ ಸಿಕ್ಕಿ ಲಾಭ ಪಡೆಯುವಿರಿ. ಸಾಮಾಜಿಕ ಕ್ಷೇತ್ರದಲ್ಲಿರುವವರಿಗೆ ಕೀರ್ತಿ ಯಶಸ್ಸು ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸಿರಿವಂತರಂತೆ ಕಾಣಿಸಿಕೊಳ್ಳಲು ಪ್ರಯತ್ನಪಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಲ್ಲಿ ವ್ಯವಹಾರಿಕತೆ ತುಂಬಿರುತ್ತದೆ. ನಿಮ್ಮ ಬಂಧುಗಳು ನಿಮಗೆ ಸಹಕಾರ ನೀಡುವುದು ಕಡಿಮೆಯಾಗಬಹುದು. ಆಸ್ತಿ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವಿರುತ್ತದೆ. ಲೇವಾದೇವಿ ನಡೆಸುವವರಿಗೆ ಮಧ್ಯಮ ಫಲಿತಾಂಶ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಮುನ್ನುಗ್ಗುವ ಶಕ್ತಿ ಇರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯಷ್ಟು ಇರುವುದಿಲ್ಲ. ನ್ಯಾಯಾಲಯದ ತೀರ್ಪುಗಳು ಮುಂದೂಡಿಕೆಯಾಗುವ ಸಾಧ್ಯತೆ ಇದೆ, ಸಹನೆಯಿಂದ ಇದ್ದರೆ ಒಳ್ಳೆಯ ಫಲಿತಾಂಶ ನಿರೀಕ್ಷಿಸಬಹುದು. ಸಾವಯವ ಕೃಷಿ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಬಂಧುಗಳೊಡನೆ ನಿಮ್ಮ ಸಂಬಂಧವನ್ನು ಸುಧಾರಿಸಿಕೊಳ್ಳುವುದು ನಿಮಗೆ ಒಳ್ಳೆಯದು. ಆಸ್ತಿ ಖರೀದಿಯ ವಿಚಾರದಲ್ಲಿ ಎಚ್ಚರದಿಂದಿರಿ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಜಾಣತನದಿಂದ ಮಾತನಾಡುವ ಕಲೆಯನ್ನು ರೂಢಿ ಮಾಡಿಕೊಳ್ಳುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳಲ್ಲಿನ ಶತ್ರುಗಳಾರೆಂದು ನಿಮಗೆ ತಿಳಿಯುತ್ತದೆ. ವಿದೇಶಿ ಕಂಪನಿಗಳಿಗೆ ಭೂಮಿಯನ್ನು ಒದಗಿಸಿಕೊಡುವ ಕೆಲಸ ಮಾಡುವವರಿಗೆ ಲಾಭ ಹೆಚ್ಚು. ಕುಟುಂಬ ಸದಸ್ಯರಲ್ಲಿ ವಾದ ವಿವಾದಗಳ ಸಾಧ್ಯತೆ ಇದೆ. ನ್ಯಾಯಾಲಯದ ವಿಷಯದಲ್ಲಿ ಉತ್ತಮ ವಕೀಲರನ್ನು ನೇಮಿಸಿಕೊಳ್ಳುವುದು ನಿಮಗೆ ಬಹಳ ಅನುಕೂಲ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ಕಷ್ಟವಾಗಬಹುದು. ಆದಾಯವು ಕಡಿಮೆ ಇರುತ್ತದೆ. ಬಂಧುಗಳಲ್ಲಿ ಕೆಲವರು ನಿಮ್ಮನ್ನು ವಿರೋಧಿಸಿದರೂ ಸಾಕಷ್ಟು ಜನ ಸಹಕರಿಸುವರು. ಉದ್ಯೋಗ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ಅಧಿಕಾರಿಗಳಿಂದ ಸೂಕ್ತ ಸಹಾಯ ಸಿಕ್ಕಿ ಸಂತೋಷವಾಗುವುದು. ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಹೆಚ್ಚಿನ ಆಸಕ್ತಿ ಮೂಡುವುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವೃತ್ತಿ ಶ್ರಮ ಅಧಿಕವಾಗಬಹುದು. ಆರ್ಥಿಕ ಸ್ಥಿತಿಯು ಸಾಮಾನ್ಯ ಗತಿಯಲ್ಲಿ ಇರುತ್ತದೆ. ನ್ಯಾಯಾಲಯದ ವ್ಯವಹಾರಗಳಲ್ಲಿ ನಿಮಗೆ ಯಶಸ್ಸು ಇರುತ್ತದೆ. ಅನಾವಶ್ಯಕ ವ್ಯವಹಾರಗಳಿಂದ ದೂರ ಇರುವುದು ಒಳ್ಳೆಯದು. ರಾಜಕೀಯ ವ್ಯಕ್ತಿಗಳಿಗೆ ಶುಭ ಸಮಾಚಾರಗಳು ದೊರೆಯುತ್ತವೆ. ಸಂತಾನ ಅಪೇಕ್ಷಿತರಿಗೆ ಹಿನ್ನಡೆ ಇರುತ್ತದೆ. ವಸ್ತ್ರಗಳ ಸಗಟು ವ್ಯಾಪಾರ ಮಾಡುವವರಿಗೆ ಅಭಿವೃದ್ಧಿ ಇದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಎಲ್ಲಾ ಕೆಲಸಗಳನ್ನು ನೀವೇ ಮಾಡಲು ಹೋಗಬೇಡಿರಿ. ಆದಾಯವು ಕಡಿಮೆ ಇದ್ದು ಅದರಲ್ಲೇ ನಿಭಾಯಿಸಬೇಕು. ಹಿರಿಯರಿಗೆ ಬಂಧುಗಳಿಂದ ಸಹಕಾರ ಸಿಗುತ್ತದೆ. ಯುವಕರ ಅಸಹನೆ ಮತ್ತು ಉದಾಸೀನ ಅವರಿಗೆ ತೊಂದರೆ ತರುತ್ತವೆ. ಆಸ್ತಿ ಖರೀದಿ ಮಾಡುವ ಬಗ್ಗೆ ಮುಂದುವರಿಯಬಹುದು. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ಇರುತ್ತದೆ. ದಾಯಾದಿಗಳ ನಡುವೆ ಇದ್ದ ಕಲಹಗಳು ಈಗ ಕಡಿಮೆಯಾಗುವ ಸಾಧ್ಯತೆಗಳಿವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ವಾರದ ಆರಂಭದಲ್ಲಿ ಆಲಸ್ಯತನ ಎದ್ದು ಕಾಣುತ್ತದೆ. ಒರಟು ಮಾತಿನಿಂದ ಜನಗಳ ನಡುವೆ ನಿಷ್ಠುರವಾಗಬಹುದು. ಒಡಹುಟ್ಟಿದವರ ನಡುವೆ ಆರ್ಥಿಕ ಸಮಸ್ಯೆಗಳು ಉಲ್ಬಣಿಸಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ಇರುತ್ತದೆ. ಉದರ ಸಂಬಂಧಿ ದೋಷ ಕೆಲವರನ್ನು ಕಾಡಬಹುದು. ಮಹಿಳೆಯರಿಗೆ ಉದ್ಯೋಗದಲ್ಲಿ ಬಡ್ತಿಯ ಸಾಧ್ಯತೆ ಇದೆ.

ಪದಬಂಧ 2915



ಮೇಲಿನಿಂದ ಕೆಳಕ್ಕೆ

1. ಮಡಗಿದ ಹಾಗೆ ಇರಬೇಕಾದ ವ್ಯಕ್ತಿ 3
2. ದಾಸರು ಹೇಳಿದಂತೆ ಏನು ಧನ್ಯಳೋ ಇವಳು ಎಂತ ಮಾನ್ಯಳೋ 3
3. ಮೂರು ಸಲ ಸಾವನ್ನು ಎದುರಿಸಿದ ಸತ್ಯವಾನ್ ಪತ್ನಿ 3
4. ಒಳ್ಳೆಯ ಎಲೆಗಳಿಂದ ಅಲಂಕೃತಳಾದ ಹೆಣ್ಣು 3
7. ಮುಕ್ಕಣ್ಣನ ಮತ್ತೊಂದು ಹೆಸರು 4
9. ಹೆಣ್ಣು ಹೆಣ್ಣೆಂದು ಹೀಗಳೆವ ಮೂಢ 3
11. ಕೊಡುಗೆಯಾಗಿ ಬಂದಿರುವ ದೀರ್ಘನದಿ 3
12. ಕೃತಿ ಪಡೆಯುವ ರೂಪ 3
13. ಇರುವಿಕೆಗೆ ಬೇಕಾದ ಆಸರೆ ತಲೆಕೆಳಗು 3
15. ಕಾಮನನ್ನು ಸುಡುವ ದಿನ ಸುಡುವ ಸಿಹಿ ಭಕ್ಷ್ಯ 3
16. ಕನ್ನಡಿಗರು ನುಡಿಸುವ ವಿಜಯ ಘೋಷದ ನಾದ 4
17. ಮಹೋತ್ಸವಕ್ಕೆ ಬರುವ ಬೆಳ್ಳಿ 3
19. ಸುವಾಸಿತ ದೇವ ಮಾನವ 3
20. ನದಿಯಂತೆ ಪಕ್ಕಕ್ಕೆ ಜರುಗುತ್ತಾ ಬರುವ ಹೆಣ್ಣು 3
21. ತೇಜಸ್ವಿಯವರ ಕಥೆಯಲ್ಲಿ ಪಿಂಚಣಿಗಾಗಿ ಅಲೆದಾಡಿದವ 3
22. ತೆಲುಗಿನಲ್ಲಿ ಕೊಟ್ಟ ಮಾತು 3
23. ಲಾಲಿತ್ಯದ ಅಧಿದೇವತೆ 3

ಎಡದಿಂದ ಬಲಕ್ಕೆ

1. ಮಳೆ ಬೆಳೆಯಿಲ್ಲದ ಕ್ಷಾಮ ಸಮಯ 4
3. ನೆಲವನ್ನು ಒದ್ದೆಬಟ್ಟೆಯಿಂದ ಒರೆಸಿ ಒಪ್ಪಮಾಡು 3
5. ವಂಶದ ದೇವತೆ 4
6. ಪತ್ರದಲ್ಲಿ ಬರುವ ಪರಿಶುದ್ಧತೆ 3
8. ಕಾಡಿನತ್ತ ದೃಷ್ಟಿಯಿಟ್ಟು ನಡೆಯುವವ 4
10. ಮೇಲೆ ಮೇಲೆ ಹಾರಲಿ ನಮ್ಮ ಮೂರು ರಂಗಿನ ಬಾವುಟ 3
12. ಬಿಳಿಲು ಬಿಡುವ ಈ ಬೃಹತ್ ವೃಕ್ಷದ ಕೆಳಗೆ ಯಾವ ಸಣ್ಣ ಗಿಡಕ್ಕೂ ಆಸ್ಪದವಿಲ್ಲ 5
14. ರಸ್ತೆಯಲ್ಲಿ ನಡೆದು ಹೋಗುತ್ತಿರುವ ಅಪರಿಚಿತ 4
16. ಮೇಳದೊಡಗೂಡುವ ದನಿಮೂಲ 4
18. ಭಗೀರಥ ಧರೆಗಿಳಿಸಿದ ಪವಿತ್ರನದಿ ಆಗಸದಲ್ಲಿ ಹರಿದಿದೆ 5
20. ಬಿಡದೆ ಒಂದೇ ಸಮನೆ ನಿರಂತರವಾಗಿ 3
22. ಪರ್ವತದಂತೆ ಉತ್ತುಂಗದ ಸಮಯವೇ ಇದು? 4
24. ಆಂಗ್ಲ ದುರಸ್ತಿ ಕನ್ನಡದಲ್ಲಿ 3
25. ಎಕ್ಕಡ ಹಾಕದೆ ಬರಿದಾದ ಪಾದ 4
26. ವಿರಳವಾದ ಕೆಂಪುಲೋಹ ಚಿನ್ನದೊಂದಿಗೆ ಬೆರೆಯುತ್ತದೆ 3
27. ನೀರು ಕುದಿಯುವ ಸದ್ದು 4

ಪದಬಂಧ ಉತ್ತರ -2914

ಮೇಲಿಂದ ಕೆಳಕ್ಕೆ

1. ಅಭಯ 2.ತ್ರಿಮತ 3.ಜಾರಿಕೆ 4.ತಿಮಿರ 7.ವಂಶಜ 9.ಲಕ್ಷ್ಯನಿರತ 10.ಪುಳಕ 11.ನಯವಿನಯ 12.ಅನ್ನ 13.ನೆರಳು 15.ಕ್ಷತ 18.ರುಧಿತ 19.ಶೇಖರ 20.ನವದ 21.ಅಂತಿಮ 22.ಲಕ್ಷ್ಮಣ

ಎಡದಿಂದ ಬಲಕ್ಕೆ

1. ಅಹೋರಾತ್ರಿ 3.ಜಾತಿಪದ್ಧತಿ 5.ಮನೋಹರಿ 6.ಯಶೋವಂತ 8.ಕೆಲಸಗಾರ 10.ಪುರಜನ 12.ಅನಿಕೇತನ 14.ಯಕ್ಷಕಿನ್ನರ 16.ಕಪಿಸೇವಿತ 17.ತರುಗಳು 19.ಶೇಷಶಯನ 21.ಅಂತರ್ಜಾಲ 23.ವಸ್ತುಸ್ಥಿತಿ 24.ರತ್ನಪದ 25.ಮಹಾರಾಣ

ಸಿಂಗ್ ಬಾಬು ಭಾವ ಬೆರಗು


'ಮುತ್ತಿನಹಾರ' ಸಿನಿಮಾದ ದೃಶ್ಯ

ಅಂಬರೀಶ್, ವಿಷ್ಣುವರ್ಧನ್ ಸಿನಿಮಾ ಗ್ರಾಫ್‌ನಲ್ಲಿ ಗುಣಮಟ್ಟದ ಒರತೆ ತಂದ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರೆನ್ನುವುದು ನಿಸ್ಸಂಶಯ. ಐವತ್ತು ಚಿತ್ರವಸಂತ ಪೂರೈಸಿದ ಅವರ ಸಿನಿಮಾ ಪಯಣ ಆಸಕ್ತಿಕರ ಪ್ರಯೋಗಶಾಲೆ.


• ವಿಶಾಖ ಎನ್.

ಅರ್ನೆಸ್ಟ್ ಹೆಮಿಂಗ್ವೇ ಬರೆದ 'ಎ ಫೇರ್‌ವೆಲ್ ಟು ಆರ್ಮ್ಸ್' ಎಂಬ ಕಾದಂಬರಿ ಬಂದದ್ದು 1929ರಲ್ಲಿ. 'ಮುತ್ತಿನಹಾರ' ಕನ್ನಡ ಸಿನಿಮಾ ತಯಾರಾದದ್ದು 1990ರಲ್ಲಿ. ಎರಡರ ದ್ರವ್ಯದಲ್ಲಿ ಒಂದು ಸಾಮ್ಯವಿದೆ. 70 ವರ್ಷಗಳ ನಂತರವೂ ಅಂತಹದ್ದೊಂದು ಕಥಾಗಾಮಿನಿಯನ್ನು ನಮ್ಮದಾಗಿಸಿಕೊಟ್ಟ ಸಾರ್ಥಕ್ಯ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅವರದ್ದು.

'ಮುತ್ತಿನಹಾರ' ಸಿನಿಮಾ ತೆರೆಕಂಡಾಗ ವಿಷ್ಣುವರ್ಧನ್ ಅಭಿಮಾನಿಗಳು, ಸಿನಿಮಾದಲ್ಲಿನ ಕಥಾನಾಯಕನಂತೆಯೇ ತಲೆ ಬೋಳಿಸಿಕೊಂಡು ಮೊದಲ ಪ್ರದರ್ಶನ ನೋಡಲು ಬಂದಿದ್ದರು. ಬೆಂಗಳೂರಿನ ಚಿತ್ರಮಂದಿರದಲ್ಲಿ ಆಗ ಕೆಲವು ಕಿಡಿಗೇಡಿಗಳು, ತಲೆ ಬೋಳಿಸಿಕೊಂಡು ಬಂದಿದ್ದ ಅಭಿಮಾನಿಗಳ ಮೇಲೆ ಹಲ್ಲೆ ನಡೆಸಿದ್ದರು. ಅವರನ್ನು ಆಸ್ಪತ್ರೆಗೆ ಸಾಗಿಸಲು ಹೇಳಿ, ಚಿಕಿತ್ಸೆ ಕೊಡಿಸಿದ ನಂತರ ಯೋಗಕ್ಷೇಮ ವಿಚಾರಿಸಿಕೊಂಡಿದ್ದವರು ಇದೇ ರಾಜೇಂದ್ರ ಸಿಂಗ್ ಬಾಬು.

ಅದ್ಭುತ ಓಪನಿಂಗ್ ಕಂಡಿದ್ದ ಚಿತ್ರಕ್ಕೆ ರಾಷ್ಟ್ರ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಪ್ರಶಸ್ತಿಗಳೇನೋ ಹುಡುಕಿಕೊಂಡು ಬಂದವು. ಆದರೆ, ಪ್ರೇಕ್ಷಕ ಅದನ್ನು ದೊಡ್ಡ ಪ್ರಮಾಣದಲ್ಲಿ ಗೆಲ್ಲಿಸಲಿಲ್ಲ. ಹಂಸಲೇಖ ಬರೆದಿದ್ದ, ಬಾಲಮುರಳಿಕೃಷ್ಣ ಶಾರೀರದ 'ದೇವರು ಹೊಸೆದ ಪ್ರೇಮದ ದಾರ...' ಹಾಡು ಈ ಹೊತ್ತಿಗೂ ಕಾಡುತ್ತದೆ. ಆ ಚಿತ್ರ ನಿರೀಕ್ಷಿತ ಗೆಲುವು ಕಾಣದೆಹೋದರೂ ಸೃಜನಶೀಲತೆ ನೆಚ್ಚಿಕೊಂಡ ಬಾಬು ಗೆದ್ದಿದ್ದರು.

ಅದಾಗಿ ಕೆಲವು ವರ್ಷಗಳ ನಂತರ 'ಹೂವು ಹಣ್ಣು' ಚಿತ್ರವನ್ನು ನಿರ್ದೇಶಿಸಿದರು. ವೇಶ್ಯೆಯ ಬದುಕಿನ ಸಿಕ್ಕುಗಳನ್ನು ಒಳಗೊಂಡ, ತಾಯಿ–ಮಗಳ ಮನೋವ್ಯಾಪಾರದ, ತ್ರಿವೇಣಿ ಕಾದಂಬರಿ ಆಧಾರಿತ ಚಿತ್ರ ಅದು. ಜ್ಯೂಲಿ ಲಕ್ಷ್ಮಿ ಹದವರಿತ ಅಭಿನಯವಿದ್ದೂ ಆ ಚಿತ್ರ ಕೂಡ ಕಮರ್ಷಿಯಲ್ ದೃಷ್ಟಿಯಲ್ಲಿ ಸೋತಿತು. ಪ್ರಯೋಗಮುಖಿಯಾಗಿ ಮತ್ತೆ ಬಾಬು ಗೆದ್ದರು ಎಂದು ನಿಸ್ಸಂಶಯವಾಗಿ ಹೇಳಬಹುದು. ಆಮೇಲೆ ಅವರು 'ಕುರಿಗಳು ಸಾರ್ ಕುರಿಗಳು', 'ಕೋತಿಗಳು ಸಾರ್ ಕೋತಿಗಳು' ತರಹದ ಬ್ರೈನ್‌ಲೆಸ್ ಕಾಮಿಡಿ ವಸ್ತುವಿಷಯ ಉಣಬಡಿಸಿ ಜನಪ್ರಿಯತೆಯ ಹಳಿಗೆ ಮರಳಿದರು. ಅದಕ್ಕೂ ಮೊದಲು 'ಮಹಾಕ್ಷತ್ರಿಯ' ಚಿತ್ರದ ಸಮಾಧಾನಕರ ಯಶಸ್ಸು ಅವರಿಗೆ ಅಗತ್ಯವಿದ್ದ ಜೀವಾನಿಲ ನೀಡಿತ್ತು. ವ್ಯಸನಕ್ಕೆ ಸಿಲುಕಿದ ಯುವಕರನ್ನು ಸರಿದಾರಿಗೆ ತರುವ ಬೋಧನಾ ಧಾಟಿಯ ಈ ಚಿತ್ರದ 'ಈ ಭೂಮಿ ಬಣ್ಣದ ಬುಗುರಿ ಆ ಶಿವನೇ ಚಾಟಿ ಕಣೋ' ಹಾಡು ಈ ಹೊತ್ತೂ ಅನುರಣಿಸುತ್ತದೆ.




ಮಹಾತ್ಮ ಪಿಕ್ಚರ್ಸ್ ನಿರ್ಮಾಣ ಸಂಸ್ಥೆಯ ರೂವಾರಿಗಳ ಕುಟುಂಬದ ಕುಡಿ ರಾಜೇಂದ್ರ ಸಿಂಗ್ ಬಾಬು. 48 ಚಿತ್ರಗಳನ್ನು ನಿರ್ಮಿಸಿದ್ದ ಶಂಕರ್ ಸಿಂಗ್ ಹಾಗೂ ನಟ ಪ್ರತಿಮಾದೇವಿ ಅವರ ಪುತ್ರ ಈ ಬಾಬು. ತಂದೆಯಂತೆಯೇ ಸಿನಿಮಾ ರಕ್ತದಲ್ಲೇ ಬೆರೆತಿತ್ತು. ಅವರು 'ನಾಗಕನ್ಯೆ' ಚಿತ್ರದ ಮೂಲಕ ನಿರ್ದೇಶನಕ್ಕೆ ಕಾಲಿಟ್ಟು ಐವತ್ತು ವರ್ಷಗಳು ಉರುಳಿವೆ.

'ನಾಗರಹೊಳೆ' ಚಿತ್ರದ ಸಾಹಸಕ್ಕೆ ಕೈಹಾಕಿ ಮಕ್ಕಳ ಸಿನಿಮಾ ಪ್ರಭೇದದಲ್ಲಿ ಕೈಪಳಗಿಸಿಕೊಂಡ ಅವರು, ಆಮೇಲೆ 'ಕಿಲಾಡಿ ಜೋಡಿ', 'ಭರ್ಜರಿ ಬೇಟೆ' ಸಾಹಸಚಿತ್ರಗಳನ್ನು ನಿರ್ದೇಶಿಸಿ ಕಮರ್ಷಿಯಲ್ ಚೌಕಟ್ಟಿಗೆ ಒಗ್ಗಿಕೊಂಡರು.

'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದ 'ಅಂತ' ಕಾದಂಬರಿಯ ಮೇಲೆ ಅವರ ಕಣ್ಣು ಬಿತ್ತು. ಪ್ರೆಸ್ ಕ್ಲಬ್‌ನಲ್ಲಿ ಎದುರಾದ ಆ ಕಾದಂಬರಿಯ ಕರ್ತೃ ಎಚ್.ಕೆ. ಅನಂತರಾವ್ ಅವರನ್ನು ಕಂಡು ಬಾಬು ಚಕಿತರಾಗಿದ್ದರು. ಅಷ್ಟು ಸರಳವಾಗಿದ್ದ ವ್ಯಕ್ತಿಯಿಂದ ಹೊಮ್ಮಿದ್ದ ತೀವ್ರವಾದ ವಸ್ತುವನ್ನು ಅವರು ಸಿನಿಮಾ ಮಾಡಲು ನಿರ್ಧರಿಸಿದರು. 'ಅಂತ' ಚಿತ್ರ ಮೂಡಿದ್ದು ಹಾಗೆ. 1981ರಲ್ಲಿ ತೆರೆಕಾಣುವ ಮೊದಲು ಅದು ಸೆನ್ಸಾರ್ ಮಂಡಳಿಯವರ ಕೆಂಗಣ್ಣಿಗೂ ಗುರಿಯಾಗಿತ್ತು. ಅದರಲ್ಲಿನ ಹಿಂಸಾದೃಶ್ಯಗಳನ್ನು ಆಗ ಅನೇಕರು ಕಟುವಾಗಿ ವಿಮರ್ಶೆ ಮಾಡಿದ್ದರು. ಆದರೆ, ಚಿತ್ರ ತೆರೆಕಂಡಿದ್ದೇ ಜನರು ಮುಗಿಬಿದ್ದು ನೋಡಿದರು. ಕನ್ವರ್ ಲಾಲ್ ಪಾತ್ರ ಅಂಬರೀಶ್ ಅವರೊಳಗಿನ ಪ್ರತಿನಾಯಕನನ್ನೂ ಅನಾವರಣಗೊಳಿಸಿತು. ರೆಬೆಲ್ ಸ್ಟಾರ್ ಎಂಬ ಬಿರುದು ಅಂಬರೀಶ್ ಅವರಿಗೆ ಎಷ್ಟು ಅನ್ವರ್ಥ ಎನ್ನುವುದನ್ನು ಪುಷ್ಟೀಕರಿಸಿದ ಚಿತ್ರ ಅದು. ತೆಲುಗಿನಲ್ಲಿ 'ಅಂತಮ್ ಕಾದಿದಿ ಆರಂಭಂ', ತಮಿಳಿನಲ್ಲಿ 'ತ್ಯಾಗಿ' ಹೆಸರಿನಲ್ಲಿ ಇದೇ ಚಿತ್ರ ರಿಮೇಕ್ ಆಯಿತು. ಅದನ್ನೇ ಹಿಂದಿಯಲ್ಲಿ 'ಮೇರಿ ಆವಾಜ್ ಸುನೋ' ಹೆಸರಿನಲ್ಲಿ ಬಾಬು ಖುದ್ದು ನಿರ್ದೇಶಿಸಿದ್ದು ಆ ಸಂದರ್ಭದಲ್ಲಿ ಸಾಧನೆಯೇ ಹೌದು. ಜಿತೇಂದ್ರ, ಹೇಮಾಮಾಲಿನಿ, ಪರ್ವೀನ್ ಬಾಬಿ ಅಲ್ಲಿ ನಟಿಸಿದ್ದರು. ಕನ್ನಡದಲ್ಲಿ ಲಕ್ಷ್ಮಿ, ಲತಾ, ಜಯಮಾಲಾ ಛಾಪು ಮೂಡಿಸಿದ್ದ ಸಿನಿಮಾ 'ಅಂತ' ಎನ್ನುವುದನ್ನು ಮರೆಯಲಾಗದು.




ಸಿನಿಮಾ ಸಂಕ್ರಮಣ ಕಾಲದಲ್ಲಿ ರಾಜೇಂದ್ರ ಸಿಂಗ್ ಬಾಬು

ಅರ್ಜುನ್ ಸರ್ಜಾ ಮುಖ್ಯ ಪಾತ್ರಧಾರಿಯಾಗಿದ್ದ 'ಸಿಂಹದ ಮರಿ ಸೈನ್ಯ' ಅವರು ಮತ್ತೆ ಮಕ್ಕಳ ಸಾಹಸ ಪ್ರಧಾನ ಚಿತ್ರದತ್ತ ಹೊರಳಿದ್ದಕ್ಕೆ ಉದಾಹರಣೆ. 'ಗಂಡಭೇರುಂಡ' ಸಾಹಸಮಯ ಚಿತ್ರ ಮಾಡಿದ ನಂತರ 'ಬಂಧನ' ಚಿತ್ರದ ಭಾವಪ್ರವಾಹವನ್ನು ಎಬ್ಬಿಸಿದರು. ವಿಷ್ಣು, ಸುಹಾಸಿನಿ, ಜೈಜಗದೀಶ್ ಅಭಿನಯದ ಈ ಚಿತ್ರದ ನಿಯಂತ್ರಿತ ಮೆಲೋಡ್ರಾಮಾ ಹಾಗೂ ಸೊಗಸಾದ ಹಾಡುಗಳು ಚಿರಸ್ಥಾಯಿಯಾಗಿವೆ. ಆ ಕಾಲಘಟ್ಟದಲ್ಲೇ ಹಿಂದಿ ಚಿತ್ರರಂಗದಲ್ಲೂ ಅವಕಾಶಗಳು ಸಿಕ್ಕವು. ರಾಜಕುಮಾರ್, ಶತ್ರುಘ್ನ ಸಿನ್ಹಾ, ಹೇಮಾಮಾಲಿನಿ ಅಭಿನಯಿಸಿದ್ದ 'ಶರಾರ', ಸಂಜಯ್ ದತ್, ಜಯಪ್ರದಾ ಮುಖ್ಯ ಪಾತ್ರಧಾರಿಗಳಾಗಿದ್ದ 'ಮೇರಾ ಫೈಸಲಾ', ಶಮ್ಮಿ ಕಪೂರ್, ಶರ್ಮಿಳಾ ಟ್ಯಾಗೋರ್ ಅವರಂತಹ ನುರಿತ ಕಲಾವಿದರು ಇದ್ದ 'ಏಕ್ ಸೇ ಭಲೆ ದೋ' ಬಾಲಿವುಡ್ ಅವಕಾಶದ ಕೆಲವು ನಮೂನೆಗಳು.

ಇಟಲಿಯ 'ಫ್ಲೋರ್ ಸ್ಟೆಪ್ಸ್ ಇನ್ ದಿ ಕ್ಲೌಡ್ಸ್' ಚಿತ್ರದ ಆತ್ಮ ಇಟ್ಟುಕೊಂಡಿದ್ದ 'ಮುಂಗಾರಿನ ಮಿಂಚು', ಸಿ.ಎನ್. ಮುಕ್ತಾ ಅವರ ಕಾದಂಬರಿ ಆಧರಿಸಿದ 'ದೋಣಿ ಸಾಗಲಿ' ಅವರ ಭಾವಸಂವೇದನೆಗೆ ಕನ್ನಡಿ ಹಿಡಿದ ಚಿತ್ರಗಳು. 'ಭೂಮಿ ತಾಯಿಯ ಚೊಚ್ಚಲ ಮಗ' ಚಿತ್ರವು ಕೃಷಿಕರ ಬದುಕಿನ ಬಡಬಾನಲವನ್ನು ಕಾಣಿಸಿತು. 'ಹಿಮಪಾತ' ಚಿತ್ರದ ಸಾಹಸಕ್ಕೆ ಕೈಹಾಕಿ ಅವರು ಸೋತರೂ ಚಿತ್ರಗಳ ಕನವರಿಕೆಯನ್ನಂತೂ ಬಿಡಲಿಲ್ಲ. ಮಗ ಆದಿತ್ಯ ಅವರಿಗಾಗಿ 'ಲವ್', 'ರೆಬೆಲ್' ಎಂಬ ಸಿನಿಮಾಗಳನ್ನು ನಿರ್ದೇಶಿಸಿದರು. ಈಗಲೂ ಅವರು ಕಂಬಳದ ವಸ್ತುವಿನ ಚಿತ್ರ ಮುಗಿಸುವ ಕಾರ್ಯದಲ್ಲಿ ನಿರತರು. ದರ್ಶನ್ ಅವರನ್ನು ಹಾಕಿಕೊಂಡು ಐತಿಹಾಸಿಕ ಚಿತ್ರ ಮಾಡಲು ಬಿ.ಎಲ್. ವೇಣು ಅವರಿಂದ ಬರೆಸಿದ್ದ ಚಿತ್ರಕಥೆ ಇನ್ನೂ ಜತನವಾಗಿಯೇ ಇದೆ.

ಈ ಸಂದರ್ಭದಲ್ಲೇ ಅವರ ಚಿತ್ರಪಥವನ್ನು ನೆನಪಿಸಿಕೊಳ್ಳುವ ಕಾರ್ಯಕ್ರಮವನ್ನು 'ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ' ಬೆಂಗಳೂರಿನಲ್ಲಿ ಆಯೋಜಿಸಿರುವುದು ಅರ್ಥಪೂರ್ಣ. ಪ್ಯಾನ್ ಇಂಡಿಯಾ ಹೆಸರಿನಲ್ಲಿ ನಾಲ್ಕೈದು ವರ್ಷ ಒಂದೇ ಚಿತ್ರ ಉಜ್ಜುವ ಈ ಹೊತ್ತಿನ ಮಾರುಕಟ್ಟೆ ಜನರೆಲ್ಲಿ? ಪ್ರಯೋಗಕ್ಕೆ ಬೆನ್ನು ಮಾಡದೆ ವೈಫಲ್ಯವನ್ನೂ ಮೆಟ್ಟಿಲಾಗಿಸಿಕೊಂಡ ಬಾಬು ಅವರೆಲ್ಲಿ?

'ಸಿಂಹದ ಮರಿ ಸೈನ್ಯ' ಸಿನಿಮಾದ ದೃಶ್ಯ


ಗೀತೆಗಳ ಕಡುಮೋಹಿ

ರಾಜೇಂದ್ರ ಸಿಂಗ್ ಬಾಬು ಅವರ ಸಿನಿಮಾಗಳಲ್ಲಿ ಹಾಡುಗಳನ್ನು ಕಟ್ಟಿದ ಬಗೆಯನ್ನು ಬರೆಯುತ್ತಾ ಹೋದರೆ ಒಂದು ಪ್ರಬಂಧವೇ ಆದೀತು. 'ಮುತ್ತಿನಹಾರ' ಚಿತ್ರದ 'ದೇವರು ಹೊಸೆದ ಪ್ರೇಮದ ದಾರ...' ಗೀತೆಯನ್ನು ಬಾಲಮುರಳಿಕೃಷ್ಣ ಅವರಿಂದಲೇ ಹಾಡಿಸಬೇಕು ಎಂದು ಶತಾಯಗತಾಯ ಪ್ರಯತ್ನಪಟ್ಟರು. ಆಗಿನ ಮದ್ರಾಸ್‌ಗೆ ಹೋಗಿ, ಬಾಲಮುರಳಿ ಅವರನ್ನು ಒಪ್ಪಿಸಲು ಸಾಕಷ್ಟು ಸಮಯ ವ್ಯಯಿಸಿದರು. ಅವರು ಸಿನಿಮಾ ಗೀತೆ ಹಾಡಲು ಸುಲಭಕ್ಕೆ ಒಪ್ಪುತ್ತಿರಲಿಲ್ಲ. ಬಾಲಮುರಳಿ ಅವರು ಆ ಗೀತೆಯನ್ನು ರೆಕಾರ್ಡ್ ಮಾಡಲು ಪ್ರಾರಂಭಿಸಿದ್ದು ರಾತ್ರಿ. ಅದನ್ನು ಇನ್ನೂ ಪಕ್ಕಾ ರೀತಿಯಲ್ಲಿ ಹಾಡಬೇಕು ಎಂದು ಹಲವು ಸುಧಾರಣೆಗಳೊಂದಿಗೆ ದೀರ್ಘಾವಧಿ ತೆಗೆದುಕೊಂಡು ಹಾಡಿದರು. ಆ ಹಾಡನ್ನು ಕೇಳಿದ ಚಿತ್ರತಂಡದ ಎಲ್ಲರ ಮೈ ಝುಮ್ಮೆಂದಿತ್ತು.

'ಬಂಧನ' ಸಿನಿಮಾದಲ್ಲಿ ಎಂ. ರಂಗರಾವ್ ಅವರಿಂದ ಭಾವಗೀತಾತ್ಮಕ ಶೈಲಿಯ ಹಾಡುಗಳನ್ನು ಹೊರತೆಗೆಸಿದ್ದರು. 'ಬಣ್ಣ ಬಣ್ಣ' ಹಾಡಿನ ಚಿತ್ರೀಕರಣದ ಸಂದರ್ಭ. ಸುಹಾಸಿನಿ ಅವರಿಗೆ ಒಂದು ಬಣ್ಣ ಹಾಕಿದ ನಂತರ ಇನ್ನೊಂದನ್ನು ಹಾಕಿಸಿಕೊಳ್ಳಲು ಮತ್ತೆ ಅಣಿಯಾಗಲು ಅನುಕೂಲ ಕಲ್ಪಿಸಿಕೊಡಲೆಂದು ಚಿತ್ರೀಕರಣ ನಡೆದ ಸ್ಥಳದಲ್ಲೇ ತಟ್ಟಿಗೆಯ ಒಂದು ತಾತ್ಕಾಲಿಕ ಸ್ನಾನದ ಗುಡಿಸಲು ನಿರ್ಮಿಸಿದ್ದು ಇನ್ನೊಂದು ಕಥೆ.

'ಅಂತ' ಸಿನಿಮಾಗೆ ಜಿ.ಕೆ. ವೆಂಕಟೇಶ್ ಅವರು ಸಂಯೋಜನೆ ಮಾಡಿದ್ದ ಹಾಡುಗಳು ಸಕಾಲಿಕ ಶೈಲಿಯಲ್ಲಿದ್ದವು. 'ನಾನು ಯಾರು ಯಾವ ಊರು' ಹಾಡಾಗಲೀ, 'ಪ್ರೇಮವಿದೆ ಮನದೇ' ಗೀತೆಯಾಗಲಿ ಇವತ್ತಿಗೂ ಗುನುಗುವಷ್ಟು ಲಯಬದ್ಧವಾಗಿವೆ.

ಕಲ್ಲೂಡಿ ಹಪ್ಪಳ ಎಲ್ಲೆಲ್ಲೂ ಸಪ್ಪಳ!

10ನೇ ಪುಟದಿಂದ...

ಕಲ್ಲೂಡಿಯ ಜನರು ಬೆಂಗಳೂರಿಗೆ ಹಪ್ಪಳ ತೆಗೆದುಕೊಂಡು ಹೋಗಲು ಇರುವ ಕಡಿಮೆ ಖರ್ಚಿನ ಮಾರ್ಗವೆಂದರೆ ರೈಲುಗಳು. ಬೆಳಿಗ್ಗೆ 7 ಮತ್ತು 8ಕ್ಕೆ ಗೌರಿಬಿದನೂರಿನಿಂದ ಬೆಂಗಳೂರಿಗೆ ಹೋಗುವ ರೈಲುಗಳ ಮೂಲಕ ಹಪ್ಪಳವನ್ನು ಕೊಂಡೊಯ್ಯಲಾಗುತ್ತದೆ. ಕೆಲವರು ದೊಡ್ಡ ಪ್ರಮಾಣದಲ್ಲಿ ಹಪ್ಪಳವನ್ನು ಜೀಪುಗಳಲ್ಲಿ ತುಂಬಿಸಿ ರಾಜಧಾನಿಗೆ ಮುಟ್ಟಿಸುತ್ತಾರೆ.

ಬೆಂಗಳೂರಿಗೆ ಹಪ್ಪಳ ಸಾಲದು

ಬೆಂಗಳೂರಿನ ಹೋಟೆಲ್‌ಗಳು, ಮಾಲ್‌ಗಳು, ಸಗಟು ಮತ್ತು ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಕಲ್ಲೂಡಿ ಹಪ್ಪಳಕ್ಕೆ ಬಲು ಬೇಡಿಕೆ. ಬಹಳಷ್ಟು ಮಂದಿ ಮನೆಗಳಿಗೆ ನೇರವಾಗಿ ಮಾರಾಟ ಮಾಡುತ್ತಾರೆ. ಮದುವೆ ಸೇರಿದಂತೆ ವಿವಿಧ ಸಮಾರಂಭಗಳಿಗೆ ಅಡುಗೆ ಸಿದ್ಧಗೊಳಿಸುವ ಬಾಣಸಿಗರು ಸಹ ಇಲ್ಲಿಂದ ಹಪ್ಪಳ ಖರೀದಿಸುತ್ತಾರೆ. ನೂರಾರು ಬ್ಯಾಗುಗಳಲ್ಲಿ ಬೆಂಗಳೂರಿಗೆ ಕಲ್ಲೂಡಿ ಹಪ್ಪಳ ನಿತ್ಯ ಪೂರೈಕೆ ಆಗುತ್ತದೆ. ತಯಾರಕರೇ ಹಪ್ಪಳವನ್ನು ಗ್ರಾಹಕರಿಗೆ ತಲುಪಿಸಿದರೆ ಒಂದು ಸಾವಿರ ಹಪ್ಪಳಕ್ಕೆ ₹800ರಿಂದ ₹900. ಅದೇ ಗ್ರಾಹಕರೇ ಕಲ್ಲೂಡಿಗೆ ಬಂದು ಖರೀದಿಸಿದರೆ ಬೆಲೆ ಸ್ವಲ್ಪ ಕಡಿಮೆ ಆಗುತ್ತದೆ.

'ಬೆಂಗಳೂರಿನ ಜೊತೆಗೆ ದೊಡ್ಡಬಳ್ಳಾಪುರ, ಸಮೀಪವೇ ಇರುವ ಆಂಧ್ರಪ್ರದೇಶದ ಹಿಂದೂಪುರ ಸೇರಿದಂತೆ ವಿವಿಧ ಕಡೆಗಳಿಗೆ ಹಪ್ಪಳ ಪೂರೈಕೆ ಆಗುತ್ತದೆ. ಕೆಲವರು ಇಲ್ಲಿ ಸಗಟು ದರದಲ್ಲಿ ಖರೀದಿಸಿ ಅವುಗಳನ್ನು ವಿದೇಶಕ್ಕೂ ಕಳುಹಿಸುತ್ತಾರೆ. 'ಮಹಾಸಾಗರದ ರೀತಿ ಜನರಿರುವ ಬೆಂಗಳೂರಿಗೆ ನಮ್ಮ ಹಪ್ಪಳ ಯಾವ ಮೂಲೆಗೂ ಸಾಲದು' ಎನ್ನುತ್ತಾರೆ ಹಪ್ಪಳ ತಯಾರಕರು. ನಿತ್ಯ ದೊಡ್ಡ ಪ್ರಮಾಣದಲ್ಲಿ ಹಪ್ಪಳ ತಯಾರಿಸಿದರೂ ಸಂಗ್ರಹವಾಗುವುದಿಲ್ಲ. ಹಪ್ಪಳ ಒಣಗುತ್ತಿದ್ದಂತೆ ಮಾರುಕಟ್ಟೆಗೆ ರವಾನಿಸಲಾಗುತ್ತದೆ.

ಪ್ರೀತಿ, ಸಂಬಂಧಗಳ ಸೇತುವೆ


ಸಾಮಾನ್ಯವಾಗಿ ವ್ಯಾಪಾರ ವಹಿವಾಟುಗಳಲ್ಲಿ ಸ್ಪರ್ಧೆ, ಪೈಪೋಟಿ ಸಾಮಾನ್ಯ. ಆದರೆ ಇಲ್ಲಿ ಬಹುತೇಕ ಮನೆಗಳಲ್ಲಿ ಹಪ್ಪಳದ ವಹಿವಾಟು ನಡೆದರೂ ಸ್ಪರ್ಧೆಯಿಲ್ಲ. ಪರಸ್ಪರ ಸಹಕಾರವಿದೆ. 'ಎಲ್ಲರೂ ಬದುಕಲಿ' ಎನ್ನುವ ತತ್ವವಿದೆ. ದೊಡ್ಡ ಆರ್ಡರ್‌ಗಳು ಒಬ್ಬರಿಗೇ ಸಿಕ್ಕರೆ ಅವರು ನೆರೆಹೊರೆಯವರ ಮನೆಗಳ ಹಪ್ಪಳಗಳನ್ನೂ ಜೊತೆಯಲ್ಲಿ ಕೊಂಡೊಯ್ಯುತ್ತಾರೆ.

ಚಳಿಗಾಲ ಮತ್ತು ಬೇಸಿಗೆಯ ದಿನಗಳಲ್ಲಿ ಹಪ್ಪಳ ತಯಾರಿಕೆ ಜೋರಾಗಿರುತ್ತದೆ. ಮಳೆಗಾಲದಲ್ಲಿ ಹಪ್ಪಳವನ್ನು ಒಣಹಾಕಲು ಕಷ್ಟವಾಗುವುದರಿಂದ ಕಡಿಮೆ ಆಗುತ್ತದೆ. ಆ ದಿನಗಳಲ್ಲಿ ಮೋಡ ಮತ್ತು ಮಳೆಯನ್ನು ಆಧರಿಸಿ ಹಪ್ಪಳ ತಯಾರಿಕೆ ನಡೆಯುತ್ತದೆ.


ಹಪ್ಪಳ ತಯಾರಿಯಲ್ಲಿ ನಿರತ ಜನರು

ದೀರ್ಘವಾಗಿ ಮಳೆ ಸುರಿಯುವ ಮತ್ತು ಮೋಡ ಕಟ್ಟಿದ ದಿನಗಳಲ್ಲಿ ಕಲ್ಲೂಡಿಯ ಜನರಿಗೆ ಬಿಡುವು. ಬಿಸಿಲು ಯಾವಾಗ ಮೂಡುತ್ತದೆ ಎಂದು ಆಗಸದತ್ತ ನೋಡುತ್ತಲೇ ಇರುತ್ತಾರೆ. ಇಲ್ಲದಿದ್ದರೆ ವರ್ಷವಿಡೀ ಇಲ್ಲಿನ ಮನೆಗಳ ತಾರಸಿಯಲ್ಲಿ ಹಪ್ಪಳ ಒಣಗುತ್ತದೆ. ಬದುಕು ನಡೆಯುತ್ತದೆ. ಮಕ್ಕಳ ಓದು, ಮಗಳ ಮದುವೆ, ಮಗನ ಉನ್ನತ ಶಿಕ್ಷಣ, ಮನೆ ಕಟ್ಟುವುದು, ಸೈಟ್, ಒಡವೆ, ವಾಹನ ಖರೀದಿಸುವುದು... ಎಲ್ಲವೂ ಗರಿಗೆದರುತ್ತವೆ.

ಮೊದಲ ಓದು


ಓರ್ವ ಭಾರತೀಯ ಯಾತ್ರಿಕ ಒಂದು ಅಪೂರ್ಣ ಆತ್ಮಕಥೆ
ಪು: 436, ₹: 500


ಇಂಗ್ಲಿಷ್ ಮೂಲ: ಸುಭಾಷಚಂದ್ರ ಬೋಸ್,
ಕನ್ನಡಕ್ಕೆ: ಪ್ರೊ. ಕೆ.ಈ. ರಾಧಾಕೃಷ್ಣ,
ಪ್ರ: ಸನ್‌ಸ್ಟಾರ್ ಪಬ್ಲಿಷರ್,
ಫೋ: 080– 22224143


ಭಾರತ ಸ್ವಾತಂತ್ರ್ಯ ಚಳವಳಿಯಲ್ಲಿ ಸುಭಾಷಚಂದ್ರ ಬೋಸ್

ಸುಭಾಷಚಂದ್ರ ಬೋಸ್ ಅವರ 'ಆ್ಯನ್ ಇಂಡಿಯನ್ ಪಿಲಿಗ್ರಿಮ್ ಆ್ಯನ್ ಅನ್‌ಫಿನಿಶಡ್ ಬಯೋಗ್ರಫಿ', 'ಇಂಡಿಯನ್ ಸ್ಟ್ರಗಲ್' ಮತ್ತು 'ಎಂ' ಎಂದು ಗುರುತಿಸಿಕೊಂಡಿದ್ದ ಅನಾಮಧೇಯ ಮಹಿಳೆ ರಚಿಸಿದ 'ಅಸಾಮಾನ್ಯ ದಿನಚರಿ'ಯನ್ನು ಪ್ರೊ.ಕೆ.ಈ. ರಾಧಾಕೃಷ್ಣ ಅವರು ಕನ್ನಡಕ್ಕೆ ಪರಿಚಯಿಸಿದ್ದಾರೆ.


'ಆ್ಯನ್ ಇಂಡಿಯನ್ ಪಿಲಿಗ್ರಿಮ್ ಆ್ಯನ್ ಅನ್‌ಫಿನಿಶಡ್ ಬಯೋಗ್ರಫಿ' ('ಓರ್ವ ಭಾರತೀಯ ಯಾತ್ರಿಕ ಒಂದು ಅಪೂರ್ಣ ಆತ್ಮಕಥೆ') ಸುಭಾಷಚಂದ್ರ ಬೋಸ್ ಅವರ ಹುಟ್ಟು, ಬಾಲ್ಯ, ಕುಟುಂಬದ ಪರಿಚಯ, ಶಿಕ್ಷಣದ ವಿವರವನ್ನು ತಿಳಿಸುತ್ತದೆ. ಅವರು ಭಾರತೀಯ ನಾಗರಿಕ ಸೇವೆಯ ಹುದ್ದೆಗೆ ನೀಡಿದ ರಾಜೀನಾಮೆ ಪತ್ರವೂ ಒಳಗೊಂಡಂತೆ ಸುಭಾಷ್ ಅವರ 12 ಪತ್ರಗಳು ಇದರಲ್ಲಿ ಇವೆ. ಸುಭಾಷ್ ತಮ್ಮ ಸಮಕಾಲೀನ ನೇತಾರರಾದ ಮಹಾತ್ಮ ಗಾಂಧಿ, ರವೀಂದ್ರನಾಥ ಟ್ಯಾಗೋರ್, ನೆಹರೂ, ತಮ್ಮ ಅಣ್ಣ ಶರತ್‌ಚಂದ್ರ ಅವರಿಗೆ ಬರೆದ ಪತ್ರಗಳು ಇಲ್ಲಿವೆ. ಮಾತ್ರವಲ್ಲದೆ, ಅಪರೂಪದ ಚಿತ್ರಗಳನ್ನೂ ಈ ಕೃತಿ ಒಳಗೊಂಡಿದೆ.

'ಇಂಡಿಯನ್ ಸ್ಟ್ರಗಲ್' (ಭಾರತೀಯ ಹೋರಾಟ) ಕೃತಿಯಲ್ಲಿ ಸ್ವಾತಂತ್ರ್ಯ ಚಳವಳಿಯ ನೇತಾರ ಸುಭಾಷಚಂದ್ರ ಬೋಸ್ ಚಳವಳಿಯನ್ನು ಎರಡು ಕಾಲಘಟ್ಟದಲ್ಲಿ ಗುರುತಿಸಿದ್ದಾರೆ. 1920ರಿಂದ 1934ರವರೆಗಿನ ಘಟನಾವಳಿಗಳನ್ನು ಮೊದಲ ಭಾಗದಲ್ಲಿ ದಾಖಲಿಸುತ್ತಾರೆ. ಎರಡನೇ ಭಾಗದಲ್ಲಿ 1935ರಿಂದ 1942ರವರೆಗೆ ಸಂಭವಿಸಿದ ರಾಜಕೀಯ ಮತ್ತು ಸಾಮಾಜಿಕ ಚಳವಳಿಗೆ ಸಂಬಂಧಿಸಿದಂತೆ ಬರೆಯುತ್ತಾರೆ. ಸ್ವತಃ ಚಳವಳಿಯ ಭಾಗವಾಗಿದ್ದ ಸುಭಾಷ್ ತಮ್ಮ ಒಲವು ನಿಲುವಿನ ಜೊತೆ ಅಂದು ಚಳವಳಿ ರೂಪುಗೊಳ್ಳುತ್ತಿದ್ದ ಬಗೆಯ ವಿವರವನ್ನು ಇಲ್ಲಿ ನೀಡಿದ್ದಾರೆ. ಭಾರತೀಯ ಸ್ವಾತಂತ್ರ್ಯ ಚಳವಳಿಯ ಪ್ರಮುಖ ಆಕರ ಗ್ರಂಥದಂತೆ ಇರುವ 'ಭಾರತೀಯ ಹೋರಾಟ' ಸ್ವರಾಜ್ ಪಕ್ಷದ ಬಂಡಾಯ, ಗಾಂಧಿ ಮತ್ತು ಇರ್ವಿನ್ ಅವರ ನಡುವಿನ ಒಪ್ಪಂದ, ದೇಶಬಂಧು ಸಿ.ಆರ್. ದಾಸ್ ಅವರ ಆಡಳಿತ, ಬಂಗಾಳದ ಪರಿಸ್ಥಿತಿ, ಭಾರತದ ಇತಿಹಾಸದಲ್ಲಿ ಎಂ.ಕೆ. ಗಾಂಧಿ ಅವರ ಪಾತ್ರ ಏನು ಎನ್ನುವ ವಿವರವನ್ನೂ ಒಳಗೊಂಡಿದೆ. ರಾಷ್ಟ್ರೀಯ ಕಾಂಗ್ರೆಸ್ ಮಾತ್ರವಲ್ಲದೆ, ಅಂದು ಚಳವಳಿಯಲ್ಲಿ ಸಕ್ರಿಯಾಗಿದ್ದ ಕಾರ್ಮಿಕ, ಮಹಿಳಾ ಮತ್ತು ಕಮ್ಯುನಿಸ್ಟ್, ಸಮಾಜವಾದಿ ಹೋರಾಟಗಳ ಪರಿಚಯವನ್ನೂ ಕಟ್ಟಿಕೊಟ್ಟಿದ್ದಾರೆ.


ಭಾರತೀಯ ಹೋರಾಟ
ಪು: 524, ₹:550


ಅಸಾಮಾನ್ಯ ದಿನಚರಿ
ಪು: 264, ₹:300

'ದೇಶಕ್ಕಾಗಿ ಎಲ್ಲ, ಸ್ವಂತಕ್ಕೆ ಏನೂ ಇಲ್ಲ' ಎನ್ನುವ ಘೋಷವಾಕ್ಯವನ್ನು 'ಅಸಾಮಾನ್ಯ ದಿನಚರಿ' ಕೃತಿ ಸಾಕ್ಷಾತ್ಕರಿಸಿದೆ. ಭಾರತೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದ ಅನಾಮಿಕ ಮಹಿಳೆಯ ಡೈರಿಯ ಪ್ರಕಟಿತ ರೂಪ. ತಮ್ಮನ್ನು 'ಎಂ' ಎಂದು ಗುರುತಿಸಿಕೊಂಡಿರುವ ಅವರು ಭಾರತವನ್ನು ರಾಜಕೀಯ ದಾಸ್ಯದಿಂದ ಮುಕ್ತಗೊಳಿಸುವ ಸಂಬಂಧ ಸಕ್ರಿಯವಾಗಿ ಹೋರಾಡಿದ್ದಾರೆ. ಅವರು 'ಅಜಾದ್ ಹಿಂದ್ ಫೌಜ್' ಸಂಘಟನೆಯ ಝಾನ್ಸಿ ಲಕ್ಷ್ಮಿಬಾಯಿ ಸೇನಾ ವಿಭಾಗದಲ್ಲಿ ಸಕ್ರಿಯರಾಗಿದ್ದರು ಎನ್ನುವ ವಿವರವನ್ನು ಈ ಕೃತಿಯಲ್ಲಿ ನೀಡುತ್ತಾರೆ. ಈ ಕೃತಿ ಅಜಾದ್ ಹಿಂದ್ ಸೇನೆಯ ಆಂದೋಲನ, ಸುಭಾಷಚಂದ್ರ ಬೋಸ್ ಅವರ ಹೋರಾಟದ ಸ್ವರೂಪವನ್ನು ತಿಳಿಸುತ್ತದೆ.


ಪಶುವೈದ್ಯನ ಪಯಣ
ಲೇ: ಡಾ. ಎನ್.ಬಿ. ಶ್ರೀಧರ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಫೋ: 080–22161900

ಗೊತ್ತುಗುರಿ ಇಲ್ಲದೆ ವೈದ್ಯನಾದ ಪರಿ

ಪಶುವೈದ್ಯ ವೃತ್ತಿಯಿಂದ ಸಂಶೋಧನೆ, ಅಧ್ಯಾಪನದಿಂದ ತಮ್ಮ ಬದುಕನ್ನು ಡಾ.ಎನ್.ಬಿ. ಶ್ರೀಧರ ವಿಸ್ತಾರ ಮಾಡಿಕೊಂಡಿದ್ದಾರೆ. ಅದರ ಅನುಭವ ಕಥನವನ್ನು ವಿನೋದ ಶೈಲಿಯಲ್ಲಿ ಬಿಡಿಬಿಡಿಯಾಗಿ ರಚಿಸಿದ ಪ್ರಬಂಧಗಳನ್ನು 'ಪಶುವೈದ್ಯನ ಪಯಣ' ಕೃತಿಯಲ್ಲಿ ಸಂಕಲಿಸಿದ್ದಾರೆ. ವೈದ್ಯರನ್ನು ಹಳ್ಳಿಯಲ್ಲಿ ಅಪಾರ ಗೌರವಿಸಿದರೂ ಕೆಲಸದ ಒತ್ತಡ ಮತ್ತು ಸೌಲಭ್ಯಗಳ ಕೊರತೆಯಿಂದ ಪಶುಪಾಲಕರ ನಿರೀಕ್ಷೆಯನ್ನು ಮುಟ್ಟಲು ಆಗದೆ, ಅವರು ಎದುರಿಸಿದ ತೊಳಲಾಟವೂ ಇಲ್ಲಿ ನವಿರಾಗಿ ಅರಳುತ್ತದೆ.

ಲೇಖಕರು ಪಶುವೈದ್ಯಕೀಯ ಪದವಿ ಅಧ್ಯಯನಕ್ಕೆ ಸೇರುವುದೇ ಒಂದು ಪವಾಡ. ಪಿಯುಸಿ ನಂತರ ಏನು ಓದಬೇಕು ಎನ್ನುವ ನಿಶ್ಚಿತ ಯೋಜನೆ ಇರದ ಕಾರಣ ಬಿ.ಎಸ್‌ಸಿ (ಭೌತಶಾಸ್ತ್ರ) ಸೇರುತ್ತಾರೆ. ಅಲ್ಲಿಂದ ಕೃಷಿ ವಿಜ್ಞಾನ, ಅದನ್ನೂ ಬಿಟ್ಟು ಎಂಜಿನಿಯರಿಂಗ್ ಸೇರುತ್ತಾರೆ. ಪ್ರಗತಿಪರ ರೈತ ವೆಂಕಟರಮಣ ಮುದ್ದೆಪಾಲ್ ಅವರ ಸೂಚನೆಯಂತೆ ಪಶುವೈದ್ಯಕೀಯ ಪದವಿಗೆ ಸೇರುತ್ತಾರೆ. ಈ ವಿವರವನ್ನು 'ನಾನು ಹೇಗೆ ಪಶುವೈದ್ಯನಾದೆ?' ಎಂಬ ಪ್ರಬಂಧದಲ್ಲಿ ವಿವರಿಸುತ್ತಾರೆ. ನಂತರ ಅವರು ಡಾಕ್ಟರೇಟ್ (ಪಿ.ಎಚ್‌ಡಿ) ಪದವಿಯನ್ನು ಪಡೆಯುತ್ತಾರೆ.


'ದನ ಕಾಯುವ ಕೆಲಸ' ಶ್ರೀಧರ ಅವರ ಅನುಭವ ಕಥನದ ಮೊದಲ ಬರಹ. ಇದರಲ್ಲಿ ಶಾಲಾ ದಿನಗಳ ಸ್ಥಿತಿಗತಿಯನ್ನು ಪರಿಚಯಿಸುವ ಜೊತೆಗೆ ತಮ್ಮ ಮನೆತನದ ಕೃಷಿ ಕಸುಬಿಗೆ ನೆರವಾಗುತ್ತಿದ್ದ ಬಗೆಯನ್ನು ಹೇಳಿದ್ದಾರೆ. ಪಶುವೈದ್ಯರಾದ ಮೇಲೆ ಜಾನುವಾರುಗಳ ನಿಗೂಢ ಕಾಯಿಲೆಗಳನ್ನು ಗುರುತಿಸಿ ಉಪಚರಿಸುತ್ತಾರೆ. ಈ ವಿವರವನ್ನು ತಿಳಿದ ಕಲಾವಿದ ಬಸವರಾಜ ಬೆಣ್ಣಿ 'ಡಾಕ್ಟರ್ ಶ್ರೀಧರ್ ಅವರು 8ನೇ ತರಗತಿ ಓದುವಾಗಲೂ ದನ ಕಾಯುತ್ತಿದ್ದರು. ಈಗಲೂ ಸಹ ದನ ಕಾಯುತ್ತಿದ್ದಾರೆ' ಎಂದು ಪ್ರಶಂಸಿಸಿದ ಹಾಸ್ಯ ಪ್ರಸಂಗವನ್ನು ಇಲ್ಲಿ ಸ್ಮರಿಸುತ್ತಾರೆ.

'ಆಪರೇಷನ್ ಸಕ್ಸಸ್ ಪೇಷಂಟ್...', 'ರೈತರಾ ಇವರು?' 'ಒಂದು ಬಾವಿಯ ಕಥೆ', 'ಜನಿವಾರದಿಂದ ಜಾನುವಾರು ರಕ್ಷಣೆ!', 'ನಾಡಿಗೆ ಬಂದ ಕಾಡುಕೋಣ', 'ದನಕ್ಕೆ ಇಂಜೆಕ್ಷನ್ ಚುಚ್ಚುವವರೆಲ್ಲ ಡಾಕ್ಟರುಗಳಲ್ಲ' ಎಂಬ ಪ್ರಬಂಧಗಳೂ ಸೇರಿದಂತೆ 44 ಬರಹಗಳನ್ನು ಈ ಸಂಕಲನ ಒಳಗೊಂಡಿದೆ. ವಿಸ್ತಾರವಾದ ಅನುಭವ ಜನ್ಯ ಸೃಜನಶೀಲತೆ ಇಲ್ಲಿ ಸ್ಫುರಿಸಿದೆ. ಇಲ್ಲಿನ ರಚನೆಗಳು ಪಶುಪಾಲಕರು ಮತ್ತು ಪಶುವೈದ್ಯರಿಗೆ ಮಾರ್ಗದರ್ಶನ ನೀಡುವಂತೆ ಇವೆ.

ಪುಟ: 240 ₹290

ಹರೂರಿನ ಹಾದಿಯಲ್ಲಿ ಹಸಿರು, ಜಲಪಾತಗಳು...






ರಸ್ತೆ ಪಕ್ಕದಲ್ಲೇ ಇರುವ ಕಿರುಜಲಪಾತ

• ದತ್ತಾತ್ರೇಯ ಭಟ್ಟ ಕಣ್ಣಿಪಾಲ

ಹಂದಿಕೊಡ್ಲು, ಹುಲಿ ಮೂಲೆ, ಗಮಯನ ಕತ್ರಿ, ಬಾಳೆಕೊಡ್ಲು, ನೀರಿನ ಜಡ್ಡಿ, ಬೆಳ್ಮನೆ ಕ್ರಾಸ್ ಹೀಗೆ ದಾರಿಯ ಪ್ರತಿ ತಿರುವಿಗೂ ಒಂದೊಂದು ಹೆಸರು. ಸುಮ್ಮನೆ ಈ ರಸ್ತೆಯಲ್ಲಿ ಸಾಗುವಾಗ ಹುಲಿ, ಕಾಡುಕೋಣ, ಕಾನುಕುರಿ, ಕಡವೆ ಸಿಗದೇ ಹೋಗುವ ಸಂದರ್ಭವೇ ಇಲ್ಲ. ಅಪರೂಪದ ಜೀವವೈವಿಧ್ಯಗಳನ್ನು ತನ್ನೊಡಲೊಳಗಿಟ್ಟು-ಕೊಂಡ ಪಶ್ಚಿಮ ಘಟ್ಟದ ಕಾಳಿ ನದಿಯ ಪಕ್ಕದ ತಾಣವಿದು. ಉತ್ತರಕನ್ನಡದ ಯಲ್ಲಾಪುರ ಕೇಂದ್ರದಿಂದ ಕೈಗಾ ಇಳಕಲ್ ರಾಜ್ಯ ಹೆದ್ದಾರಿಯ ಮಾರ್ಗವಿದು. ಕದ್ರಾ, ಮಲ್ಲಾಪುರ ಸಂಪರ್ಕಿಸುವ ಹರೂರಿನ ಬಳಿಯ ಹಸಿರು ಮರದ ನೆರಳಿನ ಅಡಿಯಲ್ಲಿ ನಿಧಾನವಾಗಿ ಸಾಗುವಾಗ ಪ್ರತಿ ತಿರುವಿನಲ್ಲಿ ಪುಟ್ಟದಾದ ಕಿರು ಜಲಪಾತಗಳು ಎದುರುಗೊಳ್ಳುತ್ತವೆ. ಹಸಿರು ಹಾಸಿನ ಕಲ್ಲುಬಂಡೆಗಳ ನಡುವೆ ತುಸು ತುಸುವೇ ಜಾರಿಕೊಳ್ಳುವ ನೀರಹನಿಗಳನ್ನು ಒಮ್ಮೆ ಮುಟ್ಟದೇ ಬರಲು ಮನಸ್ಸಾಗುವುದಿಲ್ಲ. ಹತ್ತು ಅಡಿಗಳಿಂದ ಐವತ್ತು ಅಡಿಗಳವರೆಗೆ ಹಾಲಿನಧಾರೆಯಾಗಿ ಕಾಣಸಿಗುವ ಈ ಜಲಪಾತಗಳು ಬೇಸಿಗೆಯ ಕೊನೆಯಲ್ಲಿ ಕಣ್ಮರೆಯಾದರೂ ಮಳೆ ಆರಂಭವಾಗುವ ಹೊತ್ತಿಗೆ ಮೈದುಂಬಿಕೊಳ್ಳುತ್ತವೆ.

ನೇರ ರಸ್ತೆ ದಾಟಿದ ಮೇಲೂ ಮೂವತ್ತು ಕಿಲೋಮೀಟರ್ ತಿರುವುಗಳಿಂದ ಕೂಡಿದ ಇಲ್ಲಿಯ ಘಟ್ಟ ಪ್ರದೇಶದ ಇಳಿಜಾರಿನ ರಸ್ತೆಯಲ್ಲಿ ಸಾಗುವಾಗ ಎದೆಗಟ್ಟಿಯಾಗಿರಬೇಕು. ಏಕೆಂದರೆ ವನ್ಯಜೀವಿಗಳ ಆಶ್ರಯ ತಾಣವಾಗಿರುವ ಈ ಬೆಟ್ಟದಲ್ಲಿ ಹುಲಿ, ಕರಡಿ, ಕಾಡುಕೋಣ, ಕಾನುಕುರಿ, ಕಡವೆಗಳು ಹಗಲು–ರಾತ್ರಿ ಎನ್ನದೇ ಪ್ರತ್ಯಕ್ಷವಾ-ಗುವ ಸಾಧ್ಯತೆ ಇದೆ. ಅಪರೂಪದ ಕೀಟಗಳು, ಪಕ್ಷಿಸಂಕುಲಗಳು, ಸಸ್ಯ ಪ್ರಭೇದಗಳು ತುಂಬಿರುವ ಈ ಕಾಡಿನಲ್ಲಿ ಪ್ರಾಣಿಗಳ ಚಲನವಲನ ಅರಿತು ಸಂಚರಿಸಬೇಕಾಗುತ್ತದೆ. ಒಂದು ಕಡೆ ಭಯ, ಇನ್ನೊಂದಡೆ ಖುಷಿಯನ್ನು ನೀಡುವ ಈ ಪ್ರದೇಶ ಪ್ರಕೃತಿ ಪ್ರಿಯರಿಗೆ ರಮ್ಯ ತಾಣ.

ಕೈಗಾ ಅಣು ಸ್ಥಾವರ, ಕಾಳಿ ನದಿಯ ಕೊನೆಯ ಭಾಗದಲ್ಲಿನ ಕದ್ರಾ ಅಣೆಕಟ್ಟೆಯ ಹಿನ್ನೀರು, ಆಚೆಗೆ ಅಣಶಿ ರಕ್ಷಿತಾರಣ್ಯ...ಹೀಗೆ ಪ್ರಕೃತಿಯ ವಿಹಂಗಮ ನೋಟ ಕಣ್ಣು ತುಂಬಿಕೊಳ್ಳುತ್ತದೆ. ಈ ಮಾರ್ಗದಲ್ಲಿನ ಸಂಚಾರ ಯಾವುದೇ ಕ್ಷಣಕ್ಕೂ ಸ್ಥಗಿತಗೊಳ್ಳಬಹುದು. ಜನವಸತಿ ಕಡಿಮೆ ಇರುವ ಕಡಿದಾದ ಬೆಟ್ಟದ ಈ ದಾರಿಯಲ್ಲಿ ಸಾಗುವಾಗ ಮರ ಬಿದ್ದರೆ ಮುಂದೆ ಸಾಗಲಾಗದೇ ಹಿಂದಿರುಗಬೇಕಾದ ಪರಿಸ್ಥಿತಿಗೆ ಎದುರಾಗಿಬಿಡುತ್ತದೆ. ಹರೂರಿನ ಗುಡ್ಡದಲ್ಲಿ ವನವಾಸಿಗಳಾದ ಅಟ್ಟೆಕುಣಬಿಗಳ ಕುಟುಂಬಗಳು ಪ್ರಕೃತಿಯ ಸಾಹಸದಲ್ಲಿ ಪ್ರತಿನಿತ್ಯವೂ ಮಿಂದೇಳುತ್ತವೆ. ಹರೂರಿನ ಕಾಡುಗಳೆಂದರೆ ಸಮುದ್ರಮಟ್ಟದಿಂದ 650 ಅಡಿ ಎತ್ತರದ ಪ್ರದೇಶವಾಗಿದ್ದು ಚಳಿಯ ಅನುಭವವು ಹೆಚ್ಚು. ಪ್ರತಿಗುಡ್ಡದ ಮೂಲೆಯಲ್ಲೂ ಸರ್ವಋತು ನೀರು ತೊಟ್ಟಿಕುತ್ತದೆ. ತಾವು ಆರಾಧಿಸುವ ತಮ್ಮ ಜನಾಂಗದ ದೇವತೆಗಳಿಗೆಲ್ಲ ತಮ್ಮ ಹಾಗೆ ಕಾಡಿನಲ್ಲಿ ಆಶ್ರಯಕೊಟ್ಟಿರುವ ಅಟ್ಟೆಕುಣಬಿಗಳು ಈ ಕಾಡಿನ ಕಾವಲುಗಾರರಾಗಿದ್ದಾರೆ.



ಕಾಳಿ ನದಿಯ ವಿಹಂಗಮ ನೋಟ



ಯೋಗ ಶಿಕ್ಷಕಿ ಸುಧಾ ಪಾಟೀಲ ಮಾರ್ಗದರ್ಶನದಲ್ಲಿ ಯೋಗಾಭ್ಯಾಸ ಮಾಡುತ್ತಿರುವ ಮಹಿಳೆಯರು



ಸಂಜನಾ ಕುಲಕರ್ಣಿಯಿಂದ ಪ್ರಸಾರಿತ ಪೂರ್ಣ ಶಲಭಾಸನ

‘ಪಾಪನಾಶಿ’ಯೆಂಬ ಯೋಗ ಗ್ರಾಮ

10ನೇ ಪುಟದಿಂದ...

ಮಕ್ಕಳಿಗೆ ನೆಲಹಾಸು, ಯೋಗ ಮ್ಯಾಟ್ ಸೇರಿದಂತೆ ಎಲ್ಲ ಸವಲತ್ತುಗಳನ್ನು ಸರ್ಕಾರ ಕೊಟ್ಟಿದೆ. ದಾನಿಗಳ ನೆರವಿನಲ್ಲಿ ವೈದ್ಯರು ಯೋಗ ಕ್ರಿಯಾ ಸೆಟ್ ಕೊಡಿಸಿದ್ದಾರೆ. ‘ಪಾಪನಾಶಿ ಜನರಿಗೆ ಯೋಗ ಅಂದರೇನು ಎಂಬುದೇ ಗೊತ್ತಿರಲಿಲ್ಲ. ಇದೀಗ ನಮ್ಮೂರಿನಲ್ಲಿ ಯೋಗ ಕೇಂದ್ರ ಇರುವುದಕ್ಕೆ ಡಾ.ಅಶೋಕ ಮತ್ತಿಗಟ್ಟಿ ಅವರೇ ಕಾರಣ’ ಎನ್ನುತ್ತಾರೆ ಯೋಗಪಟು ಕವನಾ ಪಾಟೀಲ ಅವರ ತಾಯಿ ವಿಜಯಾ ಪಾಟೀಲ.

‘ಪಾಪನಾಶಿಯಂತಹ ಸಣ್ಣ ಗ್ರಾಮದ ಕೀರ್ತಿ ಅಡ್ನೂರ ಎಂಬ ಯೋಗಪಟುವಿಗೆ ಪ್ರಧಾನಿ ಮೋದಿ ಅವರನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ಇದಕ್ಕಿಂತ ದೊಡ್ಡ ಖುಷಿ ಇನ್ನೇನು ಬೇಕು. ರಾಷ್ಟ್ರಮಟ್ಟದ ಯೋಗ ಒಲಂಪಿಯಾಡ್‌ನಲ್ಲಿ ಅವಳಿಗೆ ಬಹುಮಾನ ಸಿಗಲಿಲ್ಲ. ಪರಂತು ಪರೇಡ್‌ನಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತು’ ಎಂಬ ಹೆಮ್ಮೆ ವ್ಯಕ್ತಪಡಿಸುತ್ತಾರೆ ಅಶೋಕ ಮತ್ತಿಗಟ್ಟಿ.

‘ಕೋವಿಡ್ ಸಂದರ್ಭದಲ್ಲಿ ಎಲ್ಲರಿಗೂ ಆರೋಗ್ಯದ ಬಗ್ಗೆ ಕಾಳಜಿ ಇತ್ತು. ಜೀವ ಉಳಿಸಿಕೊಳ್ಳಬೇಕು ಎನ್ನುವ ಕಾರಣಕ್ಕಾದರೂ ಯೋಗ ಮಾಡುತ್ತಿದ್ದರು. ಆ ಅಭ್ಯಾಸ ಊರಿನ ಜನರಲ್ಲಿ ಇಂದಿಗೂ ಮುಂದುವರಿದುಕೊಂಡು ಬಂದಿರುವುದರಿಂದ ಪಾಪನಾಶಿ ಈಗ ಯೋಗ ಗ್ರಾಮವಾಗಿ ಗುರುತಿಸಿಕೊಳ್ಳುತ್ತಿದೆ’ ಎನ್ನುತ್ತಾರೆ ಯೋಗ ಶಿಕ್ಷಕಿ ಸುಧಾ ಪಾಟೀಲ.

ಕ್ರಿಯಾಶೀಲತೆ, ಬದ್ಧತೆ ಮತ್ತು ಸೇವಾಮನೋಭಾವ ಹೆಚ್ಚಾಗಿರುವ ಅಶೋಕ ಮತ್ತಿಗಟ್ಟಿ ಅವರಂತಹ ಅಧಿಕಾರಿಗಳ ಸಂಖ್ಯೆ ಹೆಚ್ಚಾಗುವುದು ಗ್ರಾಮ ಭಾರತದ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು.

ಕಾಂಡ್ಲಾ ಕಾಡಿನಲ್ಲೊಂದು ಸುತ್ತು...

10ನೇ ಪುಟದಿಂದ...

ಕೆಳಗೆ ಏರುಬ್ಬರವಿದ್ದಾಗ ನುಗ್ಗಿ ಬರುವ ಸಮುದ್ರದ ನೀರನ್ನು ಹಾಗೂ ಇಳಿಯುಬ್ಬರವಿದ್ದಾಗ ಕೆಸರು ಮಣ್ಣಿನ ಜೌಗನ್ನು ನಾವಿಲ್ಲಿ ನೋಡಬಹುದು. ಜೊತೆಗೆ ಈ ಪರಿಸರದಲ್ಲಿ ಕಂಡುಬರುವ ವಿಶಿಷ್ಟವಾದ ಜೀವಿಗಳನ್ನು ಕೂಡ ನಾವು ನೋಡಬಹುದು. ಈ ಕಾಂಡ್ಲಾ ವನ ಪ್ರದೇಶ ಬಹುತೇಕ ಮೀನುಗಳ ಹಾಗೂ ಸೀಗಡಿ ಮುಂತಾದ ಕಠಿಣ ಚರ್ಮ ಆಕಶೇರುಕಗಳ ನರ್ಸರಿ ತಾಣವಾಗಿದೆ. ಈ ಜೀವಿಗಳು ಇಲ್ಲಿ ಮರಿಯಿಟ್ಟು ತಮ್ಮ ಸಂತಾನವನ್ನು ಪರಭಕ್ಷಕಗಳಿಂದ ರಕ್ಷಿಸಿಕೊಳ್ಳುತ್ತವೆ. ಈ ತಾಣ ಅವುಗಳಿಗೆ ಆಮ್ಲಜನಕಯುಕ್ತ ಅತ್ಯಂತ ಆರೋಗ್ಯಪೂರ್ಣವಾದ ಜೀವ ಪರಿಸರವನ್ನೂ ಒದಗಿಸುತ್ತದೆ.

ಒಟ್ಟಾರೆ ಪ್ರಪಂಚದಲ್ಲಿರುವ ಈ ಬಗೆಯ ಮ್ಯಾಂಗ್ರೋವ್ ಕಾಡುಗಳಲ್ಲಿ ಏಳು ಪ್ರತಿಶತ ಭಾರತದಲ್ಲಿವೆ. ನಮ್ಮ ಕರ್ನಾಟಕ ಕರಾವಳಿಯ ಗಂಗಾವಳಿ, ಶರಾವತಿ, ಅಘನಾಶಿನಿ, ಕಾಳಿ, ವೆಂಕಟಾಪುರ, ಶಿರೂರು, ಬೈಂದೂರು, ಚಕ್ರಾ-ಹಳದಿ, ಸುವರ್ಣ ಸೀತಾ ಕೋಡಿ, ಉದ್ಯಾವರ, ಮುಲ್ಕಿ ಪಾವಂಜೆ, ಗುರುಪುರಗಳಲ್ಲಿ ಈ ರೀತಿಯ ಅಳಿವೆ ಕಾಡುಗಳನ್ನು ಕಾಣಬಹುದು. ಪಶ್ಚಿಮ ಘಟ್ಟದ ನದಿಗಳು ಹರಿದು ಬಂದು ಸಮುದ್ರ ಸೇರುವ ಜಾಗಗಳಲ್ಲಿ ಸೃಷ್ಟಿಯಾಗಿರುವ ದ್ವೀಪ ಸಮೂಹಗಳಲ್ಲಿ ಸಹ ಈ ಕಾಂಡ್ಲಾ ಕಾಡುಗಳು ಕಂಡುಬರುತ್ತವೆ. ಪಶ್ಚಿಮ ಬಂಗಾಳದ ಸುಂದರಬನ ಇಂತಹದೇ ಒಂದು ವಿಶಾಲವಾದ ಅಳಿವೆ ಕಾಡು. ಅದು ಹುಲಿಗಳಿಗೆ ಬಹಳ ಪ್ರಸಿದ್ಧಿ.

ಹೊನ್ನಾವರದ ಈ ಸುಂದರ ಕಾಂಡ್ಲಾ ಕಾಡಿನಲ್ಲಿ ನಾವು ಅತ್ಯಂತ ವಿಶಿಷ್ಟ ಬಗೆಯ ‘ಮ್ಯಾಂಗ್ರೋವ್ ಸೇಬಿನಮರ’ವನ್ನು ನೋಡಬಹುದು. ‘ಸೋನೆರೇಶಿಯಾ ಕ್ಯಾಸಿಯೋಲಾರಿಸ್’ ಎಂಬ ವೈಜ್ಞಾನಿಕ ಹೆಸರಿನ ಈ ಮರ 20 ಮೀಟರ್ ಎತ್ತರ ಬೆಳೆಯುತ್ತದೆ ಹಾಗೂ ಇದರ ಕಾಂಡದ ಸುತ್ತಳತೆ 50 ಸೆಂಟಿಮೀಟರ್‌ಗಳು. ಇದು ಬಿಡುವ ಹಣ್ಣುಗಳಿಂದ ಕೆಮ್ಮಿಗೆ ಔಷಧಿ ತಯಾರಿಸಲಾ-ಗುತ್ತದೆ. ಹಾಗೆಯೇ ಈ ಕಾಂಡ್ಲಾ ನಡಿಗೆಯ ಸಂದರ್ಭದಲ್ಲಿ ನಾವು ರೈಜೋಫೊರೇಸಿಯಾ ಜಾತಿಗೆ ಸೇರಿದ 30 ಅಡಿ ಎತ್ತರಕ್ಕೆ ಬೆಳೆಯುವ, ಬಿಳಿ ಹೂಗಳನ್ನು ಬಿಡುವ ‘ಕ್ಯಾಂಡಲಿಯ ಕೆಂಡಲ್’ ಎಂಬ ವಿಶಿಷ್ಟ ಮರವನ್ನೂ ನೋಡಬಹುದು.

ಈ ಕಾಂಡ್ಲಾ ನಡಿಗೆಯಲ್ಲಿ ಈ ಪರಿಸರದಲ್ಲಿ ಕಂಡುಬರುವ ವಿಶಿಷ್ಟ ಮರಗಳ ಪರಿಚಯ ಫಲಕಗಳಲ್ಲದೇ ಬೇರೆ ಬೇರೆ ಕಾಂಡ್ಲಾ ಕಾಡುಗಳಲ್ಲಿ ಕಂಡುಬರುವ ಸಸ್ಯರಾಶಿ ಹಾಗೂ ಜೀವರಾಶಿಗಳ ಕುರಿತು ಪರಿಚಯಾತ್ಮಕ ಫಲಕಗಳನ್ನು ಹಾಕಲಾಗಿದೆ.


ಈ ಭಾಗಕ್ಕೆ ಬರುವ ಪ್ರವಾಸಿಗರಿಗೆ ಅತ್ಯಂತ ನೆಚ್ಚಿನ ಜಾಗವಾಗಿರುವ ಈ ‘ಕಾಂಡ್ಲಾ ನಡಿಗೆ’ ತಾಣ, ಹೊನ್ನಾವರ ನಗರದಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿದೆ. ಇದರ ಎದುರಲ್ಲೇ ಇರುವ ‘ಇಕೋ ಬೀಚ್’ ಸಹ ಪ್ರವಾಸಿಗರನ್ನು ಸದಾ ತನ್ನತ್ತ ಸೆಳೆಯುವ ತಾಣವಾಗಿದೆ. ಶರಾವತಿ ನದಿಯಲ್ಲಿ ಇರುವ ದೋಣಿ ವಿಹಾರಕ್ಕೆ ಹೋದರೆ ಈ ಕಾಂಡ್ಲಾ ದ್ವೀಪಗಳನ್ನು ಹತ್ತಿರದಿಂದ ನೋಡಬಹುದಾಗಿದೆ.



ಕಾಂಡ್ಲಾ ವನ

ಮಜ ಮಜ ಮಜಕೂರ

ಎಂ.ಎಸ್.ಪೂಜಾರ



ರಾಜ್ಯೋತ್ಸವ ವಿಶೇಷ

ಇದು ನಿಮಗೆ ಗೊತ್ತೇ?

1. ಅಮೆರಿಕದಲ್ಲಿ ಅಮೆರಿಕನ್ನಡ ಎಂಬ ಪತ್ರಿಕೆ ಇದೆ.
2. ಮಹಾರಾಷ್ಟ್ರದಲ್ಲಿ ಕನ್ನಡ ಎಂಬ ಒಂದು ಊರು ಇದೆ.
3. ಕನ್ನಡದಲ್ಲಿ ‘ಅನ್ನ’ವಿದೆ. ಹೇಗೆಂದರೆ ‘KANNADA’. ಇದರಲ್ಲಿ ‘K’ ಮತ್ತು ‘DA’ ಮೇಲೆ ಬೆರಳಿಟ್ಟು, ಉಳಿದ ಭಾಗ ನೋಡಿದರೆ ‘ಅನ್ನ’ ಎಂದಾಗುತ್ತದೆ.

ಯಾರು ಗೆಲ್ಲುತ್ತೀರಿ? ಕನ್ನಡ ರಾಜ್ಯೋತ್ಸವದ ‘ವರ್ಡ್’ಕಪ್!

ಇಲ್ಲಿರುವ ಎರಡು ಪದ ಸೇರಿಸಿ ಒಂದೇ ಪದ ಮಾಡಿ.

1	ಲವ + ನತ್ತು	=	
2	ಸಲ + ಮತ್ತು	=	
3	ಕರ + ಹತ್ತು	=	
4	ಬಲು + ಕಡ	=	
5	ಸೋಡಿ + ಲಾಗ	=	
6	ಲವ + ಸತ್ತು	=	
7	ಹರಿ + ದಾರ	=	
8	ಮಾನ + ಅತ್ತು	=	
9	ತಾತ + ರಮ್ಯ	=	
10	ಏಳೆ + ಹತ್ತು	=	
11	ಆನೆ + ಪಾದ	=	
12	ಕತ್ತು + ರಸ	=	
13	ಹಣ + ಗರ	=	
14	ನಯ + ಜಮಾ	=	
15	ಜರಿ + ನವ	=	
16	ರಾಮ + ಕತ್ತು	=	
17	ತಿವಿ + ನಾಯಿ	=	
18	ಅರ + ನಾದ	=	
19	ಜಾಣೆ + ಗರ	=	
20	ಸವಿ + ಕಸಿ	=	

ಕನ್ನಡ ಸ್ವರಸ್ವಾರಸ್ಯ

ಅಕ್ಷರದ ಆನಂದ ಇಲ್ಲಿ ಈಡೇರಲು
ಉನ್ನತವಾಗಿ ಊಹಿಸಲು
ಋಷಿಗಳಂತೆ ಎಲ್ಲರ ಏಳ್ಗೆಗಾಗಿ ಒಪ್ಪ
ಓರಣದಿಂದ ಔಚಿತ್ಯ ಪೂರ್ಣವಾಗಿ
ಅಂದುಕೊಂಡಂತಾದರೆ ಅಃ ಎಂಥ ಮಜ
ಈ ಕನ್ನಡ ಕಲವರ ಕಂಪು.

ಎಣಿಕೆ ಹಾಡು

ಒಂದು ಒಂದು ಒಂದು
ಕನ್ನಡಿಗರೆಲ್ಲಾ ಒಂದು
ಸೊನ್ನೆ, ಒಂದು, ಎರಡು
ಕನ್ನಡ ಗಂಧ ಹರಡು
ಒಂದು, ಎರಡು, ಮೂರು
ಎಳೆಯೋ ಕನ್ನಡ ತೇರು
ಎರಡು, ಮೂರು, ನಾಲ್ಕು
ಕನ್ನಡ ಕಲಿಯಬೇಕು
ಮೂರು, ನಾಲ್ಕು, ಐದು
ಕನ್ನಡ ಪುಸ್ತಕ ಓದು
ನಾಲ್ಕು, ಐದು, ಆರು
ಕನ್ನಡ ಬಳಗ ಸೇರು
ಐದು, ಆರು, ಏಳು
ಕನ್ನಡ ಪದ್ಯ ಹೇಳು
ಆರು, ಏಳು, ಎಂಟು
ಕನ್ನಡ ಚಂದ ಉಂಟು
ಏಳು, ಎಂಟು, ಒಂಭತ್ತು
ಕನ್ನಡ ಭಾಷೆ ಗಮ್ಮತ್ತು
ಎಂಟು, ಒಂಭತ್ತು, ಹತ್ತು
ಕನ್ನಡ ಮೆಟ್ಟಲು ಹತ್ತು

ಜಾಣಪದ ಆಟ — ಕನ್ನಡ ಕಲರವ ಕಂಪು

ಇಲ್ಲಿ ಕೊಟ್ಟಿರುವ ಎರಡು ‘ಕ’ಗಳ ಮಧ್ಯೆ ಅಕ್ಷರ ಪಟ್ಟಿಯಿಂದ ಇನ್ನೆರಡು ಅಕ್ಷರ ಆಯ್ದು ತುಂಬಿ ನಾಲ್ಕಕ್ಷರದ ಪದಗಳನ್ನು ಮಾಡಿ.

ಅಕ್ಷರ ಪಟ್ಟಿ

ರ	ಟ	ಣಿ	ಟ
ಥಾ	ರಂ	ರ್ಕಾ	ನ್ನ
ತ್ಮ	ರ	ಡ	ಟ
ಡ	ಟ	ನ	ಲಾ
ರ್ನಾ	ರ	ರ್ಕೋ	ಶೇ

1	ಕ			ಕ
2	ಕ			ಕ
3	ಕ			ಕ
4	ಕ			ಕ
5	ಕ			ಕ
6	ಕ			ಕ
7	ಕ			ಕ
8	ಕ			ಕ
9	ಕ			ಕ
10	ಕ			ಕ

ಕನ್ನಡ ಕವಿಗಳ ಅನ್ವರ್ಥನಾಮ

ಪಂಪ	ಆದಿಕವಿ
ರನ್ನ	ಶಕ್ತಿ ಕವಿ
ಕುವೆಂಪು	ರಸ ಋಷಿ
ಬೇಂದ್ರೆ	ವರಕವಿ
ಹರಿಹರ	ರಗಳೆಕವಿ
ರಾಘವಾಂಕ	ಷಟ್ಪದಿಬ್ರಹ್ಮ
ದಿನಕರ ದೇಸಾಯಿ	ಚುಟುಕುಗಳ ಬ್ರಹ್ಮ
ಮಾಸ್ತಿ	ಸಣ್ಣ ಕಥೆಗಳ ಜನಕ, ಕನ್ನಡದ ಆಸ್ತಿ
ಟಿ.ಪಿ. ಕೈಲಾಸಂ	ಕರ್ನಾಟಕ ಪ್ರಹಸನ ಪಿತಾಮಹ
ಶಿವರಾಮ ಕಾರಂತ	ಚಲಿಸುವ ವಿಶ್ವಕೋಶ
ಪುರಂದರದಾಸ	ಕರ್ನಾಟಕ ಸಂಗೀತ ಪಿತಾಮಹ
ಫ.ಗು. ಹಳಕಟ್ಟಿ	ವಚನ ಪಿತಾಮಹ
ಬಿ.ಎಂ. ಶ್ರೀಕಂಠಯ್ಯ	ಕನ್ನಡದ ಕಣ್ವ
ಕೆ.ಎಸ್. ನರಸಿಂಹಸ್ವಾಮಿ	ಪ್ರೇಮಕವಿ

ನೀರೊಳಗಿಂದ ಬಂದ ತಿಮಿಂಗಿಲ!

ಗುಂಡ ಸಮುದ್ರದ ತೀರದಲ್ಲಿ ಟ್ಯೂಬ್‌ನಲ್ಲಿ ಮಲಗಿ ಆಟವಾಡುತ್ತಿದ್ದ. ತನ್ನೆರಡು ಕಾಲುಗಳು ಹಾಗೂ ಕೈಗಳನ್ನು ನೀರೊಳಗೆ ಇಳಿಬಿಟ್ಟು ಖುಷಿಯಲ್ಲಿದ್ದ. ಕೆಲ ಕ್ಷಣಗಳ ಬಳಿಕ ನೀರೊಳಗಿಂದ ಗುಳ್ಳೆಗಳು ಏಳಲಾರಂಭಿಸಿದವು. ಅದೇನೆಂದು ನೋಡುವಷ್ಟರಲ್ಲೇ ತಿಮಿಂಗಿಲವೊಂದು ಟ್ಯೂಬ್ ಸಮೇತವಾಗಿ ಗುಂಡನನ್ನು ಮೇಲಕ್ಕೆ ಎತ್ತಿತು. ಗುಂಡ ಗಾಬರಿಯಿಂದ ಕಿರುಚಿದ.







ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಈ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಮಂಗಳವಾರ 2.ಆಶ್ರಯಮನೆ 3.ಮಹಾಭಾರತ 4.ಭಾರತಮಾತೆ 5.ಗಣಿತಲೋಕ

ಮೋಜಿನ ಇಂಗ್ಲಿಷ್: 1.DICE 2.MICE 3.NICE 4.PRICE 5.RICE 6.SPICE 7.TWICE 8.VOICE

ಹೊಂದಿಸು ಆನಂದಿಸು: 1–E, 2-C, 3-D, 4-B, 5-A

ಜಾಣಪದ ಆಟ: 1: 1.ನೆನೆನೆ, 2.ನಾನಾನಾ, 3.ಬಾಬಾಬಾ, 4.ರರರ, 5.ತತತ, 6.ದದದ, 7.ನನನ, 8.ಮಮಮ, 9.ವಿವಿವಿ, 10.ಶಿಶಿಶಿ
2: 1.ಪರಿಚಯ, 2.ಪರಿಪಾಟ, 3.ಪರಿಣತ, 4.ಪರಿಚಿತ, 5.ಪರಿಕರ

ಶಬ್ದಾಟ: 1.ಗುಜುರಿಗೆ ಮಾರಾಟ 2.Nagesh

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಕರ್ಣ ಷಣ್ಮುಖ ಅಂಗಡಿ
ಹಾವೇರಿ



ಸುಬ್ರಹ್ಮಣ್ಯ ಬನ್ನಿಗಿಡದ
ನರಗುಂದ




ಹನ್ವಿಕ ಕೆ.ಕೊಗುಂಡಿ
ದಾವಣಗೆರೆ



ವಿಶಿಷ್ಟ ಪೂರ್ಣ ರಾವ್
ಚಿಕ್ಕಮಗಳೂರು



ಖುಷಿ ಕೆ.ಆರ್.
ಬೆಂಗಳೂರು



ಹಾರ್ದಿಕ್ ಪಿ.ರೆಡ್ಡಿ
ಬಳ್ಳಾರಿ

ರೋಹಿತ್ 'ವಿರಾಟ್' ವೈಭವ

ಸಿಡ್ನಿಯಲ್ಲಿ ಅಭಿಮಾನಿಗಳಿಗೆ ರಸದೌತಣ ಉಣಬಡಿಸಿದ 'ವಿಂಟೇಜ್ ಜೋಡಿ'

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾದಲ್ಲಿ ಬಹುತೇಕ ಕೊನೆಯ ಬಾರಿ ಆಡಿದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಭಾರತ ತಂಡಕ್ಕೆ ಸಮಾಧಾನಕರ ಜಯದ ಕಾಣಿಕೆ ನೀಡಿದರು. ಆತಿಥೇಯ ತಂಡವು ಸರಣಿಯನ್ನು 2–1ರಿಂದ ಜಯಿಸಿತು. ಆದರೆ ರೋಹಿತ್ ಮತ್ತು ವಿರಾಟ್ ಕೋಟಿ ಕೋಟಿ ಅಭಿಮಾನಿಗಳ ಹೃದಯಗಳನ್ನು ಗೆದ್ದರು.

ಶನಿವಾರ ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆದ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವು 9 ವಿಕೆಟ್‌ಗಳಿಂದ ಜಯಿಸಿತು. 237 ರನ್‌ಗಳ ಸಾಧಾರಣ ಗುರಿಯನ್ನು ಭಾರತ ತಂಡವು ರೋಹಿತ್ ಶರ್ಮಾ (ಅಜೇಯ 121) ಮತ್ತು ವಿರಾಟ್ ಕೊಹ್ಲಿ (ಅಜೇಯ 74) ಅವರ ಮುರಿಯದ ಎರಡನೇ ವಿಕೆಟ್ ಜೊತೆಯಾಟದ (168 ರನ್)ನೆರವಿನಿಂದ 38.3 ಓವರ್‌ಗಳಲ್ಲಿ ಸುಲಭವಾಗಿ ಮುಟ್ಟಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ಸತತ 18ನೇ ಬಾರಿ (2023ರ ಡಿಸೆಂಬರ್ 19ರಂದು ಕೊನೆಯ ಬಾರಿ ಟಾಸ್ ಗೆದ್ದಿತ್ತು) ಟಾಸ್ ಸೋತಿತು. ವೇಗಿ ಹರ್ಷಿತ್ ರಾಣಾ (39ಕ್ಕೆ4) ಮತ್ತು ವಾಷಿಂಗ್ಟನ್ ಸುಂದರ್ (44ಕ್ಕೆ2) ಅವರ ಅಮೋಘ ಬೌಲಿಂಗ್ ಮುಂದೆ ಆಸ್ಟ್ರೇಲಿಯಾ ತಂಡವು 46.4 ಓವರ್‌ಗಳಲ್ಲಿ 236 ರನ್ ಗಳಿಸಿತು. ಮ್ಯಾಟ್ ರೆನ್ಶಾ (56; 58ಎಸೆತ) ಅವರ ಅರ್ಧಶತಕ ತಂಡಕ್ಕೆ ಆಸರೆಯಾಯಿತು.

ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ರೋಹಿತ್ ಮತ್ತು ನಾಯಕ ಶುಭಮನ್ ಗಿಲ್ ಮೊದಲ ವಿಕೆಟ್ ಜೊತೆಯಾಟದಲ್ಲಿ 69 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. 11ನೇ ಓವರ್‌ನಲ್ಲಿ ಗಿಲ್ ಔಟಾದರು. ಜೊತೆಯಾಟ ಮುರಿಯಿತು. ಇದಾದ ಮೇಲೆ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳು ರೋಹಿತ್ ಮತ್ತು ಕೊಹ್ಲಿಯ 'ವಿಂಟೇಜ್ ಆಟ'ವನ್ನು ಕಣ್ತುಂಬಿಕೊಂಡರು.

ಸರಣಿಯ ಎರಡನೇ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದ ರೋಹಿತ್ ಇಲ್ಲಿ ಆತ್ಮ ವಿಶ್ವಾಸಭರಿತ ಆಟವಾಡಿದರು. ಇನಿಂಗ್ಸ್ ಕಟ್ಟುವ ಹೊಣೆ ಹೊತ್ತ ಅವರು ಮಿಚೆಲ್ ಸ್ಟಾರ್ಕ್ ಅವರ ಎಸೆತಗಳಲ್ಲಿ ನಿಖರ ಮತ್ತು ನವಿರಾದ ಡ್ರೈವ್ ಹಾಗೂ ಫ್ಲಿಕ್‌ಗಳನ್ನು ಆಡಿದರು. ಸ್ಪಿನ್ನರ್ ಆ್ಯಡಂ ಜಂಪಾ ಎಸೆತದಲ್ಲಿ ಸಿಕ್ಸರ್ ಎತ್ತುವ ಮೂಲಕ ಸ್ಪಿನ್ ಬೌಲಿಂಗ್‌ಗೂ ಸವಾಲೊಡ್ಡಿದರು. ರೋಹಿತ್ ಏಕದಿನ ಕ್ರಿಕೆಟ್‌ನಲ್ಲಿ 33ನೇ ಶತಕ ದಾಖಲಿಸಿದರು. ಅವರು ಟೆಸ್ಟ್‌ನಲ್ಲಿ 12 ಮತ್ತು ಟಿ20 ಕ್ರಿಕೆಟ್‌ನಲ್ಲಿ ಐದು ಶತಕ ಗಳಿಸಿದ್ದಾರೆ. ರೋಹಿತ್ 63 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ನಂತರದ 50 ರನ್‌ಗಳನ್ನು 42 ಎಸೆತಗಳಲ್ಲಿ ಸೇರಿಸಿದರು.

ಇನ್ನೊಂದು ಬದಿಯಲ್ಲಿ ಕೊಹ್ಲಿ ಲಯ ಕಂಡುಕೊಂಡರು. ಕಳೆದೆರಡೂ ಪಂದ್ಯಗಳಲ್ಲಿ ಸೊನ್ನೆ ಸುತ್ತಿದ್ದ ಕೊಹ್ಲಿ ಇಲ್ಲಿ ಸ್ಟಾರ್ಕ್ ಎಸೆತವನ್ನು ನೇರ ಡ್ರೈವ್ ಮೂಲಕ ಬೌಂಡರಿಗೆ ಕಳಿಸಿದರು. ಎಂದಿನಂತೆ ಸಿಂಗಲ್ ಮತ್ತು ಡಬಲ್ ರನ್‌ಗಳನ್ನು ಚುರುಕಾಗಿ ಗಳಿಸಿದರು.

ನಥಾನ್ ಎಲಿಸ್ ಬೌಲಿಂಗ್‌ನಲ್ಲಿ ಒಂದು ಸಲ 'ಯುಡಿಆರ್‌ಎಸ್'ನಿಂದ ಜೀವದಾನ ಗಳಿಸಿದ 'ಚೇಸಿಂಗ್ ಮಾಸ್ಟರ್' 36 ರನ್ ಗಳಿಸಿದ್ದರು. ಅಲ್ಲಿಂದ ಮುಂದೆ ಕೊಹ್ಲಿ ಆಟವನ್ನು ನಿಯಂತ್ರಿಸಲು ಯಾವ ಬೌಲರ್‌ಗಳಿಗೂ ಸಾಧ್ಯವಾಗಲಿಲ್ಲ. ಕೊಹ್ಲಿ 56 ಎಸೆತಗಳಲ್ಲಿ ಅರ್ಧಶತಕ ಹೊಡೆದರು. ಕೊಹ್ಲಿ ವಿಜಯದ ರನ್ ಗಳಿಸಲು ಬೌಂಡರಿ ಹೊಡೆದ ನಂತರ ಆಸ್ಟ್ರೇಲಿಯಾದ ಆಟಗಾರರೆಲ್ಲರೂ ಸುತ್ತುವರಿದರು. ರೋಹಿತ್ ಮತ್ತು ಕೊಹ್ಲಿಯ ಕೈಕುಲುಕಿ ಅಭಿನಂದಿಸಿದರು. ಮೈದಾನದಲ್ಲಿದ್ದ ಅಭಿಮಾನಿಗಳು ಪ್ಲೇಕಾರ್ಡ್‌ಗಳು, ಬ್ಯಾನರ್‌ಗಳನ್ನು ತೋರಿಸಿ ಇಬ್ಬರೂ ಆಟಗಾರರ ಮೇಲೆ ಅಭಿಮಾನದ ಮಳೆಗರೆದರು.



ನಾಲ್ಕು ವಿಕೆಟ್ ಪಡೆದ ಹರ್ಷಿತ್ ರಾಣಾ

ರೋಹಿತ್ ಶರ್ಮಾ ಶತಕಗಳು	
ಏಕದಿನ	33
ಟೆಸ್ಟ್	12
ಟಿ20	5
ಒಟ್ಟು	50



ಭಾರತದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ — ಪಿಟಿಐ ಚಿತ್ರ

12
ಏಕದಿನ ಕ್ರಿಕೆಟ್‌ನಲ್ಲಿ ರೋಹಿತ್ ಮತ್ತು ಕೊಹ್ಲಿ ಭಾಗಿಯಾದ 150ಕ್ಕೂ ಅಧಿಕ ರನ್‌ಗಳ ಜೊತೆಯಾಟಗಳು. ಸಚಿನ್ ತೆಂಡೂಲ್ಕರ್–ಸೌರವ್ ಗಂಗೂಲಿ ದಾಖಲೆಯನ್ನು ಸರಿಗಟ್ಟಿದರು

1
ಏಕದಿನ+ಟಿ20 ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ 18,437 ರನ್ ಗಳಿಸಿದರು. ಇದರೊಂದಿಗೆ ನಿಗದಿಯ ಓವರ್‌ಗಳ ಕ್ರಿಕೆಟ್‌ನಲ್ಲಿ ಅಗ್ರಸ್ಥಾನ ಪಡೆದರು. ಈ ಹಾದಿಯಲ್ಲಿ ಅವರು ಸಚಿನ್ ತೆಂಡೂಲ್ಕರ್ (18,436ರನ್) ದಾಖಲೆ ಮೀರಿದರು

6
ರೋಹಿತ್ ಅವರು ಆಸ್ಟ್ರೇಲಿಯಾದಲ್ಲಿ ಗಳಿಸಿದ ಶತಕಗಳು. ಪ್ರವಾಸಿ ಬ್ಯಾಟರ್ ಗಳಿಸಿದ ಅತ್ಯಧಿಕ ಶತಕದ ದಾಖಲೆ ಇದು. ವಿರಾಟ್ ಮತ್ತು ಶ್ರೀಲಂಕಾದ ಕುಮಾರ ಸಂಗಕ್ಕಾರ ತಲಾ 5 ಶತಕ ದಾಖಲಿಸಿದ್ದಾರೆ

100
ಏಕದಿನ ಮಾದರಿಯಲ್ಲಿ ರೋಹಿತ್ ಶರ್ಮಾ ಪಡೆದ ಕ್ಯಾಚ್‌ಗಳ ಸಂಖ್ಯೆ

ಏಕದಿನ ಕ್ರಿಕೆಟ್‌ನಲ್ಲಿ ಹೆಚ್ಚು ರನ್ ಗಳಿಸಿದವರು

ಆಟಗಾರ	ದೇಶ	ಪಂದ್ಯ	ರನ್	ಶ್ರೇಷ್ಠ	ಸರಾಸರಿ
ಸಚಿನ್ ತೆಂಡೂಲ್ಕರ್	ಭಾರತ	463	18,426	200*	44.83
ವಿರಾಟ್ ಕೊಹ್ಲಿ	ಭಾರತ	305	14,255	183	57.71
ಕುಮಾರ ಸಂಗಕ್ಕಾರ	ಶ್ರೀಲಂಕಾ	404	14,234	169	41.98
ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ	375	13,704	164	42.03
ಸನತ್ ಜಯಸೂರ್ಯ	ಶ್ರೀಲಂಕಾ	445	13,430	189	32.36

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ: 236 (46.4 ಓವರುಗಳಲ್ಲಿ)
ಮಾರ್ಷ್ ಬಿ ಪಟೇಲ್ 41 (50ಎ, 4x5, 6x1)
ಹೆಡ್ ಸಿ ಪ್ರಸಿದ್ಧ ಬಿ ಸಿರಾಜ್ 29 (25ಎ, 4x6)
ಶಾರ್ಟ್ ಸಿ ಕೊಹ್ಲಿ ಬಿ ಸುಂದರ್ 30 (41ಎ, 4x2)
ರೆನ್‌ಶಾ ಎಲ್‌ಬಿಡಬ್ಲ್ಯು ಬಿ ಸುಂದರ್ 56 (58ಎ, 4x2)
ಕ್ಯಾರಿ ಸಿ ಅಯ್ಯರ್ ಬಿ ರಾಣಾ 24 (37ಎ, 4x1)
ಕೊನೋಲಿ ಸಿ ಕೊಹ್ಲಿ ಬಿ ರಾಣಾ 23 (34ಎ, 4x2)
ಓವೆನ್ ಸಿ ಶರ್ಮಾ ಬಿ ರಾಣಾ 1 (4ಎ)
ಸ್ಟಾರ್ಕ್ ಬಿ ಕುಲದೀಪ್ 2 (5ಎ)
ಎಲಿಸ್ ಸಿ ಶರ್ಮಾ ಬಿ ಪ್ರಸಿದ್ಧ 16 (19ಎ, 4x3)
ಜಂಪಾ ಔಟಾಗದೇ 2 (5ಎ)
ಹ್ಯಾಜಲ್‌ವುಡ್ ಬಿ ರಾಣಾ 0 (2ಎ)
ಇತರೆ: 12 (ಬೈ 6, ಲೆಗ್‌ಬೈ 3, ವೈಡ್ 3)
ವಿಕೆಟ್ ಪತನ: 1-61 (ಟ್ರಾವಿಸ್ ಹೆಡ್, 9.2), 2-88 (ಮಿಚೆಲ್ ಮಾರ್ಷ್, 15.1), 3-124 (ಮ್ಯಾಥ್ಯೂ ಶಾರ್ಟ್, 22.3), 4-183 (ಅಲೆಕ್ಸ್ ಕ್ಯಾರಿ, 33.4), 5-195 (ಮ್ಯಾಥ್ಯೂ ರೆನ್‌ಶಾ, 36.2), 6-198 (ಮಿಚೆಲ್ ಓವೆನ್, 37.4),7-201 (ಮಿಚೆಲ್ ಸ್ಟಾರ್ಕ್, 38.4), 8-223 (ನಥಾನ್ ಎಲಿಸ್, 43.5), 9-236 (ಕೂಪರ್ ಕಾನೋಲಿ, 46.2), 10-236 (ಜೋಶ್ ಹ್ಯಾಜಲ್‌ವುಡ್, 46.4)
ಬೌಲಿಂಗ್: ಮೊಹಮದ್ ಸಿರಾಜ್ 5-1-24-1; ಹರ್ಷಿತ್ ರಾಣಾ 8.4-0-39-4; ಪ್ರಸಿದ್ಧ ಕೃಷ್ಣ 7-0-52-1; ಕುಲದೀಪ್ ಯಾದವ್ 10-0-50-1; ಅಕ್ಷರ್ ಪಟೇಲ್ 6-0-18-1; ವಾಷಿಂಗ್ಟನ್ ಸುಂದರ್ 10-0-44-2.

ಭಾರತ: 1 ವಿಕೆಟ್‌ಗೆ 237 (38.3 ಓವರುಗಳಲ್ಲಿ)
ರೋಹಿತ್ ಶರ್ಮಾ ಔಟಾಗದೇ 121 (125ಎ, 4x13, 6x3)
ಗಿಲ್ ಸಿ ಕ್ಯಾರಿ ಬಿ ಹ್ಯಾಜಲ್‌ವುಡ್ 24 (26ಎ, 4x2, 6x1)
ವಿರಾಟ್ ಕೊಹ್ಲಿ ಔಟಾಗದೇ 74 (81ಎ, 4x7)
ಇತರೆ: 18 (ಲೆಗ್‌ಬೈ 6, ನೋಬಾಲ್ 1, ವೈಡ್ 11)
ವಿಕೆಟ್ ಪತನ: 1-69 (ಶುಭಮನ್ ಗಿಲ್, 10.2)
ಬೌಲಿಂಗ್: ಸ್ಟಾರ್ಕ್ 5-0-31-0; ಹ್ಯಾಜಲ್‌ವುಡ್ 6-1-23-1, ಎಲಿಸ್ 7.3-0-60-0; ಕಾನೋಲಿ 5-0-36-0, ಜಂಪಾ 10-0-50-0; ಓವೆನ್ 1-0-2-0; ಶಾರ್ಟ್ 4-0-29-0.
ಪಂದ್ಯ ಮತ್ತು ಸರಣಿಯ ಆಟಗಾರ: ರೋಹಿತ್ ಶರ್ಮಾ

ಫಲಿತಾಂಶ: ಭಾರತಕ್ಕೆ 9 ವಿಕೆಟ್‌ಗಳ ಗೆಲುವು, ಆಸ್ಟ್ರೇಲಿಯಾ ತಂಡಕ್ಕೆ 2–1 ಸರಣಿ

ರಣಜಿ ಟ್ರೋಫಿ ಕ್ರಿಕೆಟ್: ಅರ್ಜುನ್‌ಗೆ ಮೂರು ವಿಕೆಟ್

ಕರುಣ್, ಶ್ರೇಯಸ್ ಕೆಚ್ಚೆದೆ ಆಟ

• ಜಿ.ಶಿವಕುಮಾರ

ಶಿವಮೊಗ್ಗ: ಇಲ್ಲಿನ ನವುಲೆಯ ಕೆಎಸ್‌ಸಿಎ ಕ್ರೀಡಾಂಗಣ ತಮ್ಮ ಪಾಲಿಗೆ ಅಚ್ಚುಮೆಚ್ಚು ಎಂಬುದನ್ನು ಕರುಣ್ ನಾಯರ್ (ಬ್ಯಾಟಿಂಗ್ 86; 138 ಎಸೆತ, 7 ಬೌಂಡರಿ, 1 ಸಿಕ್ಸರ್) ಮತ್ತು ಶ್ರೇಯಸ್ ಗೋಪಾಲ್ (ಬ್ಯಾಟಿಂಗ್ 48; 84 ಎ, 5ಬೌಂ, 1ಸಿ) ಮತ್ತೊಮ್ಮೆ ನಿರೂಪಿಸಿದರು. ಈ ಜೋಡಿ ಗೋವಾ ವಿರುದ್ಧದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಶನಿವಾರ ಕೆಚ್ಚೆದೆಯ ಆಟ ಆಡಿ ಕರ್ನಾಟಕ ತಂಡದ ಮೇಲೆ ಕವಿದಿದ್ದ ಆತಂಕದ ಕಾರ್ಮೋಡವನ್ನು ದೂರ ಸರಿಸಿತು.

ಇವರು ಮುರಿಯದ ಆರನೇ ವಿಕೆಟ್‌ಗೆ 148 ಎಸೆತಗಳಲ್ಲಿ 94 ರನ್ ಸೇರಿಸುವ ಮೂಲಕ, ಮೊದಲ ಇನಿಂಗ್ಸ್‌ನಲ್ಲಿ ತವರಿನ ತಂಡವನ್ನು ಎದುರಾಳಿಗಳ ಬಿಗಿ ಹಿಡಿತದಿಂದ ಪಾರು ಮಾಡಿದರು.

2017ರ ಅಕ್ಟೋಬರ್ 24ರಿಂದ 27ರವರೆಗೆ ಇಲ್ಲಿ ನಡೆದಿದ್ದ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಕರ್ನಾಟಕದ ಗೆಲುವಿಗೆ ಕಾರಣರಾಗಿದ್ದವರು ಕರುಣ್ ನಾಯರ್. ಮೊದಲ ಇನಿಂಗ್ಸ್‌ನಲ್ಲಿ 23 ರನ್ ಗಳಿಸಿದ್ದ ಇವರು ಎರಡನೇ ಇನಿಂಗ್ಸ್‌ನಲ್ಲಿ ಶತಕ (134) ಸಿಡಿಸಿದ್ದರು. ಜೊತೆಗೆ ಒಂದು ವಿಕೆಟ್ ಉರುಳಿಸಿ ಪಂದ್ಯ ಶ್ರೇಷ್ಠ ಗೌರವಕ್ಕೆ ಪಾತ್ರರಾಗಿದ್ದರು. ಆ ಪಂದ್ಯದಲ್ಲಿ ಶ್ರೇಯಸ್, ಎರಡೂ ಇನಿಂಗ್ಸ್‌ಗಳಿಂದ 9 ವಿಕೆಟ್ ಉರುಳಿಸಿದ್ದರು.

2020ರಲ್ಲಿ ಕರುಣ್ ಸಾರಥ್ಯದಲ್ಲಿ ಕರ್ನಾಟಕ ಇದೇ ಮೈದಾನದಲ್ಲಿ ಮಧ್ಯ ಪ್ರದೇಶದ ಸವಾಲು ಎದುರಿಸಿತ್ತು. ಆ ಹೋರಾಟದ ಮೊದಲ ಇನಿಂಗ್ಸ್‌ನಲ್ಲಿ ಶ್ರೇಯಸ್ ಅರ್ಧಶತಕ (50) ದಾಖಲಿಸಿದ್ದರು.

ಆ ಸ್ಮರಣೀಯ ನೆನಪುಗಳೊಂದಿಗೆ ಮತ್ತೆ ಅಂಗಳಕ್ಕಿಳಿದಿದ್ದ ಈ ಅನುಭವಿ ಜೋಡಿ ಎದುರಾಳಿ ಬೌಲರ್‌ಗಳನ್ನು ಕಾಡಿತು. ಕುಸಿತದಿಂದ ಪಾರಾದ ಕರ್ನಾಟಕ ತಂಡ ಮೊದಲ ದಿನದಾಟದ ಅಂತ್ಯಕ್ಕೆ 69 ಓವರ್‌ಗಳಲ್ಲಿ 5 ವಿಕೆಟ್‌ಗೆ 222ರನ್ ಕಲೆಹಾಕಿತು

ಪಿಚ್ ತೇವಾಂಶದಿಂದ ಕೂಡಿದ್ದ ಕಾರಣ ಪಂದ್ಯ ಒಂದೂವರೆ ಗಂಟೆ ತಡವಾಗಿ ಶುರುವಾಯಿತು. ಟಾಸ್ ಗೆದ್ದ ಗೋವಾ ತಂಡದ ನಾಯಕ ಸ್ನೇಹಲ್ ಕೌತಣಕರ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ವೇಗಿಗಳಾದ ಅರ್ಜುನ್ ತೆಂಡೂಲ್ಕರ್ ಮತ್ತು ವಿ.ಕೌಶಿಕ್, ಮೊದಲ ಅವಧಿಯಲ್ಲಿ ನಾಯಕನ ನಿರ್ಧಾರ ಸಮರ್ಥಿಸುವಂತೆ ಬೌಲಿಂಗ್ ಮಾಡಿದರು. ಮೊದಲ 10 ಓವರ್‌ಗಳಲ್ಲಿ ಆತಿಥೇಯರಿಗೆ ಕೇವಲ 14 ರನ್ ಬಿಟ್ಟುಕೊಟ್ಟರು.

ಭೋಜನ ವಿರಾಮದ ನಂತರ ಅರ್ಜುನ್, ಬೆನ್ನುಬೆನ್ನಿಗೆ ವಿಕೆಟ್ ಕೆಡವಿದರು. 14ನೇ ಓವರ್‌ನ ಎರಡನೇ ಎಸೆತದಲ್ಲಿ ಎಸ್.ಜೆ. ನಿಕಿನ್ ಜೋಸ್ ಹಾಗೂ 16ನೇ ಓವರ್‌ನ ಮೊದಲ ಎಸೆತದಲ್ಲಿ ಕೆ.ಎಲ್. ಶ್ರೀಜಿತ್ ಅವರಿಗೆ ಪೆವಿಲಿಯನ್ ದಾರಿ ತೋರಿದರು. 48 ಎಸೆತ ಎದುರಿಸಿದ ನಿಕಿನ್ 3 ರನ್ ಗಳಿಸಿದರೆ, ಶ್ರೀಜಿತ್ ಸೊನ್ನೆ ಸುತ್ತಿದರು.

ಕನ್ನಡಿಗ ಕೌಶಿಕ್, 23ನೇ ಓವರ್‌ನ ಐದನೇ ಎಸೆತದಲ್ಲಿ ನಾಯಕ ಮಯಂಕ್ ಅಗರವಾಲ್ (28; 69ಎ, 4 ಬೌಂ) ಹಾಗೂ 27ನೇ ಓವರ್‌ನ ಮೊದಲ ಎಸೆತದಲ್ಲಿ ಆರ್.ಸ್ಮರಣ್ (3) ವಿಕೆಟ್ ಉರುಳಿಸಿದರು. ಆಗ ತಂಡದ ಮೊತ್ತ 65ಕ್ಕೆ4. ಈ ಹಂತದಲ್ಲಿ ಒಂದುಗೂಡಿದ ಕರುಣ್ ಮತ್ತು ಅಭಿನವ್ ಮನೋಹರ್ (37; 64ಎ, 6 ಬೌಂ) ಕಳೆಗುಂದಿದ್ದ ಕರ್ನಾಟಕದ ಇನಿಂಗ್ಸ್‌ಗೆ ಸ್ವಲ್ಪ ಚೈತನ್ಯ ತುಂಬಿದರು. ಅಪಾಯಕಾರಿಯಾಗಿ ಬೆಳೆಯುತ್ತಿದ್ದ ಈ ಜೊತೆಯಾಟ ಮುರಿಯುವಲ್ಲಿ ಅರ್ಜುನ್ ಯಶಸ್ವಿಯಾದರು.

ಚಹಾ ವಿರಾಮಕ್ಕೆ ನಾಲ್ಕು ಎಸೆತಗಳು ಬಾಕಿ ಇದ್ದಾಗ ಅಭಿನವ್, ಬೌಂಡರಿ ಗೆರೆ ಬಳಿ ವಿ.ಕೌಶಿಕ್‌ಗೆ ಕ್ಯಾಚಿತ್ತು ಹೊರನಡೆದರು. ನಂತರ ಕರುಣ್ ಮತ್ತು ಶ್ರೇಯಸ್ ಆಟ ಕಳೆಗಟ್ಟಿತು. ಬಹಳ ಎಚ್ಚರಿಕೆಯಿಂದ ಇನಿಂಗ್ಸ್ ಬೆಳೆಸಿದ ಇವರು ಕಲಾತ್ಮಕ ಹೊಡೆತಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ; ಮೊದಲ ಇನಿಂಗ್ಸ್: 69 ಓವರ್‌ಗಳಲ್ಲಿ 5 ವಿಕೆಟ್‌ಗೆ 222 (ಮಯಂಕ್ ಅಗರವಾಲ್ 28, ಕರುಣ್ ನಾಯರ್ ಬ್ಯಾಟಿಂಗ್ 86, ಅಭಿನವ್ ಮನೋಹರ್ 37, ಶ್ರೇಯಸ್ ಗೋಪಾಲ್ ಬ್ಯಾಟಿಂಗ್ 48; ಅರ್ಜುನ್ ತೆಂಡೂಲ್ಕರ್ 47ಕ್ಕೆ3, ವಿ.ಕೌಶಿಕ್ 24ಕ್ಕೆ2).



ಕರ್ನಾಟಕದ ಕರುಣ್ ನಾಯರ್ (ಎಡ) ಹಾಗೂ ಶ್ರೇಯಸ್ ಗೋಪಾಲ್ ರನ್ ಗಳಿಸಲು ಮುಂದಾದ ಕ್ಷಣ — ಪ್ರಜಾವಾಣಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಆಸ್ಟ್ರೇಲಿಯಾ ಆಟಗಾರ್ತಿಗೆ ಲೈಂಗಿಕ ಕಿರುಕುಳ

ಇಂದೋರ್ (ಪಿಟಿಐ): ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಆಡಲು ಬಂದಿದ್ದ ಆಸ್ಟ್ರೇಲಿಯಾ ತಂಡದ ಇಬ್ಬರು ಆಟಗಾರ್ತಿಯರನ್ನು ಬೈಕ್ ಸವಾರನೊಬ್ಬ ಹಿಂಬಾಲಿಸಿದ್ದು, ಒಬ್ಬ ಆಟಗಾರ್ತಿಗೆ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಗುರುವಾರ ಬೆಳಿಗ್ಗೆ ಇಲ್ಲಿನ ಖಜರಾನಾ ರಸ್ತೆಯಲ್ಲಿ ಕೆಫೆಯೊಂದಕ್ಕೆ ಆಟಗಾರ್ತಿಯರು ನಡೆದುಕೊಂಡು ಹೋಗುವಾಗ ಈ ಪ್ರಕರಣ ನಡೆದಿದೆ. ಬೈಕ್ ಸವಾರನನ್ನು ಬಂಧಿಸಲಾಗಿದೆ ಎಂದು ಸಬ್ ಇನ್‌ಸ್ಪೆಕ್ಟರ್ ನಿಧಿ ರಘುವಂಶಿ ತಿಳಿಸಿದ್ದಾರೆ.

ಇಬ್ಬರು ಕೆಫೆಗೆ ಹೋಗುತ್ತಿರುವುದನ್ನು ಗಮನಿಸಿ ಬೈಕ್ ಸವಾರ ಅವರನ್ನು ಹಿಂಬಾಲಿಸಿದ್ದಾನೆ. ಒಬ್ಬ ಆಟಗಾರ್ತಿಯನ್ನು ಅಸಭ್ಯವಾಗಿ ಸ್ಪರ್ಶಿಸಿ ಪರಾರಿಯಾಗಿದ್ದಾನೆ. ಇಬ್ಬರೂ ಆಟಗಾರ್ತಿಯರು, ತಂಡದ ಭದ್ರತಾ ಅಧಿಕಾರಿ ಡ್ಯಾನಿ ಸಿಮನ್ಸ್ ಅವರನ್ನು ಸಂಪರ್ಕಿಸಿದ್ದಾರೆ. ಸ್ಥಳೀಯ ಭದ್ರತಾ ವ್ಯವಸ್ಥೆಯ ಉಸ್ತುವಾರಿಗಳ ಜೊತೆ ಸಮನ್ವಯ ಸಾಧಿಸಿದ್ದ ಅವರು ಆಟಗಾರ್ತಿಯರ ಬಳಿಗೆ ತಕ್ಷಣ ವಾಹನ ಕಳುಹಿಸಿದ್ದಾರೆ.

ಮಾಹಿತಿ ದೊರೆತ ತಕ್ಷಣ ಎಸಿಪಿ ಹಿಮಾನಿ ಮಿಶ್ರಾ ಅವರು ಇಬ್ಬರು ಆಟಗಾರ್ತಿಯರನ್ನು ಸಂಪರ್ಕಿಸಿ ಅವರ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಭಾರತೀಯ ನ್ಯಾಯಸಂಹಿತೆಯ ಸೆಕ್ಷನ್ 74 (ಮಹಿಳೆಯ ಘನತೆಗೆ ಕುಂದು ತರುವುದು) ಮತ್ತು 78ರ (ಹಿಂಬಾಲಿಸುವಿಕೆ) ಅಡಿ ಪ್ರಕರಣ ದಾಖಲಿಸಿದ್ದಾರೆ. ಹಾದಿಹೋಕರೊಬ್ಬರು ಬೈಕ್ ನಂಬರ್ ಗುರುತಿಸಿದ್ದು, ಅದರ ಆಧಾರದಲ್ಲಿ ಆರೋಪಿ ಅಕಿಲ್ ಖಾನ್ ಎಂಬಾತನನ್ನು ಬಂಧಿಸಲಾಗಿದೆ. ಈ ಹಿಂದೆಯೂ ಅಕಿಲ್ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ.

ಆಘಾತಕಾರಿ: ಇಬ್ಬರು ಆಟಗಾರ್ತಿಯರ ಜೊತೆ ವ್ಯಕ್ತಿಯೊಬ್ಬ ಅಸಭ್ಯವಾಗಿ ನಡೆದುಕೊಂಡ ಘಟನೆಯಿಂದ ನೋವಾಗಿದೆ ಮತ್ತು ಆಘಾತವಾಗಿದೆ ಎಂದು ಮಧ್ಯಪ್ರದೇಶ ಕ್ರಿಕೆಟ್ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

ಬ್ಯಾಡ್ಮಿಂಟನ್: ದೀಕ್ಷಾ, ಲಕ್ಷ್ಯಾ ಫೈನಲ್‌ಗೆ

ಚೆಂಗ್ಡು (ಪಿಟಿಐ): ಭಾರತದ ದೀಕ್ಷಾ ಸುಧಾಕರ್ ಮತ್ತು ಲಕ್ಷ್ಯಾ ರಾಜೇಶ್ ಅವರು ಶನಿವಾರ ಬ್ಯಾಡ್ಮಿಂಟನ್ ಏಷ್ಯಾ 17 ಮತ್ತು 15 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ಪ್ರವೇಶಿಸಿದರು.

17 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಸುತ್ತಿನಲ್ಲಿ ದೀಕ್ಷಾ ಮತ್ತು ಲಕ್ಷ್ಯಾ ಮುಖಾಮುಖಿಯಾಗುತ್ತಿದ್ದು, ಹೀಗಾಗಿ, ಯಾರೇ ಗೆದ್ದರೂ ಭಾರತಕ್ಕೆ ಚಿನ್ನ ಖಚಿತವಾಗಿದೆ.

ಸೆಮಿಫೈನಲ್‌ನಲ್ಲಿ ದೀಕ್ಷಾ 21-8, 21-17ರಿಂದ ತೈವಾನ್‌ನ ಯುನ್ ಚಿಯಾವೊ ಸು ವಿರುದ್ಧ; ಲಕ್ಷ್ಯಾ 21-15, 21-19ರಿಂದ ಜಪಾನ್‌ನ ರಿಯಾ ಹಾಗಾ ವಿರುದ್ಧ ಗೆಲುವು ಸಾಧಿಸಿದರು.

15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಶೈನಾ ಮಣಿಮುತ್ತು ಫೈನಲ್ ತಲುಪಿದರು. ಶೈನಾ ಸೆಮಿಫೈನಲ್‌ನಲ್ಲಿ 21-12, 16-21, 21-16ರಿಂದ ಚೀನಾದ ಯುನ್ ಜೀ ಯಿ ಅವರನ್ನು ಮಣಿಸಿದರು.

ಚಿಟಿಕೆ ಸುದ್ದಿ

ಶ್ರೇಯಸ್ ಅಯ್ಯರ್‌ಗೆ 3 ವಾರ ವಿಶ್ರಾಂತಿ



ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಉಪನಾಯಕ ಶ್ರೇಯಸ್ ಅಯ್ಯರ್ ಅವರು ಶನಿವಾರ ನಡೆದ ಪಂದ್ಯದಲ್ಲಿ ಗಾಯಗೊಂಡಿದ್ದು ಮೂರು ವಾರಗಳವರೆಗೆ ವಿಶ್ರಾಂತಿ ಪಡೆಯಲಿದ್ದಾರೆ.

ಸಿಡ್ನಿಯಲ್ಲಿ ನಡೆದ ಆಸ್ಟ್ರೇಲಿಯಾ ಎದುರಿನ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಹರ್ಷಿತ್ ರಾಣಾ ಬೌಲಿಂಗ್‌ನಲ್ಲಿ ಅಲೆಕ್ಸ್ ಕ್ಯಾರಿ ಅವರ ಕ್ಯಾಚ್ ಪಡೆಯುವ ಸಂದರ್ಭದಲ್ಲಿ ಶ್ರೇಯಸ್ ಗಾಯಗೊಂಡರು. ಕ್ಯಾಚ್ ಪಡೆಯುವ ಪ್ರಯತ್ನದಲ್ಲಿ ಡೈವ್ ಮಾಡಿದಾಗ ಅವರ ಎಡಬದಿಯ ಪಕ್ಕೆಲುಬು ನೆಲಕ್ಕೆ ಉಜ್ಜಿದ್ದರಿಂದ ನೋವು ಅನುಭವಿಸಿದರು.

ಪಿವಿಎಲ್ ಫೈನಲ್ ಗೆಲ್ಲುವುದೇ ಬೆಂಗಳೂರು?

ಹೈದರಾಬಾದ್: ಬೆಂಗಳೂರು ಟಾರ್ಪಿಡೋಸ್ ತಂಡವು, ಭಾನುವಾರ ಇಲ್ಲಿನ ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿರುವ ಪ್ರೈಮ್ ವಾಲಿಬಾಲ್ ಲೀಗ್‌ನ ನಾಲ್ಕನೇ ಆವೃತ್ತಿಯ ಫೈನಲ್ ಪಂದ್ಯದಲ್ಲಿ ಮುಂಬೈ ಮೀಟಿಯರ್ಸ್ ತಂಡವನ್ನು ಎದುರಿಸಲಿದೆ.

ಲೀಗ್ ಹಂತದಲ್ಲಿ ಮುಂಬೈ ಏಳು ಪಂದ್ಯಗಳಲ್ಲಿ ಆರು ಗೆದ್ದು ಮೊದಲ ಸ್ಥಾನ ಗಳಿಸಿದರೆ, ಬೆಂಗಳೂರು ತಂಡ ಏಳರಲ್ಲಿ ಐದು ಗೆದ್ದು ಎರಡನೇ ಸ್ಥಾನ ಪಡೆದಿತ್ತು.

ಜೋಯೆಲ್ ಬೆಂಜಮಿನ್ 103 ಪಾಯಿಂಟ್ಸ್ ಗಳಿಸಿ ಟಾರ್ಪಿಡೋಸ್ ಪರ ಅತ್ಯಧಿಕ ಅಂಕ ಕಲೆಹಾಕಿದ್ದಾರೆ. ಮುಂಬೈನ ಶುಭಂ ಚೌಧರಿ ಅವರಿಗಿಂತ ಒಂದು ಪಾಯಿಂಟ್ (102) ಅಷ್ಟೇ ಹಿಂದೆಯಿದ್ದಾರೆ.

ಕುಸ್ತಿ: ಹನ್ಸಿಕಾ, ಸಾರಿಕಾಗೆ ಬೆಳ್ಳಿ

ನೋವಿಸಾದ್, ಸರ್ಬಿಯಾ (ಪಿಟಿಐ): ಭಾರತದ ಮಹಿಳಾ ಕುಸ್ತಿಪಟುಗಳಾದ ಹನ್ಸಿಕಾ ಲಂಬಾ ಮತ್ತು ಸಾರಿಕಾ ಮಲಿಕ್ ಅವರು 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನ ತಮ್ಮ ತಮ್ಮ ವಿಭಾಗಗಳಲ್ಲಿ ಬೆಳ್ಳಿ ಪದಕ ಗೆದ್ದರು.

53 ಕೆಜಿ ವಿಭಾಗದ ಫೈನಲ್‌ನಲ್ಲಿ ಹನ್ಸಿಕಾ 0–4ರಿಂದ ಜಪಾನ್‌ನ ಹರುನಾ ಮೊರಿಕಾವಾ ಅವರಿಗೆ ಸೋತರು. 59 ಕೆಜಿ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಸಾರಿಕಾ ಅವರು ಜಪಾನ್‌ನ ರುಕಾ ನಟಾಮಿ ಅವರಿಗೆ ಶರಣಾದರು.

ನಿಶು (55 ಕೆಜಿ), ನೇಹಾ ಶರ್ಮಾ (57 ಕೆಜಿ), ಪುಲ್ಕಿತ್ (65 ಕೆಜಿ), ಸೃಷ್ಟಿ (68 ಕೆಜಿ) ಮತ್ತು ಪ್ರಿಯಾ ಮಲಿಕ್ (76 ಕೆಜಿ) ಟೂರ್ನಿಯಲ್ಲಿ ಕಂಚು ಗೆದ್ದಿದ್ದಾರೆ.

ಅಲನಾ ದಾಳಿಗೆ ಹರಿಣ ಪಡೆ ಕಂಗಾಲು

ಇಂದೋರ್ (ಪಿಟಿಐ): ಅಲನಾ ಕಿಂಗ್ (7–2–18–7) ಅವರ ಲೆಗ್‌ಸ್ಪಿನ್ ಮೋಡಿಗೆ ಸಿಲುಕಿದ ದಕ್ಷಿಣ ಆಫ್ರಿಕಾ ತಂಡ, ಶನಿವಾರ ನಡೆದ ಮಹಿಳಾ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ತಂಡದ ಕೈಲಿ ಏಳು ವಿಕೆಟ್‌ಗಳ ಸೋಲನುಭವಿಸಿತು. ಈ ಗೆಲುವಿನಿಂದ ಆಸ್ಟ್ರೇಲಿಯಾ ಲೀಗ್ ಹಂತದಲ್ಲಿ ಅಗ್ರಸ್ಥಾನ ಪಡೆಯಿತು.

ಆಸ್ಟ್ರೇಲಿಯಾ ತಂಡವು ಇದೇ 30ರಂದು ನವಿ ಮುಂಬೈನಲ್ಲಿ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ಆತಿಥೇಯ ಭಾರತ ತಂಡವನ್ನು ಎದುರಿಸಲಿದೆ.

ಭಾರತ ತಂಡವು, ಭಾನುವಾರ ಬಾಂಗ್ಲಾದೇಶ ವಿರುದ್ಧ ಅಂತಿಮ ಲೀಗ್ ಪಂದ್ಯ ಗೆದ್ದರೂ ನಾಲ್ಕನೇ ಸ್ಥಾನಕ್ಕಿಂತ ಮೇಲೇರಲು ಸಾಧ್ಯವಾಗದ ಕಾರಣ ಮುಖಾಮುಖಿ ಪಕ್ಕಾ ಆಗಿದೆ.

ದಕ್ಷಿಣ ಆಫ್ರಿಕಾ ಬುಧವಾರ (ಇದೇ 29ರಂದು) ಇನ್ನೊಂದು ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಆಡಲಿದೆ. ಫೈನಲ್ ಭಾನುವಾರ ನಡೆಯಲಿದೆ.

ಹೋಳ್ಕರ್ ಕ್ರೀಡಾಂಗಣದಲ್ಲಿ ಅಲನಾ ಕಿಂಗ್ ಅವರ ಚಮತ್ಕಾರಿಕ ಬೌಲಿಂಗ್ ಎದುರು ದಕ್ಷಿಣ ಆಫ್ರಿಕಾ ಬ್ಯಾಟಿಂಗ್ ಮುಗ್ಗರಿಸಿತು. ವಿಕೆಟ್ ನಷ್ಟವಿಲ್ಲದೇ 32 ರನ್ ಗಳಿಸಿದ್ದ ಲಾರಾ ವೋಲ್ವಾರ್ಟ್ ಬಳಗ 24 ಓವರುಗಳಲ್ಲಿ 97 ರನ್ನಿಗೆ ಪತನಗೊಂಡಿತು. ಆಸ್ಟ್ರೇಲಿಯಾ 16.5 ಓವರುಗಳಲ್ಲೇ 3 ವಿಕೆಟ್ ಕಳೆದುಕೊಂಡು 98 ರನ್ ಬಾರಿಸಿತು. ತಾಹ್ಲಿಯಾ ಮೆಕ್‌ಗ್ರಾ ಪಡೆ ಗುರಿತಲುಪಿದಾಗ ಇನ್ನೂ 199 ಎಸೆತಗಳು ಉಳಿದಿದ್ದವು.

ಕಿಂಗ್, ಮಹಿಳಾ ಕ್ರಿಕೆಟ್‌ನ ಅತ್ಯಂತ ಕೌಶಲದ ಸ್ಪಿನ್ನರ್ ತಾವೆಂಬುದನ್ನು ಸಾಬೀತುಪಡಿಸಿದರು. ಇದು ಅವರ ಜೀವನಶ್ರೇಷ್ಠ ಸಾಧನೆಯೂ ಆಯಿತು. ಇದು ಮಹಿಳಾ ವಿಶ್ವಕಪ್ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ಪರ ಬೌಲರ್ ಒಬ್ಬರ ಶ್ರೇಷ್ಠ ಸಾಧನೆ ಮಾತ್ರವಲ್ಲ, ಯಾವುದೇ ತಂಡದ ಬೌಲರ್ ಒಬ್ಬರ ಶ್ರೇಷ್ಠ ಪ್ರದರ್ಶನವೆನಿಸಿತು.

ಕಿಂಗ್ ಅವರು ಅನುಭವಿಗಳಾದ ಸುನೆ ಲಸ್, ಅನೆರಿ ಡೆರ್ಕ್‌ಸನ್, ಮರೈಝುನ್ ಕಾಪ್, ಕ್ಲೊಯೆ ಟ್ರಯಾನ್, ನದೀನ್ ಡಿ ಕ್ಲರ್ಕ್ ಅವರ ವಿಕೆಟ್‌ಗಳನ್ನು ಪಡೆದು ಹರಿಣ ಪಡೆಯ ಬೆನ್ನೆಲುಬು ಮುರಿದರು.

ಆಸ್ಟ್ರೇಲಿಯಾ ತಂಡವು ಆರಂಭ ಆಟಗಾರ್ತಿ ಫೋಬಿ ಲಿಚ್‌ಫೀಲ್ಡ್ ಮತ್ತು ಅನುಭವಿ ಎಲಿಸ್ ಪೆರಿ ಅವರನ್ನು ಬೇಗನೇ ಕಳೆದುಕೊಂಡಿತು. ಆದರೆ ಜಾರ್ಜಿಯಾ ವೋಲ್ (ಔಟಾಗದೇ 38) ಮತ್ತು ಬೆತ್ ಮೂನಿ (42) ಅವರು 76 ರನ್ ಜೊತೆಯಾಟವಾಡಿ ತಂಡದ ಗೆಲುವನ್ನು ಖಚಿತಪಡಿಸಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 24 ಓವರುಗಳಲ್ಲಿ 97 (ಲಾರಾ ವೋಲ್ವಾರ್ಟ್ 31, ಸಿನಲೊ ಜಾಫ್ತಾ 29, ಅಲನಾ ಕಿಂಗ್ 18ಕ್ಕೆ7); ಆಸ್ಟ್ರೇಲಿಯಾ: 16.5 ಓವರುಗಳಲ್ಲಿ 3 ವಿಕೆಟ್‌ಗೆ 98 (ಜಾರ್ಜಿಯಾ ವೋಲ್ ಔಟಾಗದೇ 38, ಬೆತ್ ಮೂನಿ 42, ಅನ್ನಾಬೆಲ್ ಸದರ್‌ಲ್ಯಾಂಡ್ ಔಟಾಗದೇ 10); ಪಂದ್ಯದ ಆಟಗಾರ್ತಿ: ಅಲನಾ ಕಿಂಗ್.



ಏಳು ವಿಕೆಟ್ ಪಡೆದ ಆಸ್ಟ್ರೇಲಿಯಾದ ಅಲನಾ ಕಿಂಗ್ — ಐಸಿಸಿ ಎಕ್ಸ್ ಚಿತ್ರ

ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್

ಭಾರತಕ್ಕೆ ಬಾಂಗ್ಲಾ ಸವಾಲು

ನವಿ ಮುಂಬೈ (ಪಿಟಿಐ): ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧ ಇದೇ 30ರಂದು ಮಹತ್ವದ ಸೆಮಿಫೈನಲ್ ಪಂದ್ಯಕ್ಕೆ ಇಳಿಯುವ ಮುನ್ನ ಭಾರತ ತಂಡ ತನ್ನ ದೌರ್ಬಲ್ಯಗಳನ್ನು ಸರಿಪಡಿಸಿಕೊಳ್ಳಲು ಕೊನೆಯ ಅವಕಾಶ ಭಾನುವಾರ ಒದಗಿದೆ. ಬಾಂಗ್ಲಾದೇಶ ವಿರುದ್ಧ ಇಲ್ಲಿನ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆಯಲಿರುವ ಕೊನೆಯ ಲೀಗ್ ಪಂದ್ಯ ಆತಿಥೇಯ ತಂಡಕ್ಕೆ ಈ ನಿಟ್ಟಿನಲ್ಲಿ ನೆರವಾಗಲಿದೆ.

ಈಗ ಆರು ಪಾಯಿಂಟ್ಸ್ ಗಳಿಸಿರುವ ಭಾರತ ಈ ಕೊನೆಯ ಲೀಗ್ ಪಂದ್ಯ ಗೆದ್ದರೆ ಒಟ್ಟು ಎಂಟು ಪಾಯಿಂಟ್ಸ್ ಗಳಿಸಿದಂತಾಗಲಿದೆ. ಆದರೆ ಮೂರನೇ ಸ್ಥಾನದಲ್ಲಿರುವ ಇಂಗ್ಲೆಂಡ್ ತಂಡವನ್ನು (ಈಗಾಗಲೇ 9 ಪಾಯಿಂಟ್ಸ್ ಗಳಿಸಿದೆ) ಹಿಂದೆಹಾಕಲು ಆಗುವುದಿಲ್ಲ. ಹೀಗಾಗಿ ಲೀಗ್‌ನಲ್ಲಿ ನಾಲ್ಕನೇ ಸ್ಥಾನ ಬದಲಾಗದು.

ಭಾನುವಾರ ಬೆಳಿಗ್ಗೆ 11 ಗಂಟೆಗೆ ವಿಶಾಖ ಪಟ್ಟಣದಲ್ಲಿ ಆರಂಭವಾಗುವ ಇನ್ನೊಂದು ಲೀಗ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು, ನ್ಯೂಜಿಲೆಂಡ್ ವಿರುದ್ಧ ಆಡಲಿದ್ದು, ಪಾಯಿಂಟ್ ಗಳಿಕೆಯನ್ನು 11ಕ್ಕೆ ಏರಿಸಲು ಅವಕಾಶವಿದೆ.

ಸೆಮಿಫೈನಲ್ ಸ್ಥಾನ ಅಲುಗಾಡುವ ಹಂತದಲ್ಲಿದ್ದಾಗ ಹರ್ಮನ್‌ಪ್ರೀತ್ ಕೌರ್ ಪಡೆ ಅಮೋಘ ಪ್ರದರ್ಶನ ನೀಡಿ, ನ್ಯೂಜಿಲೆಂಡ್ ತಂಡವನ್ನು ಸುಲಭವಾಗಿ ಸೋಲಿಸಿತ್ತು. ಸ್ಮೃತಿ ಮಂದಾನ (105, 95ಎ) ಮತ್ತು ಪ್ರತಿಕಾ ರಾವಲ್ (122, 135ಎ) ಬಿರುಸಿನ ಶತಕಗಳನ್ನು ಗಳಿಸಿದ್ದರು. ಜೆಮಿಮಾ ಕೂಡ ಅಜೇಯ 76 ರನ್ ಬಾರಿಸಿ ಲಯಕ್ಕೆ ಮರಳಿದ್ದರು. ಬಾಂಗ್ಲಾದೇಶ ತಂಡ ಈಗಾಗಲೇ ಟೂರ್ನಿಯಿಂದ ಹೊರಬಿದ್ದಿದೆ. ಆದರೆ ಶ್ರೀಲಂಕಾ ವಿರುದ್ಧ ಗೆಲುವಿನ ಹೊಸ್ತಿಲಿನಲ್ಲಿದ್ದಾಗ ಎಡವಿ ನಿರಾಸೆ ಅನುಭವಿಸಿತು. ಕೊನೆಯ ಸ್ಥಾನದಲ್ಲೇ ಉಳಿಯಿತು.

ಪಂದ್ಯ ಆರಂಭ: ಮಧ್ಯಾಹ್ನ 3.00

ಜ.3ರಿಂದ ಹಾಕಿ ಇಂಡಿಯಾ ಲೀಗ್

ನವದೆಹಲಿ (ಪಿಟಿಐ): ಪುರುಷರ ಹಾಕಿ ಇಂಡಿಯಾ ಲೀಗ್‌ನ ಎರಡನೇ ಆವೃತ್ತಿ ಜನವರಿ 3ರಂದು ಚೆನ್ನೈನಲ್ಲಿ ಆರಂಭವಾಗಲಿದೆ. ಉದ್ಘಾಟನಾ ಪಂದ್ಯದಲ್ಲಿ ತಮಿಳುನಾಡು ಡ್ರ್ಯಾಗನ್ಸ್ ಮತ್ತು ಹೈದರಾಬಾದ್ ತೂಫಾನ್ಸ್ ಮುಖಾಮುಖಿಯಾಗಲಿವೆ ಎಂದು ಹಾಕಿ ಇಂಡಿಯಾ ಶನಿವಾರ ತಿಳಿಸಿದೆ.

ಮೂರು ನಗರಗಳಲ್ಲಿ ನಡೆಯಲಿರುವ ಈ ಟೂರ್ನಿಯ ಫೈನಲ್ ಹಣಾಹಣಿ ಜ.26ರಂದು ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆಯಲಿದೆ. ಎಂಟು ತಂಡಗಳನ್ನು ಒಳಗೊಂಡ ಟೂರ್ನಿಯ ಮೊದಲ ಲೆಗ್ ಜ.3ರಿಂದ 9ರವರೆಗೆ ಚೆನ್ನೈನಲ್ಲಿ ನಡೆಯಲಿದೆ.

ಜ.11ರಿಂದ 16ರವರೆಗೆ ರಾಂಚಿಯಲ್ಲಿ ಎರಡನೇ ಲೆಗ್, ಭುವನೇಶ್ವರದಲ್ಲಿ ಜ.17ರಿಂದ 26ರವರೆಗೆ ಮೂರನೇ ಲೆಗ್ ಆಯೋಜಿಸಲಾಗಿದೆ.

ಪ್ರತಿ ತಂಡವು ರೌಂಡ್ ರಾಬಿನ್ ಸ್ವರೂಪದಲ್ಲಿ ಇತರ ಏಳು ತಂಡಗಳನ್ನು ಒಮ್ಮೆ ಎದುರಿಸಲಿದ್ದು, ಅಗ್ರ ನಾಲ್ಕು ತಂಡಗಳು ಪ್ಲೇ ಆಫ್‌ಗೆ ಮುನ್ನಡೆಯುತ್ತವೆ. ಪ್ಲೇಆಫ್ ಹಂತದ ಪಂದ್ಯಗಳೂ ಭುವನೇಶ್ವರದಲ್ಲಿ ನಡೆಯಲಿವೆ.

ನವದೆಹಲಿ: ನ.29ರಿಂದ ಕೊಕ್ಕೊ ಲೀಗ್

ನವದೆಹಲಿ (ಪಿಟಿಐ): ಅಲ್ಟಿಮೇಟ್ ಕೊಕ್ಕೊ (ಯುಕೆಕೆ) ಲೀಗ್ ಇದೇ ಮೊದಲ ಬಾರಿಗೆ ಇಲ್ಲಿನ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನವೆಂಬರ್ 29 ರಿಂದ ನಡೆಯಲಿದೆ. ಇದು ಯುಕೆಕೆಯ ಮೂರನೇ ಆವೃತ್ತಿಯಾಗಿದೆ. ಈ ಹಿಂದೆ ಕ್ರಮವಾಗಿ ಪುಣೆ ಮತ್ತು ಕಟಕ್ ಆತಿಥ್ಯ ವಹಿಸಿದ್ದವು. ಈ ಬಾರಿಯೂ ಆರು ತಂಡಗಳು ಭಾಗವಹಿಸಲಿವೆ.

ಸ್ಯಾಫ್ ಸೀನಿಯರ್ ಅಥ್ಲೆಟಿಕ್ಸ್ ಎರಡನೇ ದಿನ ಭಾರತಕ್ಕೆ 7 ಚಿನ್ನ

ರಾಂಚಿ (ಪಿಟಿಐ): ರೋಹ್ತಕ್‌ನ ಹದಿಹರೆಯದ ಅಥ್ಲೀಟ್ ಸಂಜನಾ ಸಿಂಗ್ ಅವರು 1,500 ಮೀ. ಓಟ ಗೆಲ್ಲುವ ಮೂಲಕ ಸ್ಯಾಫ್ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಚಿನ್ನ ಗೆದ್ದರು. ಎರಡನೇ ದಿನವಾದ ಶನಿವಾರ ಪ್ರಾಬಲ್ಯ ಮೆರೆದ ಭಾರತದ ಅಥ್ಲೀಟುಗಳು ಪಣಕ್ಕಿದ್ದ 11 ಸ್ವರ್ಣ ಪದಕಗಳಲ್ಲಿ ಏಳನ್ನು ಗೆದ್ದರು.

ಮೊದಲ ದಿನ 5000 ಮೀ. ಓಟದಲ್ಲಿ ಚಿನ್ನ ಗೆದ್ದಿದ್ದ, 18 ವರ್ಷ ವಯಸ್ಸಿನ ಸಂಜನಾ ಶನಿವಾರ 4ನಿ.25.36 ಸೆ.ಗಳಲ್ಲಿ ಗುರಿಮುಟ್ಟಿದರು. ಭಾರತದವರೇ ಆದ ಕಾಜಲ್ ಕನವಡೆ (4:26.21) ಕಂಚಿನ ಪದಕ ಗೆದ್ದುಕೊಂಡರು. ಇವರಿಬ್ಬರ ನಡುವೆ ಲಂಕಾದ ಅರಚ್ ನಿಮಲಿ (4:25.22) ಬೆಳ್ಳಿ ಗೆದ್ದರು.

ಮೊದಲ ದಿನದ ರೀತಿಯಲ್ಲೇ ಶನಿವಾರ ಸಹ ಭಾರತ ಮತ್ತು ಶ್ರೀಲಂಕಾ ಸ್ಪರ್ಧಿಗಳ ನಡುವೆಯೇ ಪೈಪೋಟಿ ಕಂಡುಬಂತು. ಭಾರತ ಇದುವರೆಗೆ 12 ಚಿನ್ನ ಗೆದ್ದರೆ, ಶ್ರೀಲಂಕಾ 8 ಚಿನ್ನ ಗಳಿಸಿದೆ. ಪುರುಷರ 1500 ಮೀ. ಓಟದಲ್ಲಿ ಅರ್ಜುನ್ ವಾಸ್ಕಳೆ (3:54.58ಸೆ.), 110 ಮೀ. ಹರ್ಡಲ್ಸ್‌ನಲ್ಲಿ ಆರ್.ಮಾನವ್ (13.78ಸೆ.), ಡಿಸ್ಕಸ್ ಥ್ರೊನಲ್ಲಿ ಕೃಪಾಲ್ ಸಿಂಗ್, ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ಕೆ.ನಂದಿನಿ (13.56 ಸೆ., ಕೂಟ ದಾಖಲೆ), ಡಿಸ್ಕಸ್ ಥ್ರೊನಲ್ಲಿ ಸೀಮಾ ಕೆ., 400 ಮೀ. ಓಟದಲ್ಲಿ ನೀರೂ ಪಾಠಕ್ (53.15 ಸೆ.) ಚಿನ್ನದ ಪದಕಗಳನ್ನು ಗೆದ್ದರು.

ಕಬಡ್ಡಿ: ಜೈಪುರ, ಪಟ್ನಾಗೆ ಗೆಲುವು

ನವದೆಹಲಿ: ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ಪಟ್ನಾ ಪೈರೇಟ್ಸ್ ತಂಡಗಳು ಶನಿವಾರ ಪ್ರೊ ಕಬಡ್ಡಿ ಟೂರ್ನಿಯ ಪ್ಲೇಇನ್ ಪಂದ್ಯಗಳಲ್ಲಿ ಜಯ ಗಳಿಸಿದವು. ಭಾನುವಾರ ಮೊದಲ ಎಲಿಮಿನೇಟರ್‌ನಲ್ಲಿ ಈ ತಂಡಗಳು ಮುಖಾಮುಖಿಯಾಗಲಿವೆ.

ತ್ಯಾಗರಾಜ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜೈಪುರ ತಂಡವು 30–27ರಿಂದ ಹಾಲಿ ಚಾಂಪಿಯನ್ ಹರಿಯಾಣ ಸ್ಟೀಲರ್ಸ್ ವಿರುದ್ಧ ಜಯಿಸಿತು.

ಮತ್ತೊಂದು ಪಂದ್ಯದಲ್ಲಿ ಪೈರೇಟ್ಸ್ ತಂಡವು 40–31ರಿಂದ ಯು ಮುಂಬಾ ತಂಡವನ್ನು ಮಣಿಸಿತು. ಹರಿಯಾಣ ಮತ್ತು ಯು ಮುಂಬಾ ತಂಡಗಳು ಟೂರ್ನಿಯಿಂದ ಹೊರಬಿದ್ದವು.

ಬುಲ್ಸ್‌ಗೆ ಟೈಟನ್ಸ್ ಎದುರಾಳಿ: ಲೀಗ್ ಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆದ ಬೆಂಗಳೂರು ಬುಲ್ಸ್ ತಂಡವು ಮಿನಿ ಕ್ವಾಲಿಫೈಯರ್ ಪಂದ್ಯದಲ್ಲಿ ಭಾನುವಾರ ತೆಲುಗು ಟೈಟನ್ಸ್ ತಂಡವನ್ನು ಎದುರಿಸಲಿವೆ. ಗೆದ್ದ ತಂಡವು ಎಲಿಮಿನೇಟರ್ 3ಕ್ಕೆ ಮುನ್ನಡೆಯಲಿದೆ.